ಬೆಂಗಳೂರು
ಮಂಗಳವಾರ, 17 ಮಾರ್ಚ್ 2026
ಸಂಪುಟ 33, ಸಂಚಿಕೆ 136, ಪುಟಗಳು 14+4
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
RNI: 58231/94
REG No.KA/BG GPO/2532/2021-23
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಮುರ್ಮು ಭೇಟಿಗಾಗಿ ಟಿಎಂಸಿ ಮತ್ತೆ ಮನವಿ | ೦೫ ಬೆಂಕಿ ಅವಘಡ: 10 ರೋಗಿಗಳ ಸಾವು | ೦೫ ಮಮತಾ ವಿರುದ್ಧ ಸುವೇಂದು ಸ್ಪರ್ಧೆ | ೦೫

ಶುಭ ದಿನ

ಕಲಿಯುಗಾಬ್ಧ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುನ ಮಾಸ, ಕೃಷ್ಣ ಪಕ್ಷ, ತಿಥಿ: ತ್ರಯೋದಶಿ, ನಕ್ಷತ್ರ: ಶತಭಿಷೆ

ದಿನದ ಮಾತು

ದಿನದ ಒಂದು ಗಂಟೆ ಪುಸ್ತಕ ಓದುವುದಕ್ಕೆ ಸಮರ್ಪಿಸಿ. ನೀವು ಕೆಲವೇ ವರ್ಷಗಳಲ್ಲಿ ಜ್ಞಾನದ ಕೇಂದ್ರವಾಗಿ ಬದಲಾಗುವಿರಿ.

▲ ಎ.ಪಿ.ಜೆ. ಅಬ್ದುಲ್ ಕಲಾಂ

ವಜ್ರದ ವ್ಯಾಪಾರಿಯ ಅಪ್ರತಿಮ ಗೋಸೇವೆ

ಧರಣಿ ಮಂಡಲ


• ಕೆ.ಎನ್. ಶೈಲೇಶ್ ಹೊಳ್ಳ

• ಪುಟ ೬

ಕಿರುಸುದ್ದಿ

ಎಲ್‌ಪಿಜಿ ಗ್ರಾಹಕರಿಗೆ ಇ- ಕೆವೈಸಿ ಕಡ್ಡಾಯ

• **ಹೊಸದಿಲ್ಲಿ:** ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯವು ಎಲ್ಲಾ ದೇಶೀಯ ಎಲ್‌ಪಿಜಿ ಗ್ರಾಹಕರಿಗೆ



ಇ-ಕೆವೈಸಿ ಕಡ್ಡಾಯಗೊಳಿಸಿದೆ. ಎಂಓಪಿಎನ್‌ಜಿ ತಮ್ಮ ಎಕ್ಸ್ ಖಾತೆಯಲ್ಲಿ, ಎಲ್ಲಾ ದೇಶೀಯ ಎಲ್‌ಪಿಜಿ ಗ್ರಾಹಕರು ಬಯೋಮೆಟ್ರಿಕ್ ಆಧಾರ ದೃಢೀಕರಣವನ್ನು (ಇ-ಕೆವೈಸಿ) ಪೂರ್ಣಗೊಳಿಸಬೇಕಾಗುತ್ತದೆ ಎಂದು ಹೇಳಿದೆ. ➡ಪುಟ ೭

ರಾಷ್ಟ್ರ ಸೇವಿಕಾ ಸಮಿತಿ ಹಿರಿಯ ಪ್ರಚಾರಿಕಾ ರೇಖಾ ರಾಜೆ ನಿಧನ

• **ಹೊಸದಿಲ್ಲಿ:** ರಾಷ್ಟ್ರ ಸೇವಿಕಾ ಸಮಿತಿಯ ಹಿರಿಯ ಪ್ರಚಾರಿಕಾ ಮತ್ತು ಮಾಜಿ ಅಖಿಲ ಭಾರತೀಯ



ಸಹ-ಸರಕಾರ್ಯವಾಹಿಕಾ ರೇಖಾ ರಾಜೆ (ರೇಖಾತಾಯಿ) ಅಲ್ಪಕಾಲದ ಅನಾರೋಗ್ಯದಿಂದ ಭಾನುವಾರ ದಿಲ್ಲಿಯ ಏಮ್ಸ್‌ನಲ್ಲಿ ನಿಧನರಾದರು. ರೇಖಾ ರಾಜೇ ಅವರು ಕಾನ್ಪುರದಲ್ಲಿ ಜನಿಸಿದರು. ಎಳೆಯ ವಯಸ್ಸಿನಿಂದಲೇ ಸಾಮಾಜಿಕ ಮತ್ತು ರಾಷ್ಟ್ರೀಯತಾವಾದಿ ಚಳವಳಿಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು.

• ಪುಟ ೭

ಮೋದಿ ಇಸ್ರೇಲ್ ಭೇಟಿಗೂ ಸಮರಕ್ಕೂ ಸಂಬಂಧವಿಲ್ಲ

• ಪುಟ ೫

ಜೆಫ್ರಿ ಎಪ್‌ಸ್ಟೀನ್: ಪುರಿ ಪುತ್ರಿಯಿಂದ ಮಾನನಷ್ಟ ಕೇಸ್

• ಪುಟ ೫

4,300ಕ್ಕೂ ಹೆಚ್ಚು ವಿಮಾನಗಳು ರದ್ದು

• ಪುಟ ೫

ದುಬೈ ವಿಮಾನ ನಿಲ್ದಾಣದ ಮೇಲೆ ಡ್ರೋನ್ ದಾಳಿ

• ಪುಟ ೫

ರಾಜ್ಯದಲ್ಲಿ ಆಲಿಕಲ್ಲು ಮಳೆ, ಸಿಡಿಲಿಗೆ ಬಾಲಕ ಬಲಿ

• ಪುಟ ೭

ಸಚಿವರಿಂದ ಸಿಗದ ಉತ್ತರ | ಸದನದಿಂದ ಹೊರನಡೆದ ಖಾದರ್

ಸ್ಪೀಕರ್ ಸಭಾತ್ಯಾಗ

• **ವಿಧಾನಸಭೆ:** ಇತಿಹಾಸದಲ್ಲೇ ಇದೇ ಮೊದಲ ಬಾರಿಗೆ ಸರ್ಕಾರದ ಸಚಿವರು ಸೂಕ್ತವಾಗಿ ಉತ್ತರಿಸುತ್ತಿಲ್ಲವೆಂದು ಬೇಸರಗೊಂಡು ವಿಧಾನಸಭಾಧ್ಯಕ್ಷರೇ ಸದನ ಮುಂದೂಡಿ, ಸಭಾತ್ಯಾಗ ಮಾಡಿರುವ ಅಪರೂಪದ ಪ್ರಸಂಗಕ್ಕೆ ರಾಜ್ಯ ವಿಧಾನಸಭೆ ಅಧಿವೇಶನ ಸಾಕ್ಷಿಯಾಯಿತು.

ಅಷ್ಟೇ ಅಲ್ಲ, ಸಂಬಂಧಪಟ್ಟ ಸಚಿವರು ಮತ್ತು ಅಧಿಕಾರಿಗಳು ಸ್ಪಷ್ಟನೆ ನೀಡುವವರೆಗೂ ಸದನಕ್ಕೆ ಬರುವುದಿಲ್ಲ ಎಂದು ಎಚ್ಚರಿಕೆಯನ್ನೂ ನೀಡಿದರು. ಸೋಮವಾರ ಪ್ರಶ್ನೋತ್ತರ ಕಲಾಪ ಮುಕ್ತಾಯವಾಗುತ್ತಿದ್ದಂತೆ ಸಭಾಧ್ಯಕ್ಷ ಯು.ಟಿ. ಖಾದರ್ ಅವರು ಲಿಖಿತ ಉತ್ತರಗಳ ಮೂಲಕ ನೀಡುವ ಪ್ರಶ್ನೆಗಳ ಪಟ್ಟಿ ಮಂಡನೆಗೆ ಅವಕಾಶ ನೀಡಿದರು. ಈ ವೇಳೆ ಗೃಹ ಸಚಿವ ಡಾ. ಪರಮೇಶ್ವರ ಅವರು ಲಿಖಿತ ಮೂಲಕ ಉತ್ತರಿಸುವ 245 ಪ್ರಶ್ನೆಗಳ ಪೈಕಿ 87 ಪ್ರಶ್ನೆಗಳಿಗೆ ಉತ್ತರ ಮಂಡಿಸಿದರು.

ಈ ವೇಳೆ ಪ್ರತಿಪಕ್ಷ ನಾಯಕ ಆರ್. ಅಶೋಕ ಎದ್ದು ನಿಂತು, ಈ ಸರ್ಕಾರ ಸತ್ತು ಹೋಗಿದೆ. ತಿಥಿ ಮಾಡಬೇಕು. ತಿಥಿ ಮಾಡಿದರೂ ಉಪಯೋಗವಾಗುವುದಿಲ್ಲ. ಈವರೆಗೆ ನಾಲ್ಕು ಬಾರಿ ಎಚ್ಚರಿಸಿದರೂ ಸಭಾಧ್ಯಕ್ಷರ ಮಾತಿಗೂ ಎಚ್ಚೆತ್ತುಕೊಂಡಿಲ್ಲ. ಆದರೂ ಶೇ.50ರಷ್ಟು ಪ್ರಶ್ನೆಗಳಿಗೂ ಉತ್ತರ ನೀಡದೆ ನಿಯಮ ಪಾಲಿಸಿಲ್ಲ. ದೇವರ ಹಾಗೆ ಬಂದು ಕುಳಿತುಕೊಳ್ಳುತ್ತದೆ. 5ನೇ ಬಾರಿಗೆ ಎಚ್ಚರಿಸಿ ಎಂದು ಸಭಾಧ್ಯಕ್ಷರನ್ನು ಮನವಿ ಮಾಡಿದರು.

ನಾಲ್ಕು ಬಾರಿ ಎಚ್ಚರಿಕೆ: ದಿನಕ್ಕೆ ಕೇವಲ 15 ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮಾತ್ರ ಉತ್ತರಿಸಲು ಸಾಧ್ಯವಿದೆ. ಉಳಿದ ಪ್ರಶ್ನೆಗಳಿಗೆ ನಿಯಮಾವಳಿ ಪ್ರಕಾರ, ಲಿಖಿತ ಉತ್ತರ ನೀಡುವುದು ಸರ್ಕಾರದ ಕರ್ತವ್ಯ. ಗಮನಸೆಳೆಯುವ ಸೂಚನೆಯಲ್ಲಿಯೂ 15ಕ್ಕಿಂತ ಹೆಚ್ಚು ತೆಗೆದುಕೊಳ್ಳದಂತೆ ಮನವಿ ಮಾಡುತ್ತೀರಿ. ಆದರೆ, ಶಾಸಕರ ಪ್ರಶ್ನೆಗಳಿಗೆ ಉತ್ತರಿಸುವ ಸಚಿವರು, ಅಧಿಕಾರಿಗಳು ಅತ್ಯಂತ ನಿರ್ಲಕ್ಷ್ಯ ವಹಿಸಿದ್ದಾರೆ. ಈ ಪೀಠದಿಂದ ನಾಲ್ಕು ಬಾರಿ ಎಚ್ಚರಿಸಲಾಗಿತ್ತು ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಎಷ್ಟು ಹೇಳಿದರೂ ಏನೂ ಸುಧಾರಣೆ ಆಗುವುದಿಲ್ಲ. ಸರಿಯಾದ ಸಮಯಕ್ಕೆ ಸಚಿವರು ಸದನಕ್ಕೆ ಬರವುದಿಲ್ಲ. ಒಟ್ಟು 245 ಲಿಖಿತ ಪ್ರಶ್ನೆಗಳ ಪೈಕಿ ಸರ್ಕಾರವು ಕೇವಲ 87 ಪ್ರಶ್ನೆಗಳಿಗೆ ಮಾತ್ರ ಉತ್ತರ ನೀಡಿದೆ. ಅಂದರೆ, ಅರ್ಧಕ್ಕಿಂತ ಹೆಚ್ಚು ಪ್ರಶ್ನೆಗಳಿಗೆ ಉತ್ತರವನ್ನೇ ನೀಡಿಲ್ಲ. ಸರ್ಕಾರದ ಈ ವರ್ತನೆ ಸರಿಯಲ್ಲ. ಹೀಗಾದರೆ ಸದನ ನಡೆಸುವುದು ಹೇಗೆ? ಸಂಬಂಧಪಟ್ಟ ಸಚಿವರು ಮತ್ತು ಕಾರ್ಯದರ್ಶಿಗಳು ನನಗೆ ಸ್ಪಷ್ಟೀಕರಣ ನೀಡುವವರೆಗೆ ನಾನು ಸದನವನ್ನು ನಡೆಸುವುದಿಲ್ಲ ಎಂದು ಪೀಠದಿಂದ ಎದ್ದು ಹೊರನಡೆದರು.



ಶಾಸಕರಿಗಾಗಿ ಅಧಿವೇಶನ

ಸಭಾಧ್ಯಕ್ಷರು ಮಾತನಾಡಿ, ಅಧಿವೇಶನ ಎನ್ನುವುದು ಜನರ ಸಮಸ್ಯೆಗಳನ್ನು ಚರ್ಚಿಸಲು ಇರುವ ವೇದಿಕೆ. ಈ ಸದನ ನಡೆಯುವುದು ಸಚಿವರಿಗಾಗಿ ಅಲ್ಲ, ಶಾಸಕರಿಗಾಗಿ ನಡೆಯುತ್ತದೆ. ಮೂರು ತಿಂಗಳಿಗೊಮ್ಮೆ ಶಾಸಕರು ತಮ್ಮ ಕ್ಷೇತ್ರದ ಸಮಸ್ಯೆಗಳನ್ನು ಹೊತ್ತು ಇಲ್ಲಿಗೆ ಬರುತ್ತಾರೆ. ಶಾಸಕರು ಇಲ್ಲಿ ಕೇಳುವ ಪ್ರಶ್ನೆಗಳಿಗೆ ಉತ್ತರಿಸುವುದು ಸರ್ಕಾರದ ಕರ್ತವ್ಯ ಎಂದು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು.

ಸಭಾಧ್ಯಕ್ಷರ ಜತೆ ಸಂಧಾನ ಸಭೆ

ಸದನ ನಡೆಸುವುದಿಲ್ಲ ಎಂದು ಹೊರನಡೆದ ಸಭಾಧ್ಯಕ್ಷ ಯು.ಟಿ.ಖಾದರ್ ಅವರೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವರು ಹಾಗೂ ಪ್ರತಿಪಕ್ಷ ನಾಯಕರು ಸಂಧಾನ ಸಭೆ ನಡೆಸಿದರು. ಸಭಾಧ್ಯಕ್ಷರನ್ನು ಸಮಾಧಾನಪಡಿಸಿದ ನಾಯಕರು, ಸೂಕ್ತ ರೀತಿಯಲ್ಲಿ ಸದನ ನಡೆಸಲು ಸಂಪೂರ್ಣ ಸಹಕಾರ ನೀಡುವುದಾಗಿ ಭರವಸೆ ನೀಡಿದರು. ಅಲ್ಲದೇ ಶಾಸಕರ ಪ್ರಶ್ನೆಗಳಿಗೆ ಉತ್ತರ ಕೊಡಿಸುವುದಾಗಿ ಹಾಗೂ ಸದನಕ್ಕೆ ಉತ್ತರ ನೀಡದ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಮುಖ್ಯಮಂತ್ರಿಗಳು ಭರವಸೆ ನೀಡಿದರು. ಜೊತೆಗೆ ಭೋಜನ ವಿರಾಮದ ಬಳಿಕ ಸರ್ಕಾರ ಉತ್ತರ ನೀಡುವುದಾಗಿ ಹೇಳಿದರು. ಮುಖ್ಯಮಂತ್ರಿಗಳ ಭರವಸೆ ತರುವಾಯ ಸದನ ನಡೆಸಲು ಸಭಾಧ್ಯಕ್ಷರು ಒಪ್ಪಿಕೊಂಡರು. ಆ ಬಳಿಕ ಕಲಾಪವನ್ನು ಭೋಜನ ವಿರಾಮಕ್ಕೆ ಮುಂದೂಡಲಾಯಿತು.

3 ಅಧಿಕಾರಿಗಳ ಅಮಾನತಿಗೆ ಕ್ರಮ: ಪರಮೇಶ್ವರ್



ಸಭಾಧ್ಯಕ್ಷರ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಲ್ಲಾ ಕಾರ್ಯದರ್ಶಿಗಳಿಗೆ ಸೂಚನೆ ನೀಡಿ, ನೋಟಿಸ್ ನೀಡುವಂತೆ ಮುಖ್ಯಕಾರ್ಯದರ್ಶಿಗೆ ಹೇಳಿದ್ದು, ತುಂಬಾ ಪ್ರಶ್ನೆಗಳು ಅವರಲ್ಲೇ ಉಳಿದುಕೊಂಡಿದ್ದರೆ ಅವರನ್ನು ಅಮಾನತು ಮಾಡಿ ಎಂದು ಹೇಳಿದ್ದಾರೆ ಎಂದು ಸಚಿವ ಡಾ. ಜಿ.ಪರಮೇಶ್ವರ್ ತಿಳಿಸಿದರು. ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿದೆ, ಕಂದಾಯ ಇಲಾಖೆಯ 91 ಪ್ರಶ್ನೆಗಳಲ್ಲಿ 29 ಉತ್ತರಗಳು ಮಾತ್ರ ಬಂದಿವೆ. ಮುಂದೆ ಇಂತಹ ಬೆಳವಣಿಗೆ ನಡೆಯದಂತೆ ಸೂಕ್ತ ಸಮಯದಲ್ಲಿ ಉತ್ತರ ನೀಡಲಿದೆ ಎಂದು ಸರ್ಕಾರದ ಪರವಾಗಿ ಭರವಸೆ ನೀಡಲಾಗುವುದು ಎಂದರು.

ನಾವಿಕರೆಲ್ಲ ಸುರಕ್ಷಿತ: ರಾಜೇಶ್‌ಕುಮಾರ್

ದೇಶಕ್ಕಿಂದು ಎಲ್ಪಿಜಿ, ತೈಲ ಹೊತ್ತ 2 ನೌಕೆ



• **ಹೊಸದಿಲ್ಲಿ:** ಯುಎಇಯ ಫುಜೈರಾ ಟರ್ಮಿನಲ್ ಮೇಲೆ ಇತ್ತೀಚೆಗೆ ನಡೆದ ಮಿಲಿಟರಿ ದಾಳಿಯ ನಡುವೆಯೂ ಅಲ್ಲಿಂದ ಸುರಕ್ಷಿತವಾಗಿ ಹೊರಬಂದಿರುವ ಭಾರತದ ಜಗ್ ಲಾಡ್ಕಿ ಕಚ್ಚಾ ತೈಲ ಟ್ಯಾಂಕರ್ ಮಂಗಳವಾರ ಭಾರತದ ಮುಂದ್ರಾ ಬಂದರು ತಲುಪುವ ನಿರೀಕ್ಷೆಯಿದೆ. ಇದೇ ವೇಳೆ ಇಂಧನ ಹೊತ್ತ ಶಿವಾಲಿಕ್ ಈಗಾಗಲೇ ಗುಜರಾತ್ ತಲುಪಿದ್ದು, ನಂದಾದೇವಿ ಮಂಗಳವಾರ ಕಾಂಡ್ಲಾ ಬಂದರನ್ನು ತಲುಪುವ ನಿರೀಕ್ಷೆಯಿದೆ

ಜಗ್ ಲಾಡ್ಕಿ ನೌಕೆ ಸುಮಾರು 80,800 ಟನ್ ಮುರ್ಬನ್ ಕಚ್ಚಾ ತೈಲವನ್ನು ಹೊತ್ತು ತರುತ್ತಿದೆ. ಹಡಗಿನಲ್ಲಿರುವ ಎಲ್ಲಾ 22 ಭಾರತೀಯ ನಾವಿಕರು ಸುರಕ್ಷಿತವಾಗಿದ್ದಾರೆ ಎಂದು ಬಂದರು, ಹಡಗು ಮತ್ತು ಜಲಮಾರ್ಗ ಸಚಿವಾಲಯದ ವಿಶೇಷ ಕಾರ್ಯದರ್ಶಿ ರಾಜೇಶ್ ಕುಮಾರ್ ಸಿನ್ಹಾ ಸೋಮವಾರ ಖಚಿತಪಡಿಸಿದ್ದಾರೆ. ಮಾ.14ರಂದು ಫುಜೈರಾ ತೈಲ ಟರ್ಮಿನಲ್ ಮೇಲೆ ದಾಳಿ ನಡೆದ ನಂತರ, ಈ ನೌಕೆ ಭಾನುವಾರ ಬೆಳಗ್ಗೆ ಅಲ್ಲಿಂದ ಪ್ರಯಾಣ ಬೆಳೆಸಿತ್ತು.

ಸಿಕ್ಕಿಬಿದ್ದ ಹಡಗುಗಳು: ಸಂಘರ್ಷಪೀಡಿತ ಪ್ರದೇಶದಿಂದ ಸುರಕ್ಷಿತವಾಗಿ ಹೊರಬಂದಿರುವ 28 ಭಾರತೀಯ ಹಡಗುಗಳಲ್ಲಿ ಜಗ್ ಲಾಡ್ಕಿ ನಾಲ್ಕನೆಯದ್ದು. ಇದರೊಂದಿಗೆ, ಒಟ್ಟು 92,712 ಟನ್ ಇಂಧನವನ್ನು ಹೊತ್ತಿರುವ ಶಿವಾಲಿಕ್ ಮತ್ತು ನಂದಾ ದೇವಿ ಎಂಬ ಎರಡು ಎಲ್‌ಪಿಜಿ ವಾಹಕ ನೌಕೆಗಳು ಹಾರ್ಮುಜ್ ಜಲಸಂಧಿ ದಾಟಿವೆ. ➡ಪುಟ ೭

ಹಾರ್ಮುಜ್ ಬಗ್ಗೆ ಅಮೆರಿಕ ಜತೆ ಚರ್ಚಿಸಿಲ್ಲ: ಭಾರತ

• **ಹೊಸದಿಲ್ಲಿ:** ಹಾರ್ಮುಜ್ ಜಲಸಂಧಿಯ ಮೂಲಕ ಸರಕು ಹಡಗುಗಳ ಸುರಕ್ಷಿತ ಸಂಚಾರವನ್ನು ಖಚಿತಪಡಿಸಿಕೊಳ್ಳಲು ಭಾರತ ಅಮೆರಿಕದೊಂದಿಗೆ ಯಾವುದೇ ದ್ವಿಪಕ್ಷೀಯ ಮಾತುಕತೆಯಲ್ಲಿ ತೊಡಗಿಲ್ಲ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಸ್ಪಷ್ಟಪಡಿಸಿದೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಅಂತಾರಾಷ್ಟ್ರೀಯ ನೌಕಾ ಹಸ್ತಕ್ಷೇಪಕ್ಕೆ ಕರೆನೀಡಿದ ಬೆನ್ನಲ್ಲೇ, ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಈ ಹೇಳಿಕೆ ನೀಡಿದ್ದಾರೆ.

ಈ ವಿಷಯದ ಕುರಿತು ವಿವಿಧ ಪಾಲುದಾರರೊಂದಿಗೆ ಚರ್ಚೆಗಳು ನಡೆಯುತ್ತಿದ್ದರೂ, ವಾಷಿಂಗ್ಟನ್ ಜತೆ ಯಾವುದೇ ನಿರ್ದಿಷ್ಟ ದ್ವಿಪಕ್ಷೀಯ ಮಾತುಕತೆ ನಡೆದಿಲ್ಲ ಎಂದು ಅವರು ಹೇಳಿದ್ದಾರೆ. ಭಾರತದ ಧ್ವಜ ಹೊಂದಿರುವ ಹಡಗುಗಳ ಸುರಕ್ಷಿತ ಸಂಚಾರಕ್ಕಾಗಿ ಇರಾನ್‌ನೊಂದಿಗೆ ನಿರಂತರ ಸಂಪರ್ಕ ಇಟ್ಟುಕೊಳ್ಳಲಾಗಿದೆ. ➡ಪುಟ ೭

ಡಿಕೆಶಿ ನೇತೃತ್ವದಲ್ಲಿ ರಾಜ್ಯ ನೀರಾವರಿ ಯೋಜನೆ ಬಗ್ಗೆ ಚರ್ಚೆ

ಸಚಿವರು, ಸಂಸದರ ಸಭೆ ಇಂದು

• **ಬೆಂಗಳೂರು:** ಕೇಂದ್ರ ಸರ್ಕಾರದಲ್ಲಿ ಬಾಕಿ ಉಳಿದಿರುವ ರಾಜ್ಯ ನೀರಾವರಿ ಯೋಜನೆಗಳ ಬಗ್ಗೆ ಮಂಗಳವಾರ (ಮಾ.17) ಮಹತ್ವದ ಸಭೆ ನಡೆಯಲಿದೆ. ಈ ಸಭೆಯಲ್ಲಿ ನೀರಾವರಿ ಯೋಜನೆಗಳ ಬಗ್ಗೆ ಚರ್ಚೆ ನಡೆಯಲಿದೆ.



ರಾಜ್ಯದ ನೀರಾವರಿ ವಿಚಾರವಾಗಿ ಸುಪ್ರೀಂಕೋರ್ಟ್‌ನಲ್ಲಿ ನಡೆಯುತ್ತಿರುವ ಪ್ರಕರಣಗಳ ಕುರಿತು ಚರ್ಚೆ ಹಾಗೂ ಕೇಂದ್ರ ಸರ್ಕಾರದಲ್ಲಿ ಬಾಕಿ ಉಳಿದಿರುವ ರಾಜ್ಯದ ನೀರಾವರಿ ಯೋಜನೆಗಳ ಬಗ್ಗೆ ಜಲಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹಿರಿಯ ವಕೀಲರು ಹಾಗೂ ರಾಜ್ಯವನ್ನು ಪ್ರತಿನಿಧಿಸುತ್ತಿರುವ ಕೇಂದ್ರ ಸಚಿವರು ಹಾಗೂ ಸರ್ವ ಪಕ್ಷಗಳ ಸಂಸದರ ಜತೆಗೆ ಸಭೆ ನಡೆಸಲಿದ್ದಾರೆ. ಹೀಗಾಗಿ ಈ ಸಭೆ ತೀರಾ ಮಹತ್ವ ಪಡೆದಿದೆ. ➡ಪುಟ ೭

ಆಂಧ್ರ, ಮಹಾರಾಷ್ಟ್ರದ ವಿರುದ್ಧ ಧ್ವನಿ ಎತ್ತಲು ಮನವಿ

ರಾಜ್ಯದ ಪ್ರಮುಖ ನೀರಾವರಿ ಯೋಜನೆಗಳಲ್ಲಿ ಒಂದಾದ ಕೃಷ್ಣಾ ಮೇಲ್ದಂಡೆ ಯೋಜನೆ ಅನುಷ್ಠಾನ ಹಾಗೂ ಭೂಸ್ವಾಧೀನ ಪ್ರಕ್ರಿಯೆ ಮಾಡಬಾರದು ಎಂದು ನೆರೆಯ ಆಂಧ್ರ ಪ್ರದೇಶದವರು ಕೇಂದ್ರ ಸರ್ಕಾರಕ್ಕೆ ಆಕ್ಷೇಪಣಾ ಪತ್ರ ಬರೆದಿದೆ. ಅಲ್ಲದೇ, ಮಹಾರಾಷ್ಟ್ರ ಸರ್ಕಾರ ಕೂಡ ಕೇಂದ್ರಕ್ಕೆ ಪತ್ರ ಬರೆದು ಈ ಯೋಜನೆ ಜಾರಿಯಾಗಬಾರದು ಎಂದು ಕೇಂದ್ರಕ್ಕೆ ಮನವಿ ಮಾಡಿದೆ. ಈ ವಿಚಾರವಾಗಿ ಕೇಂದ್ರ ಸರ್ಕಾರ ನಮಗೆ ಪತ್ರ ಬರೆದು ಸ್ಪಷ್ಟನೆ ಕೇಳಿದೆ. ➡ಪುಟ ೭

ಅತಿರೇಕದ ವರ್ತನೆ, ಅಶಿಸ್ತಿನ ನಡವಳಿಕೆಗೆ ದೇವೇಗೌಡ ಬೇಸರ

ಸಂಸತ್ತಲ್ಲಿ ಕಾಂಗ್ರೆಸ್ ಸದಸ್ಯರ ವರ್ತನೆ ಸೋನಿಯಾ ಗಾಂಧಿಗೆ ಎಚ್‌ಡಿಡಿ ಪತ್ರ

• **ಹೊಸದಿಲ್ಲಿ:** ಸಂಸತ್ ಅಧಿವೇಶನದಲ್ಲಿ ವಿಪಕ್ಷಗಳಿಂದ, ಅದರಲ್ಲಿಯೂ ವಿಶೇಷವಾಗಿ ಕಾಂಗ್ರೆಸ್ ಸದಸ್ಯರು ತೋರಿಸುತ್ತಿರುವ ಅತಿರೇಕದ ವರ್ತನೆ, ಅಶಿಸ್ತಿನ ನಡವಳಿಕೆ ಬಗ್ಗೆ ರಾಜ್ಯಸಭಾ ಸದಸ್ಯ, ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರು ತೀವ್ರ ಆತಂಕ, ಕಳವಳ ವ್ಯಕ್ತಪಡಿಸಿದ್ದು, ಈ ಬಗ್ಗೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಪತ್ರ ಬರೆದಿದ್ದಾರೆ.

ಬಜೆಟ್ ಅಧಿವೇಶನದ ವೇಳೆ ಪ್ರತಿಪಕ್ಷಗಳ ಸದಸ್ಯರು ನಿರಂತರವಾಗಿ ಕಲಾಪಕ್ಕೆ ಅಡ್ಡಿಪಡಿಸುತ್ತಿದ್ದು, ಪ್ರಮುಖವಾಗಿ ಕಾಂಗ್ರೆಸ್ ಸಂಸದರು ಸಂಸತ್ತಿನ ಒಳಗೆ ಹಾಗೂ ಸಂಸತ್ತಿನ ಆವರಣದಲ್ಲಿ ಘೋಷಣೆ ಕೂಗುವುದು, ಫಲಕ ಪ್ರದರ್ಶನ ಮಾಡುವುದು, ನಿರ್ದಿಷ್ಟವಾಗಿ ಹೆಸರು ಕೂಗುವುದು, ಧರಣಿ ಮತ್ತು ಕಲಾಪ ಸ್ಥಗಿತ ಆಗುವಂತೆ ಮಾಡುತ್ತಿದ್ದಾರೆ. ➡ಪುಟ ೭



ಪ್ರತಿಪಕ್ಷದ ಹೊಣೆಗಾರಿಕೆ ಹಾಗೂ ಜವಾಬ್ದಾರಿಗಳ ಬಗ್ಗೆ ತಮಗೆ ಅರಿವಿದೆ. ವಿರೋಧ ಪಕ್ಷಗಳು ತಮ್ಮ ವಿರೋಧವನ್ನು ತೋರಿಸಬಹುದು. ಆದರೆ ಅದು ನಿಯಮಗಳು, ಸಂಪ್ರದಾಯಗಳು ಮತ್ತು ಘನತೆಗೆ ಧಕ್ಕೆ ತರುವಂತಿರಬಾರದು.

■ ಎಚ್.ಡಿ.ದೇವೇಗೌಡ, ರಾಜ್ಯಸಭಾ ಸದಸ್ಯ

ನಿತಿನ್, ನಿತೀಶ್ ಸೇರಿ ಎಂಟು ಎನ್‌ಡಿಎ ಅಭ್ಯರ್ಥಿಗಳಿಗೆ ಜಯ

• **ಹೊಸದಿಲ್ಲಿ:** ಬಿಹಾರ ಮತ್ತು ಒಡಿಶಾದಲ್ಲಿ ನಡೆದ ರಾಜ್ಯಸಭೆ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎಗೆ ಮಹತ್ವದ ಜಯ ದೊರೆತಿದೆ. ಬಿಜೆಪಿ ಬೆಂಬಲಿತ ಬಿಹಾರದಲ್ಲಿ ಐವರು ಮತ್ತು ಒಡಿಶಾದಲ್ಲಿ ಮೂವರು ಅಭ್ಯರ್ಥಿಗಳು ಗೆದ್ದಿದ್ದಾರೆ. ಬಿಹಾರದಲ್ಲಿ ಬಿಜೆಪಿ ರಾಷ್ಟ್ರಾಧ್ಯಕ್ಷ ನಿತಿನ್ ನವೀನ್, ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಸೇರಿ ಐವರು ಎನ್‌ಡಿಎ ಅಭ್ಯರ್ಥಿಗಳು ಜಯ ಸಾಧಿಸಿದ್ದಾರೆ. ಚುನಾವಣಾಧಿಕಾರಿ ಖ್ಯಾತಿ ಸಿಂಗ್ ಪ್ರಕಟಿಸಿದಂತೆ, ಕೇಂದ್ರ ಸಚಿವ ರಾಮನಾಥ್ ಠಾಕೂರ್(ಜೆಡಿಯು), ಬಿಜೆಪಿ ನಾಯಕ ಶಿವೇಶ್ ಕುಮಾರ್ ಮತ್ತು ರಾಷ್ಟ್ರೀಯ ಲೋಕ ಮೋರ್ಚಾ ಅಧ್ಯಕ್ಷ ಉಪೇಂದ್ರ ಕುಶ್ವಾಹಾ ಕೂಡ ರಾಜ್ಯಸಭೆಗೆ ಆಯ್ಕೆಯಾಗಿದ್ದಾರೆ. ➡ಪುಟ ೭

ಬಿಹಾರ, ಒಡಿಶಾ ರಾಜ್ಯಸಭೆ ಚುನಾವಣೆ ಫಲಿತಾಂಶ



ಸರ್ಕಾರದ ಕ್ರಮದ ಬಗ್ಗೆ ಸಚಿವ ಮುನಿಯಪ್ಪ ಮಾಹಿತಿ

ಎಲ್ಪಿಜಿ ವಿತರಣೆಗೆ ಹೊಸ ನೀತಿ

• **ಬೆಂಗಳೂರು:** ಕೊಲ್ಲಿ ರಾಷ್ಟ್ರಗಳಲ್ಲಿ ಉಂಟಾಗಿರುವ ಯುದ್ಧದ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಉಂಟಾಗಿರುವ ಎಲ್‌ಪಿಜಿ ಕೊರತೆ ನೀಗಿಸಲು ಹಾಗೂ ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ವಿತರಣೆಯನ್ನು ಸುಗಮಗೊಳಿಸಲು ರಾಜ್ಯ ಸರಕಾರ ಹೊಸ ನೀತಿ ಪ್ರಕಟಿಸಿದೆ.

ಐದು ಹಂತದಲ್ಲಿ ವರ್ಗೀಕರಣ: ಈ ನೀತಿ ಅನ್ವಯ, ಎಲ್‌ಪಿಜಿ ಪೂರೈಕೆ ಪ್ರಮಾಣ ಮೊದಲಿನ ಹಂತಕ್ಕೆ ತಲುಪುವವರೆಗೂ ಆದ್ಯತೆ ಮೇರೆಗೆ, ಅಗತ್ಯ ಸೇವೆಗಳಿಗಷ್ಟೇ ಸಿಲಿಂಡರ್ ಪೂರೈಸಲು ಕ್ರಮ ಕೈಗೊಂಡಿದೆ. ಇದೇ ಮಾದರಿಯಲ್ಲಿ ಎಲ್‌ಪಿಜಿ ಪೂರೈಸುವ ಎಲ್ಲ ಸಂಸ್ಥೆಗಳಿಗೂ ರಾಜ್ಯ ಸರಕಾರ ಸೂಚನೆ ನೀಡಿದ್ದು, ಪೂರೈಕೆಯನ್ನು ಐದು ಹಂತಗಳಲ್ಲಿ ವರ್ಗೀಕರಣ ಮಾಡಲಾಗಿದೆ.

ಒಟ್ಟು ಪ್ರತಿನಿತ್ಯ 7 ಸಾವಿರ ವಾಣಿಜ್ಯ ಸಿಲಿಂಡರ್‌ಗಳ ಪೈಕಿ ಶಾಲಾ-ಕಾಲೇಜುಗಳು, ವಿದ್ಯಾರ್ಥಿನಿಲಯಗಳು, ಆಸ್ಪತ್ರೆಗಳು ಮತ್ತು ಇತರ ಅತ್ಯಗತ್ಯ ಸಂಸ್ಥೆಗಳಿಗೆ ಹೆಚ್ಚಿನ ಆದ್ಯತೆ ಮೇರೆಗೆ ಪ್ರತಿದಿನ 4,200 ಸಿಲಿಂಡಗರ್‌ಗಳನ್ನು ಪೂರೈಸಬೇಕಿದೆ. ಸರಕಾರಿ ಮತ್ತು ಸಾರ್ವಜನಿಕ ವಲಯದ ಸಂಸ್ಥೆಗಳು, ವಿಮಾನ ನಿಲ್ದಾಣ, ರೈಲು ನಿಲ್ದಾಣ, ಬಸ್ ನಿಲ್ದಾಣಗಳಲ್ಲಿರುವ ಕ್ಯಾಂಟೀನ್‌ಗಳು, ಕೆಎಂಎಫ್ (ನಂದಿನಿ) ಮತ್ತು ಇಂದಿರಾ ಕ್ಯಾಂಟೀನ್‌ಗಳಿಗೆ ಪ್ರತಿದಿನ 1,200 ಸಿಲಿಂಡರ್‌ಗಳು ಪೂರೈಕೆಯಾಗಲಿವೆ. ➡ಪುಟ ೭

ಅಗತ್ಯಕ್ಕಿಂತ ಹೆಚ್ಚು ಬುಕಿಂಗ್: ಮುನಿಯಪ್ಪ

ಎಲ್ಪಿಜಿ ಸಿಲಿಂಡರ್ ಸರಬರಾಜಿನ ಸ್ಥಿತಿಗತಿ ಕುರಿತು ಸೋಮವಾರ ನಡೆದ ಸಭೆ ಬಳಿಕ ಸಚಿವ



ಕೆ.ಎಚ್.ಮುನಿಯಪ್ಪ ಮಾಧ್ಯಮಗಳೊಂದಿಗೆ ಮಾತನಾಡಿದರು. ರಾಜ್ಯದಲ್ಲಿ ಎಲ್ಪಿಜಿ ಸಿಲಿಂಡರ್ ಕೊರತೆ ಇಲ್ಲದೆ ಸರಬರಾಜು ನಿಯಮಿತವಾಗಿ ನಡೆಯುತ್ತಿದೆ. ಕೆಲವೆಡೆ ಜನರು ಆತಂಕದಿಂದ ಅಗತ್ಯಕ್ಕಿಂತ ಹೆಚ್ಚು ಬುಕ್ಕಿಂಗ್ ಮಾಡುತ್ತಿರುವುದರಿಂದ ಗೊಂದಲ ಉಂಟಾಗಿದೆ ಎಂದರು. ಸಾಮಾನ್ಯವಾಗಿ ನಗರ ಪ್ರದೇಶಗಳಲ್ಲಿ 25ರಿಂದ 30 ದಿನಗಳಿಗೆ ಒಂದು ಸಿಲಿಂಡರ್ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಸುಮಾರು 45 ದಿನಗಳಿಗೆ ಒಂದು ಸಿಲಿಂಡರ್ ಬಳಕೆಯಾಗುತ್ತದೆ. ಇದಕ್ಕೆ ಅನುಗುಣವಾಗಿ ಸರಬರಾಜು ನಡೆಯುತ್ತಿದೆ.

ಪಶ್ಚಿಮ ಬಂಗಾಳ ಏಳು ಹಿರಿಯ ಅಧಿಕಾರಿಗಳ ವರ್ಗ

• **ಕೋಲ್ಕತ್ತಾ:** ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಟಿಎಂಸಿ ಸರ್ಕಾರದ ಅಂದಾದುಂದಿ ಆಡಳಿತ ಮುಂದುವರಿದಿರುವಂತೆಯೇ, ಚುನಾವಣಾ ಆಯೋಗ ಆ ರಾಜ್ಯದಲ್ಲಿ ಹಿಂಸಾಮುಕ್ತ ಮತ್ತು ನ್ಯಾಯಯುತ ಚುನಾವಣೆಯನ್ನು ಖಾತ್ರಿಪಡಿಸುವುದಕ್ಕಾಗಿ ಮುಖ್ಯ ಕಾರ್ಯದರ್ಶಿ, ಗೃಹ ಕಾರ್ಯದರ್ಶಿ, ಪೊಲೀಸ್ ಮಹಾನಿರ್ದೇಶಕರು ಮತ್ತು ನಾಲ್ವರು ಐಪಿಎಸ್ ಅಧಿಕಾರಿಗಳನ್ನು ಅವರ ಸ್ಥಾನದಿಂದ ಪದಚ್ಯುತಗೊಳಿಸಿ ಅವರ ಸ್ಥಾನಗಳಿಗೆ ದಕ್ಷ, ಅನುಭವೀ ಅಧಿಕಾರಿಗಳನ್ನು ನಿಯೋಜಿಸಿದೆ.

• ಪುಟ ೫

ಸದನದ ಗಂಭೀರತೆ ಅರ್ಥ ಮಾಡಿಕೊಳ್ಳಿ: ಶಾಸಕ ಸುನೀಲ್

ಬೆಂಗಳೂರು: ಮುಖ್ಯಮಂತ್ರಿಗಳು ಸದನದ ಗಂಭೀರತೆಯನ್ನು ಅರ್ಥ ಮಾಡಿಕೊಳ್ಳಬೇಕು ಎಂದು ಶಾಸಕ ಸುನೀಲ್ ಕುಮಾರ್ ಒತ್ತಾಯಿಸಿದ್ದಾರೆ.

ಮಾಧ್ಯಮ ಪ್ರತಿನಿಧಿಗಳ ಜೊತೆ ಸೋಮವಾರ ಮಾತನಾಡಿ, ಪ್ರಶ್ನೆಗಳಿಗೆ ಉತ್ತರ ನೀಡುವ ವೇಳೆ ಸಚಿವರು ಸದನದಲ್ಲಿ ಹಾಜರಿರುವಂತೆ ಎಚ್ಚರಿಕೆಯನ್ನು ಸರ್ಕಾರ ಕೊಟ್ಟಿದ್ದರೂ



ಪ್ರಯೋಜನವಾಗಿಲ್ಲ; ಇವತ್ತು 230 ಲಿಖಿತ ಪ್ರಶ್ನೆಗಳ ಪೈಕಿ 80 ಪ್ರಶ್ನೆಗಳಿಗೆ ಮಾತ್ರ ಸರ್ಕಾರ ಉತ್ತರ ಕೊಟ್ಟಿದೆ. ಇದು ಸಹಜವಾಗಿ ವಿಧಾನಸಭಾಧ್ಯಕ್ಷರಿಗೆ ಬೇಸರ ತರಿಸಿದೆ ಎಂದು ವಿಶ್ಲೇಷಿಸಿದರು.

ಸರ್ಕಾರದ ನಿಲುವನ್ನು ಖಂಡಿಸಿ ಇತಿಹಾಸದಲ್ಲೇ ಮೊದಲ ಬಾರಿಗೆ ಸಭಾಧ್ಯಕ್ಷರು ಅವರು ಪೀಠವನ್ನು ಬಿಟ್ಟು ಹೋಗಿದ್ದಾರೆ. ಇದು ಆಘಾತಕಾರಿ ಸಂಗತಿ ಎಂದು ತಿಳಿಸಿದರು. ಸರ್ಕಾರಕ್ಕೆ ಸದನ, ಸಂವಿಧಾನದ ಕುರಿತು ಹಾಗೂ ಸದನದ ನಡವಳಿಕೆ ಬಗ್ಗೆ ಗೌರವ ಇದ್ದರೆ, ಮುಖ್ಯಮಂತ್ರಿಗಳು ಸ್ವತಃ ಈ ವಿಚಾರದಲ್ಲಿ ಪ್ರವೇಶ ಮಾಡಿ ಪ್ರಶ್ನೆಗಳಿಗೆ ಉತ್ತರ ಕೊಡುವುದಷ್ಟೇ ಅಲ್ಲ; ಸದನವನ್ನು ಸಚಿವರು ಯಾವ ರೀತಿ ಗಂಭೀರವಾಗಿ ತೆಗೆದುಕೊಳ್ಳಬೇಕು ಮತ್ತು ಅಧಿಕಾರಿಗಳು ಗಂಭೀರವಾಗಿ ತೆಗೆದುಕೊಳ್ಳಬೇಕೆಂಬುದನ್ನು ಸ್ಪಷ್ಟಪಡಿಸಲಿ ಎಂದು ಒತ್ತಾಯಿಸಿದರು.

ಸಿಎಂ ಈ ವಿಷಯದಲ್ಲಿ ಅಸಹಾಯಕರಾಗಿದ್ದಾರೆ. ಕಳೆದ ಬಾರಿ ಅಧಿವೇಶನ ದಲ್ಲಿ ಎಲ್ಲ ಸಚಿವರು ಅಧಿವೇಶನದ ಸಂದರ್ಭದಲ್ಲಿ ಕಡ್ಡಾಯವಾಗಿ ಭಾಗವಹಿಸಬೇಕೆಂದು ಸ್ವತಃ ಸಿಎಂಗಳು ಸಚಿವರಿಗೆ ಪತ್ರ ಬರೆದಿದ್ದರು. ಸಿಎಂಗಳ ಪತ್ರಕ್ಕೆ ಬೆಲೆ ಇಲ್ಲ, ಆಡಳಿತ ಹಿಡಿತ ತಪ್ಪಿದೆ ಎಂಬುದು ಗೊತ್ತಾಗಿದೆ ಎಂದರು. ಇಡೀ ವರ್ಷದಲ್ಲಿ ಅಧಿ ವೇಶನ 40 ದಿನ ನಡೆಯುವುದೇ ಕಷ್ಟ. ಆ ಅಧಿವೇಶನದಲ್ಲಿ ಸದಸ್ಯರಿಗೆ ಸರಿಯಾದ ಉತ್ತರ ಸಿಗುತ್ತಿಲ್ಲ. ಯಾವುದೋ ಪ್ರಶ್ನೆಗೆ ಯಾವುದೋ ಉತ್ತರ ಕೊಡಲಾಗುತ್ತಿದೆ. ಇದೊಂದು ಪರಿಪಾಠವಾಗಿದೆ ಎಂದರು.

ಡಿಸಿಎಂ ಪರಿಶೀಲನೆ



ವಿಧಾನಸೌಧದ ಆವರಣದಲ್ಲಿ ತೆರೆದಿರುವ ಕರ್ನಾಟಕ ಸಾಬೂನು ಮತ್ತು ಮಾರ್ಜಕ ಸಂಸ್ಥೆಯ ಮಳಿಗೆಗೆ ಸೋಮವಾರ ಸಂಜೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರು ಭೇಟಿ ನೀಡಿ, ನಿಗಮದ ಉತ್ಪನ್ನಗಳನ್ನು ಪರಿಶೀಲಿಸಿದರು. ಕೆಎಸ್‌ಡಿಎಲ್ ಅಧ್ಯಕ್ಷ ಸಿ.ಎಸ್. ನಾಡಗೌಡ (ಅಪ್ಪಾಜಿ) ಹಾಜರಿದ್ದರು.

ಅಮರೇಶ, ಹೆನ್ರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

ಬೆಂಗಳೂರು: ಸಾಹಿತಿ ಅಮರೇಶ ನುಗಡೋಣಿ ಅವರ ದಡ ಸೇರಿಸು ತಂದೆ ಕಥಾ ಸಂಕಲನ ಹಾಗೂ ಕೊಂಕಣಿ ಸಾಹಿತಿ ಮತ್ತು ಪತ್ರಕರ್ತ ಮಂಗಳೂರಿನ ಹೆನ್ರಿ ಮೆಂಡೊನ್ಸಾ





ಅವರ ರುಪಾನಿ ಅನಿ ರೂಪಕಾಂ ಸಾಹಿತ್ಯ ವಿಮರ್ಶೆ ಕೃತಿಗೆ 2025ನೇ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

ಈ ಪ್ರಶಸ್ತಿಯು 1 ಲಕ್ಷ ನಗದು ಬಹುಮಾನ, ಪ್ರಶಸ್ತಿ ಪತ್ರ ಮತ್ತು ಸ್ಮರಣಿಕೆಯನ್ನು ಒಳಗೊಂಡಿದೆ. ಡಾ. ಸಿದ್ದಲಿಂಗ ಪಟ್ಟಣಶೆಟ್ಟಿ, ಡಾ. ಜಯಲಲಿತ ಮತ್ತು ಸಹನಾ ಕಾಂತಬೈಲು ಅವರಿದ್ದ ತಜ್ಞರ ಸಮಿತಿಯು ಈ ಕೃತಿಯನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. 2025ರ ಜ.30ರಂದು ಆರಂಭವಾದ ಸುದೀರ್ಘ ಆಯ್ಕೆ ಪ್ರಕ್ರಿಯೆಯ ನಂತರ ಈ ಅಧಿಕೃತ ಘೋಷಣೆ ಹೊರಬಿದ್ದಿದೆ.

ರಾಯಚೂರು ಜಿಲ್ಲೆಯವರಾದ ಅಮರೇಶ ನುಗಡೋಣಿ ಅವರು, ಗ್ರಾಮೀಣ ಬದುಕಿನ ಸಮಸ್ಯೆಗಳಂತಹ ವಿಷಯ ಗಳನ್ನು ತಮ್ಮ ಕಥೆಗಳಲ್ಲಿ ನೈಜವಾಗಿ ಚಿತ್ರಿಸುವುದಕ್ಕೆ ಹೆಸರುವಾಸಿ ಯಾಗಿದ್ದಾರೆ. ಹಂಪಿಯ ಕನ್ನಡ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕರಾಗಿದ್ದಾರೆ. ಮಂಗಳೂರಿನ ಹೆನ್ರಿ ಮೆಂಡೊನ್ಸಾ ಅವರು ಕೊಂಕಣಿ ಸಾಹಿತ್ಯದ ಪ್ರಮುಖ ಕವಿ, ಸಣ್ಣ ಕಥೆಗಾರ, ವಿಮರ್ಶಕ ಮತ್ತು ಸಂಪಾದಕರಾಗಿದ್ದು, ಇವರು ಕೇವಲ ಸಾಹಿತಿಯಾಗಿ ಮಾತ್ರವಲ್ಲದೆ, ಕೊಂಕಣಿ ಸಾಹಿತ್ಯವನ್ನು ಡಿಜಿಟಲ್ ಲೋಕಕ್ಕೆ ಕೊಂಡೊಯ್ಯುವಲ್ಲಿ ಮತ್ತು ವಿಮರ್ಶಾತ್ಮಕ ದೃಷ್ಟಿಕೋನವನ್ನು ಬೆಳೆಸುವಲ್ಲಿ ಮಹತ್ತರ ಪಾತ್ರ ವಹಿಸಿದ್ದಾರೆ.

ಕಿರುಸುದ್ದಿ

ಆಂಬುಲೆನ್ಸ್‌ಗೆ ಪೂರಕ ಸಿಬ್ಬಂದಿ ನೇಮಕಾತಿ

ವಿಧಾನಪರಿಷತ್: ರಾಜ್ಯ ಸರ್ಕಾರವೇ ಆಂಬುಲೆನ್ಸ್‌ಗಳ ಕೇಂದ್ರಿಕೃತ ನಿರ್ವಹಣಾ ವ್ಯವಸ್ಥೆಯನ್ನು 112 ಅಡಿಯಲ್ಲಿ ಅನುಷ್ಠಾನಗೊಳಿಸಲು ಮುಂದಾಗಿದ್ದು, 3 ತಿಂಗಳಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ ಪ್ರಕಾಶ್ ಪಾಟೀಲ್ ತಿಳಿಸಿದರು. ಪ್ರಶ್ನೋತ್ತರ ಕಲಾಪದಲ್ಲಿ ಟಿ.ಎನ್. ಜವರಾಯಿಗೌಡ ಅವರು ಆ್ಯಂಬುಲೆನ್ಸ್ ವ್ಯವಸ್ಥೆ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ರಾಜ್ಯ ಆ್ಯಂಬುಲೆನ್ಸ್‌ಗಳನ್ನು ತ್ವರಿತ ಹಾಗೂ ಪರಿಣಾಮಕಾರಿಯಾಗಿ ಆರೋಗ್ಯ ಸೇವೆ ಒದಗಿಸುವ ನಿಟ್ಟಿನಲ್ಲಿ 112 ಎಂಬ ಕೇಂದ್ರಿಕೃತ ನಿರ್ವಹಣಾ ವ್ಯವಸ್ಥೆಯನ್ನು ಸರ್ಕಾರವೇ ವಹಿಸಿಕೊಳ್ಳಲಿದೆ. ಈ ನೂತನ ವ್ಯವಸ್ಥೆ 3 ತಿಂಗಳಲ್ಲಿ ಅನುಷ್ಠಾನವಾಗುವ ಸಾಧ್ಯತೆ ಇದ್ದು, ತಾಂತ್ರಿಕತೆಯ ಅಳವಡಿಕೆಯ ಕಾರ್ಯ ಪ್ರಗತಿಯಲ್ಲಿದೆ ಎಂದು ಹೇಳಿದರು. ಅದೇ ರೀತಿ ಆ್ಯಂಬುಲೆನ್ಸ್‌ಗೆ ಪೂರಕ ಸಿಬ್ಬಂದಿ ನೇಮಕಾತಿಯನ್ನೂ ಸರ್ಕಾರ ಶೀಘ್ರದಲ್ಲಿಯೇ ಕೈಗೊಳ್ಳಲಿದೆ. ಕೇಂದ್ರ ಸರ್ಕಾರದ ಮಾನದಂಡ ಗಳ ಅನ್ವಯ ರಾಜ್ಯದಲ್ಲಿ ಆ್ಯಂಬುಲೆನ್ಸ್‌ಗಳು ಸಮರ್ಪಕ ವಾಗಿವೆ, ಆ್ಯಂಬುಲೆನ್ಸ್‌ಗಳ ಕೊರತೆ ರಾಜ್ಯದಲ್ಲಿ ಇಲ್ಲ. ಆರೋಗ್ಯ ಕವಚ ವ್ಯಾಪ್ತಿಯಲ್ಲಿ 715 ಹಾಗೂ ರಾಜ್ಯದ 1 ಸಾವಿರ ಒಟ್ಟಾರೆಯಾಗಿ 1,715 ಆ್ಯಂಬುಲೆನ್ಸ್‌ಗಳು ಕಾರ್ಯನಿರ್ವಹಿಸುತ್ತಿದ್ದು, ಇನ್ನೂ ಹೆಚ್ಚುವರಿಯಾಗಿ 262 ಆ್ಯಂಬುಲೆನ್ಸ್‌ಗಳ ಖರೀದಿಗೆ ಸರ್ಕಾರ ಮುಂದಾಗಿದೆ ಎಂದರು.

ವಾರದಲ್ಲಿ ನಾಲ್ಕು ಗಂಟೆ ದೈಹಿಕ ಶಿಕ್ಷಣಕ್ಕೆ ಮೀಸಲು

ವಿಧಾನಪರಿಷತ್: ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ವಾರದಲ್ಲಿ ಪ್ರತಿ ತರಗತಿಗೆ 4 ತಾಸನ್ನು ದೈಹಿಕ ಶಿಕ್ಷಣಕ್ಕೆ ಮೀಸಲಿಡಲಾಗಿದೆ. ಮೌಲ್ಯ ಶಿಕ್ಷಣವನ್ನು ಪ್ರತ್ಯೇಕ ಪಿರಿಯಡ್‌ನಲ್ಲಿ ಬೋಧಿಸಲಾಗುವುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ತಿಳಿಸಿದರು. ಪ್ರಶ್ನೋತ್ತರ ಕಲಾಪದಲ್ಲಿ ಚಿದಾನಂದ ಗೌಡ ಕೇಳಿದ ಪ್ರಶ್ನೆ ವೇಳೆ ಪ್ರತಿಕ್ರಿಯಿಸಿದ ಅವರು, ರಾಜ್ಯದ ಪ್ರಾಥಮಿಕ ಶಿಕ್ಷಣದಲ್ಲಿ 6,771 ದೈಹಿಕ ಶಿಕ್ಷಕರ ಹುದ್ದೆ ಮಂಜೂರಾಗಿದ್ದು, ಈ ಪೈಕಿ 3,361 ಹುದ್ದೆ ಖಾಲಿ ಇದೆ. ಪ್ರೌಢ ಶಾಲೆಗಳಲ್ಲಿ 5,223 ಹುದ್ದೆ ಮಂಜೂರಾಗಿದೆ. 1,841 ಹುದ್ದೆ ಖಾಲಿ ಉಳಿದಿವೆ. ಮುಂದಿನ 15 ಸಾವಿರ ಶಿಕ್ಷಕರ ನೇಮಕಾತಿಯ ಸಂದರ್ಭದಲ್ಲಿ ದೈಹಿಕ ಶಿಕ್ಷಕರ ನೇಮಕ್ಕೆ ಹೆಚ್ಚು ಒತ್ತು ನೀಡುವುದಾಗಿ ಸಚಿವರು ಭರವಸೆ ನೀಡಿದರು. ಚಿದಾನಂದ ಗೌಡ ಮಾತನಾಡಿ, ಉತ್ತಮ ಮನಸ್ಸಿನೊಂದಿಗೆ ಉತ್ತಮ ದೈಹಿಕ ಆರೋಗ್ಯವು ಅಗತ್ಯ. ಆದ್ದರಿಂದ ಮಕ್ಕಳ ದೈಹಿಕ ಶಿಕ್ಷಣ ಚಟುವಟಿಕೆಗೆ ಕಡಿವಾಣ ಹಾಕಬಾರದು ಎಂದು ಒತ್ತಾಯಿಸಿದರು.

ರಾಜ್ಯಮಟ್ಟದ ಸಮಿತಿ ರಚನೆ

ವಿಧಾನಪರಿಷತ್: ರಾಜ್ಯದ ಶಿಕ್ಷಣ ಮಹಾವಿದ್ಯಾಲಯಗಳ ಪ್ರವೇಶಾತಿ ಶುಲ್ಕ ಪರಿಷ್ಕರಣೆಗಾಗಿ ಐವರು ಸದಸ್ಯರನ್ನೊಳಗೊಂಡ ರಾಜ್ಯಮಟ್ಟದ ಸಮಿತಿ ರಚಿಸಲಾಗಿದ್ದು, ಈ ಸಮಿತಿ ವರದಿ ಆಧರಿಸಿ ಶುಲ್ಕ ಪರಿಷ್ಕರಣೆಯ ಬಗ್ಗೆ ಸರ್ಕಾರ ನಿರ್ಧಾರ ಕೈಗೊಳ್ಳಲಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ತಿಳಿಸಿದರು. ಪ್ರಶ್ನೋತ್ತರ ವೇಳೆ ಕಾಂಗ್ರೆಸ್ ಸದಸ್ಯ ಮಧು ಜಿ. ಮಾದೇಗೌಡ ಅವರು ಬಿಇಡಿ ಮಹಾವಿದ್ಯಾಲಯಗಳ ಪ್ರವೇಶ ಶುಲ್ಕ ಪರಿಷ್ಕರಣೆಗೆ ಸಂಬಂಧಿಸಿದಂತೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ಈ ಶುಲ್ಕ ಪರಿಷ್ಕರಣೆ ವಿಷಯವಾಗಿ ಉನ್ನತ ಶಿಕ್ಷಣ ಇಲಾಖೆಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಸಭೆ ಸಹ ನಡೆದಿದ್ದು, ಸಮಗ್ರವಾಗಿ ಚರ್ಚೆ ನಡೆಸಲಾಗಿದೆ. ಶುಲ್ಕ ಪರಿಷ್ಕರಣೆಗೆ ಸಮಿತಿ ವರದಿ ನೀಡಿದ ಬಳಿಕವೇ ಸರ್ಕಾರ ಈ ಬಗ್ಗೆ ಅಂತಿಮ ನಿರ್ಧಾರ ಕೈಗೊಳ್ಳುತ್ತಿದೆ ಎಂದರು.

ವಕ್ಫ್ ಹಾಗೂ ಅಲ್ಪಸಂಖ್ಯಾತ ಕಲ್ಯಾಣ ಸಚಿವ ಜಮೀರ್ ಹೇಳಿಕೆ

ದೇವಸ್ಥಾನ, ಶಾಲೆಗಳ ಆಸ್ತಿಗಳಿಗೆ ಕೈ ಹಾಕಲ್ಲ

ವಿಧಾನಸಭೆ: ರಾಜ್ಯದಲ್ಲಿ ವಕ್ಫ್ ಆಸ್ತಿಗಳ ಒತ್ತುವರಿಯನ್ನು ತೆರವುಗೊಳಿಸಿ ಆಸ್ತಿಗಳನ್ನು ಮರಳಿ ಪಡೆಯಲು ಎಲ್ಲಾ ಕ್ರಮಗಳನ್ನು



ಕೈಗೊಳ್ಳಲಾಗಿದೆ. ಆದರೆ ಯಾವುದೇ ದೇವಸ್ಥಾನ, ಶಾಲೆಗಳಿಗೆ ಕೈ ಹಾಕುವುದಿಲ್ಲ ಎಂದು ವಕ್ಫ್ ಹಾಗೂ ಅಲ್ಪಸಂಖ್ಯಾತ ಕಲ್ಯಾಣ ಸಚಿವ ಜಮೀರ್ ಅಹ್ಮದ್ ಖಾನ್ ತಿಳಿಸಿದರು.

ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಶಾಸಕ ಎಂ.ವೈ. ಪಾಟೀಲ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ರಾಜ್ಯದಲ್ಲಿ 1,12,862 ಎಕರೆ ವಕ್ಫ್ ಆಸ್ತಿ ಇದೆ. ಈ ಆಸ್ತಿ ಸರ್ಕಾರದಿಂದ ಬಂದದ್ದಲ್ಲ. ಖಾಸಗಿ ವ್ಯಕ್ತಿಗಳು ಸಮಾಜದ ಅಭಿವೃದ್ಧಿಗೆ ಕೊಟ್ಟಿರುವುದು. ಅದರಲ್ಲಿ ಕೇವಲ 20,054 ಎಕರೆಗಳು ನಮ್ಮ ಬಳಿಯಿದೆ. 17,969 ಎಕರೆಗಳನ್ನು ಅತಿಕ್ರಮಣ ಮಾಡಲಾಗಿದೆ. 47,263 ಎಕರೆಗಳು ಇನಾಂ ರದ್ದತಿ ಕಾಯ್ದೆಯಡಿ ಮತ್ತು 23,627 ಎಕರೆಗಳು ಭೂ ಸುಧಾರಣಾ ಕಾಯ್ದೆಯಿಂದಾಗಿ ನಮ್ಮ ಕೈ ಬಿಟ್ಟು ಹೋಗಿವೆ. ವಕ್ಫ್ ಆಸ್ತಿಯನ್ನು ಒತ್ತುವರಿ ಮಾಡಿದವರು ಮುಸ್ಲಿಂ ಸಮುದಾಯದವರೇ ಎಂದು ಹೇಳಿದರು.

ವಕ್ಫ್ ಆಸ್ತಿ ಒತ್ತುವರಿ ತೆರವಿಗಾಗಿ ರಾಜ್ಯಾದ್ಯಂತ ವಕ್ಫ್ ಅದಾಲತ್‌ಗಳನ್ನು ನಡೆಸಲಾಗಿದೆ. ವಕ್ಫ್ ಅದಾಲತ್‌ನ ಬಗ್ಗೆ ಹಿಂದೆ ಪ್ರತಿಪಕ್ಷಗಳು ಟೀಕೆ ಮಾಡಿದ್ದವು. ಆದರೆ, ಈ ಅದಾಲತ್ ನಡೆಸಿರುವುದು ವಕ್ಫ್ ಆಸ್ತಿ ಉಳಿಸಲು. ದೇವಸ್ಥಾನ, ಶಾಲೆಗಳಿಗೆ ಬಳಕೆಯಾಗಿರುವ ವಕ್ಫ್ ಆಸ್ತಿಗಳನ್ನು ನಾವು ಹಾಗೆಯೇ ಬಿಟ್ಟಿದ್ದೇವೆ. ಖಾಸಗಿ ವ್ಯಕ್ತಿಗಳು ವಕ್ಫ್ ಆಸ್ತಿಗಳನ್ನು ಒತ್ತುವರಿ ಮಾಡಿಕೊಂಡಿರುವುದನ್ನು ತೆರವು ಮಾಡುತ್ತಿದ್ದೇವೆ ಎಂದು ಸಚಿವರು ಸ್ಪಷ್ಟಪಡಿಸಿದರು.

ವಕ್ಫ್ ಆಸ್ತಿಯಲ್ಲಿ ಬೇಸಾಯ ಮಾಡುತ್ತಿದ್ದರೆ ರೈತರಿಗೆ ನೀಡಿ

ಈ ವೇಳೆ ಮಧ್ಯೆ ಪ್ರವೇಶಿಸಿ ಮಾತನಾಡಿದ ಪ್ರತಿಪಕ್ಷ ನಾಯಕ ಆರ್. ಅಶೋಕ, ವಕ್ಫ್ ಆಸ್ತಿ ಒತ್ತುವರಿ ತೆರವು ಮಾಡಿ. ಅದಕ್ಕೆ ನಮ್ಮ ಆಕ್ಷೇಪವಿಲ್ಲ. ಹಿಂದೆ ದೇವಸ್ಥಾನಗಳಿಗೂ ಬಹಳಷ್ಟು ಇನಾಂ ಭೂಮಿ ಇತ್ತು. ಭೂ ಸುಧಾರಣಾ ಕಾಯ್ದೆಯಡಿ ಉಳುವ ರೈತರಿಗೆ ನೀಡಲಾಗಿದೆ. ಅದೇ ರೀತಿ ವಕ್ಫ್ ಆಸ್ತಿಯಲ್ಲಿ ಯಾರಾದರೂ ಬೇಸಾಯ ಮಾಡುತ್ತಿದ್ದರೆ ಅದನ್ನು ಅವರಿಗೇ ಕೊಟ್ಟುಬಿಡಿ. ಅತಿಕ್ರಮಣದ ಬಗ್ಗೆ ತನಿಖೆ ಮಾಡಿ ಎಂದು ನಾವೂ ಹೇಳುತ್ತಿದ್ದೇವೆ. ಬೆಂಗಳೂರಿನ ವಿಂಡ್ಸರ್ ಮ್ಯಾನರ್ ಹೋಟೆಲ್ ಇರುವ ಜಾಗ ಸಹ ವಕ್ಫ್ ಆಸ್ತಿ. ಆ ಬಗ್ಗೆಯೂ ಸಚಿವರೇ ಮಾತನಾಡಿ ಎಂದು ಹೇಳಿದರು.ಅದಕ್ಕೆ ಸಚಿವರು ಅದು ಸುಪ್ರೀಂ ಕೋರ್ಟ್‌ನಲ್ಲಿದೆ ಎಂದು ಉತ್ತರಿಸಿದರು. ಸರ್ಕಾರ ಯಾವುದೇ ದೇವಾಲಯಗಳು ಅಥವಾ ಶಿಕ್ಷಣ ಸಂಸ್ಥೆಗಳ ಜಮೀನನ್ನು ವಕ್ಫ್ ಆಸ್ತಿ ಎಂದು ಹೇಳಿಕೊಳ್ಳುವ ಮೂಲಕ ಅವುಗಳ ಮೇಲೆ ಕೈ ಹಾಕುತ್ತಿಲ್ಲ ಎಂದು ಸ್ಪಷ್ಟಪಡಿಸಿದರು.

ಸ್ಮಶಾನ ಭೂಮಿ ಮಂಜೂರಿಗೆ ಕ್ರಮ

ವಿಧಾನಸಭೆ: ಸ್ಮಶಾನ ಇಲ್ಲದ ಗ್ರಾಮಗಳಿಗೆ ಸ್ಮಶಾನ ಭೂಮಿ ಮಂಜೂರಿಗೆ ಸರ್ಕಾರಿ ಜಮೀನು ಇಲ್ಲದಿದ್ದರೆ, ಮಾರ್ಗಸೂಚಿ ದರಕ್ಕಿಂತ ಮೂರು ಪಟ್ಟು ಹಣ ನೀಡಿ



ಖಾಸಗಿ ಜಮೀನು ಖರೀದಿಗೆ ಸರ್ಕಾರ ಸಿದ್ಧ ಎಂದು ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಶಾಸಕ ಪ್ರಭು ಚೌಹಾಣ್ ಅವರ ಪ್ರಶ್ನೆಗೆ ಉತ್ತರ ನೀಡಿದ ಅವರು, ಕಳೆದ 70 ವರ್ಷಗಳಿಂದ ಎಲ್ಲಾ ಸರ್ಕಾರಗಳೂ ಇರುವ ಭೂಮಿಯನ್ನೆಲ್ಲಾ ರೈತರಿಗೆ ಹಾಗೂ ವಿವಿಧ ಜನಪರ ಯೋಜನೆಗಳಿಗೆ ಮಂಜೂರು ಮಾಡಿದೆ. ಪ್ರಸ್ತುತ ಸ್ಮಶಾನಕ್ಕೂ ಭೂಮಿ ಇಲ್ಲದಂತಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಕಳೆದ ಹತ್ತು ವರ್ಷಗಳಿಂದ ಎಲ್ಲಾ ಸರ್ಕಾರಗಳೂ ವಸತಿ ಪ್ರದೇಶಗಳಿಗೆ ಅವಶ್ಯ ಇರುವಷ್ಟು ಸ್ಮಶಾನ ಭೂಮಿ ನೀಡಬೇಕು ಎಂದು ಪ್ರಯತ್ನಿಸಿದೆ. ಈ ವಿಚಾರದಲ್ಲಿ ಹೈಕೋರ್ಟ್ ಸಹ ಸರ್ಕಾರದ ಬೆನ್ನುಹತ್ತಿದೆ. ಸರ್ಕಾರಿ ಜಮೀನು ಇದ್ದಲ್ಲಿ ಆ ಭೂಮಿಯನ್ನೇ ಸ್ಮಶಾನಕ್ಕೆ ಕಾಯ್ದಿರಿಸಲಾಗಿದೆ. ಸರ್ಕಾರಿ ಜಮೀನು ಇಲ್ಲದಿದ್ದ ಭಾಗಗಳಲ್ಲಿ ಸ್ಮಶಾನ ಭೂಮಿ ನೀಡುವ ಸಲುವಾಗಿ ಕಳೆದ 3 ವರ್ಷದಲ್ಲಿ 58 ಕೋಟಿ ರೂ. ಕೊಟ್ಟು ಭೂಮಿಯನ್ನು ಖರೀದಿ ಮಾಡುವ ಹಂತಕ್ಕೆ ಬಂದು ನಿಂತಿದ್ದೇವೆ ಎಂದು ವಿಷಾದಿಸಿದರು.

ಔರಾದ್ ತಾಲೂಕಿನ ಪರಿಸ್ಥಿತಿ ಬಗ್ಗೆಯೂ ಸದನಕ್ಕೆ ಮಾಹಿತಿ ನೀಡಿದ ಅವರು, ಔರಾದ್ ತಾಲೂಕಿನ 154 ವಸತಿ ಪ್ರದೇಶಗಳ ಪೈಕಿ 9 ಪ್ರದೇಶಗಳಲ್ಲಿ ಸ್ಮಶಾನ ಇಲ್ಲ ಎಂಬ ವರದಿ ಇದೆ. ಈ 9 ಗ್ರಾಮಗಳ ಪೈಕಿ 2 ಗ್ರಾಮಗಳಿಗೆ ಆ ಗ್ರಾಮದ ಮಿತಿಯಲ್ಲೇ ಸರ್ಕಾರಿ ಭೂಮಿ ಲಭ್ಯ ಇದ್ದು, ಒಂದು ವಾರದಲ್ಲಿ ಸ್ಮಶಾನ ಭೂಮಿಗೆ ಕಾಯ್ದಿರಿಸಲು ಜಿಲ್ಲಾಧಿಕಾರಿಗಳಿಗೆ ಆದೇಶ ಮಾಡಲಾಗಿದೆ.

ಇನ್ನೂ 7 ವಸತಿ ಪ್ರದೇಶಗಳಿಗೆ ಪಕ್ಕದ ಗ್ರಾಮದಲ್ಲಿ ಭೂಮಿ ಇದ್ದು, ಅದನ್ನು 15 ದಿನಗಳ ಒಳಗೆ ಕಾಯ್ದಿರಿಸಲು ಸೂಚಿಸಲಾಗಿದೆ ಎಂದರು.

ಬಗರ್‌ಹುಕುಂ ಸಾಗುವಳಿ ಸಮಿತಿ ರಚಿಸಿಲ್ಲ

ವಿಧಾನಸಭೆ: ರಾಜ್ಯದ 15 ವಿಧಾನಸಭಾ ಕ್ಷೇತ್ರಗಳಲ್ಲಿ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿ ರಚನೆಯಾಗಿಲ್ಲ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು. ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಶಾಸಕ ಡಾ. ಅವಿನಾಶ್ ಜಾಧವ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ರಾಜ್ಯದಲ್ಲಿ ಒಟ್ಟು 175 ವಿಧಾನಸಭಾ ಕ್ಷೇತ್ರಗಳಲ್ಲಿ ಸಮಿತಿ ರಚಿಸಲಾಗಿದೆ. ಅಲ್ಲದೇ 16 ಹೆಚ್ಚುವರಿ ಸಮಿತಿ ರಚಿಸಿದ್ದು, ಪ್ರಸಕ್ತ 191 ಬಗರ್ ಹುಕುಂ ಸಮಿತಿಗಳಿವೆ. ಬೈಂದೂರು ಮತ್ತು ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದ ಸಮಿತಿಗಳಿಗೆ ಸಂಬಂಧಿಸಿ ಪ್ರಕರಣಗಳು ನ್ಯಾಯಾಲಯದಲ್ಲಿವೆ ಎಂದರು. ಮೊದಲು ತಾಲೂಕುವಾರು ಸಮಿತಿ ರಚನೆ ಮಾಡಲಾಗುತ್ತಿತ್ತು. ಈಗ ವಿಧಾನಸಭಾ ಕ್ಷೇತ್ರವಾರು ಸಮಿತಿ ರಚಿಸಲಾಗುತ್ತಿದೆ. ಒಂದು ವೇಳೆ ಹೆಚ್ಚುವರಿ ಸಮಿತಿಯ ಅಗತ್ಯವಿದ್ದರೆ ಹೆಚ್ಚುವರಿ ಸಮಿತಿ ರಚಿಸುವುದಕ್ಕೂ ಅವಕಾಶವಿದೆ ಎಂದರು.

ಉತ್ತರ ನೀಡದ ಅಧಿಕಾರಿಗಳ ಅಮಾನತು

ವಿಧಾನಸಭೆ: ಸದನದಲ್ಲಿ ಕೇಳಲಾಗುವ ಲಿಖಿತ ಪ್ರಶ್ನೆಗಳಿಗೆ ವಿವಿಧ ಇಲಾಖೆಗಳಿಂದ ಬರುವ ಉತ್ತರಗಳಲ್ಲಿ ವಿಳಂಬ ಆಗುತ್ತಿರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ಉತ್ತರ ನೀಡುವಲ್ಲಿ ವಿಳಂಬ ಮಾಡುವ ಅಧಿಕಾರಿಗಳನ್ನು ಅಮಾನತು ಮಾಡಲಾಗುವುದು ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ ಹೇಳಿದರು.



ಉತ್ತರದಲ್ಲಿ ಆಗುತ್ತಿರುವ ವಿಳಂಬಕ್ಕೆ ಸಭಾಧ್ಯಕ್ಷರು ಅಸಮಾಧಾನಗೊಂಡ ಬೆಳಗ್ಗೆ ಸಭಾತ್ಯಾಗ ಮಾಡಿದ್ದ ಬಗ್ಗೆ ಮಧ್ಯಾಹ್ನದ ನಂತರ ಕಲಾಪ ಆರಂಭವಾಗುತ್ತಿದಂತೆ ಸರ್ಕಾರದ ಪರವಾಗಿ ಉತ್ತರಿಸಿದ ಪರಮೇಶ್ವರ ಅವರು, ಸಭಾಧ್ಯಕ್ಷರ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಲ್ಲಾ ಕಾರ್ಯದರ್ಶಿಗಳಿಗೆ ಸೂಚನೆ ನೀಡಿ, ನೋಟಿಸ್ ನೀಡುವಂತೆ ಮುಖ್ಯಕಾರ್ಯದರ್ಶಿಗೆ ಹೇಳಿದ್ದು, ತುಂಬಾ ಪ್ರಶ್ನೆಗಳು ಅವರಲ್ಲೇ ಉಳಿದುಕೊಂಡಿದ್ದರೆ ಅವರನ್ನು ಅಮಾನತು ಮಾಡಿ ಎಂದು ಹೇಳಿದ್ದಾರೆ ಎಂದು ತಿಳಿಸಿದರು.

ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿದೆ, ಕಂದಾಯ ಇಲಾಖೆಯ 91 ಪ್ರಶ್ನೆಗಳಲ್ಲಿ 29 ಉತ್ತರಗಳು ಮಾತ್ರ ಬಂದಿವೆ. ಮುಂದೆ ಇಂತಹ ಬೆಳವಣಿಗೆ ನಡೆಯದಂತೆ ಸೂಕ್ತ ಸಮಯದಲ್ಲಿ ಉತ್ತರ ನೀಡಲಿದೆ ಎಂದು ಸರ್ಕಾರದ ಪರವಾಗಿ ಭರವಸೆ ನೀಡಲಾಗುವುದು ಎಂದರು.

ಸಭಾಧ್ಯಕ್ಷರ ತೀರ್ಮಾನವನ್ನು ಸ್ವಾಗತಿಸುವೆ, ಸಚಿವರು ಅಧಿಕಾರಿಗಳಿಗೆ ಜವಾಬ್ದಾರಿ ನಿಗದಿಮಾಡಬೇಕು, ಅಧಿಕಾರಿಗಳ ವಿರುದ್ಧ ಕ್ರಮ ಆಗಬೇಕು, ಕೆಲವು ಅಧಿಕಾರಿಗಳು ಸದನಕ್ಕೆ ಬರುವುದಿಲ್ಲ, ಅಧಿಕಾರಿಗಳಿಗೆ ಗಂಭೀರತೆ ಇಲ್ಲ. ಮುಖ್ಯಕಾರ್ಯದರ್ಶಿಗಳು ಅಧಿಕಾರಿಗಳ ಸಭೆ ಕರೆಯಬೇಕು, ಅವರು ಕೈ ಚೆಲ್ಲಿ ಕೂತಿದ್ದಾರೆ, ಸದನದಲ್ಲಿ ಏನು ಮಾಡಿದೆ ಎಂದು ಕ್ಷೇತ್ರದ ಜನ ನಮ್ಮನ್ನು ಕೇಳುತ್ತಾರೆ. ವಿಳಂಬ ಮಾಡುವ ಅಧಿಕಾರಿಗಳನ್ನು ಅಮಾನತು ಮಾಡಬೇಕು. ಕೆಲವು ಐಎಎಸ್ ಅಧಿಕಾರಿಗಳು 8 ರಿಂದ 10 ತಿಂಗಳು ಕಚೇರಿಗೆ ಬಂದೇ ಇಲ್ಲ. ಅವರಿಗೆ ಗಾಲ್ಫ್ ಆಡುವುದಕ್ಕೆ ಸಮಯ ಇರುತ್ತೆ ಸದನಕ್ಕೆ ಬರಲು ಸಮಯ ಇರಲ್ಲ ಎಂದು ವಿಪಕ್ಷ ನಾಯಕ ಆರ್. ಅಶೋಕ್ ಅಸಮಾಧಾನ ವ್ಯಕ್ತಪಡಿಸಿದರು.

ಟಿ-20 ವಿಶ್ವಕಪ್‌ನಲ್ಲಿ ಭಾರತ ತಂಡಕ್ಕೆ ಜಯ: ಶ್ಲಾಘನೆ

ವಿಧಾನಪರಿಷತ್: ಇತ್ತೀಚೆಗೆ ಟಿ-20 ವಿಶ್ವ ಕಪ್‌ನಲ್ಲಿ ಜಯ ಗಳಿಸಿದ ಭಾರತ ತಂಡಕ್ಕೆ ಸೋಮವಾರ ಮೇಲ್ಮನೆಯಲ್ಲಿ ಸದಸ್ಯರೆಲ್ಲರೂ ಶ್ಲಾಘನೀಯ ವ್ಯಕ್ತಪಡಿಸಿದರು. ಸದನದಲ್ಲಿ ಸದಸ್ಯ ಡಿ.ಎಸ್. ಅರುಣ್ ಅವರು ಈ ವಿಷಯವನ್ನು ಪ್ರಸ್ತಾಪಿಸಿದ್ದು, ಟಿ-20 ವಿಶ್ವಕಪ್‌ನಲ್ಲಿ ಭಾರತ ಗೆಲುವು ಸಾಧಿಸಿದೆ. ಆದ್ದರಿಂದ ಈ ಗೆಲುವಿನ ಗರಿಯನ್ನು ಮುಡಿಗೇರಿಸಿಕೊಂಡಿರುವ ನಮ್ಮ ಭಾರತ ತಂಡಕ್ಕೆ ಅಭಿನಂದನೆ ಸಲ್ಲಿಸಿದರು. ನಂತರ ಸದನದ ಸದಸ್ಯರೆಲ್ಲರೂ ಮೇಜು ತಟ್ಟಿ ಭಾರತ ತಂಡಕ್ಕೆ ಅಭಿನಂದನೆ ಸಲ್ಲಿಸಿದರು. ಆಗ ಸಭಾಪತಿ ಪೀಠದಲ್ಲಿದ್ದ ಎಂ.ಕೆ. ಪ್ರಾಣೇಶ್ ಅವರು ಅಭಿನಂದನಾ ಪತ್ರವನ್ನು ಬಿಸಿಸಿಐ ಸಂಸ್ಥೆಗೆ ಕಳುಹಿಸಲಾಗುವುದು ಎಂದು ಹೇಳಿದರು.

ಕರ್ನಾಟಕ ಪೊಲೀಸು ತಿದ್ದುಪಡಿ ವಿಧೇಯಕ ಅಂಗೀಕಾರ

ವಿಧಾನಸಭೆ: 2026ನೇ ಸಾಲಿನ ಕರ್ನಾಟಕ ಪೊಲೀಸು ತಿದ್ದುಪಡಿ ವಿಧೇಯಕವು ವಿಧಾನಸಭೆಯಲ್ಲಿ ಅಂಗೀಕಾರಗೊಂಡಿತು. ವಿಧೇಯಕವನ್ನು ಮಂಡಿಸಿ ಮಾತನಾಡಿದ ಗೃಹ ಸಚಿವ ಡಾ. ಜಿ. ಪರಮೇಶ್ವರ್ ಅವರು, ಪೊಲೀಸ್ ಸಿಬ್ಬಂದಿ ಅಥವಾ ಅಧಿಕಾರಿಯು ದುರ್ನಡತೆ ಅಥವಾ ಅಸಮರ್ಪಕ ಕಾರ್ಯವೈಖರಿಯಿಂದ ಅವರನ್ನು ವರ್ಗಾವಣೆ ಮಾಡಬೇಕಾದಲ್ಲಿ ಸರ್ಕಾರದ ಅನುಮತಿ ಬೇಕಾಗಿತ್ತು ಈ ವಿಧೇಯಕದಿಂದ ಪೊಲೀಸ್ ಸಿಬ್ಬಂದಿ ಅಥವಾ ಅಧಿಕಾರಿಯ ವರ್ಗಾವಣೆಯನ್ನು ಪೊಲೀಸ್ ಅನುಷ್ಠಾನ ಮಂಡಳಿಗೆ ಅವಕಾಶ ನೀಡಲಾಗಿದೆ ಎಂದು ತಿಳಿಸಿದರು.

ಪಿಇಬಿಗೆ ವರ್ಗಾವಣೆ ಅಧಿಕಾರ: ಕರ್ತವ್ಯ ಲೋಪ, ದುರ್ನಡತೆ ಅಥವಾ ಅಶಿಸ್ತು ತೋರುವ ಡಿವೈಎಸ್ಪಿ ಶ್ರೇಣಿಯವರೆಗಿನ ಅಧಿಕಾರಿಗಳನ್ನು ಸರ್ಕಾರದ ಪೂರ್ವಾನುಮತಿಗಾಗಿ ಕಾಯದೆ ನೇರವಾಗಿ ವರ್ಗಾವಣೆ ಮಾಡುವ ಅಧಿಕಾರವನ್ನು ಪೊಲೀಸ್ ಅನುಷ್ಠಾನ ಮಂಡಳಿಗೆ (ಪಿಇಬಿ) ನೀಡಲು ಉದ್ದೇಶಿಸಲಾಗಿದೆ. ಈ ಮೊದಲು ಯಾವುದೇ ಅಧಿಕಾರಿಯನ್ನು ವರ್ಗಾಯಿಸಲು ಕನಿಷ್ಠ 2 ವರ್ಷಗಳ ಕಾಲಾವಕಾಶ ಇರಬೇಕಿತ್ತು. ಆದರೆ ಹೊಸ ತಿದ್ದುಪಡಿಯ ಪ್ರಕಾರ, ಗಂಭೀರ ಲೋಪಗಳು ಕಂಡುಬಂದಲ್ಲಿ ಈ ಕನಿಷ್ಠ ಅವಧಿಯ ನಿಯಮ ಅನ್ವಯಿಸುವುದಿಲ್ಲ.

ಅನಧಿಕೃತ ಜಾಹೀರಾತು ಪ್ಲಾಸ್ಟಿಕ್ ಬಳಕೆಗೆ ದಂಡ

ವಿಧಾನಸಭೆ: ಅನಧಿಕೃತವಾಗಿ ಜಾಹೀರಾತು ಅಳವಡಿಸಿದಲ್ಲಿ ದಂಡ ಹಾಕಲಾಗುವುದು, ಪ್ಲಾಸ್ಟಿಕ್ ಬಳಕೆ ಮಾಡಿದರೆ ದಂಡ ಹಾಕಲಾಗುವುದು, ತಂತ್ರಜ್ಞಾನದ ನೆರವಿನಿಂದ ಅನಧಿಕೃತ ಫೆಕ್ಸ್, ಬ್ಯಾನರ್‌ಗಳನ್ನು ಗುರುತಿಸಿ ತೆರವುಗೊಳಿಸುವ ಕರ್ನಾಟಕ ಮುನ್ಸಿಪಾಲಿಟಿಗಳ ಮತ್ತು ಕೆಲವು ಇತರ ಕಾನೂನು ತಿದ್ದುಪಡಿ ವಿಧೇಯಕವು ವಿಧಾನಸಭೆಯಲ್ಲಿ ಅಂಗೀಕಾರವಾಯಿತು.

ಈ ತಿದ್ದುಪಡಿ ವಿಧೇಯಕದಲ್ಲಿ ನಗರಸಭೆ ವ್ಯಾಪ್ತಿಯ ಸಾರ್ವನಿಕ ಇಲ್ಲವೇ ಖಾಸಗಿ ಸ್ಥಳಗಳಲ್ಲಿ ಜಾಹೀರಾತು ಪ್ರದರ್ಶಿಸಲು ಶುಲ್ಕ ಪಾವತಿ ಮಾಡಬೇಕಿದ್ದು, ಸ್ಥಳೀಯ ಪೌರ ಪಾಲಿಕೆಯ ಅನುಮತಿ ಇಲ್ಲದೇ ಪಾಲಿಕೆ ಪ್ರದೇಶದ ವ್ಯಾಪ್ತಿಯಲ್ಲಿ ಜಾಹೀರಾತು ಪ್ರದರ್ಶಿಸುವಂತಿಲ್ಲ. ಜಾಹೀರಾತು ಉಲ್ಲಂಘನೆ ಮತ್ತು ಶುಲ್ಕ ಬಾಕಿ ಇದ್ದಲ್ಲಿ ಅನುಮತಿ ಸಿಗುವುದಿಲ್ಲ.

ಅನಧಿಕೃತ ಜಾಹೀರಾತುಗಳ ತೆರವು: ಅನುಮತಿ ಮುಕ್ತಾಯದ ನಂತರವೂ ಜಾಹೀರಾತು ಪ್ರದರ್ಶಿಸಿದಲ್ಲಿ ಅದನ್ನು ತೆರವುಗೊಳಿಸಬಹುದಾಗಿದ್ದು, ಅಧಿಕೃತ ಮತ್ತು ಅನಧಿಕೃತ ಜಾಹೀರಾತು ಶುಲ್ಕವನ್ನು ಪಾವತಿಸದಿದ್ದಲ್ಲಿ ಶುಲ್ಕ ಅಥವಾ ದಂಡದ ಬಾಕಿ ದಿನದಿಂದ ಪಾವತಿವರೆಗೆ ವಾರ್ಷಿಕ ಶೇ.18ರ ಬಡ್ಡಿ ದರದಲ್ಲಿ ದಂಡ ವಿಧಿಸಬಹುದಾಗಿದೆ. ಜಾಹೀರಾತು ಆಕಾರದ ಮೇಲೆ ಶುಲ್ಕ ನಿಗದಿ ಮಾಡಲಾಗುತ್ತಿದೆ.

ವಿಧೇಯಕವನ್ನು ಮಂಡಿಸಿ ಮಾತನಾಡಿದ ಸಚಿವ ಬೈರತಿ ಸುರೇಶ್ ಅವರು, ಜಾಹೀರಾತಿಗೆ ಶುಲ್ಕ ವಿಧಿಸುವ ಕುರಿತಾದ ಈ ತಿದ್ದುಪಡಿ ವಿಧೇಯಕದಲ್ಲಿ ಸ್ವಂತ ಜಾಗದಲ್ಲಿ ಫಲಕ ಅಳವಡಿಸುವುದು, ಸರ್ಕಾರಿ ಜಾಗದಲ್ಲಿ ಖಾಸಗಿ ಫಲಕ ಅಳವಡಿಸುವುದು ಹಾಗೂ ಸರ್ಕಾರಿ ಜಾಗದಲ್ಲಿ ಸರ್ಕಾರಿ ಫಲಕ ಅಳವಡಿಸಲು ಶುಲ್ಕ ನಿಗದಿಪಡಿಸಲಾಗುವುದು ಎಂದರು.

ಪ್ಲಾಸ್ಟಿಕ್ ಬಳಸಿದರೆ ದಂಡ: ಸಾರ್ವಜನಿಕರಿಗೆ ತೊಂದರೆ ಆಗದ ಜಾಗದಲ್ಲಿ ಜಾಹೀರಾತು ಹಾಕಲು ಅವಕಾಶ ನೀಡಲಾಗುವುದು, ಜಾಹೀರಾತಿನ ವಿನ್ಯಾಸದ ಆಧಾರದ ಮೇಲೆ ಶುಲ್ಕ ನಿಗದಿಪಡಿಸಲಾಗುವುದು. ಫೆಕ್ಸ್, ಬ್ಯಾನರ್ ಕೂಡಾ ತಿದ್ದುಪಡಿ ವಿಧೇಯಕದಲ್ಲಿ ಬರಲಿದ್ದು, ಅನಧಿಕೃತವಾಗಿ ಜಾಹೀರಾತು ಅಳವಡಿಸಿದಲ್ಲಿ ದಂಡ ಹಾಕಲಾಗುವುದು, ಪ್ಲಾಸ್ಟಿಕ್ ಬಳಕೆ ಮಾಡಿದರೆ ದಂಡ ಹಾಕಲಾಗುವುದು, ತಂತ್ರಜ್ಞಾನದ ನೆರವಿನಿಂದ ಅನಧಿಕೃತ ಫೆಕ್ಸ್, ಬ್ಯಾನರ್‌ಗಳನ್ನು ಗುರುತಿಸಿ ತೆರವುಗೊಳಿಸಲಾಗುವುದು ಎಂದು ಹೇಳಿದರು.

ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ್ ಪ್ರಕಾಶ್ ಪಾಟೀಲ್ ಕಳವಳ

ಅರೆ ವೈದ್ಯಕೀಯ ಕಾಲೇಜು ಮುಚ್ಚುವ ಭೀತಿ


ವಿಧಾನಪರಿಷತ್: ನ್ಯಾಷನಲ್ ಕಮೀಷನ್ ಫಾರ್ ಅಲೈಡ್ ಆ್ಯಂಡ್ ಹೆಲ್ತ್ ಕೇರ್ ಪ್ರೊಫೆಶನ್ಸ್ (ಎನ್‌ಸಿಎಎಚ್‌ಪಿ) ಸುತ್ತೋಲೆಯಿಂದಾಗಿ ರಾಜ್ಯದಲ್ಲಿರುವ ಪ್ಯಾರಾ ಮೆಡಿಕಲ್ ಕಾಲೇಜುಗಳು ಮುಚ್ಚುವ ಭೀತಿ ಉಂಟಾಗಿದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ್ ಪ್ರಕಾಶ್ ಪಾಟೀಲ್ ಕಳವಳ ವ್ಯಕ್ತಪಡಿಸಿದ್ದಾರೆ.

ಶೂನ್ಯವೇಳೆಯಲ್ಲಿ ಕಾಂಗ್ರೆಸ್‌ನ ಐವಾನ್ ಡಿಸೋಜಾ ಅವರು ಈ ಬಗ್ಗೆ ಪ್ರಸ್ತಾಪಿಸಿದ್ದು, ಎಸ್‌ಎಸ್‌ಎಲ್‌ಸಿ ನಂತರ ಈ ಕೋರ್ಸ್ ಅನ್ನು ರಾಜ್ಯದಲ್ಲಿ ಸಾವಿರಾರು ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಳ್ಳುತ್ತಿದ್ದರು. ಈಗ ಪಿಯುಸಿಯಲ್ಲಿ ವಿಜ್ಞಾನ ತಗೆದುಕೊಳ್ಳುವುದನ್ನು ಕಡ್ಡಾಯಗೊಳಿಸಲಾಗಿದೆ ಎಂದರು.

ಡಿಪ್ಲೊಮಾ ಕೋರ್ಸ್‌ಗಳನ್ನು ಪದವಿಗೆ ಸಮವಾಗಿ ಮೇಲ್ದರ್ಜೆಗೆ ಏರಿಸಬೇಕು ಎಂಬ ನಿಯಮ ಅಳವಡಿಸಲು ತೀರ್ಮಾನಿಸಲಾಗಿದೆ. ಆದರೆ, ಈ ನಿಯಮಗಳನ್ನು ಸರಳೀಕರಿಸುವಂತೆ ಆಯೋಗದ ಅಧ್ಯಕ್ಷರೊಂದಿಗೆ ಮಾತನಾಡಿದ್ದೇವೆ. ಅವರು, ಈ ಬಗ್ಗೆ ಸಭೆ ಕರೆದು ಚರ್ಚಿಸುವುದಾಗಿ ಭರವಸೆ ನೀಡಿದ್ದಾರೆ. ಇದು ದೇಶವ್ಯಾಪಿ ಜಾರಿಗೆ ಬರುವ ನಿಯಮ ಎಂದು ಸಚಿವರು ಹೇಳಿದರು.

ಇದಕ್ಕೂ ಮೊದಲು ಐವಾನ್ ಡಿಸೋಜಾ, ಈವರೆಗೂ ಎಸ್‌ಎಸ್‌ಎಲ್‌ಸಿ ನಂತರ ವೈದ್ಯಕೀಯ ಕ್ಷೇತ್ರದ ತರಬೇತಿ ಪಡೆಯಲು ಅವಕಾಶವಿತ್ತು. ಆದರೆ, ಇನ್ನೂ ಮುಂದೆ ದ್ವಿತೀಯ ಪಿಯುಸಿಯಲ್ಲಿ ವಿಜ್ಞಾನ ವಿಭಾಗದಲ್ಲಿ ತೇರ್ಗಡೆಯಾದವರಿಗೆ ಮಾತ್ರ ಪ್ರವೇಶ ಎಂದು ನಿಯಮ ರೂಪಿಸಿರುವುದು ಹೊಸ ಶೈಕ್ಷಣಿಕ ಬಿಕ್ಕಟ್ಟಿಗೆ ನಾಂದಿಯಾಗಿದೆ. ಈ ನೂತನ ನಿಯಮವನ್ನು 2026-27ನೇ ಸಾಲಿನಿಂದಲೇ ಜಾರಿಗೆ ತರಲು ಸೂಚಿಸಿದೆ. ಇದರಿಂದ ರಾಜ್ಯದಲ್ಲಿ ಪ್ರಸ್ತುತ 32 ಸರ್ಕಾರಿ ಹಾಗೂ 608 ಖಾಸಗಿ ಕಾಲೇಜು ಸೇರಿ 640 ಪ್ಯಾರಾ ಮೆಡಿಕಲ್ ಶಿಕ್ಷಣ ಸಂಸ್ಥೆಗಳಿವೆ. ಹೊಸ ನಿಯಮ ಜಾರಿಯಾದರೆ 450 ರಿಂದ 500 ಕಾಲೇಜುಗಳಿಗೆ ಅರ್ಹ ಅಭ್ಯರ್ಥಿಗಳ ಕೊರತೆ ಉಂಟಾಗಲಿದೆ ಎಂದು ತಿಳಿಸಿದರು.


ನೀಟ್ ತರಬೇತಿಗೆ ಒತ್ತು



ವಿಧಾನಪರಿಷತ್: ನೀಟ್ ಪರೀಕ್ಷೆಗೆ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಇನ್ನಷ್ಟು ಪರಿಣಾಮಕಾರಿಯಾದ ತರಬೇತಿ ಒದಗಿಸುವ ನಿಟ್ಟಿನಲ್ಲಿ ಸರ್ಕಾರ ವಿವಿಧ ಉಪಕ್ರಮಗಳನ್ನು ಕೈಗೊಳ್ಳಲಿದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ್ ಪಾಟೀಲ್ ಹೇಳಿದರು. ಪ್ರಶ್ನೋತ್ತರ ಕಲಾಪದಲ್ಲಿ ಮೇಲ್ಮನೆ ಕಾಂಗ್ರೆಸ್ ಸದಸ್ಯ ಐವಾನ್ ಡಿಸೋಜಾ, ಗ್ರಾಮೀಣ ಭಾಗದ ಬಡ ವಿದ್ಯಾರ್ಥಿಗಳು 3 ಲಕ್ಷ ರೂ. ಶುಲ್ಕ ನೀಡಿ ನೀಟ್ ತರಬೇತಿ ಪಡೆದುಕೊಳ್ಳಲು ಸಾಧ್ಯವೇ ಎಂದು ಪ್ರಶ್ನಿಸಿದರು.ಇದಕ್ಕೆ ಉತ್ತರಿಸಿದ ಶರಣಪ್ರಕಾಶ್ ಪಾಟೀಲ, ನೀಟ್ ವ್ಯವಸ್ಥೆಯಿಂದ ರಾಜ್ಯದ ಸೀಟ್‌ಗಳಿಗೆ ಯಾವ ಕೊರತೆ ಇಲ್ಲ. ನೀಟ್ ಸೀಲ್‌ಗಳ ಸಂಖ್ಯೆ ಕಡಿಮೆಯಾಗಿಲ್ಲ. ನೀಟ್ ವ್ಯವಸ್ಥೆಯನ್ನು ರದ್ದುಗೊಳಿಸಬೇಕು ಎಂದು ನಾವು ನಿರ್ಣಯವನ್ನಷ್ಟೇ ಸ್ವೀಕರಿಸಿದ್ದೇವೆ. ಆದರೆ, ಸುಪ್ರೀಂಕೋರ್ಟ್ ನೀಟ್ ವ್ಯವಸ್ಥೆಯ ಪರವಾಗಿ ತೀರ್ಪು ನೀಡಿದೆ. ಹೀಗಾಗಿ ಸರ್ಕಾರ ಹಲವು ಉಪಕ್ರಮಗಳನ್ನು ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಸದನಕ್ಕೆ ಸಚಿವರೇ ಬರಲ್ಲ: ಛಲವಾದಿ ನಾರಾಯಣಸ್ವಾಮಿ

ವಿಧಾನಪರಿಷತ್: ಸದನಕ್ಕೆ ಕಡ್ಡಾಯ ಹಾಜರಾತಿ ಇದ್ದರೂ, ಸಚಿವರು ಹಾಜರಾಗಿಲ್ಲ. ಅಧಿಕಾರಿಗಳೇ ಇಲ್ಲದಿದ್ದರೆ ಹೇಗೆ ಎಂದು ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಸಭಾಪತಿಗಳನ್ನು ಪ್ರಶ್ನಿಸಿದರು.



ಸದಸ್ಯರ 126 ಪ್ರಶ್ನೆಗಳಿಗೆ ಉತ್ತರ ಕೊಟ್ಟಿಲ್ಲವೆಂದು ತಿಳಿದು ಬಂದಿದೆ. ನಮ್ಮ ಸದಸ್ಯ ಕಿಶೋರ್ ಕುಮಾರ್ ಪುತ್ತೂರು ಅವರು, ಯಾವಾಗ ಪ್ರಶ್ನೆ ಕೇಳಿದರೂ ಅವರಿಗೆ ಸಮರ್ಪಕವಾಗಿ ಉತ್ತರ ಬಂದಿಲ್ಲ. ಇಲ್ಲಿವರೆಗೂ ಪ್ರಶ್ನೆ ಮಾಡುತ್ತಿದ್ದಾರೆ. ನಾವು ಉತ್ತರ ಕೊಡಲಾರದ ಪ್ರಶ್ನೆಯನ್ನು ಕೇಳುತ್ತಿದ್ದೀವಾ? ಎಂದು ಛಲವಾದಿ ಗರಂಆದರು. ಸದಸ್ಯ ಭೋಜೆಗೌಡ ಅವರು, ಕೆಳಮನೆಯಲ್ಲಿ ಸ್ಪೀಕರ್ ಗರಂಆಗಿದ್ದರು. ಅಧಿಕಾರಿಗಳ, ಸಚಿವರ ವರ್ತನೆಗೆ ಬೇಸರ ವ್ಯಕ್ತಪಡಿಸಿದ್ದಾರೆ. ನಮ್ಮಲ್ಲೂ ಉತ್ತರ ಸಿಕ್ಕಿಲ್ಲ, ಗಂಭೀರವಾಗಿ ವಿಚಾರ ತೆಗೆದುಕೊಂಡಿಲ್ಲ. ಹೀಗಾದರೆ ಏನು ಮಾಡಬೇಕು ಎಂದು ಅಸಮಾಧಾನ ಹೊರಹಾಕಿದರು.

ಇದಕ್ಕೆ ಬೇಸರ ವ್ಯಕ್ತಪಡಿಸಿದ ಸಭಾಪತಿ, ನಾನೂ ಈ ಬಗ್ಗೆ ಸರ್ಕಾರಕ್ಕೆ ಹೇಳಿದ್ದೇನೆ. ಸರ್ಕಾರ ಕ್ರಮ ಕೈಗೊಳ್ಳಬೇಕು, ಉತ್ತರನೀಡಲುಕೆಲ ಸಚಿವರು ಒಂದು ತಿಂಗಳು ಕಾಲಾವಕಾಶ ಕೇಳುತ್ತಾರೆ. ಸದನ ನಡೆಯುವಾಗ ಮಾಹಿತಿ ಪಡೆಯಬೇಕಲ್ಲವೇ ಎಂದರು.

ಸಭಾನಾಯಕ ಬೋಸರಾಜು ಮಾತನಾಡಿ, ಸಮಸ್ಯೆ ಸರಿಪಡಿಸುವ ಪ್ರಯತ್ನ ಮಾಡಲಾಗುತ್ತದೆ. ಸಿಎಂ ಗಮನಕ್ಕೂ ತರಲಾಗುತ್ತದೆ. ಮುಂದೆ ಹೀಗಾಗದಂತೆ ನೋಡಿಕೊಳ್ಳಲಾಗುತ್ತದೆ ಎಂದರು. ಮತ್ತೆ ಸಭಾಪತಿ ಪ್ರತಿಕ್ರಿಯಿಸಿ, ಉತ್ತರ ನೀಡದ ಅಧಿಕಾರಿಗಳ ಮೇಲೆ ಮುಲಾಜಿಲ್ಲದೆ ಕ್ರಮ ಕೈಗೊಳ್ಳಿ ಎಂದು ಸೂಚಿಸಿದರು.

ಶಿಶುಪಾಲನಾ ರಜೆ: 15 ದಿನಗೊಳಗೆ ಮಂಜೂರು

ವಿಧಾನಪರಿಷತ್: ಶಿಕ್ಷಕಿಯರು ಮಾತೃತ್ವ ರಜೆಯೊಂದಿಗೆ ಶಿಶುಪಾಲನಾ ರಜೆಯನ್ನು ಸಂಯೋಜಿಸಿ ಉಪಯೋಗಿಸಿಕೊಳ್ಳಲು ಇಚ್ಛಿಸಿದ್ದಲ್ಲಿ ಅಥವಾ ಶಿಶುಪಾಲನಾ ರಜೆಗೆ ಅರ್ಜಿ ಸಲ್ಲಿಸಿದ್ದಲ್ಲಿ ಸಕ್ಷಮ ಪ್ರಾಧಿಕಾರದಿಂದ ರಜಾ ಮನವಿ ಸ್ವೀಕೃತವಾದ 15 ದಿನಗೊಳಗೆ ರಜೆಯನ್ನು ಮಂಜೂರು ಮಾಡಬೇಕು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ತಿಳಿಸಿದರು. ಪ್ರಶ್ನೋತ್ತರ ಕಲಾಪದಲ್ಲಿ ಸದಸ್ಯ ವೈ.ಎಂ. ಸತೀಶ್ ಅವರು ಶಿಕ್ಷಕಿಯರಿಗೆ ಶಿಶುಪಾಲನಾ ರಜೆ ಮಂಜೂರು ಮಾಡಲಿರುವ ಮಾನದಂಡಗಳ ಕುರಿತ ಪ್ರಶ್ನೆಗೆ ಉತ್ತರಿಸಿದ ಸಚಿವರು, ಮಾತೃತ್ವದ ವರ್ಗಾವಣೆಗೆ ಹೊಸ ಕೆಟಗರಿಯೊಂದನ್ನು ಪ್ರಾರಂಭಿಸಲಾಗುವುದು. ಮಾತೃತ್ವ ರಜಾ ಮನವಿ ಸ್ವೀಕೃತಗೊಂಡ 15 ದಿನಗಳೊಳಗೆ ಸಕ್ಷಮ ಪ್ರಾಧಿಕಾರದಿಂದ ಮಾತೃತ್ವ ರಜೆಯನ್ನು ಮಂಜೂರು ಮಾಡುವ ನೀತಿಯನ್ನು ರೂಪಿಸುತ್ತೇವೆ ಎಂದು ಸಚಿವರು ಭರವಸೆ ನೀಡಿದರು.

ಕಿರುಸುದ್ದಿ

ಸಹಬಾಳ್ವೆಯಿಂದ ನೆಮ್ಮದಿ



ದಾಬಸ್‌ಪೇಟೆ: ಕುಟುಂಬದಲ್ಲಿ ಶಾಂತಿ ನೆಮ್ಮದಿಯಿಂದ ಇರಬೇಕಾದರೆ ಪರಸ್ಪರ ಹೊಂದಾಣಿಕೆ ಮುಖ್ಯ ಎಂದು ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ತಿಳಿಸಿದರು. ನೆಲಮಂಗಲ ತಾಲೂಕಿನ ಸೋಂಪುರ ಹೋಬಳಿಯ ಕೆಂಗಲ್ ಕೆಂಪೋಹಳ್ಳಿ ಗ್ರಾಮದ ಶ್ರೀ ಆಂಜನೇಯ ಮತ್ತು ಶ್ರೀ ಬಸವೇಶ್ವರಸ್ವಾಮಿ ಪುನರ್‌ಪ್ರತಿಷ್ಠಾಪನಾ ಜಾತ್ರಾಮಹೋತ್ಸವದ ಧಾರ್ಮಿಕ ಚಿಂತನಾ ಸಭೆಯಲ್ಲಿ ಆಶೀರ್ವಚನ ನೀಡಿ ಮಾತನಾಡಿ, ಮನುಷ್ಯರ ಸಂಬಂಧಗಳೆಲ್ಲವೂ ವ್ಯವಹಾರಿಕವಾಗದೆ ಎಂದು ವಿಷಾದಿಸಿದರು. ಸಿದ್ಧಗಂಗಾ ಮಠದ ಶ್ರೀ ಶಿವಸಿದ್ದೇಶ್ವರ ಸ್ವಾಮೀಜಿ ಮಾತನಾಡಿ, ದೇವರು ದೇವಾಲಯಗಳ ನಿರ್ಮಾಣದ ಪರಿಕಲ್ಪನೆಯನ್ನು ಸವಿಸ್ತಾರವಾಗಿ ಪರಿಚಯಿಸಿ ಹಿಂದೆ ದೇವಸ್ಥಾನಗಳೇ ಶಾಲೆ, ನ್ಯಾಯಾಲಯವಾಗಿದ್ದವು. ದೇವರ ಬಗ್ಗೆ ಅಂಥಹ ನಂಬಿಕೆ ಜನರಲ್ಲಿ ಇತ್ತು . ಅದಕ್ಕಾಗಿ ನಾಡಿನ ಋಷಿಮುನಿಗಳು ಸಾಧು ಸಂತರು ಶರಣರು ಸಹ ದೇವರು ಎಂದರೆ ನೀನು ಮಾಡುವ ಕಾರ್ಯ, ಸೇವೆ ಪರೋಪಕಾರ ಸ್ಪಂದನೆ ಇರುವ ವ್ಯಕ್ತಿಯೂ ನಿಜವಾದ ದೇವರಾಗುತ್ತಾರೆ ಎಂದರಯ. ಹೊನ್ನಮ್ಮಗವಿ ಮಠದ ರುದ್ರಮುನಿ ಶಿವಾಚಾರ್ಯಸ್ವಾಮೀಜಿ, ಪಟ್ಟನಾಯ್ಕನಹಳ್ಳಿ ಮಠದ ನಂಜಾವಧೂತ ಸ್ವಾಮೀಜಿ, ವನಕಲ್ಲು ಮಠದ ಬಸವರಮಾನಂದಸ್ವಾಮೀಜಿ ಆಶೀರ್ವಾದ ನೀಡಿದರು. ಮಾಜಿ ಶಾಸಕ ಶ್ರೀನಿವಾಸಮೂರ್ತಿ, ಜಿಪಂ ಮಾಜಿ ಅಧ್ಯಕ್ಷ ಮರಿಸ್ವಾಮಿ, ಬಮೂಲ್ ನಿರ್ದೇಶಕ ಬೈರೇಗೌಡ ಮತನಾಡಿದರು. ಮಾನವ ಕಂಪ್ಯೂಟರ್ ಬಸವರಾಜು ಉಂಬ್ರಾಣಿ ಅವರು ಸಭಿಕರಿಗೆ ಜನ್ಮದಿನ, ಮತ್ತು ಲೆಕ್ಕಗಳನ್ನು ಹೇಳುತ್ತಾ ಮನರಂಜಿಸಿ ಆಶ್ಚರ್ಯಗೊಳಿಸಿದರು. ದಾನಿಗಳಾದ ಹರೀಶ್ ಪಾಟೇಲ್, ಸುನಿಲ್ ಪಟೇಲ್, ಹನುಮಂತರಾಯಪ್ಪ, ನರಸಿಂಹಯ್ಯ, ಗೋಪಾಲಕೃಷ್ಣ, ಚನ್ನರಂಗಯ್ಯ, ಚಂದ್ರಶೇಖರ್, ರಾಜಣ್ಣ, ಚಂದ್ರಶೇಖರ್, ಬೈರೈಗೌಡ ಸೇರಿದಂತೆ ಇತರೆ ದಾನಿಗಳನ್ನು ಸನ್ಮಾನಿಸಲಾಯಿತು. ಶನಿವಾರದಿಂದ ಪೂಜೆಗಳು, ಹೋಮ, ಹವನಗಳನ್ನು ಎರಡು ದೇವಾಲಯದಲ್ಲಿಯೂ ಪ್ರತ್ಯೇಕವಾಗಿ 50 ಕ್ಕೂ ಹೆಚ್ಚು ಅರ್ಚಕರು, ಆಗಮಿಕರು ಪೂಜೆ ನಡೆಸಿದರು, ಮೂರು ದಿನಗಳ ಕಾಲ ಭಕ್ತರಿಗೆ ಹಾಗೂ ಗ್ರಾಮಸ್ಥರಿಗೆ ಅನ್ನಸಂತರ್ಪಣೆಯನ್ನು ನಡೆಸಲಾಯಿತು. ಕೆಂಗಲ್ ಕೆಂಪೋಹಳ್ಳಿಯ ಗ್ರಾಮ ದೇವತೆಗಳಾದ ಶ್ರೀ ಆಂಜನೇಯ ಸ್ವಾಮಿ, ಬಸವೇಸ್ವರಸ್ವಾಮಿ, ಶ್ರೀ ಧನಿನಮ್ಮದೇವಿ, ಶ್ರೀ ಚೌಡೇಶ್ವರಿದೇವಿ , ಶಿವಗಂಗೆ ಶ್ರೀ ಶನಿಮಹಾತ್ಮ ಸೇರಿದಂತೆ ಗ್ರಾಮದ ಇತರೆ ದೇಗುಲದಲ್ಲೂ ಪೂಜೆ ನಡೆಸಲಾಗಿತ್ತು.

ಯುಗಾದಿ-ರಂಜಾನ್ ಹಬ್ಬಕ್ಕೆ ಖರೀದಿ | ಪ್ರಸಕ್ತ ವರ್ಷದಲ್ಲಿ ಕಳೆದ ವರ್ಷಕ್ಕಿಂತ ಭರ್ಜರಿ ಮಾರಾಟ

ಹಿಂಡಿಗನಾಳ ಸಂತೆಯಲ್ಲಿ ಕುರಿ, ಮೇಕೆ ವ್ಯಾಪಾರ

ತಾವರೆಕೆರೆ: ನಂದಗುಡಿ ಹೋಬಳಿಯ ಹಿಂಡಿಗನಾಳ ಗ್ರಾಮದಲ್ಲಿ ನಡೆಯುವ ಸೋಮವಾರ ಸಂತೆಯಲ್ಲಿ ವಿಶೇಷವಾಗಿ ಹಬ್ಬದ ದಿನಗಳಲ್ಲಿ ಭರ್ಜರಿ ವ್ಯಾಪಾರ ವಹಿವಾಟು ನಡೆಯುತ್ತದೆ.

ಹಿಂದೂಗಳ ಪವಿತ್ರ ಹಬ್ಬವಾದ ಚಂದ್ರಮಾನ ಯುಗಾದಿ ಮುಸ್ಲಿಮರ ಹಬ್ಬವಾದ ರಂಜಾನ್ ಏಕ ಕಾಲದಲ್ಲಿ ಬಂದಿರುವುದರಿಂದ ಕುರಿ ಮೇಕೆ ವ್ಯಾಪಾರ ಬಲು ಜೋರು. ಆದರೆ ಕಳೆದ ವರ್ಷದಲ್ಲಿ ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲಿಯೆ ಕುರಿ ಮೇಕೆಗಳ ವ್ಯಾಪಾರ ಮಾಡುವಾಗ ಸಂಚಾರ ಬಂದ್ ಆಗಿ ಪೊಲೀಸರು ಹರಸಾಹಸ ಪಡೆಯಬೇಕಾಯಿತು.

ಆದರೆ, ಈ ಭಾರಿ ಪೋಲಿಸ್ ಕಡ ಖಂಡಿತವಾಗಿ ಎಲ್ಲಾ ವ್ಯಾಪಾರಸ್ಥರಿಗೂ ಒಳಗಡೆ ವ್ಯಾಪಾರವನ್ನು ಮಾಡಬೇಕು. ರಸ್ತೆ ಬದಿಯಲ್ಲಿ ವ್ಯಾಪಾರ ಮಾಡಿದರೆ ದಂಢ ವಿಽಸಲಾಗುವುದು ಎಂದು ಎಚ್ಚರಿಕೆ ನೀಡಿದ್ದರು. ಎಚ್ಛೆತ್ತ ವ್ಯಾಪಾರಸ್ಥರು ಒಳಗಡೆಯೆ ವ್ಯಾಪಾರ ಮಾಡಿದರು.

ಬೆಂಗಳೂರು -ಚಿಂತಾಮಣಿ ರಾಜ್ಯ ಹೆದ್ದಾರಿ ಅಂಚಿನಲ್ಲಿರುವ ಹಿಂಡಿಗನಾಳದ ಸೋಮವಾರ ಸಂತೆ ಇಡೀ ತಾಲೂಕಿಗೆ ಪ್ರಸಿದ್ಧಿಯಾಗಿದೆ. ರೈತರ ಬೆಳೆದ ಕಾಯಿ ಪಲ್ಯೆ, ತರಕಾರಿಗಳು, ಕುರಿ-ಮೇಕೆ ನಾಟಿ ಕೋಳಿ ಸೇರಿದಂತೆ ಅಗತ್ಯ ವಸ್ತು ಮಾರಾಟ ಸೇರಿದಂತೆ ಲಕ್ಷಾಂತರ ರೂ. ವ್ಯಾಪಾರ ವಹಿವಾಟು ನಡೆಯುವ ಸಂತೆಯಾಗಿದೆ. ಚಂದ್ರಮಾನಯುಗಾದಿರಂಜಾನ್‌ಹಬ್ಬದಪ್ರಯುಕ್ತಸೋಮವಾರದ ಹಿಂಡಿಗನಾಳ ಸಂತೆಗೆ ಕೆ.ಆರ್.ಪುರಂ, ಬೆಂಗಳೂರು,



ಕೋಲಾರ, ಚಿಂತಾಮಣಿ, ಶಿಡ್ಲಘಟ್ಟ, ದೇವನಹಳ್ಳಿ, ವಿಜಯಪುರ ಹಾಗೂ ತಾಲೂಕಿನ ಹಲವು ಗ್ರಾಮಗಳ ಹೆಚ್ಚಿನ ಜನರು ಸಂತೆಯಲ್ಲಿ ಭಾಗಿಯಾಗಿ ಕುರಿ, ಮೇಕೆ ವಹಿವಾಟಿನಲ್ಲಿ ಭಾಗವಹಿಸುವರು. ಕಳೆದ ವರ್ಷಕ್ಕಿಂತಲೂ ಈ ಭಾರಿ ಕುರಿ ಮೇಕೆ ದುಬಾರಿ ದರ ಏರಿಕೆಯಾಗಿತ್ತು. ಆದರೂ ಹಬ್ಬದ ಪ್ರಯುಕ್ತ ಎಲ್ಲರೂ ಖರೀದಿಸುವ ದೃಶ್ಯ ಕಂಡು ಬಂದಿತು.

ಸುಗಮ ಸಂಚಾರ ವ್ಯವಸ್ಥೆ

ಕಳೆದ ವರ್ಷದಲ್ಲಿ ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲಿಯೆ ಕುರಿ ಮೇಕೆಗಳ ವ್ಯಾಪಾರ ಮಾಡುವಾಗ ಸಂಚಾರ ಬಂದ್ ಆಗಿ ಪೊಲೀಸರು ಹರಸಾಹಸ ಪಡೆಯಬೇಕಾಯಿತು.

ಹಲವು ಗ್ರಾಮಸ್ಥರು ಭಾಗಿ

ಚಂದ್ರಮಾನ ಯುಗಾದಿ ರಂಜಾನ್ ಹಬ್ಬದ ಪ್ರಯುಕ್ತ ಸೋಮವಾರದ ಹಿಂಡಿಗನಾಳ ಸಂತೆಗೆ ಕೆ.ಆರ್.ಪುರಂ, ಬೆಂಗಳೂರು, ಕೋಲಾರ, ಚಿಂತಾಮಣಿ, ಶಿಡ್ಲಘಟ್ಟ, ದೇವನಹಳ್ಳಿ, ವಿಜಯಪುರ ಹಾಗೂ ತಾಲೂಕಿನ ಹಲವು ಗ್ರಾಮಗಳ ಹೆಚ್ಚಿನ ಜನರು ಸಂತೆಯಲ್ಲಿ ಭಾಗಿಯಾಗಿ ಕುರಿ, ಮೇಕೆ ವಹಿವಾಟಿನಲ್ಲಿ ಭಾಗವಹಿಸುವರು.

ಲಕ್ಷಾಂತರ ವಹಿವಾಟು

ರೈತರ ಬೆಳೆದ ಕಾಯಿ ಪಲ್ಯೆ, ತರಕಾರಿ , ಕುರಿ-ಮೇಕೆ ನಾಟಿ ಕೋಳಿ ಸೇರಿದಂತೆ ಅಗತ್ಯ ವಸ್ತು ಮಾರಾಟ ಸೇರಿದಂತೆ ಲಕ್ಷಾಂತರ ರೂ. ವ್ಯಾಪಾರ ವಹಿವಾಟು ನಡೆಯುವ ಸಂತೆಯಾಗಿದೆ. ಈ ಕಾರಣದಿಂದಾಗಿ ಬೆಂಗಳೂರು -ಚಿಂತಾಮಣಿ ರಾಜ್ಯ ಹೆದ್ದಾರಿ ಅಂಚಿನಲ್ಲಿರುವ ಹಿಂಡಿಗನಾಳದ ಸೋಮವಾರ ಸಂತೆ ಇಡೀ ತಾಲೂಕಿಗೆ ಪ್ರಸಿದ್ಧಿಯಾಗಿದೆ.

ಓದುವ ಸಂಸ್ಕೃತಿ ಬೆಳೆಸಲು ಎಲ್ಲರೂ ಶ್ರಮಿಸಿ

ದೊಡ್ಡಬಳ್ಳಾಪುರ: ಕನ್ನಡ ಪುಸ್ತಕ ಪ್ರಾಽಕಾರ ಹಮ್ಮಿಕೊಂಡಿರುವ ಮನೆಗೊಂದು ಗ್ರಂಥಾಲಯ ಅಭಿಯಾನ ಸಮಾಜದಲ್ಲಿ ಓದುವ ಸಂಸ್ಕೃತಿಯನ್ನು ಬೆಳೆಸುವ ಮಹತ್ವದ ಹೆಜ್ಜೆಯಾಗಿದೆ ಎಂದು ನಿವೃತ್ತ ಶಿಕ್ಷಕ ಬಿ.ಎಲ್.ರಾಮಕೃಷ್ಣ ಹೇಳಿದರು.

ಕನ್ನಡ ಪುಸ್ತಕ ಪ್ರಾಽಕಾರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಕಾರದೊಂದಿಗೆ ಬೆಂ.ಗ್ರಾ.ಜಿಲ್ಲಾ ಮನೆಗೊಂದು ಗ್ರಂಥಾಲಯ ಜಾಗೃತ ಸಮಿತಿ ನಗರದ ಬಿಎಲ್‌ಆರ್ ಅವರ ಮನೆಯಲ್ಲಿ ಹಮ್ಮಿಕೊಂಡಿದ್ದ ಮನೆಗೊಂದು ಗ್ರಂಥಾಲಯ ಅನು?ಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಒಂದು ಮನೆಯಲ್ಲಿರುವ ಗ್ರಂಥಾಲಯ ಕೇವಲ ಪುಸ್ತಕಗಳ ಸಂಗ್ರಹವಾಗಿರುವ ಸ್ಥಳವಲ್ಲ; ಅದು ಜ್ಞಾನ, ಸಂಸ್ಕೃತಿ ಮತ್ತು ಉತ್ತಮ ಚಿಂತನೆಯನ್ನು ಬೆಳಗಿಸುವ ಜ್ಞಾನದ ದೀಪವಾಗಿದೆ ಎಂದು ತಿಳಿಸಿದರು.

ಶಿಕ್ಷಕನಾಗಿ ಸೇವೆ ಸಲ್ಲಿಸಿದ ಅನುಭವದಲ್ಲಿ ಹೇಳುವುದಾದರೆ ಪಠ್ಯಪುಸ್ತಕಗಳು ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಸಹಾಯ ಮಾಡುತ್ತವೆ. ಆದರೆ, ಬೇರೆಬೇರೆ ಸಾಹಿತ್ಯ ಕೃತಿಗಳು ಜೀವನವನ್ನು ಅರಿಯಲು, ವ್ಯಕ್ತಿತ್ವ ರೂಪಿಸಿಕೊಳ್ಳಲು ಸಹಕಾರಿಯಾಗುತ್ತವೆ ಎಂಬುದನ್ನು ಗಮನಿಸಿದ್ದೇನೆಂದರು. ಇಂದಿನ ಕಾಲದಲ್ಲಿ ಮೊಬೈಲ್ ಮತ್ತು ದೂರದರ್ಶನ ನಡುವೆ ಮಕ್ಕಳು ಹೆಚ್ಚು ಸಮಯ ಕಳೆಯುತ್ತಿರುವ ಹಿನ್ನೆಲೆಯಲ್ಲಿ ಮನೆಗಳಲ್ಲಿ ಪುಸ್ತಕ ಸಾನ್ನಿಧ್ಯ



ಅಗತ್ಯವಾಗಿದೆ. ಪೋಷಕರು ಮಕ್ಕಳಲ್ಲಿ ಪುಸ್ತಕ ಓದುವ ಅಭ್ಯಾಸ ಬೆಳೆಸಲು ಪ್ರೋತ್ಸಾಹ ನೀಡಬೇಕು. ದಿನಕ್ಕೆ ಕೆಲವು ನಿಮಿಷವಾದರೂ ಪುಸ್ತಕ ಓದುವ ಅಭ್ಯಾಸ ಬೆಳೆದರೆ ಅದು ಅವರ ಜ್ಞಾನರ್ಜನೆಗೆ ಮತ್ತು ಭವಿಷ್ಯದ ಬೆಳವಣಿಗೆಗೆ ಸಹಾಯಕವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟ ಪೂರ್ವ ಅಧ್ಯಕ್ಷೆ ಮತ್ತು ಮನೆಗೊಂದು ಗ್ರಂಥಾಲಯ ಜಾಗೃತ ಸಮಿತಿ ಸದಸ್ಯೆ, ಪ್ರಮೀಳಾ ಮಹಾದೇವ ಮಾತನಾಡಿ, ಕನ್ನಡ ಸಾಹಿತ್ಯ ಅಪಾರ ಸಂಪತ್ತಾಗಿದೆ. ಕುವೆಂಪು, ಬೇಂದ್ರೆ, ಮಾಸ್ತಿ, ಶಿವ ರಾಮ ಕಾರಂತ ಮುಂತಾದ ಮಹನೀಯರ ಕೃತಿಗಳು ನಮ್ಮ ಬದುಕಿಗೆ ದಾರಿದೀಪಗಳಾಗಿವೆಂದರು. ಇಂತಹ ಅಮೂಲ್ಯ ಸಾಹಿತ್ಯ ಮನೆಮನೆಗೂ ತಲುಪುವ ಉದ್ದೇಶದಿಂದ ಮನೆಗೊಂದು ಗ್ರಂಥಾಲಯ ಅಭಿಯಾನವನ್ನ ಕನ್ನಡ ಪುಸ್ತಕ ಪ್ರಾಽಕಾರದ ಅಧ್ಯಕ್ಷರಾದ ಡಾ.ಮಾನಸ ಅವರು ರಾಜ್ಯದಲ್ಲೇ ಇದೇ ಮೊದಲ ಬಾರಿಗೆ ಜಿಲ್ಲಾ ಮಟ್ಟದಲ್ಲಿ ಮನೆಗೊಂದು ಗ್ರಂಥಾಲಯ ಜಾಗೃತ ಸಮಿತಿ ನೇಮಕ ಮಾಡಿದ್ದಾರೆ.

ಪ್ರತಿ ಮನೆಯಲ್ಲಿ ಒಂದು ಚಿಕ್ಕ ಗ್ರಂಥಾಲಯ ಸ್ಥಾಪಿಸುವ ಮೂಲಕ ಮಕ್ಕಳಲ್ಲಿ ಓದುವ ಸಂಸ್ಕೃತಿಯನ್ನು ಬೆಳೆಸಬೇಕು. ಪುಸ್ತಕ ಉಡುಗೊರೆಯಾಗಿ ನೀಡುವ ಸಂಪ್ರದಾಯವನ್ನು ಉತ್ತೇಜಿಸುವುದು ಅಗತ್ಯವಾಗಿದೆ. ಇಂದು ನಮ್ಮನ್ನಗಲಿರುವ ಶ್ರೀನಿವಾಸ್ ಕರಿಯಪ್ಪನವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸುತ್ತೇನೆ ಎಂದರು.

ಮನೆಗೊಂದು ಗ್ರಂಥಾಲಯ ಜಾಗೃತ ಸಮಿತಿಯ ಸದಸ್ಯರು ಮತ್ತು ಜಿಲ್ಲಾ ಕಲಾವಿದರ ಸಂಘದ ಅಧ್ಯಕ್ಷರಾದ ರಬ್ಬನಹಳ್ಳಿ ಕೆಂಪಣ್ಣ ಮಾತನಾಡಿ, ಪುಸ್ತಕ ಓದುವ ಅಭ್ಯಾಸ ಮಾಡಿಕೊಳ್ಳುವುದರಿಂದ ನಮ್ಮಲ್ಲಿ ವಿಚಾರವಂತಿಕೆ ಬೆಳೆಯುತ್ತದೆ. ಪುಸ್ತಕ ಓದುವುದರಿಂದ ಭಾಷೆ ಬೆಳೆಯುತ್ತದೆ. ಬರಹಗಾರರಿಗೆ ಪ್ರೋತ್ಸಾಹ ಕೊಟ್ಟಂತಗುತ್ತದೆ. ಯುವ ಪ್ರತಿಭೆಗಳಿಗೆ ನಾವು ಬೆನ್ನುತಟ್ಟಿ ಪ್ರೋತ್ಸಾಹ ಮಾಡಿದಂತಾಗುತ್ತದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ದೊಡ್ಡಬಳ್ಳಾಪುರ ನಗರಸಭೆ ಸ್ಥಾಯಿ ಸಮಿತಿ ನಿಕಟ ಪೂರ್ವ ಅಧ್ಯಕ್ಷ ವಿ.ಎಸ್.ರವಿಕುಮಾರ್, ನಗರಸಭೆ ನಾಮಿನಿ ಸದಸ್ಯ ಕಾಂತರಾಜ ಇದ್ದರು.

ಗ್ರಾಮೀಣ ಶಾಲೆಗಳ ಅಭಿವೃದ್ಧಿಗೆ ನೆರವು



ದೊಡ್ಡಬಳ್ಳಾಪುರ: ಸಿಎಸ್‌ಆರ್ ಅನುದಾನ ಸಮರ್ಪಕವಾಗಿ ಬಳಕೆ ಮಾಡಿಕೊಂಡರ ಅನುಕೂಲವಾಗಲಿದೆ ಎಂದು ಶಾಸಕ ಧೀರಜ್ ಮುನಿರಾಜ್ ಹೇಳಿದರು. ವಿನಾಯಕ ನಗರದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ಅಸ್ಟಿಮೊ ಫೈ ಕಂಪನಿಯ 54 ಲಕ್ಷ ರೂ. ಸಿಎಸ್‌ಆರ್ ಅನುದಾನದಲ್ಲಿ ನಿರ್ಮಿಸಲಾದ ನೂತನ ಶಾಲಾ ಕಟ್ಟಡ ಮತ್ತು ಅಂಗನವಾಡಿ ಕೇಂದ್ರವನ್ನು ಉದ್ಘಾಟಿಸಿ ಮಾತನಾಡಿ, ನಮ್ಮ ತಾಲೂಕಿನ ಬಾಶೆಟ್ಟಿಹಳ್ಳಿ ವ್ಯಾಪ್ತಿಯಲ್ಲಿ ಹೆಚ್ಚು ಕೈಗಾರಿಕಾ ಪ್ರದೇಶ ಹೊಂದಿದೆಂದರು. ಅಸ್ಟಿಮೋ ಫೈ ಪ್ರೈವೇಟ್ ಲಿಮಿಟೆಡ್ ಕಂಪನಿ ಪ್ರಬಂದಕ ಮನೋಹರ್, ಪೌರಾಯುಕ್ತ ಕಾರ್ತಿಕೇಶ್ವರ್, ಬಿಇಒ ಶಂಕರಯ್ಯ, ಶಿಶು ಯೋಜನಾಧಿಕಾರಿ ವಿನೋದ್‌ರಾಜ್, ನಗರಸಭೆ ಸದಸ್ಯರಾದ ಬಿ.ನಾಗರತ್ನಮ್ಮ, ಬಂತಿವೆಂಕಟೇಶ್, ಪದ್ಮನಾಭ, ನವೀನ್, ಸುಧಾರಾಣಿ ಲಕ್ಷ್ಮೀನಾರಾಯಣ್, ಗೋಪಿ, ವತ್ಸಲಾ ಜಗನ್ನಾಥ್ , ಬಿಜೆಪಿ ಸದಸ್ಯರಿದ್ದರು.

ಘನವೆತ್ತ ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಶಿಡ್ಲಘಟ್ಟ

ಕ್ರಿಮಿನಲ್ ಮಿಸ್ ಸಂಖ್ಯೆ: 803/2025

ಅರ್ಜಿದಾರರು :: 1. ಶ್ರೀ. ಕದಿರಪ್ಪ ಬಿನ್ ಲೇಟ್ ಮುನಿಯಪ್ಪ ವಯಸ್ಸು ಸುಮಾರು 75 ವರ್ಷ,2. ಶ್ರೀ. ಅಶ್ವತಪ್ಪ ಬಿನ್ ಕದಿರಪ್ಪ ವಯಸ್ಸು ಸುಮಾರು 50 ವರ್ಷ,3. ಶ್ರೀ. ರಾಜಣ್ಣ ಬಿನ್ ಕದಿರಪ್ಪ ವಯಸ್ಸು ಸುಮಾರು 48 ವರ್ಷ,ಎಲ್ಲರೂ ವಿಳಾಸ: ಆನೆಮಡಗು ಗ್ರಾಮ ಬಶೆಟ್ಟಹಳ್ಳಿ ಹೋಬಳಿ, ಶಿಡ್ಲಘಟ್ಟ ತಾಲ್ಲೂಕು ಚಿಕ್ಕಬಳ್ಳಾಪುರ ಜಿಲ್ಲೆ. -ವಿರುದ್ಧ-

ಎದುರುದಾರರು ::ತಹಶೀಲ್ದಾರ್ ಮತ್ತು ಜನನ ಮತ್ತು ಮರಣ ನೋಂದಣಾಧಿಕಾರಿ, ಶಿಡ್ಲಘಟ್ಟ

ಪತ್ರಿಕಾ ಪ್ರಕಟಣೆ:

ಈ ಮೇಲ್ಕಂಡ ಪ್ರಕರಣದಲ್ಲಿ 1ನೇ ಅರ್ಜಿದಾರರ ಗಂಡ ಮತ್ತು 2 ಮತ್ತು 3ನೇ ಅರ್ಜಿದಾರರ ತಾಯಿಯಾದ ತಿಪ್ಪಮ್ಮ ಕೋಂ ಕದಿರಪ್ಪ ರವರು ದಿನಾಂಕ: 16/09/2018 ರಂದು ಚಿಕ್ಕಬಳ್ಳಾಪುರ ಜಿಲ್ಲೆ, ಶಿಡ್ಲಘಟ್ಟ ತಾಲ್ಲೂಕು, ಬಶೆಟ್ಟಹಳ್ಳಿ ಹೋಬಳಿ, ಆನೆಮಡಗು ಗ್ರಾಮದಲ್ಲಿ ನಿಧನರಾಗಿದ್ದು, ಸದರಿ ಅರ್ಜಿದಾರರು ಮರಣ ಪ್ರಮಾಣ ಪತ್ರ ಪಡೆಯುವಸಲುವಾಗಿ ಅರ್ಜಿಯನ್ನು ಸಲ್ಲಿಸಿದ್ದು, ಅದ್ದರಿಂದ ಸಂಬಂಧಪಟ್ಟ ವಾರಸುದಾರರು ಇದ್ದಲ್ಲಿ ಸದರಿ ತಮ್ಮ ವಕೀಲರು ಮುಖಾಂತರ ರವರು ಖುದ್ದಾಗಿ ಅಥವಾ ತಮ್ಮ ತಕರಾರು ಇದ್ದಲ್ಲಿ ದಿನಾಂಕ: 25/4/26 ರಂದು ಸಲ್ಲಿಸಲು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಘನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಶಿಡ್ಲಘಟ್ಟ,

ಅರ್ಜಿದಾರರ ಪರ ವಕೀಲರು

ಹೆಚ್.ಎನ್. ಕೃಷ್ಣಮೂರ್ತಿ, ಎಂ.ಎ. ಎಲ್.ಎಲ್.ಬಿ

ಶಿಡ್ಲಘಟ್ಟ, ವಕೀಲರು, ಸ್ಥಳ: ಶಿಡ್ಲಘಟ್ಟ, ದಿನಾಂಕ: 16/3/26

ಮಾನ್ಯ 16ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು

ಕ್ರಿಮಿನಲ್ ಮಿಸ್. ನಂ. 3479/2026

ಇವರ ನಡುವೆ : 1. ಶ್ರೀ ಇರ್ಫಾನ್ ಉಲ್ಲಾ ಖಾನ್, ಬಿನ್ ಲೇಟ್ ಅಬ್ದುಲ್ ಅಜೀಜ್ ಖಾನ್, ವಯಸ್ಸು 56 ವರ್ಷ, ನಂ. 491, 1ನೇ ಮಹಡಿ, 17ನೇ ಮುಖ್ಯರಸ್ತೆ, 16ನೇ ಅಡ್ಡರಸ್ತೆ, ದೇವರಾಜ್ ಅರಸ್ ನಗರ, ಹಳೇ ಗುಡ್ಡದಹಳ್ಳಿ, ಬೆಂಗಳೂರು-560026. 2. ಶ್ರೀ ಆರಿಫ್ ಉಲ್ಲಾ ಖಾನ್, ಬಿನ್ ಲೇಟ್ ಅಬ್ದುಲ್ ಅಜೀಜ್ ಖಾನ್, ವಯಸ್ಸು 73 ವರ್ಷ, ವಾಸ : ನಂ. 13/1, 8ನೇ ಮುಖ್ಯ ರಸ್ತೆ, ಪಾದರಾಯನಪುರ, ಬೆಂಗಳೂರು-560026. 3. ಶ್ರೀಮತಿ ತಾಸೀನ್, ಕೋಂ. ಸಲೀಮ್ ಪಾಷ, ಬಿನ್ ಲೇಟ್ ಅಬ್ದುಲ್ ಅಜೀಜ್ ಖಾನ್, ವಯಸ್ಸು 54 ವರ್ಷ, ಎಲ್ಲರ ವಾಸ : ನಂ. 230, ಶುಕೂರ್ ಸಾಬ್ ಕಾಂಪೌಂಡ್, ಯೆಲ್ಲರೆಡ್ಡಿ ಸರ್ಕಲ್ ಕಾಡುಗೋಡಿ ಪ್ಲಾಂಟೇಷನ್, ಬೆಂಗಳೂರು-56067. ...ಅರ್ಜಿದಾರರು

ಮತ್ತು : ಜನನ ಮತ್ತು ಮರಣ ನೋಂದಣಾಧಿಕಾರಿ, ಬಿ.ಬಿ.ಎಂ.ಪಿ. ಬೆಂಗಳೂರು. ...ಎದುರುದಾರರು

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಈ ಮೇಲ್ಕಂಡ 1 ರಿಂದ 3ನೇ ಅರ್ಜಿದಾರರ ತಾಯಿಯಾದ ದಿವಂಗತ ರಹಮತುನ್ನಿಸ, ಕೋಂ. ಲೇಟ್ ಅಬ್ದುಲ್ ಅಜೀಜ್ ಖಾನ್ ರವರು ದಿನಾಂಕ : 21.06.2003 ರಂದು ನಂ. 491, 16ನೇ ಅಡ್ಡರಸ್ತೆ, 17ನೇ ಮುಖ್ಯ, ದೇವರಾಜ್ ಅರಸ್ ನಗರ್, ಹಳೇ ಗುಡ್ಡದಹಳ್ಳಿ, ಬೆಂಗಳೂರು-560026 ಇಲ್ಲಿ ಮರಣ ಹೊಂದಿರುತ್ತಾರೆ. ಇವರ ಮರಣದ ಬಗ್ಗೆ ಯಾವುದೇ ಅಧಿಕೃತ ದಾಖಲೆಗಳು ಇಲ್ಲದ ಸಲುವಾಗಿ ಹಾಗೂ ಖಾತಾ ವರ್ಗಾವಣೆ ಮಾಡುವ ಸಲುವಾಗಿ ಮೇಲ್ಕಂಡ ಅರ್ಜಿಯನ್ನು ಜನನ ಮತ್ತು ಮರಣ ನೋಂದಣಿ ಕಾಯ್ದೆ 1969 ರಂತೆ ದೃಢೀಕರಣ ಪತ್ರವನ್ನು ಪಡೆಯಲು (ಎ.ಸಿ.ಜೆ.ಎಂ) 16ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು ಇಲ್ಲಿ ಅರ್ಜಿ ಸಲ್ಲಿಸಿದ್ದು ಇದಕ್ಕೆ ಸಂಬಂಧಪಟ್ಟಂತೆ ಯಾರಾದರು ಇದ್ದ ಪಕ್ಷದಲ್ಲಿ ಖುದ್ದಾಗಿ ಆಗಲೀ ಅಥವಾ ತಮ್ಮ ವಕೀಲರ ಮುಖಾಂತರವಾಗಲೀ ದಿನಾಂಕ : 06.04.2026 ರಂದು ಬೆಳಿಗ್ಗೆ 11.00 ಗಂಟೆಗೆ ಮೇಲ್ಕಂಡ ನ್ಯಾಯಾಲಯದಲ್ಲಿ ಹಾಜರಾಗತಕ್ಕದ್ದು ಇಲ್ಲವಾದಲ್ಲಿ ಅರ್ಜಿಯನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು.

ಪತ್ರಿಕೆಯ ಹೆಸರು : 1) ಹೊಸ ದಿಗಂತ (ಕನ್ನಡ).
2) ಬಿಸಿನೆಸ್ ಸ್ಟ್ಯಾಂಡರ್ಡ್ (ಇಂಗ್ಲೀಷ್)

ನ್ಯಾಯಾಲಯದ ಮೊಹರಿನೊಂದಿಗೆ ಹಾಗೂ ನನ್ನ ಸಹಿಯೊಂದಿಗೆ ದಿನಾಂಕ : 16.03.2026 ರಂದು ನೀಡಲಾಗಿದೆ,

By order of the Court, Senior Sheristedar,
XVI Addl. Chief Judicial Magistrate Court, Bengaluru.

ಅರ್ಜಿದಾರರ ಪರ ವಕೀಲರು : ಪೂಜಶ್ರೀ .ವಿ, ವಕೀಲರು
ನಂ. 248, ಸೋಲದೇವನಹಳ್ಳಿ, ಅಚ್ಯುತ್ ನಗರ ಅಂಚೆ, ಹೆಸರಘಟ್ಟ ಮುಖ್ಯರಸ್ತೆ, ಬೆಂಗಳೂರು-560107.

BEFORE THE MOTOR ACCIDENT CLAIMS TRIBUNAL (SCCH-09) AT BANGALORE

MVC No. 7568/2024

Petitioner: Suresha B V/s

Respondents : Cholamandalam Insuranc Co ltd and others

NEWS PAPER DRAFT UNDER ORDER 5 RULE 20(1), OF THE CODE OF CIVIL PROCEDURE

Notice to Res. No.1

Gurutaja M R S/o Rangaiah M, #74, 2nd Main Shivanapur Thimmabovipal. Y A Maruthi Nagara Dasanapura, Bangalore - 562162

WHEREAS, the petitioner has instituted a petition for a motor accident claim of Rs.25,00,000/- against the Respondent (Gurutaja M R, Maruthi Suzuki Super Carry bearing Reg. No KA 52 C 1208) for the accident dated 16.10.2024 at about 09.00 PM from Bengaluru-Tumkuru NH 48 Service Road, Near, Arishinakunte Bus Stop, Nelamangala Town, Bengaluru Dist, Karnataka, that you are hereby summoned to appear before this Hon'ble Court (SCCH-09) in person or by a Pleader/s on 13/5/26 at 11 A.M. to answer the same, failing which the petition will be disposed ex-parte and determined in your absence.

Given under my hand and seal of this Court, 12th day of March 2026, at Bangalore.

By Order of the Court
Sd/- Assistant Registrar
Court of Small Causes, Bangalore

Advocate for Petitioner Umesha
#138/2, New Oxford english School near Lakshmi Temple Road, Gangodanahalli, Bangalore -562123.

CHANGE OF NAME

I, DEVIKA KITTA, aged about 35 years, W/o. Bhimashanker, S K, No. 208, 22nd Main, 16th Cross, J P Nagar, 5th Phase, Bengaluru-560078, do hereby declare that I have changed my name from DEVIKA to DEVIKA KITTA, vide affidavit dated 16.03.2026 sworn to before K.V. Mani, Advocate & Notary, Govt. of India, Bengaluru.

CHANGE OF NAME

I, ARCHANA, aged about 38 years, W/o. Sanjay Kumar, No. 19, Heggana Halli Main Road, Near Dairy Bus Stop, Heggana halli, Bengaluru-560091, do hereby declare that I have changed my name from ARCHANA JAIN to ARCHANA, vide affidavit dated 16.03.2026 sworn to before K.V. Mani, Advocate & Notary, Govt. of India, Bengaluru.

IN THE COURT OF THE 1st ADDL. CIVIL JUDGE & JMFC AT MALAVALLI

EX. No. 17/2025 IN (OS No. 344/2022)

Between : Sri. Shiva Kumar ...Decree Holder

AND : Sri Chikka Moga and another ...Judgment Debtors

SUMMONS TO THE JUDGEMENT DEBTORS

Sri. N.C. Ravichandra S/o Chikka Moga, Aged about 33 years R/at Nelluru Village, Appugowdanahalli Dakale, Kasaba Hobli, Malavalli Taluk, Mandya District.

Whereas the Decree Holder has filed the above petition against the Judgment Debtors for the relief of specific performance of the suit schedule property on the file of the 1st Addl. Civil Judge and JMFC at Malavalli. Whereas the below mentioned Court either in person or through pleader to answer all the judgment Debtors are hereby set to be appeared before this Hon'ble 11.00am failing with the court will hear the matter in your absence and proceed with the matter in accordance with law, questions involved in the matter on 04.04.2026 at 11.00 a.m

SCHEDULE PROPERTY

All that part and parcel of property bearing Land in Sy.No. 213/C measuring 0.26 guntas situated at Appugowdanahalli Village, Kasaba Hobli, Malavalli Taluk, Mandya District and bounded on the;

East by : Road, West by : Land of Kempegowda, North by : Land of Shivanna, South by : Oni.

Given under my hand and seal of the Court on this 09.03.2026.

By Order of the Court, Chief Ministerial Officer, Prl. Civil Judge & JMFC Court, Malavalli.

Advocate for Decree Holder : Sri. C. Muniraju
Office at No.9, STB Complex, Attibele Main Road, Anekal Town, Anekal Taluk, Bangalore District.

CHANGE OF NAME

I, SANJAY KUMAR, aged about 37 years, S/o. Manohar Lal Ganna, No. 19, Heggana Halli, 6th Cross, Manohar Jewellers Heggana Halli, Bengaluru-560091, do hereby declare that I have changed my name from SANJAY KUMAR GANNA to SANJAY KUMAR, vide affidavit dated 16.03.2026 sworn to before K.V. Mani, Advocate & Notary, Govt. of India, Bengaluru.

IN THE COURT OF THE CIVIL JUDGE AND JMFC AT KRISHNARAJAPURAM

O.S. 743/2025

BETWEEN : Smt. Munivenkattamma, wife of late Muniyappa, aged about 65 years, occupation: household work, residing at number 2/3, M. Hosahalli Village, Jodigenahalli Hobli, Hoskote Taluk, Bangalore Rural District others ...Plaintiffs

versus

Sri S. Vijaykumar, son of Bachamma, aged about 40 years, residing at 1004, 40th Cross, 10th Main, Second Block, Rajaji Nagar, Bangalore 10 and others ...Defendants

NOTICE/SUIT SUMMONS TO THE PROPOSED DEFENDANTS

6) Seenappa, S/o Dodda Munishamappa, Age: Major; 7) Bhaktavatsala Naidu. K, S/o not known, Age: Major; 8) Keshav Naidu, S/o not known, age: Major; 9) V. Narasa Reddy, S/o not known, age: Major; 10) Anjinappa, S/o not known, age: Major; 11) K.V. Shivashankar, S/o Venkataramanappa, age: Major; 12) Sridevi, wife of Suman, age: Major; 13) Ramu, son of Venkataramana Gowda, age: Major; 14) B. Suresh, son of I.C. Baiyanna, age: Major; 15) R. Srinivas, son of Rangappa, age: Major; 16) V.M. Muniyappa, son of Chikkamunishamappa, age: Major; 17) Mallesh, son of Byappa, age: Major; 18) Andalamma, wife of late Chennayya Reddy alias Chennappa Reddy, age: Major; 19) Rukminiyamma alias Rukkamma, wife of late K.V. Krishna Reddy, age: Major; 20) Muniyamma, wife of late Govinda Reddy, age: Major; 21) C. Prameela, wife of late Doreswamy Reddy, age: Major. All the above are residents at Kadugodi Village, Chennasandra Main Road, Whitefield, Bidarahalli Hobli, Bangalore.

22) Ravichandra Reddy, son of late Govind Reddy, age: 54 years, number 149 near Middle School, Kadugodi, Bangalore.

23) Maheshwari, daughter of late Govind Reddy, wife of V. Rajendran, age: 52, number 1/587, Kolai Medu, Latteri, Katpadi, Vellore, Tamil Nadu, 632202.

24) Dhanalakshmi, D/o late Govinda Reddy, age: 51 years, wife of K. Babu, Pilayar Koil Street, Devikapuram, Latteri, Vellore, Tamil Nadu, 632202.

25) Harish G., son of late Govind Reddy, age: 49 years, number 149 near Middle School, Kadugodi, Bangalore.

26) Dhanushree, daughter of late J. Babu and late Jayanti, age: 16 years, Minor, represented by Natural Guardian namely Maniyamma, wife of late Govinda Reddy, Grandmother of minor Dhanushree. residing at number 149 near Middle School, Kadugodi, Bangalore.

27) M/s Aditya Properties, Registered Partnership Firm having its office at 123/3, A.B. Vajpayee Road, V.S. Reddy Colony, Kadugodi, Bangalore, 67, represented by its partner and authorized signatory Prashant K.V., aged about 35 years, son of Veeraswamy Reddy.

Whereas the above named plaintiffs have filed the declaration suit against the defendants and also against all of you being Defendants No.6 to 27 and prays for declaring that the plaintiffs no.1 and 2 are the owner in possession of suit schedule item no.1 and 3 properties and plaintiff no.3 is absolute owner in possession of suit schedule item no.2 property.

You are hereby summoned to appear before this court on 24.04.2026 at 11.00 a.m in person or through Advocate to answer the questions to the same failing which the suit will be heard and determined exparte.

SCHEDULE PROPERTY

1) The land bearing survey number 197, measuring 28 guntas, situated in Kadugodi village, Bidarahalli Hobli, Bangalore East Taluk, and bounded on:- East by: FCI godown and road; west by: Syed Mohiddin saab and Karagada subbas land; North by: the remaining portion of survey number 197, fallen to the share of the other branch of Barabaradar; South: by survey number 197.

2) Land bearing survey number 197, measuring 18.6 guntas out of 4 acres 10 guntas, situated in Kadugodi village, Bidarahalli Hobli, Bangalore East Taluk, bounded on:- East by: FCI godown and road; West by: Syed Mohiddin saab's land; North by: survey number 196; South by: the remaining land of survey number 197.

3) Land bearing survey number 233, measuring 26 1/2 guntas out of 4 acres, situated in Kadugodi village, Bidarahalli Hobli, Bangalore East Taluk, bounded on:- East by: Kodagada Muniswamappa's sons property; west by: survey number 234; north by: the remaining portion of this survey number; south by: the remaining portion of this survey number.

Given under my hand and the seal of the Court, that day 12th day of March 2026.

By order of the Court, Shirestedar, Civil Judge And JMFC, Krishnarajapuram.

Name, signature & Address of the Advocate for plaintiff No.3 : Ramesh J.L.
Ramesh and Associates
#98, Mukund Complex I Floor, 13th Cross Bagalgunte, Near Hesaraghatta Main Road, Bengaluru-560 073.

IN THE COURT OF THE SENIOR CIVIL JUDGE AND JMFC, HOSAKOTE

O. S. No.2465/2022

Between: Smt. Pushpamamma @ Poojamma and others ...Plaintiffs

And: Smt. Susheelamma & others ...Defendants

NOTICE TO DEFENDANT No. 9 UNDER ORDER 5 RULE 20 (2) OF CPC.

Sri. B.P. Umesh, S/o. Papanna Reddy, aged about 48 years, R/at- Devarabisanahalli Village, Varthur Hobli, Bangalore-560 037.

Whereas the plaintiffs have filed the above suit for the relief of Partition, Declaration and injunction for other consequential relief's against the defendants before the Hon'ble Senior civil judge and JMFC, Hosakote in respect of the land bearing lands bearing Sy. No. 53/1 measuring 1 acre 20 guntas including kharab of 3 guntas, Sy. No. 53/2 measuring 1 acre 21 guntas including kharab of 3 guntas, Sy. No. 53/3 measuring 1 acre 25 guntas including kharab of 4 guntas, all the said three lands are situated at Arehalli Village, Anugondahalli Hobli, Hosakote Taluk, Bangalore rural District. The plaintiffs and defendants No. 1 to 7 are also are the joint owners and have been continued in joint possession and enjoyment of the lands bearing new Sy. No. 60/4 old No. 60/1 (original No. 60) measuring 1 acre 34 guntas, New Sy. No. 69/8 (old Sy. No. 69) measuring 33 guntas, Sy. No. 113/2 measuring 17 guntas, Sy. No. 114/2 measuring 1 acre 23 guntas, Sy. No 119/6 measuring 7 guntas and Sy. No. 124/1 measuring 34 guntas including kharab of 2 guntas, all the said six lands are situated at Kalkunte Agrahara village, Anugondahalli Hobli, Hosakote Taluk, Bangalore rural District, which are the plaint schedule properties.

The defendant No.9 is hereby summoned to appear before the Hon'ble Senior civil judge and JMFC, Hosakote on 27/04/2026 at 11.00 A.M either in person or through Pleader in support of his case. Take notice, that in case of default the matter will be heard and decided in your absence

Given under my hand and seal of this Court, on this 09/03/2026 at Hosakote.

By order of the Court, Sheristedar, Senior Civil Judge & JMFC, Hosakote.

Advocate for Plaintiff: Umesh. S
V.S.K. Law Chambers
No.186, 1st Floor, 1st Cross, Near Lalbagh Hopcoms, Wilson Garden, Hosur Main Road, Bangalore- 560 027

IN THE COURT OF THE PRL SENIOR CIVIL JUDGE AND CJM AT TUMAKURU

O.S. NO. 702/2024

Plaintiffs: Puttatayamma -V/s-

Defendants: Nanjamma and others

SUMMONS TO DEFENDANTS IN THE ABOVE CASE

ಗೋಕೃಪಾಮೃತ ಎಂಬ ಒಂದು ದ್ರಾವಣವೇ ಗೋಪಾಲ್ ಸುತಾರಿಯ ಇಚ್ಛಿಸಿದ್ದಲ್ಲಿ ದೇಶದ ಶ್ರೀಮಂತರ ಪಟ್ಟಿಯಲ್ಲಿ ಇವರನ್ನು ಒಬ್ಬರನ್ನಾಗಿಸುತ್ತಿತ್ತು. ಆದರೆ ಇದ್ಯಾವುದಕ್ಕೂ ತಲೆ ಕೆಡಿಸಿಕೊಳ್ಳದ ಇವರು ಗೋವುಗಳ ಮತ್ತು ರೈತರ ಹಿತಕ್ಕಾಗಿ ಇದನ್ನು ಸಂಪೂರ್ಣ ಉಚಿತವಾಗಿ ನೀಡುವ ಸಂಕಲ್ಪವನ್ನು ಮಾಡಿದ್ದಾರೆ. ಇವರ ಈ ಸಂಕಲ್ಪಕ್ಕೆ ಕನೇರಿ ಮಠದ ಕಾಡಸಿದ್ದೇಶ್ವರ ಸ್ವಾಮಿಗಳು ಸೇರಿದಂತೆ ಸಾಕಷ್ಟು ಮಠಾಧಿಪತಿಗಳು, ಸಮಾಜದ ಗಣ್ಯ ವ್ಯಕ್ತಿಗಳು ಹಾಗೂ ರೈತರು ಕೈಜೋಡಿಸುತ್ತಿರುವುದು ಇವರ ಪರಿಶ್ರಮಕ್ಕೆ ಸಾರ್ಥಕತೆಯನ್ನು ತಂದಿದೆ. ಇವರು ಹಿಂದೆ ಒಬ್ಬ ವಜ್ರದ ವ್ಯಾಪಾರಿಯಾಗಿದ್ದು, ಗುಜರಾತ್‌ನ ಗೋಸೇವಾ ಆಯೋಗದ ಡೈರೆಕ್ಟರ್ ಸಹ ಆಗಿದ್ದರು. ಹತ್ತು ತಲೆಮಾರು ಕುಳಿತು ತಿಂದರೂ ಕರಗದಷ್ಟು ಸಂಪತ್ತು ಇಂದಿಗೂ ಇವರಲ್ಲಿದೆ. ಆದರೆ ಇವರಿಗೇಕೋ ಈ ಸಂಪತ್ತು ಗೋಸಂಪತ್ತಿನ ಮುಂದೆ ಕ್ಷುಲ್ಲಕವೆನಿಸಿದೆ. ಸನಾತನ ಭಾರತೀಯ ಪರಂಪರೆಗಳಲ್ಲಿನ ವೈಜ್ಞಾನಿಕ ತಳಹದಿ ಇವರ ಅಂತರಾಳವನ್ನು ಬಡಿದೆಬ್ಬಿಸಿದೆ. ಈ ಕಾರಣದಿಂದಲೇ ಇವರು ಗೋಆಧಾರಿತ ವ್ಯವಸ್ಥೆಯೊಂದಿಗೆ ಗೋಶಾಲೆ ಮತ್ತು ಗುರುಕುಲವನ್ನು ಸ್ಥಾಪಿಸಿ ಗೋಪಾಲನೆ, ಧರ್ಮಪಾಲನೆ ಮಾಡುವ ಮೂಲಕ, ಭೂತಾಯಿಯ ಒಡಲನ್ನು ವಿಷಮುಕ್ತವನ್ನಾಗಿಸುವ ಶ್ರೇಷ್ಠ ಕಾರ್ಯವನ್ನು ಮಾಡುತ್ತಿದ್ದಾರೆ. ಇವರಿಗೆ ಈ ದೇಶದ ಸಂಪ್ರದಾಯ ಮತ್ತು ಜೀವನಶೈಲಿಯೊಂದಿಗಿನ ಆಧ್ಯಾತ್ಮಿಕ ಚಿಂತನೆಯ ಬಗ್ಗೆ ಗಾಢವಾದ ಒಲವಿದೆ. ಅಷ್ಟೇ ಬೇಸರ ಇತ್ತೀಚಿನ ಆಧುನಿಕ ಸಂಪ್ರದಾಯದ ಮೇಲೆಯೂ ಇದೆ. ನಮ್ಮ ಹಿರಿಯರು ನಾವು ಬದುಕುವ ಜೀವನದೊಂದಿಗೆ ಒಂದು ಆಧ್ಯಾತ್ಮಿಕ ಚಿಂತನೆಯನ್ನು ಅಳವಡಿಸಿದ್ದರು. ಗೋವಿನ ಮಹತ್ವದ ಅರಿವು ಅವರಿಗೆ ಅಂದೇ ಇದ್ದದ್ದರಿಂದ ಅದನ್ನು ಜೀವನದೊಂದಿಗೆ ಜೋಡಿಸಿದ್ದರು ಮತ್ತು ಗೋವಿನ ಉಪಉತ್ಪನ್ನಗಳಿಂದ ಕೃಷಿಯನ್ನು ಮಾಡಿ ಆರೋಗ್ಯಯುತ ಜೀವನವನ್ನು ತಮ್ಮದಾಗಿಸಿಕೊಂಡಿದ್ದರು ಎಂಬೆಲ್ಲಾ ನಿಲುವು ಗಟ್ಟಿಯಾಗಿ ಇವರಲ್ಲಿ ಬೇರೂರಿದೆ.

ನಾವಿಂದು ನಮ್ಮ ಹಿರಿಯರು ಹಾಕಿಕೊಟ್ಟ ಆ ಎಲ್ಲಾ ಬದುಕಿಗೆ ಪೂರಕವಾಗುವ ಅಂಶಗಳನ್ನು ಕಡೆಗಣಿಸಿ ಗೋಮಾತೆಯನ್ನು ನಿರ್ಲಕ್ಷಿಸಿದ್ದೇವೆ. ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳನ್ನು ಬಳಸಿ ಭೂಮಾತೆಯನ್ನು ಅಪವಿತ್ರಗೊಳಿಸುತ್ತಿದ್ದೇವೆ. ನಾವು ವಿಷವನ್ನು ತಿನ್ನುವುದರೊಂದಿಗೆ ಇಡೀ ವಿಶ್ವಕ್ಕೆ ವಿಷವನ್ನು ಉಣಬಡಿಸುತ್ತಿದ್ದೇವೆ. ನಮ್ಮ ಹಿರಿಯರು ತೋರಿಸಿದ ದಾರಿಯಲ್ಲಿ ನಮಗೇಕೆ ಸಾಗಲಾಗುತ್ತಿಲ್ಲ, ಎಂದೆಲ್ಲಾ ಚಿಂತನೆ ಮಾಡಿದಾಗ ಇವರಿಗೆ ಸತ್ಯದ ದರ್ಶನವಾಗಿದೆ. ಕೂಡಲೇ ತಮ್ಮ ವ್ಯಾಪಾರಕ್ಕೆ ತಾರ್ಕಿಕ ಅಂತ್ಯ ಹಾಡಿ, ಒಂದಷ್ಟು ಗೀರ್ ಜಾತಿಯ ಗೋವುಗಳನ್ನು ತಂದು ಒಂದೆಡೆ ಸಾಕಲು ಪ್ರಾರಂಭಿಸುತ್ತಾರೆ. ಗೋವುಗಳನ್ನು ಕಟ್ಟಿಹಾಕಿ ಸಾಕುವುದು ಸಹ ಒಂದು ರೀತಿಯ ಶೋಷಣೆಯೆಂದು ಭಾವಿಸಿ, ಎಲ್ಲಾ ಗೋವುಗಳನ್ನು ಕಟ್ಟಿಹಾಕದೆ ಮುಕ್ತವಾಗಿ ಬಿಟ್ಟು ಸಾಕಲಾರಂಭಿಸುತ್ತಾರೆ. ಬೇಕೆಂದಾಗ ಅವುಗಳೇ ಹೋಗಿ ಮೇವು ತಿಂದು, ನೀರು ಕುಡಿದು ಬರುವ ವ್ಯವಸ್ಥೆಯನ್ನು ಕಲ್ಪಿಸುತ್ತಾರೆ.

ಇವರು ಹೇಳುವಂತೆ, ಗೋವುಗಳಿಗೆ ಅತಿ ಹೆಚ್ಚು ತಿನ್ನಿಸಿದಷ್ಟು ಹೆಚ್ಚೆಚ್ಚು ಹಾಲನ್ನು ನೀಡುತ್ತವೆ ಎಂಬ ತಪ್ಪು ಕಲ್ಪನೆ ನಮ್ಮಲ್ಲಿದೆಯಂತೆ. ಆದರೆ ನಮ್ಮ ಸನಾತನ ಸಂಸ್ಕೃತಿಯಲ್ಲಿ ಗೋವುಗಳಿಗೆ ಹೊಟ್ಟೆ ತುಂಬಾ ಮೇವನ್ನು ಕೊಟ್ಟ ನಂತರ, ಅದು ಎಷ್ಟು ಹಾಲನ್ನು ನೀಡಬೇಕು ಎಂಬುದನ್ನು ಅದೇ ಸ್ವತಃ ನಿರ್ಧರಿಸುತ್ತದೆ. ಈ ಕಾರಣದಿಂದ ವೇದಗಳಲ್ಲಿ ಹೇಳಿರುವಂತೆ ಗೋವಿನ ಕೆಚ್ಚಲಿನ ಮೇಲೆ ಮೊದಲಿಗೆ ಅದರ ಕರುವಿಗೆ ಮಾತ್ರ ಅಧಿಕಾರವಿದೆ. ಆನಂತರವೇ ಮನುಷ್ಯನಿಗೆ ಎಂಬ ತತ್ವ ಸಿದ್ಧಾಂತಕ್ಕೆ ಬದ್ಧರಾಗಿ, ಗೋವಿನ ಕೆಚ್ಚಲಿನ ತೊಟ್ಟಲ್ಲಿ ಎರಡು ಅದರ ಕರುವಿಗೆ ಬಿಟ್ಟು, ಇನ್ನೆರಡು ತೊಟ್ಟುಗಳಲ್ಲಿರುವ ಹಾಲನ್ನು ಮಾತ್ರ ಕರೆಯುವ ವ್ಯವಸ್ಥೆಯನ್ನು ರೂಪಿಸಿದ್ದಾರೆ. ತಮ್ಮಲ್ಲಿ ದೊರೆಯುವ ಗೋವಿನ ಸಗಣಿ, ಗೋಮೂತ್ರದೊಂದಿಗೆ ಸ್ಲರಿಯನ್ನು ಬಳಸಿ ಅವಶ್ಯಕವಾದ ಮೇವನ್ನು ಬೆಳೆದುಕೊಳ್ಳುತ್ತಿದ್ದಾರೆ.



ಸಾಮಾನ್ಯವಾಗಿ ವಿಶ್ವದಾದ್ಯಂತ ಗೋವುಗಳನ್ನು ಒಂದೆರಡು ಕರು ಹಾಕಿದ ನಂತರ ಕಸಾಯಿಖಾನೆಗೆ ಕಳುಹಿಸಲಾಗುತ್ತದೆ. ಭಾರತದಲ್ಲಿ ಈ ಪ್ರಮಾಣ ಕೊಂಚ ಕಡಿಮೆ ಇದ್ದು, ಇಲ್ಲಿ ನಾಲ್ಕೈದು ಕರು ಹಾಕಿದ ನಂತರ ಆ ಗೋವು ಕಡಿಮೆ ಹಾಲು ನೀಡುತ್ತದೆ ಎಂಬ ನೆಪವೊಡ್ಡಿ ಕಸಾಯಿಖಾನೆಗೆ ಅಟ್ಟಲಾಗುತ್ತದೆ. ಆದರೆ ಇವರಲ್ಲಿರುವ ಗೋವುಗಳ ಆಯುಷ್ಯದ ಬಗ್ಗೆ ತಿಳಿದರೆ ನೀವು ಬೆಕ್ಕಸ ಬೆರಗಾಗುತ್ತೀರಿ. ಇಲ್ಲಿ ಕೆಲವೊಂದು ಗೋವುಗಳು ಸುಮಾರು 15 ಕರು ಹಾಕಿದ ನಂತರವೂ ಇಂದಿಗೂ 20ರಿಂದ 30 ಲೀಟರ್ ಹಾಲನ್ನು ಪ್ರತಿನಿತ್ಯ ನೀಡುತ್ತಿವೆ. ಇವು ನೀಡುತ್ತಿರುವ ಹಾಲಿನಲ್ಲಿ ದೇಹಕ್ಕೆ ಅತ್ಯವಶ್ಯಕವಾದ ಕೊಬ್ಬಿನಾಂಶ ಹೆಚ್ಚಿರುವುದು ವೈಜ್ಞಾನಿಕವಾಗಿ ಸಾಬೀತಾಗಿದೆ. ವಿದೇಶಿ ತಳಿಗಳ 50 ಲೀಟರ್ ಹಾಲಿನಲ್ಲಿರುವಂತಹ ಕೊಬ್ಬಿನಾಂಶ ಇವರಲ್ಲಿನ ಗೋವುಗಳ 30 ಲೀಟರ್ ಹಾಲಿನಲ್ಲಿಯೇ ಸಿಗುತ್ತಿದೆ. ಯಾವುದೇ ಗೋವಿನಿಂದ ಬಲವಂತವಾಗಿ ಹಾಲನ್ನು ಕರೆಯುವ ಪರಿಪಾಠವೇ ಇಲ್ಲಿಲ್ಲ. ಹೆಸರು ಕರೆದ ಕೂಡಲೇ ಆಯಾ ಗೋವುಗಳು ಹಾಲು ಕರೆಯುವ ಸ್ಥಳಕ್ಕೆ ಖುದ್ದಾಗಿ ಹೋಗಿ ಹಾಲನ್ನು ನೀಡಿ ಬರುತ್ತವೆ. ಹೀಗೆ ಮನಸೋ ಇಚ್ಛೆ ನೀಡುತ್ತಿರುವ ಈ ಹಾಲಿಗೆ ಸಾಕಷ್ಟು ಬೇಡಿಕೆಯಿದೆ. ಅಚ್ಚರಿ ಎಂದರೆ ವೇದಗಳಲ್ಲಿ ಹೇಳಿರುವಂತೆ ಗೋವು ಸಾಯುವವರೆಗೂ ಹಾಲನ್ನು ನೀಡುತ್ತಿದ್ದ ಚಿತ್ರಣವನ್ನು ಇಲ್ಲಿ ಪುನರ್ಜೀವಗೊಳಿಸುವ ನಿಟ್ಟಿನಲ್ಲಿ ಕಾರ್ಯ ನಡೆಯುತ್ತಿದೆ.

ಇಲ್ಲಿಯ ಪ್ರತಿಯೊಂದು ಗೋವು ಪ್ರಕೃತಿದತ್ತವಾಗಿ ಬೆಳವಣಿಗೆ ಕಾಣುತ್ತಿದೆ. ಇಲ್ಲಿಯ ಎರಡು ವರ್ಷದ ಗೋವಿನ ದೇಹದಾರ್ಢ್ಯತೆ ಬೇರೆಡೆಯಲ್ಲಿನ ಸುಮಾರು ಐದು ವರ್ಷದ ಗೋವಿಗೆ ಸರಿಸಮಾನದಂತೆ ಕಂಡುಬರುತ್ತದೆ. ಇಲ್ಲಿಯ ಯಾವುದೇ ಗೋವಿಗೆ ಇಂದಿನವರೆಗೂ ಆಧುನಿಕ ವಿಜ್ಞಾನ ಹೇಳುವಂತಹ ಯಾವುದೇ ಅಲೋಪತಿ ಔಷಧಿಯನ್ನು ಕೊಟ್ಟಿಲ್ಲ. ಸಾಮಾನ್ಯವಾಗಿ ಕೊಡಲೇಬೇಕಾದ ಹೊಟ್ಟೆ ಹುಳದ ಔಷಧಿಯನ್ನು ನೀಡಿಯೇ ಇಲ್ಲ. 15 ದಿನಕ್ಕೊಮ್ಮೆ ಬೇವಿನ ಮರದ ಸೊಪ್ಪನ್ನು ಗೋವುಗಳಿಗೆ ತಿನ್ನಿಸುವ ವ್ಯವಸ್ಥೆ ಇದೆ. ಅನಾರೋಗ್ಯದಿಂದ ಬಳಲುವ ಗೋವುಗಳು ಈ ಸೊಪ್ಪನ್ನು ತಿಂದು ಆರೋಗ್ಯವಂತವಾಗುತ್ತಿವೆ. ಇದರಿಂದ ಗೋವುಗಳಲ್ಲಿ ರೋಗನಿರೋಧಕ ಶಕ್ತಿ ಹೆಚ್ಚಿರುವುದು ಆನಂತರ ಬೆಳಕಿಗೆ ಬಂದಿದೆ.

ಗೋಪಾಲ್ ಸುತಾರಿಯಾ ಹೇಳುವಂತೆ ಗೀರ್ ಜಾತಿಯ ಗೋವಿನಲ್ಲಿ ಸುಮಾರು 15 ವಿವಿಧ ಗೋತ್ರಗಳಿವೆ. ಇಂತಹ ಸುಮಾರು 12 ವಿವಿಧ ಗೋತ್ರದ ಗೋವುಗಳನ್ನು ಇವರಲ್ಲಿ ಕಾಣಬಹುದು. ಇಂದು ವಿಶ್ವದಲ್ಲಿಯೇ ಅತಿ ಹೆಚ್ಚು ಗೀರ್ ತಳಿಗಳನ್ನು ಹೊಂದಿರುವ ಬ್ರೆಜಿಲ್‌ನಲ್ಲಿಯೂ ಕೇವಲ ಒಂದೇ ಗೋತ್ರದ ತಳಿಗಳಿವೆ. ಮನುಷ್ಯರಂತೆ ಇಲ್ಲಿಯೂ ಸಹ ತಳಿ ಅಭಿವೃದ್ಧಿ ಗೋತ್ರದ ಜೋಡಣೆಯೊಂದಿಗೆ ಆಗುತ್ತಿದೆ. ಈ ಕಾರಣಕ್ಕಾಗಿಯೇ ಪ್ರತಿಯೊಂದು ತಳಿಯ ಹಿಂದಿನ ಐದಾರು ತಲೆಮಾರಿನ ಮಾಹಿತಿಯನ್ನು ಸಂಗ್ರಹಿಸಿ ಇಡಲಾಗಿದೆ. ಯಾವ ಗೋತ್ರದ ಗೋವಿಗೆ ಮತ್ತಿನ್ಯಾವ ಗೋತ್ರದ ತಳಿಯೊಂದಿಗೆ ಸೇರಿಸಬೇಕು ಎಂಬುದು ಒಂದು ವರ್ಷದ ಮೊದಲೇ ನಿರ್ಧರಿಸಲಾಗಿರುತ್ತದೆ. ಹೀಗೆ ಅವುಗಳ ವಂಶವಾಹಿಯ ಮೇಲೆಯೇ ಇಲ್ಲಿ ತಳಿ ಸಂವರ್ಧನೆಯ ಕಾರ್ಯ ಸಾಗುತ್ತಿದೆ.

ಇಲ್ಲಿಯ ಹಾಲು ಮತ್ತು ತುಪ್ಪಕ್ಕೆ ಸಾಕಷ್ಟು ಬೇಡಿಕೆಯಿದೆ. ಇಲ್ಲಿಯ ಗೋಉತ್ಪನ್ನಗಳಿಂದ ಕೆಲವೊಂದಿಷ್ಟು ಔಷಧಿಗಳನ್ನು ತಯಾರಿಸಲಾಗುತ್ತಿದೆ. ಇವರ ಈ ಗೋತೀರ್ಥ ವಿದ್ಯಾಪೀಠದಲ್ಲಿ ಸಂವರ್ಧನೆಗೊಂಡ ತಳಿಗಳಿಗೆ ದೇಶದಲ್ಲಷ್ಟೇ ಅಲ್ಲದೆ ವಿದೇಶಗಳಲ್ಲೂ ಬೇಡಿಕೆ ಇದೆ. ಆದರೆ ಮೂಲತಃ ವಜ್ರದ ವ್ಯಾಪಾರಿಯಾಗಿರುವ ಇವರು, ಇದರಿಂದ ಹಣ ಮಾಡುವ ಉದ್ದೇಶವಿಲ್ಲದೆ ಇಂತಹ ಅವಕಾಶಗಳೆಲ್ಲವನ್ನು ತಿರಸ್ಕರಿಸಿದ್ದಾರೆ. ಗುಜರಾತ್‌ನ ಈ ಪರಿಪೂರ್ಣ ಗೋಶಾಲೆಯನ್ನು ಮತ್ತು ಇವರನ್ನು ನೋಡಲು ದೇಶದ ಮೂಲೆ ಮೂಲೆಗಳಿಂದ ಜನ ಪ್ರತಿನಿತ್ಯ ಬಂದು ಹೋಗುತ್ತಿದ್ದಾರೆ. ಹೀಗೆ ಬಂದವರೆಲ್ಲರಿಗೂ ಗೋವಿನ ಸಾಕಾಣಿಕೆಯ ಕುರಿತ ಸಂಪೂರ್ಣ ಮಾಹಿತಿಯನ್ನು ಉಚಿತವಾಗಿ ನೀಡಲಾಗುತ್ತಿದೆ. ಸ್ವತಃ ಗೋಪಾಲ್ ಸುತಾರಿಯಾರವರೇ ಕೆಲವೊಮ್ಮೆ ಬಂದಂತ ಆಸಕ್ತರಿಗೆ ಗೋಪಾಲನೆ ಮತ್ತು ಕೃಷಿಯ ಕುರಿತಂತೆ ಸಮಗ್ರವಾಗಿ ವಿವರಿಸುವುದು ಇದೆ. ಇದೆಲ್ಲದರ ಜೊತೆಗೆ ಇಲ್ಲೊಂದು ವಿಶೇಷವಾದ ಗುರುಕುಲ ವ್ಯವಸ್ಥೆ ಸದ್ದಿಲ್ಲದೇ ಗೋಆಧಾರಿತವಾಗಿಯೇ ನಡೆಯುತ್ತಿದೆ.

ಭಾರತ ಪ್ರವರ್ಧಮಾನಕ್ಕೆ ಬರುವುದನ್ನು ಅಮೆರಿಕ ಸಹಿಸದು

▸ ಉತ್ಪಲ್ ಕುಮಾರ್

ಇತ್ತೀಚೆಗೆ ದಿಲ್ಲಿಯಲ್ಲಿ ನಡೆದ ರೈಸಿನಾ ಸಂವಾದ ಕಾರ್ಯಕ್ರಮದಲ್ಲಿ ಅಮೆರಿಕದ ವಿದೇಶಾಂಗ ಸಹಕಾರ್ಯದರ್ಶಿ ಕ್ರಿಸ್ಟೋಫರ್ ಲಾಂಡ್ ರಾಜತಾಂತ್ರಿಕತೆಯ ಪಾಲಿಗೆ ನಿಷ್ಠುರವೇ ಎನಿಸಬಹುದಾದ ಮಾತುಗಳನ್ನಾಡಿದರು. ''ನಾವು 20 ವರ್ಷಗಳ ಹಿಂದೆ ಚೀನಾಕ್ಕೆ ಸಂಬಂಧಿಸಿ ಎಸಗಿದ ತಪ್ಪುಗಳನ್ನು ಈಗ ಭಾರತಕ್ಕೆ ಸಂಬಂಧಿಸಿ ಮತ್ತೆ ಎಸಗಲಾರೆವು ಎಂಬುದನ್ನು ಭಾರತವು ಅರಿತುಕೊಳ್ಳಬೇಕು'' ಎಂದು ಅವರು ಹೇಳಿದರು. ಅದನ್ನು ಮತ್ತಷ್ಟು ವಿವರಿಸಿದ ಅವರು, ''ನಾವು ನಿಮಗೆ ಎಲ್ಲಾ ಬಗೆಯ ಮಾರುಕಟ್ಟೆಯ ಅಭಿವೃದ್ಧಿಗೆ ನೆರವು ನೀಡುತ್ತೇವೆ. ಆದರೆ ಕೊನೆಗೆ ಹಲವಾರು ವಾಣಿಜ್ಯಿಕ ವಿಷಯಗಳಲ್ಲಿ ನಮ್ಮನ್ನೇ ಸೋಲಿಸುತ್ತೀರಿ. ಅದಕ್ಕಿನ್ನು ಅವಕಾಶ ನೀಡುವುದಿಲ್ಲ'' ಎಂದರು.

ಯಾವುದೇ ರಾಜತಾಂತ್ರಿಕ ನಯವಿನಯವಿಲ್ಲದ ಈ ಮಾತಿನ ಸಂದೇಶವು ಸ್ಪಷ್ಟವಾಗಿದೆ. ಚೀನಾ ತನ್ನ ವಿರೋಧಿಯಾಗಿ ಬೆಳೆಯಲು ತಾನೇ ಅವಕಾಶ ಮಾಡಿಕೊಟ್ಟಿರುವುದಾಗಿ ಅಮೆರಿಕ ನಂಬುತ್ತಿದೆ ಹಾಗೂ ಅದೇ ತಪ್ಪನ್ನು ಭಾರತಕ್ಕೆ ಸಂಬಂಧಿಸಿ ಎಸಗಬಾರದು ಎಂದು ಭಾವಿಸಿದೆ. ಭಾರತದ ನೀತಿ ನಿರೂಪಕರು ಈ ಹೇಳಿಕೆಯನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ ಹಾಗೂ ಹೆಚ್ಚು ಆಳವಾಗಿ ವಿಶ್ಲೇಷಣೆ ಮಾಡಬೇಕಾಗಿದೆ. ಏಕೆಂದರೆ ಇದರ ಹಿಂದೆ ಜಾಗತಿಕ 'ಶಕ್ತಿ ರಾಜಕೀಯ'ದ ಕಹಿಸತ್ಯ ಅಡಗಿದೆ. ಯಾವುದೇ ಸೂಪರ್ ಪವರ್ ಇನ್ನೊಂದು ರಾಷ್ಟ್ರದೊಂದಿಗೆ ಎಷ್ಟೇ ಉತ್ತಮ ಸಂಬಂಧ ಹೊಂದಿದ್ದರೂ ಆ ರಾಷ್ಟ್ರವು ಸೂಪರ್‌ಪವರ್ ಆಗಿ ಬೆಳೆಯಲು ತಾನಾಗಿ ಅವಕಾಶ ನೀಡಲಾರದು ಎಂಬುದು ಇದರ ಹಿಂದಿನ ಸಂದೇಶವಾಗಿದೆ.

ಕೆಲವಾರು ದಶಕಗಳಿಂದ ಅಮೆರಿಕದ ನೀತಿನಿರೂಪಕರು ಚೀನಾವು ಎಷ್ಟೇ ಶಕ್ತಿಶಾಲಿಯಾಗಿ ಬೆಳೆದರೂ ಅದನ್ನು ತಾವು ನಿಯಂತ್ರಿಸಬಹುದು ಎಂದು ಭಾವಿಸಿಕೊಂಡು ಬಂದಿದ್ದರು. ಡೆಂಗ್ ಕ್ಸಿಯೋಪಿಂಗ್ ಚೀನಾದ್ದು ಶಾಂತಿಯುತ ಬೆಳವಣಿಗೆ ಎಂದು ಜಗತ್ತಿಗೆ ನಂಬಿಸಿದ್ದರು. ಆದರೆ ಆಂತರ್ಯದಲ್ಲಿ ''ನಿಮ್ಮ ಸಾಮರ್ಥ್ಯವನ್ನು ಯಾರ ಕಣ್ಣಿಗೂ ಕಾಣದಂತೆ ಅಡಗಿಸಿಡಿ, ಸಮಯ ಬಂದಾಗ ಅದನ್ನು ಪ್ರದರ್ಶಿಸಿ'' ಎಂಬುದು ಅವರ ನೀತಿಯಾಗಿತ್ತು. ಬಳಿಕ ಚೀನಾ ಈ ನೀತಿಯನ್ನು ಅಕ್ಷರಶಃ ಪಾಲಿಸಿಕೊಂಡು ಬಂದಿತು. ಮೂರು ದಶಕಗಳಿಂದ ಸದ್ದಿಲ್ಲದೆ ಪಾಶ್ಚಿಮಾತ್ಯ ತಂತ್ರಜ್ಞಾನವನ್ನು, ಬಂಡವಾಳವನ್ನು ಮತ್ತು ಉತ್ಪಾದನಾ ಸಾಮರ್ಥ್ಯವನ್ನು ಬೆಳೆಸಿಕೊಂಡು ಬಂದಿತು. ಅದರ ಪರಿಣಾಮವು ಎಲ್ಲರ ಕಣ್ಣಿಗೆ ಗೋಚರಿಸುವ ವೇಳೆಗೆ, ಚೀನಾವು ವಿಶ್ವದ ಎರಡನೇ ಅತ್ಯಂತ ದೊಡ್ಡ ಆರ್ಥಿಕ ಶಕ್ತಿಯಾಗಿ ಹಾಗೂ ಅಮೆರಿಕಕ್ಕೆ ಸಮರ್ಥ ತಂತ್ರಜ್ಞಾನ ವಿರೋಧಿಯಾಗಿ ಬೆಳೆದು ನಿಂತಾಗಿತ್ತು.

ಪಾಶ್ಚಿಮಾತ್ಯ ರಾಷ್ಟ್ರಗಳೇ ನಿರ್ಮಿಸಿದ ವ್ಯವಸ್ಥೆಯೊಳಗೆ ಚೀನಾವು ಅತ್ಯಂತ ಶಕ್ತಿಶಾಲಿಯಾಗಿ ಬೆಳೆಯಲು ತಾವೇ ಅವಕಾಶ ಮಾಡಿಕೊಟ್ಟಿದ್ದೇವೆ ಎಂಬುದಾಗಿ ಅಮೆರಿಕ ಈಗ ಭಾವಿಸಿದೆ. ಭಾರತವನ್ನು ಕೂಡಾ ಅಮೆರಿಕ ಈಗ ಅದೇ ಆಯಾಮದಿಂದ ನೋಡುತ್ತಿದೆ.

ಜಪಾನ್‌ನ ನಿದರ್ಶನ

ಯಾವುದಾದರೊಂದು ದೇಶವು ಪ್ರಬಲವಾಗಿ ಬೆಳೆಯದಂತೆ ಮಾಡಲು ಅಮೆರಿಕವು ಏನು ಮಾಡಲೂ ಸಿದ್ಧ ಎಂಬುದನ್ನು ಅರಿಯಬೇಕಾದರೆ ಜಪಾನ್‌ನತ್ತ ನೋಡಬೇಕು. 1980ರ ದಶಕದಲ್ಲಿ ಜಪಾನ್ ಅತ್ಯಂತ ವೇಗವಾಗಿ ಬೆಳೆಯುತ್ತಿತ್ತು. ಅದನ್ನು ಯಾರೂ ತಡೆಯುವಂತಿರಲಿಲ್ಲ. ಜಾಗತಿಕ ಮಾರುಕಟ್ಟೆಯಲ್ಲಿ ಜಪಾನಿ ಆಟೋಮೊಬೈಲ್‌ಗಳು, ಎಲೆಕ್ಟ್ರಾನಿಕ್ಸ್ ಮೇಲುಗೈ ಸಾಧಿಸಿದ್ದವು. ಮುಂದಿನ ದಿನಗಳಲ್ಲಿ ಜಪಾನ್ ಸೂಪರ್‌ಪವರ್ ಆಗಿ ಬೆಳೆದು ಅಮೆರಿಕದ ಕೈಗಾರಿಕೆಗಳು ಕುಗ್ಗಲಿವೆ ಎಂಬುದಾಗಿ ಅಮೆರಿಕನ್ ಪತ್ರಿಕೆಗಳೆಲ್ಲಾ ಬರೆಯುತ್ತಿದ್ದವು.



ಇದನ್ನು ಕಂಡ ಅಮೆರಿಕವು 1985ರಲ್ಲಿ ಜಪಾನ್‌ನೊಂದಿಗೆ ಒಂದು ಒಪ್ಪಂದ ಮಾಡಿಕೊಂಡಿತು. ಈ ಒಪ್ಪಂದ ಜಪಾನ್ ಪಾಲಿಗೆ ಮಾರಕವಾಯಿತು. ಇದರ ಕಾರಣದಿಂದಾಗಿ ಜಪಾನಿನ ಕರೆನ್ಸಿಯ ಬೆಲೆ ಕುಸಿಯಿತು. ಅವುಗಳ ಉಪಕರಣಗಳ ಬೆಲೆ ಮಾರುಕಟ್ಟೆಯಲ್ಲಿ ಏರುವಂತಾಯಿತು. ಈ ಬೆಳವಣಿಗೆ ಜಪಾನಿನ ಅಭಿವೃದ್ಧಿಯ ಬಲೂನಿಗೆ ಸೂಜಿಯಿಂದ ಚುಚ್ಚಿದಂತಾಯಿತು. ಅಲ್ಲಿಂದ ಬಳಿಕ ಜಪಾನಿನ ಆರ್ಥಿಕ ಪ್ರಗತಿ ಸ್ಥಗಿತಗೊಂಡಿತು. ಕೆಲವು ದಶಕಗಳ ಕಾಲ ಜಪಾನ್ ಇದೇ ರೀತಿಯ ಆರ್ಥಿಕ ಸ್ಥಾಗಿತ್ಯವನ್ನು ಅನುಭವಿಸಿತು.

ಜಪಾನಿನ ಪ್ರಗತಿಯನ್ನು ಯಾವುದೇ ಯುದ್ಧ ಅಥವಾ ನಿರ್ಬಂಧಗಳು ತಡೆದುದಲ್ಲ. ಸ್ನೇಹಯುತ ರಾಜತಾಂತ್ರಿಕತೆ ಮತ್ತು ಆರ್ಥಿಕ ಕುಟಿಲತೆಯ ಮೂಲಕ ಅಮೆರಿಕ ಇದನ್ನು ಸಾಧಿಸಿತು.

ಅಮೆರಿಕ -ಭಾರತ ಸಂಬಂಧ ಸರಳವಲ್ಲ

ಅಮೆರಿಕದೊಂದಿಗಿನ ಭಾರತದ ಸಂಬಂಧವು ಎಂದಿಗೂ ಸರಳವಾಗಿರಲಿಲ್ಲ. ಅದು ಸಂಕೀರ್ಣವಾಗಿದೆ. ಹಲವಾರು ಏಳುಬೀಳುಗಳನ್ನು ಕಾಣುತ್ತಲೇ ಬಂದಿದೆ. ಅಮೆರಿಕವು ತನ್ನ ಹಿತಾಸಕ್ತಿಗೆ ಅನುಗುಣವಾಗಿ ಯಾವುದೇ ದೇಶದೊಂದಿಗಿನ ಸಂಬಂಧವನ್ನು ತನಗೆ ಬೇಕಾದಂತೆ ಬದಲಿಸುತ್ತದೆ. ''ಅಮೆರಿಕದ ಜತೆ ಕೈಜೋಡಿಸಿ ಸಾಗುವುದೆಂದರೆ ಗ್ಲಾಸ್ ಚೂರುಗಳ ಮೇಲೆ ನಡೆದಂತೆ. ಯಾವಾಗ ಗಾಜಿನ ಚೂರೊಂದು ಚುಚ್ಚುವುದೆಂದು ಹೇಳಲಾಗದು'' ಎಂಬುದಾಗಿ ಖ್ಯಾತ ಲೇಖಕರೊಬ್ಬರು ಬಣ್ಣಿಸುತ್ತಾರೆ.

ಅಮೆರಿಕವು ಭಾರತವನ್ನು ಚೀನಾದ ಪಟ್ಟಕದ ಮೂಲಕವೇ ನೋಡುತ್ತದೆ. ಚೀನಾಕ್ಕೆ ಪ್ರತಿಶಕ್ತಿಯಾಗಿ ಭಾರತವು ಬೆಳೆಯಬೇಕು ಎಂಬುದು ಅಮೆರಿಕದ ಇಂಗಿತ. ಆದರೆ ಭಾರತವು ಅಮೆರಿಕಕ್ಕಿಂತ ಬಲಿಷ್ಠವಾಗಿ ಬೆಳೆಯುವುದನ್ನು ಅದು ಸಹಿಸದು. ಕ್ರಿಸ್ಟೋಫರ್ ಹೇಳಿದಂತೆ ಬಲಿಷ್ಠ ಭಾರತವು ಅಮೆರಿಕಕ್ಕೆ ಒಂದು ಸಮಸ್ಯೆಯನ್ನು ಪರಿಹರಿಸಬಲ್ಲುದಾದರೂ ಮತ್ತೊಂದು ಸಮಸ್ಯೆಯನ್ನು ಸೃಷ್ಟಿಸಬಲ್ಲುದು.

ಭಾರತದ ಅಭಿವೃದ್ಧಿಯು ಪಾಶ್ಚಾತ್ಯ ರಣತಂತ್ರ ವ್ಯವಸ್ಥೆಯಲ್ಲಿ ಕೆಲಮಟ್ಟಿನ ಅಸಹನೆಯನ್ನು ಸೃಷ್ಟಿಸಿದೆ. ''ಯಾವಾಗಲೂ ಬಂದೂಕು ಹಿಡಿದವನೇ ನಮ್ಮ ವೈರಿಯಾಗಿರುವುದಿಲ್ಲ. ಕೆಲವೊಮ್ಮೆ ನಗು ಚೆಲ್ಲುತ್ತಾ ಕೊಡುಗೆಯನ್ನು ಕೈಯಲ್ಲಿ ಹಿಡಿದವನು ನಮ್ಮ ವೈರಿಯಾಗಿರುವ ಸಾಧ್ಯತೆಗಳಿವೆ'' ಎಂದು ಮಾಜಿ ಗುಪ್ತಚರ ಮುಖ್ಯಸ್ಥ ವಿಕ್ರಮ್ ಸೂದ್ ಹೇಳುತ್ತಾರೆ. ಅದು ಅಮೆರಿಕಕ್ಕೆ ಅನ್ವಯಿಸುತ್ತದೆ. ಸೂದ್ ಹೇಳುತ್ತಾರೆ ''ಭಾರತದ ಆತ್ಮನಿರ್ಭರ ರಾಷ್ಟ್ರೀಯತೆಯೆಂಬುದು ಪಾಶ್ಚಿಮಾತ್ಯ ಅಧಿಕಾರದ ಕಾರಿಡಾರ್‌ನಲ್ಲಿ ಸಹ್ಯವೆನಿಸದ ವಿಷಯವಾಗಿದೆ. ಆರ್ಥಿಕ ಶಕ್ತಿ, ಮಿಲಿಟರಿ ಶಕ್ತಿ ಮತ್ತು ಪರಮಾಣು ಶಕ್ತಿ ಹೊಂದಿರುವ ಎರಡು ಸ್ವಾವಲಂಬಿಯಾದ ಹಾಗೂ ಸ್ವತಂತ್ರವಾದ ರಾಷ್ಟ್ರಗಳು ಏಷ್ಯಾದಲ್ಲಿ ಬೆಳೆಯುವುದು ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಭೀತಿ ಸೃಷ್ಟಿಸುತ್ತದೆ. ಪಾಶ್ಚಿಮಾತ್ಯ ಕಾರ್ಪೋರೇಟ್ ಜಗತ್ತಂತೂ ಆ ಬೆಳವಣಿಗೆಯನ್ನು ಆತಂಕದಿಂದಲೇ ನೋಡುತ್ತದೆ''

ಹಿಂದೊಮ್ಮೆ ಚೀನಾ ಬೆಳೆಯಲು ಅವಕಾಶ ಮಾಡಿಕೊಟ್ಟು ಈಗ ಅದರಿಂದಲೇ ಬೆದರಿಕೆಗೊಳಗಾಗಿರುವ ಅಮೆರಿಕವು ಭಾರತವನ್ನು ಅದೇ ತಕ್ಕಡಿಯಲ್ಲಿ ತೂಗಲಾರದಾದರೂ ಸದ್ಯಕ್ಕೆ ಭಾರತ-ಪಾಕಿಸ್ತಾನ ಸಂಬಂಧದ ಕುರಿತಂತೆ ತನ್ನ ದ್ವಂದ್ವ ನೀತಿ ಮುಂದುವರಿಸುವುದು ಖಂಡಿತ. ಭಾರತವು ಸದಾ ಪಾಕಿಸ್ತಾನದೆಡೆಗೆ ಅನುಮಾನದಿಂದ ನೋಡುವಂತೆ ಮಾಡಲು ಪಾಕಿಸ್ತಾನಕ್ಕೆ ಕುಮ್ಮಕ್ಕು ನೀಡಬಹುದು. ಇದೇ ವೇಳೆ ಭಾರತವು ತನ್ನ ಮಾರುಕಟ್ಟೆಯನ್ನು ಅಮೆರಿಕನ್ ಉತ್ಪನ್ನಗಳಿಗೆ ಮುಕ್ತಗೊಳಿಸುವಂತೆ ಒತ್ತಡ ಹೇರಬಹುದು ಎಂದು ಅವರು ನುಡಿಯುತ್ತಾರೆ.

ಆದರೆ ಸಂಪೂರ್ಣವಾಗಿ ಭಾರತದ ವಿರೋಧ ಕಟ್ಟಿಕೊಳ್ಳುವುದನ್ನು ಅಮೆರಿಕ ಬಯಸಲಾರದು ಎಂದೂ ಹೇಳಲಾಗುತ್ತದೆ. ಅಧಿಕಾರಕೇಂದ್ರವು ಪೂರ್ವದೆಡೆಗೆ ವಾಲುತ್ತಿರುವಾಗ ಭಾರತವನ್ನು ಸಂಪೂರ್ಣ ಕಡೆಗಣಿಸುವ ತಪ್ಪನ್ನು ಅಮೆರಿಕ ಮಾಡಲಾರದು. ಕಳೆದ 300 ವರ್ಷಗಳಲ್ಲಿ ಇದೇ ಮೊದಲ ಬಾರಿ ಯಾವುದೇ ಐರೋಪ್ಯ ದೇಶವು ಜಗತ್ತಿನ ಅತೀ ದೊಡ್ಡ ಮೂರು ಆರ್ಥಿಕ ಶಕ್ತಿಗಳಲ್ಲಿ ಇಲ್ಲವಾಗಿರುವುದನ್ನು ಗಮನಿಸಬೇಕು.

ಭಾರತದ ಮಹತ್ವ ಇರುವುದು ಅದರ ಆರ್ಥಿಕ ಸಾಮರ್ಥ್ಯದಲ್ಲಿ ಮಾತ್ರವಷ್ಟೇ ಅಲ್ಲ, ಅದು ಹೊಂದಿರುವ ವ್ಯೂಹಾತ್ಮಕ ಭೌಗೋಳಿಕ ಕ್ಷೇತ್ರದಲ್ಲಿಯೂ. ಇಂಡೋ ಪೆಸಿಫಿಕ್ ವಲಯದಲ್ಲಿ ಚೀನಾದ ಪ್ರಭಾವವನ್ನು ತಗ್ಗಿಸಬೇಕಾದರೆ ಅಮೆರಿಕಕ್ಕೆ ಭಾರತದ ಅಗತ್ಯವಿದೆ. ಈಗಿನ ಜಾಗತಿಕ ಚದುರಂಗದ ಹಾಸಿನಲ್ಲಿ ಭಾರತವು ಪಾಲುದಾರನೂ ಆಗಬಲ್ಲುದು, ಸಮರ್ಥ ವೈರಿಯೂ ಆಗಬಲ್ಲುದು.

ಸವಾಲಿರುವುದು ಭಾರತದಲ್ಲೆ

ಈಗ ಚೀನಾದ ಆರ್ಥಿಕತೆಯು ನಿಧಾನಗೊಂಡಿರುವುದರಿಂದ ತಾವು ಭಾರತವನ್ನು ನಿಭಾಯಿಸುವಲ್ಲಿ ಹೆಚ್ಚಿನ ನಿಯಂತ್ರಣ ಹೊಂದಿರುವುದಾಗಿ ಅಮೆರಿಕನ್ನರು ಭಾವಿಸಿದ್ದಾರೆ. ಚೀನಾದ ಕುಸಿಯುತ್ತಿರುವ ಆರ್ಥಿಕತೆಯ ಕಾರಣದಿಂದ ಅಮೆರಿಕಕ್ಕೆ ತನ್ನ ಪ್ರಾಬಲ್ಯ ಉಳಿಸಿಕೊಳ್ಳಲು ಸಾಧ್ಯವಾಗಲಿದೆ ಎಂದವರು ಭಾವಿಸುತ್ತಿದ್ದಾರೆ.

ಈ ನಿಟ್ಟಿನಲ್ಲಿ ಮುಂದಿನ ಎರಡು ದಶಕಗಳು ಅತ್ಯಂತ ಮಹತ್ವದ್ದಾಗಿವೆ. ಭಾರತದ ಭವಿಷ್ಯವನ್ನು ನಿರ್ಧರಿಸುವುದು ಅಮೆರಿಕ ಅಥವಾ ಚೀನಾಗಳಲ್ಲ. ಬದಲಾಗಿ ಭಾರತದಲ್ಲೇ ಇದು ನಿರ್ಧರಿಸಲ್ಪಡುವುದು. ಭಾರತವು ತನ್ನ ಆರ್ಥಿಕತೆ ಮತ್ತು ಶಿಕ್ಷಣದಲ್ಲಿ ಭಾರೀ ಸುಧಾರಣೆ ತರಬೇಕಾಗಿದೆ. ಇದು ನಾವು ಸೂಪರ್‌ಪವರ್ ಹಾದಿಯಲ್ಲಿ ಸಾಗುತ್ತೇವೆಯೇ ಅಥವಾ ಜಪಾನ್‌ನಂತೆ ಸ್ಥಗಿತಗೊಳ್ಳುತ್ತೇವೆಯೇ ಎಂಬುದನ್ನು ನಿರ್ಧರಿಸಲಿದೆ. ರಾಜಕೀಯದಲ್ಲಿ ಉಚಿತ ಕೊಡುಗೆಗಳ ಚಾಳಿ ಕೊನೆಗೊಳ್ಳಬೇಕು. ಅದೇರೀತಿ ಶಿಕ್ಷಣದಲ್ಲಿ ಮೆರಿಟ್‌ಗೆ ಹೆಚ್ಚು ಆದ್ಯತೆ ಸಿಗುವಂತಾಗಬೇಕು.

'ಅಮೆರಿಕವು ಭಾರತವನ್ನು ಚೀನಾದ ವಿರುದ್ಧವಾಗಿ ತನ್ನ ಪಾಲುದಾರನಾಗಿರಲು ಬಯಸುತ್ತದೆ. ಆದರೆ ಭಾರತವು ಮತ್ತೊಂದು ಚೀನಾವಾಗಿ ರೂಪುಗೊಳ್ಳುವುದನ್ನು ಬಯಸುವುದಿಲ್ಲ' ಎಂಬುದನ್ನು ಕ್ರಿಸ್ಟೋಫರ್ ಲಾಂಡ್ ಅವರ ಹೇಳಿಕೆಯು ಸ್ಪಷ್ಟಪಡಿಸಿದೆ.

ಭಾರತಕ್ಕೆ ಇಲ್ಲಿನ ಸಂದೇಶ ಸರಳವಾಗಿದೆ ಮತ್ತು ಸ್ಪಷ್ಟವಾಗಿದೆ. ಯಾವುದೇ ಸೂಪರ್‌ಪವರ್ ತನಗೆ ಪ್ರತಿಸ್ಪರ್ಧಿ ಬೆಳೆಯುವುದನ್ನು ಇಷ್ಟಪಡುವುದಿಲ್ಲ. ಭಾರತವು 21ನೇ ಶತಮಾನದ ನಿರ್ಣಾಯಕ ಶಕ್ತಿಯಾಗಿ ಬೆಳೆಯಬೇಕಾಗಿರುವುದು ಜಾಗತಿಕ ಸಹಕಾರಕ್ಕಿಂತಲೂ ಹೆಚ್ಚಾಗಿ ತನ್ನದೇ ಸ್ವಸಾಮರ್ಥ್ಯದಿಂದ!

ವಿಜ್ಞಾನ ಮತ್ತು ಧಾರ್ಮಿಕತೆಯ ಸಂಯೋಗ...

▸ ಜಿ. ನಂದಕುಮಾರ್

ಕೃತಕ ಬುದ್ಧಿಮತ್ತೆಯನ್ನು ಭವಿಷ್ಯದ ತಂತ್ರಜ್ಞಾನ ಎಂದು ಈಗ ಪರಿಗಣಿಸಲಾಗುತ್ತದೆ. ಆದರೆ ಚಾಟ್ ಜಿಪಿಟಿಯಂತಹ ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ ಇತ್ತೀಚೆಗೆ ಉಂಟಾಗಿರುವ ಕೆಲವು ಅನೂಹ್ಯ ಬೆಳವಣಿಗೆಗಳು ವೈಜ್ಞಾನಿಕ ಸಮುದಾಯ ಮತ್ತು ನಾಗರಿಕ ಸಮಾಜವನ್ನು ಅಲ್ಲಾಡಿಸಿದೆ. ಕೃತಕ ಬುದ್ಧಿಮತ್ತೆಯನ್ನು ಅನೈತಿಕ ಉದ್ದೇಶಗಳಿಗಾಗಿ ಬಳಸಬಹುದೇ, ಅದು ಮಾನವ ಬುದ್ಧಿಮತ್ತೆಗೇ ಅಂತ್ಯ ಹಾಡಬಹುದೇ ಎಂಬ ಪ್ರಶ್ನೆಗಳು ಉದಿಸಲಾರಂಭಿಸಿವೆ. ಈ ಪ್ರಶ್ನೆಗಳೆಲ್ಲ ನಮ್ಮ ವಿಜ್ಞಾನ ಸಮುದಾಯದ ಪರಿಗಣನೆಗೆ ಬರಬೇಕಾದ ವಿಷಯಗಳು ಹಾಗೂ ಅವರು ಇದಕ್ಕೆ ಸ್ಪಷ್ಟ ಉತ್ತರ ಕಂಡುಕೊಳ್ಳಬೇಕಾಗಿದೆ. ಇವೆಲ್ಲದರ ಹೊರತಾಗಿಯೂ ನನ್ನಂತಹ ಸಾಮಾನ್ಯ ಜನರು, ಮುಂದೊಂದು ದಿನ ಕೃತಕ ಬುದ್ಧಿಮತ್ತೆಯು ಮಾನವ ಬುದ್ಧಿಮತ್ತೆಯನ್ನು ಮೀರಿ ಬೆಳೆಯಬಹುದೆಂಬ ಆತಂಕಕ್ಕೆ ಒಳಗಾಗಿರುವುದು ಸುಳ್ಳಲ್ಲ.

ಈವರೆಗೆ ಕೃತಕ ಬುದ್ಧಿಮತ್ತೆಯು ಮನುಷ್ಯನ ಬುದ್ಧಿವಂತಿಕೆಯ ಇನ್ನೊಂದು ಸ್ತರದ ಅಭಿವೃದ್ಧಿಯೆಂದು ಭಾವಿಸಲಾಗಿತ್ತು. ವಿಜ್ಞಾನ, ತಂತ್ರಜ್ಞಾನ ಮತ್ತು ಕೃತಕ ಬುದ್ಧಿಮತ್ತೆಯನ್ನು ಬಳಸಿಕೊಂಡು ಮನುಕುಲವು ಈಗ ತನ್ನ ಜೈವಿಕ ಮಿತಿಯನ್ನು ಮೀರಿ ಜೀವನಿಯಮವನ್ನೇ ಬದಲಿಸಲು ಹಾಗೂ ಆ ಮೂಲಕ 'ಕೃತಕ ಜೀವಿ'ಗಳನ್ನು ಸೃಷ್ಟಿಸಲು ಯತ್ನಿಸುತ್ತಿದೆ. ಮಾನವ ಬುದ್ಧಿಮತ್ತೆಯು ನಶಿಸಿಹೋದ ಭವಿಷ್ಯದ ಜಗತ್ತೊಂದನ್ನು ಕಲ್ಪಿಸಿಕೊಳ್ಳುವುದೆಂದರೆ ಅದು ಒಂದು ರೀತಿಯಲ್ಲಿ ಮನುಕುಲದ ವಿನಾಶದಂತೆಯೂ ಕಂಡುಬರುತ್ತದೆ. ಕೃತಕ ಬುದ್ಧಿಮತ್ತೆಯು ಅಧಿಕ ಶಕ್ತಿಯ ಯಂತ್ರಮಾನವರನ್ನು ಅಥವಾ ಡೇಟಾ ಪ್ರೊಸೆಸರ್‌ಗಳನ್ನು ಸೃಷ್ಟಿಸಿ ಮನುಷ್ಯರನ್ನೇ ಮೀರಿ ಸಾಗಬಹುದು.

ಈ ಯುಗದಲ್ಲೇ ನಾವು ತಂತ್ರಜ್ಞಾನವು ನಮ್ಮನ್ನು ಶೋಷಿಸಲು ಅವಕಾಶ ಮಾಡಿಕೊಟ್ಟಿದ್ದೇವೆ. ನಮ್ಮ ಆರೋಗ್ಯ, ಸಂಪತ್ತು ಮತ್ತು ದೈನಂದಿನ ವ್ಯವಹಾರದ ಕುರಿತಂತೆ ಈ ಮೊದಲು ವೈದ್ಯರು, ಆರ್ಥಿಕ ತಜ್ಞರು, ಸೇವಾ ಕ್ಷೇತ್ರದವರು ನಿರ್ಧಾರ ತೆಗೆದುಕೊಳ್ಳುತ್ತಿದ್ದರೆ ಈಗ ಅವೆಲ್ಲವನ್ನು ಆ್ಯಲ್ಗರಿದಮ್‌ಗಳು ನಿರ್ಧರಿಸುತ್ತವೆ. ಕೃತಕ ಬುದ್ಧಿಮತ್ತೆ ಆಧರಿತ ಆಲ್ಗರಿದಮ್‌ಗಳು ಮನುಷ್ಯನ ಪ್ರಗತಿಗೆ ಬಹಳಷ್ಟು ಕೊಡುಗೆ ನೀಡುತ್ತವಾದರೂ ಅವುಗಳ ವರ್ತನೆಯ ಅಶ್ಚಿತತೆಯು ಬೆದರಿಕೆಯನ್ನೂ ಒಡ್ಡಿರುವುದು ಸುಳ್ಳಲ್ಲ. ಡಾ. ಫ್ರಾಂಕ್‌ಸ್ಟೈನ್‌ನ ಕಲ್ಪನೆಯು ಈಗ ಕೇವಲ ಫ್ಯಾಂಟಸಿಯಾಗಿ ಉಳಿದಿಲ್ಲ. 'ಡೇಟಾಯಿಸಂ' ಅಥವಾ 'ಡೇಟಾ ರಿಲಿಜನ್' ರೂಪು ಪಡೆಯುವುದರೊಂದಿಗೆ ಇದು ಅಪಾಯದ ಹಾದಿ ತುಳಿದಿದೆ.

ಡೇಟಾ ರಿಲಿಜನ್ ಜೀವಿಗಳನ್ನು ಕೂಡಾ ಬಯೋಕೆಮಿಕಲ್ ಆಲ್ಗರಿದಮ್‌ನಂತೆಯೆ ಪರಿಗಣಿಸುತ್ತದೆ. ತಜ್ಞನೊಬ್ಬ ಹೇಳುವ ಪ್ರಕಾರ 'ಡೇಟಾಯಿಸಂ ಪ್ರಾಣಿಗಳು ಮತ್ತು ಯಂತ್ರಗಳ ನಡುವಿನ ಭೇದವನ್ನು ಅಳಿಸಿಹಾಕುತ್ತದೆ. ಅಂತಿಮವಾಗಿ ಅದು ಬಯೋಕೆಮಿಕಲ್ ಆಲ್ಗರಿದಮ್‌ಗಿಂತ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಬೇಕೆಂದು ನಿರೀಕ್ಷಿಸುತ್ತದೆ'' ಡೇಟಾಯಿಸಂ ಎಂಬುದು ಮಾನವ ಜನಾಂಗದ ಅಸ್ತಿತ್ವವನ್ನೆ ನಾಶಗೊಳಿಸುವ ಬೆದರಿಕೆಯಂತೆ ಕಂಡುಬರುತ್ತದೆ. ಮಾನವ ಬುದ್ಧಿಮತ್ತೆಯ ಜಾಗದಲ್ಲಿ ಕೃತಕ ಬುದ್ಧಿಮತ್ತೆಯನ್ನು ನೆಲೆಗೊಳಿಸಬೇಕೆಂದು ಬಯಸುತ್ತದೆ. ಮಾನವಕೇಂದ್ರಿತ ಜಗತ್ತು ಡೇಟಾ ಕೇಂದ್ರಿತ ಜಗತ್ತಾಗಿ ಪರಿವರ್ತನೆಗೊಂಡಾಗ ಎಲ್ಲ ಡೇಟಾಗಳ ಸಂಸ್ಕರಣೆ ಮತ್ತು ನಿರ್ಧಾರ ತಾಳುವ ಪ್ರಕ್ರಿಯೆನ್ನು ಒಂದು ಕೇಂದ್ರೀಯ ಪ್ರೊಸೆಸರ್ ನಡೆಸುತ್ತದೆ. ಇಂತಹ ನರಕಸ್ವರೂಪಿ ವ್ಯವಸ್ಥೆಯು ಒಂದು ರೀತಿಯಲ್ಲಿ ಕಮ್ಯುನಿಸ್ಟ್ ವ್ಯವಸ್ಥೆಯೇ ಆಗಿದೆ ಎಂದು ತಜ್ಞರು ಹೇಳುತ್ತಾರೆ.

ಇಂತಹ ಸ್ವ-ವಿನಾಶಿ ಪರಿಸ್ಥಿತಿಯಿಂದ ಹೇಗೆ ಪಾರಾಗುವುದು ಎಂಬುದನ್ನು ಚಿಂತಿಸುವುದು ತಂತ್ರಜ್ಞರು ಮತ್ತು ವಿಜ್ಞಾನಿಗಳ ಕಾರ್ಯವಾದರೂ ಇಂತಹುದೊಂದು ವಕ್ರಹಾದಿ ತುಳಿಯಲು ಕಾರಣವೇನು ಎಂಬುದನ್ನು ತಿಳಿಯುವುದು ನಮ್ಮ ಕರ್ತವ್ಯವಾಗಿದೆ.

ನಿಜವಾದ ಸಮಸ್ಯೆಯಿರುವುದು ಮನುಷ್ಯನ ಜ್ಞಾನವನ್ನು ವಿಭಾಗೀಕರಣಗೊಳಿಸಿರುವುದರಲ್ಲಿ ಹಾಗೂ ಮಾನವನ ಧಾರ್ಮಿಕ ಆಯಾಮವನ್ನು ಕಡೆಗಣಿಸಿ ಆತನನ್ನು ಕೇವಲ ಬಯೋಕೆಮಿಕಲ್ ವಸ್ತು ಎಂಬಂತೆ ಪರಿಗಣಿಸಿರುವಲ್ಲಿ. ಕೃತಕ ಬುದ್ಧಿಮತ್ತೆಯು ಮನುಷ್ಯನ ಬುದ್ಧಿಮತ್ತೆಗೆ ಸವಾಲೊಡ್ಡುವಂತೆ ಬೆಳೆದರೆ, ಅದಕ್ಕೆ ಹಿಂದೂ ಚಿಂತನೆಯ ಪ್ರಕಾರ ಪರಿಹಾರ ಮಾರ್ಗವೆಂದರೆ ಉನ್ನತ ಮಾನಸಿಕ ಪ್ರಜ್ಞೆಯನ್ನು ಬೆಳೆಸಿಕೊಳ್ಳುವುದು. ಈ ನಿಟ್ಟಿನಲ್ಲಿ ಪುರಾತನ ಹಿಂದು ಜ್ಞಾನ ಮತ್ತು ಆಧುನಿಕ ವಿಜ್ಞಾನವನ್ನು ಮೇಳೈಸಿದ ಶ್ರೀ ಅರವಿಂದರ ಚಿಂತನೆ ನೆರವಿಗೆ ಬರಬಲ್ಲುದು. ಇದು ಒಂದು ರೀತಿಯಲ್ಲಿ ವಿಕಾಸವಾದಿ ಧಾರ್ಮಿಕತೆ ಎಂದು ಹೇಳಬಹುದು.

ಅರವಿಂದರು ಪ್ರಜ್ಞಾವಂತಿಕೆಯನ್ನು ಕೇವಲ ಬುದ್ಧಿವಂತಿಕೆಗೆ ಸೀಮಿತಗೊಳಿಸುವುದಿಲ್ಲ. ಮನಸ್ಸೆಂಬುದು ಪ್ರಜ್ಞೆಯೆಂದು ಕರೆಯಲ್ಪಡುವ ಬಹುಸ್ತರದ ವಾಸ್ತವತೆಯ ಒಂದು ಸ್ತರ ಮಾತ್ರ ಎನ್ನುತ್ತಾರವರು. ''ಪ್ರಸಕ್ತ ಮನುಕುಲವು ವಿಕಾಸವಾದಿ ಬಿಕ್ಕಟ್ಟು ಎದುರಿಸುತ್ತಿದೆ. ಮಾನವನು ಎಂತಹ ನಾಗರಿಕತೆ ವ್ಯವಸ್ಥೆಯನ್ನು ಸ್ಥಾಪಿಸಿದ್ದಾನೆಂದರೆ ಅದು ಆತನ ಸೀಮಿತ ಮಾನಸಿಕ ಸಾಮರ್ಥ್ಯಕ್ಕೆ ಮತ್ತು ಅರಿವಿಗೆ ಎಟುಕದ್ದಾಗಿದೆ. ಆತನ ಧಾರ್ಮಿಕ ಮತ್ತು ನೈತಿಕ ತಿಳಿವಿಗೂ ಸಿಲುಕದ್ದಾಗಿದೆ'' ಎನ್ನುತ್ತಾರವರು.

ಕೃತಕ ಬುದ್ಧಿಮತ್ತೆ ಮನುಷ್ಯನ ಮೇಲೆಯೆ ನಿಯಂತ್ರಣ ಸಾಧಿಸುವುದನ್ನು ತಡೆಯಲು ಇರುವ ಸಾಧನೀಯ ದಾರಿಯೆಂದರೆ ನಮ್ಮ ಮಾನವ ಬುದ್ಧಿಶಕ್ತಿಯನ್ನೆ ಇನ್ನೊಂದು ಸ್ತರ ಮೇಲಕ್ಕೆ ಕೊಂಡೊಯ್ಯುವುದು ಹಾಗೂ ಸುಪರ್‌ಮೈಂಡ್‌ನ ಅಪರಿಮಿತ ಶಕ್ತಿಯ ಸಾಧ್ಯತೆಗಳನ್ನು ಪರಿಶೀಲಿಸುವುದು. ಇದರ ಸರಳ ಅರ್ಥವೆಂದರೆ ನಮ್ಮ ಮನಸ್ಸನ್ನು ಮತ್ತು ಬುದ್ಧಿಮತ್ತೆಯನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯುವುದು ಹಾಗೂ ಅದನ್ನು ಯಂತ್ರದ ಬುದ್ಧಿಮತ್ತೆಗಿಂತ ಹೆಚ್ಚು ಶಕ್ತಿಶಾಲಿ ಮತ್ತು ವಿಶಾಲವನ್ನಾಗಿಸುವುದು.

ಅರವಿಂದರು ಹೇಳುವ ಪ್ರಕಾರ ಸುಪರ್‌ಮೈಂಡ್ ಎನ್ನುವುದು ಎಲ್ಲದರ ಬಗ್ಗೆಯೂ ಸಂಪೂರ್ಣ ಅರಿವಿರುವ ಪರಿಪೂರ್ಣ ಹಾಗೂ ಸಮಗ್ರ ಜ್ಞಾನ. ಮನುಷ್ಯ ತನ್ನ ಈಗಿನ ಸೀಮಿತ ಬುದ್ಧಿಮತ್ತೆಯಿಂದ ಈ ಹಂತಕ್ಕೆ ಮೇಲೇರಲು ಸಾಧ್ಯವಿದೆ. ಪ್ರಜ್ಞಾವಂತಿಕೆಯನ್ನು ಬೆಳೆಸುವ ಮೂಲಕ ಹಾಗೂ ಬದುಕಿನಲ್ಲಿ ಧಾರ್ಮಿಕ ಪ್ರಗತಿ ಸಾಧಿಸುವ ಮೂಲಕ ಮಾನವ ಬುದ್ಧಿವಂತಿಕೆಯ ಸದುಪಯೋಗ ಪಡೆದುಕೊಳ್ಳಬಹುದು. ಇದು ಕೃತಕ ಬುದ್ಧಿಮತ್ತೆಯು ಒಡ್ಡುವ ಸವಾಲುಗಳನ್ನು ಮತ್ತು ಅಪಾಯಗಳನ್ನು ಎದುರಿಸಲು ನಮಗೆ ನೆರವೀಯಬಲ್ಲುದು.

ವೈಮಾನಿಕ ಸೇವೆ ಆರಂಭಕ್ಕೆ ಪ್ರಸ್ತಾವನೆ ಸಲ್ಲಿಕೆ

ಬೆಂಗಳೂರು: ರಾಜಧಾನಿಯಿಂದ ಬೀದರ್ ಮತ್ತು ಕಲಬುರಗಿಗೆ ವೈಮಾನಿಕ ಸೇವೆ ಆರಂಭಿಸುವ ಬಗ್ಗೆ ವಿಮಾನಯಾನ ಸಂಸ್ಥೆಗಳು ಮಾ.23ರೊಳಗೆ ತಮ್ಮ ಪ್ರಸ್ತಾವನೆ ಸಲ್ಲಿಸಬೇಕು. ಇದರ ಬಗ್ಗೆ ಮುಂದಿನ ಸಭೆಯಲ್ಲಿ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು ಎಂದು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ ಪಾಟೀಲ ಹೇಳಿದ್ದಾರೆ.

ಈ ಸಂಬಂಧ ವಿಧಾನಸೌಧದ ತಮ್ಮ ಕಚೇರಿಯಲ್ಲಿ ಸೋಮವಾರ ವಿವಿಧ ವಿಮಾನಯಾನ ಸಂಸ್ಥೆಗಳೊಂದಿಗೆ ಸಭೆ ನಡೆಸಿದ ಅವರು, ಕಲಬುರಗಿ ವಿಮಾನ ನಿಲ್ದಾಣದಿಂದ ಈಗ ವಿಮಾನಸೇವೆ ಸ್ತಬ್ಧವಾಗಿದೆ. ಬೀದರ್‌ನಲ್ಲಿ ಕೆ.ಕೆ.ಆರ್.ಡಿ.ಬಿ ನೆರವಿನಿಂದ ದಿನಕ್ಕೆ ಒಂದು ವಿಮಾನ ಮಾತ್ರ ಸಂಚರಿಸುತ್ತಿದೆ. ಕೇಂದ್ರ ಸರ್ಕಾರವು ಪ್ರಾದೇಶಿಕ ಮಟ್ಟದಲ್ಲಿ ವಿಮಾನಯಾನ ಉತ್ತೇಜಿಸಲು ಉಡಾನ್ ಯೋಜನೆ ಮೂಲಕ ಮೂರು ವರ್ಷ ನೆರವು ನೀಡಿತು. ಆ ಅವಧಿ ಮುಗಿದ ನಂತರ ಹೀಗಾಗುತ್ತಿದೆ. ಕಲಬುರಗಿಯಲ್ಲಿ 742 ಎಕರೆಯಲ್ಲಿ ವಿಮಾನ ನಿಲ್ದಾಣವಿದೆ. ಇಂದಿನ ಸಭೆಯಲ್ಲಿ ವೈಮಾನಿಕ ಸೇವೆ ಎಷ್ಟರ ಮಟ್ಟಿಗೆ ಕಾರ್ಯಸಾಧು, ವಿಮಾನ ನಿಲ್ದಾಣಗಳ ಪ್ರಾಧಿಕಾರ ಎರಡೂ ಕಡೆ ಒದಗಿಸಿರುವ ಸೌಲಭ್ಯಗಳು ಮುಂತಾದವನ್ನು ಚರ್ಚಿಸಲಾಯಿತು ಎಂದಿದ್ದಾರೆ.

ಕಲಬುರಗಿಯಲ್ಲಿ ರಾತ್ರಿ ವೇಳೆ ವಿಮಾನ ನಿಲ್ಲಿಸುವ ಸೌಲಭ್ಯ ಸೇರಿದಂತೆ ಎಲ್ಲ ಬಗೆಯ ವಿಮಾನಗಳು ಬಂದಿಳಿಯಲು



ಅನುಕೂಲವಿದೆ. ಅಲ್ಲಿಂದ ಬೆಂಗಳೂರು ಮತ್ತು ಉಳಿದ ಅನೇಕ ರಾಜ್ಯಗಳಿಗೆ ದಿನನಿತ್ಯದ ವಿಮಾನಸೇವೆ ಆರಂಭಿಸಬಹುದು ಎಂದು ವಿಮಾನ ಸಂಸ್ಥೆಗಳು ಹೇಳಿವೆ. ಮತ್ತೊಂದು ವಿಮಾನ ಸಂಸ್ಥೆಯು ನಿತ್ಯವೂ ಬೆಂಗಳೂರಿನಿಂದ ಬೆಳಗ್ಗೆ ಹೊತ್ತು ಬೀದರ್‌ಗೆ ಮತ್ತು ಸಂಜೆ ಕಲಬುರ್ಗಿಗೆ ವಿಮಾನಸೇವೆ ಆರಂಭಿಸಲು ಯೋಚಿಸುತ್ತಿರುವುದಾಗಿ ಹೇಳಿದೆ. ಜತೆಗೆ ಬೆಂಗಳೂರು-ಕಲಬುರಗಿ -ಹೈದರಾಬಾದ್-ಬೆಂಗಳೂರು ಮಾರ್ಗವಾಗಿ ಸೇವೆ ಆರಂಭಿಸುವ ಸಾಧ್ಯತೆಯನ್ನೂ ಪರಿಶೀಲಿಸಲಾಗುತ್ತಿದೆ ಎಂದು ವಿವರಿಸಿದ್ದಾರೆ.

ಈ ವೇಳೆ ತೊಗರಿ ಕಣಜ ಕಲಬುರಗಿ ಮತ್ತು ಬೀದರ್‌ಗೆ ವಿಮಾನ ಸೇವೆ ಆರಂಭಿಸಬೇಕು ಎಂದು ಸಚಿವರಾದ ಪ್ರಿಯಾಂಕ್ ಖರ್ಗೆ ಹಾಗೂ ಡಾ.ಶರಣಪ್ರಕಾಶ ಆರ್. ಪಾಟೀಲ್ ಆಗ್ರಹಿಸಿದ್ದಾರೆ.

ಉಪ ಚುನಾವಣೆಗೆ ಏ.9ಕ್ಕೆ ಮತದಾನ

ಬಾಗಲಕೋಟೆ: ಭಾರತ ಚುನಾವಣಾ ಆಯೋಗವು ಬಾಗಲಕೋಟೆ ವಿಧಾನಸಭಾ ಮತಕ್ಷೇತ್ರದ ಉಪಚುನಾವಣೆಗೆ ಅಧಿಸೂಚನೆ ಹೊರಡಿಸಿದ್ದು, ಉಪ ಚುನಾವಣೆಗೆ ಏ.9ರಂದು ಮತದಾನ ನಡೆಯಲಿದೆ. ಬಾಗಲಕೋಟೆ ಮತಕ್ಷೇತ್ರದ ಉಪಚುನಾವಣೆಯನ್ನು ಪಾರದರ್ಶಕತೆಯಿಂದ ನಡೆಸಲು ಜಿಲ್ಲಾಡಳಿತ ವ್ಯವಸ್ಥೆ ಮಾಡಿಕೊಂಡಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಜಿಲ್ಲಾಧಿಕಾರಿ ಸಂಗಪ್ಪ ಹೇಳಿದರು.

ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಸೋಮವಾರ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಉಪ ಚುನಾವಣೆಗೆ ಮಾ.16ರಂದು ಅಧಿಸೂಚನೆ ಹೊರಡಿಸಲಾಗಿದ್ದು, ನಾಮಪತ್ರ ಸಲ್ಲಿಕೆಗೆ ಮಾ.23 ಕೊನೆಯ ದಿನವಾಗಿದೆ. ಮಾ.24 ನಾಮಪತ್ರಗಳ ಪರಿಶೀಲನೆ ನಡೆಯಲಿದ್ದು, ನಾಮಪತ್ರ ಹಿಂಪಡೆಯಲು ಮಾ.26 ಕೊನೆಯ ದಿನವಾಗಿದೆ. ಏ. ರಂದು ಮತದಾನ ನಡೆಯಲಿದ್ದು, ಮತ ಏಣಿಕೆ ಮೇ 4ರಂದು ನಡೆಯಲಿದೆ.

ಎಲ್‌ಪಿಜಿ ಗ್ರಾಹಕರಿಗೆ ಇ- ಕೆವೈಸಿ ಕಡ್ಡಾಯ

ಪುಟ ೧➡ ತೈಲ ಮಾರ್ಕೆಟಿಂಗ್ ಕಂಪನಿಯ ಮೊಬೈಲ್ ಅಪ್ಲಿಕೇಶನ್ ಮತ್ತು ಆಧಾರ ಫೇಸ್‌ಆರ್‌ಡಿ ಅಪ್ಲಿಕೇಶನ್ ಅನ್ನು ಬಳಸಿಕೊಂಡು ಜನರು ತಮ್ಮ ಮನೆಗಳಿಂದಲೇ ಆರಾಮವಾಗಿ ಪರಿಶೀಲಿಸಬಹುದು ಎಂದು ಅದು ಹೇಳಿದೆ. ಗ್ರಾಹಕರು ಹೆಚ್ಚಿನ ಮಾಹಿತಿಗಾಗಿ ಅಧಿಕೃತ ಜಾಲತಾಣಕ್ಕೆ ಭೇಟಿ ನೀಡಬಹುದು ಅಥವಾ ತಮ್ಮ ಎಲ್‌ಪಿಜಿ ವಿತರಕರನ್ನು ಸಂಪರ್ಕಿಸಬಹುದು. ಪಶ್ಚಿಮ ಏಷ್ಯಾ ಸಂಘರ್ಷದಿಂದಾಗಿ ಭಾರತವು ಎಲ್‌ಪಿಜಿ ಕೊರತೆ ಎದುರಿಸುತ್ತಿದೆ.

ಕೆ.ಎಚ್. ಪಾಟೀಲ್ ಅಪರೂಪದ ರಾಜಕಾರಣಿ



ಬೆಂಗಳೂರು: ಸಹಕಾರಿ ಧುರೀಣ ಕೆ.ಎಚ್. ಪಾಟೀಲರು ಅಪರೂಪದ ರಾಜಕಾರಣಿ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು.

ಸಹಕಾರಿರಂಗದಭೀಷ್ಮನಾಡುಮೆಚ್ಚಿದನಾಯಕಕೆ.ಎಚ್; ಪಾಟೀಲ್ ರ 101 ನೇ ಜಯಂತ್ಯುತ್ಸವ ಸಮಾ ರಂಭದಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಸಹಕಾರಿ ಕ್ಷೇತ್ರದಲ್ಲಿ ಮಾಡದಿರುವ ಕೆಲಸವಿಲ್ಲ ಸಾಮಾನ್ಯ ಗ್ರಾಮದಲ್ಲಿ ಹುಟ್ಟಿ ಪಂಚಾಯತಿ ಸದಸ್ಯರಾಗಿ, ಕಾಂಗ್ರೆಸ್ ಅಧ್ಯಕ್ಷರಾಗಿ, ಸಚಿವರಾಗಿ ಕಾರ್ಯ ನಿರ್ವಹಿಸಿದ್ದ ಕೆ. ಎಚ್. ಪಾಟೀಲ್ ಅವರು ಸಹಕಾರಿ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದರೆಂದರು.

ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಬಡವರು, ದಲಿತರು, ಅಲ್ಪಸಂಖ್ಯಾತರಲ್ಲಿ ಶಕ್ತಿ ತುಂಬುವ ಕೆಲಸ ಮಾಡಿದ್ದನ್ನು ಸ್ಮರಿಸಬೇಕು ಎಂದರು. ಕೆ ಎಚ್ ಪಾಟೀಲ್ ರ ಪುತ್ರ, ಸಚಿವರಾದ ಎಚ್.ಕೆ.ಪಾಟೀಲರು ಅವರ ತಂದೆಯವರು ನಡೆದ ದಾರಿಯಲ್ಲಿ ನಡೆಯುತ್ತಿದ್ದು, ಅವರಿಗಿಂತಲೂ ಹೆಚ್ಚು ಬೆಳೆಯಲಿ ಎಂದರು. ಮಾಜಿ ಸಿಎಂ ವೀರಪ್ಪ ಮೊಯ್ಲಿ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ , ಡಿಸಿಎಂ ಡಿ.ಕೆ. ಶಿವಕುಮಾರ್, ವಿಧಾನಸಭಾ ಉಪಾಧ್ಯಕ್ಷ ರುದ್ರಪ್ಪ ಲಮಾಣಿ, ಸಚಿವರಾದ ಕೆ. ಎಚ್.ಮುನಿಯಪ್ಪ, ಎಚ್.ಕೆ.ಪಾಟೀಲ್, ರಾಮಲಿಂಗಾರೆಡ್ಡಿ, ಶಾಸಕರಿದ್ದರು.

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ಹಿಂದೆ ನಮ್ಮ ಬಟ್ಟೆಯನ್ನು ನಾವೇ ಒಗೆಯಬೇಕಿತ್ತು, ನಮ್ಮ ತಟ್ಟೆಯನ್ನು ನಾವೇ ತೊಳೆಯಬೇಕಿತ್ತು, ಅಡಿಕೆಯನ್ನೂ ನಾವೇ ಹೆಕ್ಕಬೇಕಿತ್ತು, ದನಗಳನ್ನು ನಾವೇ ಮೇಯಿಸಬೇಕಿತ್ತು - ಡಾ/ ವೀರೇಂದ್ರ ಹೆಗ್ಗಡೆ
- ಇಂದು ನಾವು ಅದೆಲ್ಲವನ್ನೂ ಇನ್ನೊಬ್ಬರಿಂದ ಹಣ ಕೊಟ್ಟು ಮಾಡಿಸುವಷ್ಟು ಮುಂದುವರಿದಿದ್ದೇವೆ, ಆದರೆ ಅದಕ್ಕಾಗಿ ಮಾಡಿದ ಬ್ಯಾಂಕ್ ಸಾಲವನ್ನು ನಾವೇ ದುಡಿದು ನಾವೇ ಕಟ್ಟುತ್ತೇವೆ!

ದಿನ ಭವಿಷ್ಯ

ಮೇಷ
ಪ್ರಗತಿಪರ ದಿನ. ಉದ್ದೇಶಿಸಿದ ಕಾರ್ಯ ಪೂರ್ಣ. ಪ್ರೀತಿಯ ವಿಷಯದಲ್ಲಿ ಸಫಲತೆ. ವೃತ್ತಿಯಲ್ಲಿ ಉನ್ನತಿ, ಕೌಟುಂಬಿಕ ಸಾಮರಸ್ಯ.

ವೃಷಭ
ಕೆಲ ದಿನಗಳ ಪ್ರಕ್ಷುಬ್ಧತೆ ಕಳೆದು ಮನಸ್ಸು ಶಾಂತವಾಗಲಿದೆ. ಕಾರ್ಯ ಸಾಫಲ್ಯದಿಂದ ವಿಶ್ವಾಸ ವೃದ್ಧಿ. ಎಲ್ಲ ಸರಿಯಾಗಿ ನಿಭಾಯಿಸುವಿರಿ.

ಮಿಥುನ
ನೆಮ್ಮದಿ ಕಲಕುವ ಬೆಳವಣಿಗೆ. ನಿಮಗೆ ಧೈರ್ಯ ಕಡಿಮೆ, ಅದರಿಂದ ಗುರಿ ಸಾಧನೆ ಕಷ್ಟ. ಸ್ನೇಹಿತರಿಂದ ಹಣ ವಂಚನೆ ನಡೆದೀತು.

ಕಟಕ
ಕೆಲಸದಲ್ಲಿ ಹೆಚ್ಚು ಗಮನ ಕೇಂದ್ರೀಕರಿಸಿ. ಚಂಚಲಚಿತ್ತ ಒಳಿತಲ್ಲ. ಅನಿರೀಕ್ಷಿತ ಧನಲಾಭ. ದೇವರ ಪ್ರಾರ್ಥನೆಯಿಂದ ಮನಸ್ಸಿಗೆ ಶಾಂತಿ.

ಸಿಂಹ
ನಿರ್ವಹಣೆ ಉತ್ತಮ. ಹಾಗಾಗಿ ಒಳ್ಳೆ ಫಲ ಸಿಗುವುದು. ಆದರೂ ಕೆಲವರ ಅವಕೃಪೆಗೆ ತುತ್ತಾಗುವಿರಿ. ಕೌಟುಂಬಿಕ ಭಿನ್ನಮತ, ಉದ್ವಿಗ್ನತೆ.

ಕನ್ಯಾ
ಉದ್ದೇಶಿಸಿದ ಕಾರ್ಯಕ್ಕೆ ವಿಘ್ನಗಳು. ಪ್ರಯತ್ನ ವಿಫಲ. ಮನಸ್ಸಿಗೆ ನಿರಾಶೆ. ಅತಿಯಾಗಿ ವಿಶ್ವಾಸವಿಟ್ಟವರೇ ಕೇಡು ಬಗೆಯುತ್ತಾರೆ.

ತುಲಾ
ಮಾಡಿದ ಕೆಲಸಕ್ಕೆ ಸೂಕ್ತ ಪ್ರತಿಫಲ ಸಿಗದಿದ್ದರೂ ನಿರಾಶೆ ಆಗದು. ಹಣದ ಹರಿವು ಸುಗಮ. ಉಳಿತಾಯವೂ ಸಾಧ್ಯ. ಮನಸ್ಸು ನಿರಾಳ.

ವೃಶ್ಚಿಕ
ಒತ್ತಡದ ದಿನ. ಅಧಿಕ ಹೊಣೆಗಾರಿಕೆ. ನಿಮ್ಮನ್ನು ದ್ವೇಷಿಸುವವರಿಂದ ದೂರ ಇರಿ. ಅನವಶ್ಯ ವೆಚ್ಚದ ಮೇಲೆ ನಿಯಂತ್ರಣ ಇಡಿ. ಕೌಟುಂಬಿಕ ಸಹಕಾರ.

ಧನು
ಯಾವುದೇ ವಿಷಯಕ್ಕೆ ಕ್ಷಿಪ್ರವಾಗಿ ಪ್ರತಿಕ್ರಿಯಿಸಿ. ಅದು ನಿಮ್ಮ ಘನತೆ ಉಳಿಸುವುದು. ಗುರಿ ಸಾಧನೆ ನಿಮಗೆ ಕಷ್ಟವಾಗಲಾರದು.

ಮಕರ
ಇತ್ತೀಚಿನ ಹಿನ್ನಡೆಗಳಿಂದ ನೊಂದಿದ್ದರೆ ಇಂದು ನಿರಾಳತೆ ಸಿಗಲಿದೆ. ನಿಮಗೆ ಪೂರಕವಾದ ಬೆಳವಣಿಗೆ. ಆಪ್ತರ ಜತೆಗಿನ ಮುನಿಸು ಮಾಯ.

ಕುಂಭ
ವಿಶ್ವಾಸ ವೃದ್ಧಿಯ ಬೆಳವಣಿಗೆ. ಮನೆಯಲ್ಲಿ ಅಧಿಕ ಹೊಣೆಯ ಹೊರೆ. ಹಿರಿಯರಿಗೆ ಸಂಧಿ ನೋವಿನಿಂದ ನೆಮ್ಮದಿ ಸಿಗಬಹುದು.

ಮೀನ
ಇತರರ ಜತೆ ಸರಿಯಾಗಿ ವ್ಯವಹರಿಸಿ. ತಪ್ಪು ಕಲ್ಪನೆ ಮೂಡದಂತೆ ಎಚ್ಚರ ವಹಿಸಿ. ಸಣ್ಣ ಸಮಸ್ಯೆ ಕಡೆಗಣಿಸಬೇಡಿ, ಅದೇ ದೊಡ್ಡದಾದೀತು.

ರಾಹುಕಾಲ: 3.00- 4.30
ಗುಳಿಕಕಾಲ: 12.00-1.30

ಅದೃಷ್ಟ ಸಂಖ್ಯೆ: 7,0,6,2

ನಿತಿನ್, ನಿತೀಶ್ ಸೇರಿ ಎಂಟು ಎನ್‌ಡಿಎ ಅಭ್ಯರ್ಥಿಗಳಿಗೆ ಜಯ

ಪುಟ ೧➡ 243 ಸದಸ್ಯರ ಬಿಹಾರ ವಿಧಾನಸಭೆಯಲ್ಲಿ ಎನ್‌ಡಿಎಗೆ 202 ಸದಸ್ಯರ ಬೆಂಬಲ ಇರುವುದರಿಂದ ನಾಲ್ಕು ಸ್ಥಾನಗಳಲ್ಲಿ ಸುಲಭವಾಗಿ ಗೆಲುವು ಸಾಧಿಸಿತು. ಐದನೇ ಸ್ಥಾನಕ್ಕಾಗಿ ಪ್ರತಿಪಕ್ಷ ಆರ್‌ಜೆಡಿ ಪಕ್ಷದ ಅಮರೇಂದ್ರ ಧಾರಿ ಸಿಂಗ್ ಅವರನ್ನು ಕಣಕ್ಕಿಳಿಸಿ ಚುನಾವಣೆಯನ್ನು ಸ್ಪರ್ಧಾತ್ಮಕಗೊಳಿಸಿತು. ಎನ್‌ಡಿಎ ಅಭ್ಯರ್ಥಿಗಳಿಗೆ ಬೆಂಬಲವಾಗಿ ಮತ ಚಲಾಯಿಸಿದ ಮೈತ್ರಿ ಶಾಸಕರಿಗೆ ಉಪ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಧನ್ಯವಾದ ತಿಳಿಸಿದ್ದಾರೆ.

ಒಡಿಶಾದಲ್ಲಿ ನಾಲ್ವರು ಆಯ್ಕೆ: ಇನ್ನೊಂದೆಡೆ ಒಡಿಶಾದಲ್ಲಿ ನಡೆದ ರಾಜ್ಯಸಭೆ ಚುನಾವಣೆಯಲ್ಲಿ ನಾಲ್ವರು ಅಭ್ಯರ್ಥಿಗಳು ಜಯ ಸಾಧಿಸಿದ್ದಾರೆ. ಬಿಜೆಪಿ ಅಭ್ಯರ್ಥಿಗಳಾದ ಮನ್ಮೋಹನ್ ಸಾಮಲ್ ಮತ್ತು ಸುಜೀತ್ ಕುಮಾರ್ ರಾಜ್ಯಸಭೆಗೆ ಆಯ್ಕೆಯಾಗಿದ್ದಾರೆ. ಕೇಂದ್ರ ಮಾಜಿ ಸಚಿವ ದಿಲೀಪ್ ರಾಯ್ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗಮನಾರ್ಹ ಜಯ ದಾಖಲಿಸಿದ್ದಾರೆ. ಬಿಜೆಪಿ ಬೆಂಬಲಿತ ಅಭ್ಯರ್ಥಿಯಾಗಿದ್ದ ಅವರು, ಬಿಜು ಜನತಾ ದಳ, ಕಾಂಗ್ರೆಸ್ ಮತ್ತು ಸಿಪಿಐ(ಎಂ) ಬೆಂಬಲಿತ ಅಭ್ಯರ್ಥಿ ಡಾ. ದತ್ತೇಶ್ವರ ಹೊಟಾ ಅವರನ್ನು ಸೋಲಿಸಿದ್ದಾರೆ. ಈ ವೇಳೆ ಬಿಜು ಜನತಾ ದಳ ಮತ್ತು ಕಾಂಗ್ರೆಸ್ ಪಕ್ಷಗಳ ಕೆಲ ಶಾಸಕರು ಪಕ್ಷದ ವಿಪ್‌ಗೆ ವಿರುದ್ಧವಾಗಿ ದಿಲೀಪ್ ರಾಯ್ ಪರ ಮತ ಚಲಾಯಿಸಿದ ಘಟನೆ ಗಮನಸೆಳೆದಿದೆ. ಬಿಜು ಜನತಾ ದಳದ ಸಂತೃಪ್ತ ಮಿಶ್ರಾ ಕೂಡ ರಾಜ್ಯಸಭೆಗೆ ಆಯ್ಕೆಯಾಗಿದ್ದಾರೆ.

ಶಕ್ತಿ ಯೋಜನೆಯಲ್ಲಿ ಮಹಿಳೆಯರ 700 ಕೋಟಿ ಪ್ರಯಾಣ: ಸಿಎಂ

ಮಹಿಳೆಯರ ಪಾತ್ರ ಮಹತ್ವದ್ದು

ಬೆಂಗಳೂರು: ಬಾಗಲಕೋಟೆ ಹಾಗೂ ದಾವಣಗೆರೆ ಉಪಚುನಾವಣೆಯ ಗೆಲುವಿನಲ್ಲಿ ಮಹಿಳಾ ಕಾಂಗ್ರೆಸ್ ಸದಸ್ಯರ ಪಾತ್ರ ಮಹತ್ವವಾದುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಎಂದು ತಿಳಿಸಿದರು.



ಸೋಮವಾರ ಕರ್ನಾಟಕ ಪ್ರದೇಶ ಮಹಿಳಾ ಕಾಂಗ್ರೆಸ್ ವತಿಯಿಂದ ಆಯೋಜಿಸ ಲಾಗಿದ್ದ ಕಾರ್ಯಕಾರಿ ಸಭೆ ಮತ್ತು ತರಬೇತಿ ಶಿಬಿರ ಕಾರ್ಯಕ್ರಮದಲ್ಲಿ ಮಾತನಾಡಿ, 2013 ರಿಂದ 2018 ಮತ್ತು 2023ರಿಂದ ಕಾಂಗ್ರೆಸ್ ಸರ್ಕಾರ ಮಹಿಳಾ ಸಬಲೀಕರಣಕ್ಕೆ ಒತ್ತು ನೀಡಿದೆ. ಪ್ರಮುಖ ಗ್ಯಾರಂಟಿಯೋಜನೆಗಳಲ್ಲಿಒಂದಾದ ಶಕ್ತಿಯೋಜನೆಯಿಂದ ಇದುವರೆಗೆ ಮಹಿಳೆಯರು 700 ಕೋಟಿ ಪ್ರಯಾಣ ಗಳನ್ನು ಕೈಗೊಂಡಿದ್ದಾರೆ. ಮಹಿಳಾ ಕೇಂದ್ರಿತ ಯೋಜನೆಗಳಿಂದ ಮಹಿಳೆಯರ ಹಕ್ಕುಗಳನ್ನು ರಕ್ಷಿಸಲಾಗಿದೆ. ಸರ್ಕಾರದ ಗ್ಯಾರಂಟಿಗಳಿಂದ ಮಹಿಳೆಯರ ಕೊಂಡುಕೊಳ್ಳುವ ಶಕ್ತಿ ಹೆಚ್ಚಾಗಿದೆ. ಗೃಹಲಕ್ಷ್ಮಿ ಯೋಜನೆಯಡಿ 1.26 ಕೋಟಿ ಮಹಿಳೆಯರಿಗೆ ಮಾಸಿಕ 2000 ರೂಗಳನ್ನು ನೀಡಲಾಗುತ್ತಿದ್ದು, ಇದರಿಂದ ಮಹಿಳೆಯರ ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿ ಸುಧಾರಿಸಿದೆ. ಆರ್ಥಿಕ ಸ್ವಾತಂತ್ರ್ಯದಿಂದ ಮಹಿಳೆಯರ ಆತ್ಮವಿಶ್ವಾಸ ಹೆಚ್ಚಿದೆ ಎಂದರು.

ಪ್ರಚಾರ ಕಾರ್ಯದಲ್ಲಿ ಸಕ್ರಿಯವಾಗಿ ಭಾಗ ವಹಿಸಿ: ಮಹಿಳೆಯರಲ್ಲಿ ನಾಯಕತ್ವದ ಗುಣ ಬಹಳ ಪ್ರಮುಖವಾಗಿದೆ. ಎಲ್ಲರಿಗೂ ಸಮಾನ ಅವಕಾಶ ದೊರೆತರೆ ಸಮಾನತೆಯನ್ನು ಸಾಧಿಸುವುದು ಸುಲಭವಾಗಿದೆ. ಕರ್ನಾಟಕ ಪ್ರದೇಶ ಮಹಿಳಾ ಕಾಂಗ್ರೆಸ್‌ನಲ್ಲಿ 1 ಲಕ್ಷಕ್ಕೂ ಹೆಚ್ಚು ಮಹಿಳಾ ಸದಸ್ಯರಿದ್ದು, ಭವಿಷ್ಯದಲ್ಲಿ ಈ ಸಂಖ್ಯೆ 2 ಲಕ್ಷಗಳಿಗೆ ವೃದ್ಧಿಸಬೇಕು. ಉಪಚುನಾವಣೆ ಸಮೀಸುತ್ತಿರುವುದರಿಂದ ಸರ್ಕಾರದ ಜನಪರ ಯೋಜನೆಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವಲ್ಲಿ ಮಹಿಳಾ ಸದಸ್ಯರ ಪಾತ್ರ ಮಹತ್ವದ್ದಾಗಿದೆ. ಬಾಗಲಕೋಟೆ ಹಾಗೂ ದಾವಣಗೆರೆ ಉಪಚುನಾವಣೆಯಲ್ಲಿ ಮಹಿಳಾ ಸದಸ್ಯರ ಎರಡು ತಂಡಗಳನ್ನು ರಚಿಸಿ, ಪ್ರಚಾರ ಕಾರ್ಯದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕೆಂದು ಸೂಚಿಸಿದರು.

ಈ ವೇಳೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ರಾಷ್ಟ್ರೀಯ ಮಹಿಳಾ ಕಾಂಗ್ರೆಸ್ ಅಧ್ಯಕ್ಷ ಅಲ್ಕಾ ಲಾಂಬಾ, ಕರ್ನಾಟಕ ಮಹಿಳಾ ಕಾಂಗ್ರೆಸ್ ಅಧ್ಯಕ್ಷ ಸೌಮ್ಯಾ ರೆಡ್ಡಿ, ಮಹಿಳಾ ಕಾಂಗ್ರೆಸ್ ಕರ್ನಾಟಕ ಉಸ್ತುವಾರಿ ಸೋಫಿಯಾ ಜುಬೇರಾ, ಪ್ರಧಾನ ಕಾರ್ಯದರ್ಶಿ ಸೇವಾ ಸೆಲ್ವಾನ್, ಶಾಸಕ ಮಂಥರ್ ಗೌಡ, ನಯನ ಮೋಟಮ್ಮ, ಮಾಜಿ ಸಚಿವ ರಾಣಿ ಸತೀಶ್ ಸೇರಿದಂತೆ ಮಹಿಳಾ ಕಾಂಗ್ರೆಸ್ ವಿಭಾಗದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಗುರಿ ಇಟ್ಟುಕೊಂಡು ರಾಜಕಾರಣಕ್ಕೆ ಬನ್ನಿ

ಬೆಂಗಳೂರು: ನಿಷ್ಠೆಯಿಂದ ಕೆಲಸ ಮಾಡಿದರೆ ಅಧಿಕಾರ ಮನೆ ಬಾಗಿಲಿಗೆ ಬರಲಿದೆ. ಮಹಿಳೆಯರು ಗುರಿ ಇಟ್ಟುಕೊಂಡು ರಾಜಕಾರಣಕ್ಕೆ ಬರಬೇಕು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮಿ



ಹೆಬ್ಬಾಳಕರ್ ಹೇಳಿದರು. ಕರ್ನಾಟಕ ರಾಜ್ಯ ಮಹಿಳಾ ಕಾಂಗ್ರೆಸ್ ವತಿಯಿಂದ ಮಹಿಳಾ ಸಬಲೀಕರಣ ಹಾಗೂ ಸರ್ವತೋಮುಖ ಅಭಿವೃದ್ಧಿಗಾಗಿ ನಡೆಯುತ್ತಿರುವ ಮಹಿಳಾ ಸಬಲೀಕರಣ ಕಾರ್ಯಗಾರದಲ್ಲಿ ಮಾತನಾಡಿದ ಅವರು, ಬಿಜೆಪಿಯಲ್ಲಿ ಆರ್‌ಎಸ್‌ಎಸ್ ಯಾವುದೇ ಫಲಾಪೇಕ್ಷೆ ಇಲ್ಲದೆ ಕೆಲಸ ಮಾಡುತ್ತಿದೆ, ಅದೇ ರೀತಿ ಪಕ್ಷದಲ್ಲಿ ಮಹಿಳಾ ಕಾಂಗ್ರೆಸ್ ಘಟಕವು ಯಾವುದೇ ಫಲಾಪೇಕ್ಷೆ ಇಲ್ಲದೆ ಕೆಲಸ ಮಾಡುತ್ತಿದೆ. ಉತ್ತಮ ಕೆಲಸ ಮಾಡಿದರೆ ಅಧಿಕಾರ ನಮ್ಮನ್ನು ಹುಡುಕಿಕೊಂಡು ಬರುತ್ತದೆ. ಮುಂಬರುವ ಗ್ರಾಮ, ತಾಲೂಕು, ಜಿಲ್ಲಾ ಪಂಚಾಯತಿ ಚುನಾವಣೆಯಲ್ಲಿ ಎಲ್ಲಾ ವರ್ಗದವರನ್ನು ಗುರುತಿಸಿ ಟಿಕೆಟ್ ನೀಡಬೇಕು ಎಂದರು. ಸಂಘಟನೆಯಲ್ಲಿ ಒತ್ತು ನೀಡುವವರನ್ನು, ಕಾಂಗ್ರೆಸ್ ಪಕ್ಷದ ತತ್ವ ಸಿದ್ಧಾಂತಕ್ಕೆ ಬದ್ಧರಾಗಿರುವವರನ್ನು ಗುರುತಿಸಬೇಕು. ನಿಮ್ಮ ಅಕ್ಕಪಕ್ಕದ ಮನೆಯವರ ಮನಸ್ಸನ್ನು ಗೆದ್ದು, ಅವರನ್ನು ಕಾಂಗ್ರೆಸ್ ಪಕ್ಷಕ್ಕೆ ಬರುವಂತೆ ಮಾಡಬೇಕು. ನಿಸ್ವಾರ್ಥದಿಂದ ಪಕ್ಷದಲ್ಲಿ ಕೆಲಸ ಮಾಡಬೇಕು ಎಂದರು.

ಸಚಿವರು, ಸಂಸದರ ಸಭೆ ಇಂದು

ಪುಟ ೧➡ ಈ ಹಿಂದೆ ರಾಜ್ಯದ ನೀರಾವರಿ ಸಚಿವರಾಗಿದ್ದ ಸಚಿವ ಎಚ್.ಕೆ. ಪಾಟೀಲ್, ಎಂ.ಬಿ.ಪಾಟೀಲ್, ಸಣ್ಣ ನೀರಾವರಿ ಸಚಿವ ಎನ್.ಎಸ್.ಬೊಸರಾಜು ಜತೆಗೆ ಮಂಗಳವಾರ ಹೊಸದಿಲ್ಲಿಗೆ ತೆರಳಲಿರುವ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು, ಸುಪ್ರೀಂಕೋರ್ಟ್‌ನಲ್ಲಿ ವಿಚಾರಣೆಯಲ್ಲಿರುವ ನೀರಾವರಿ ಪ್ರಕರಣಗಳ ಕುರಿತು ರಾಜ್ಯದ ಅಡ್ವೋಕೆಟ್ ಜನರಲ್ ಹಾಗೂ ರಾಜ್ಯವನ್ನು ಸುಪ್ರೀಂಕೋರ್ಟ್‌ನಲ್ಲಿ ಪ್ರತಿನಿಧಿಸುತ್ತಿರುವ ಹಿರಿಯ ವಕೀಲರ ಜತೆಗೆ ಚರ್ಚೆ ನಡೆಸಲಿದ್ದಾರೆ. ಸುಪ್ರೀಂಕೋರ್ಟ್ ವಿಚಾರಣೆಯಲ್ಲಿ ರಾಜ್ಯ ಸರ್ಕಾರ ತಗೆದುಕೊಳ್ಳಬೇಕಾದ ನಿರ್ಧಾರದ ಕುರಿತು ವಕೀಲರ ತಂಡದೊಂದಿಗೆ ಚರ್ಚಿಸಲಿದ್ದಾರೆ.

ಅದೇ ದಿನ ಸಂಜೆ ರಾಜ್ಯದ ಕೇಂದ್ರ ಸಚಿವರಾಗಿರುವ ಪ್ರಲ್ಹಾದ್ ಜೋಶಿ, ಎಚ್.ಡಿ.ಕುಮಾರಸ್ವಾಮಿ, ವಿ. ಸೋಮಣ್ಣ ಹಾಗೂ ಶೋಭಾ ಕರಂದ್ಲಾಜೆ ಸೇರಿದಂತೆ ಎಲ್ಲ ಪಕ್ಷಗಳ ರಾಜ್ಯ ಸಂಸದರ ಜತೆಗೆ ಸಭೆ ನಡೆಸಲಿದ್ದು, ಈ ಸಭೆಯಲ್ಲಿ ಕೇಂದ್ರ ಸರ್ಕಾರ ಒಪ್ಪಿಗೆ ನೀಡಬೇಕಾದ ಯೋಜನೆಗಳು ಅಸರಲ್ಲಿಯೂ ಪ್ರಮುಖವಾಗಿ ಮೇಕೆದಾಟು, ಕೃಷ್ಣ ಮೇಲ್ದಂಡೆ ಯೋಜನೆ ಹಾಗೂ ತುಂಗಭದ್ರಾ, ರಾಷ್ಟ್ರೀಯ ಯೋಜನೆ ಘೋಷಣೆ ಕುರಿತಾಗಿ ಸಂಸದರೊಂದಿಗೆ ಚರ್ಚಿಸಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುವಂತೆ ಮನವೊಲಿಸುವ ಪ್ರಯತ್ನ ಮಾಡಲಿದ್ದಾರೆ. ಬಳಿಕ ಕೇಂದ್ರ ಜಲಶಕ್ತಿ ಸಚಿವರನ್ನು ಭೇಟಿ ಮಾಡಲಿದ್ದಾರೆ ಎನ್ನಲಾಗಿದೆ.

ಆಂಧ್ರ, ಮಹಾರಾಷ್ಟ್ರದ ವಿರುದ್ಧ ಧ್ವನಿ ಎತ್ತಲು ಮನವಿ

ಪುಟ ೧➡ ನ್ಯಾಯಾಧಿಕರಣ ಆದೇಶದ ಪ್ರಕಾರ ನಮ್ಮ ಪಾಲಿನ ನೀರಿನ ಬಳಕೆಗೆ ಯೋಜನೆ ಮಾಡುತ್ತಿದ್ದು, ಈಗಾಗಲೇ 26 ಸಾವಿರ ಕೋಟಿ ರೂ. ಮೊತ್ತದ ಕಾಮಗಾರಿಗಳನ್ನು ಆರಂಭಿಸಲಾಗಿದೆ. ನಾವು ಈಗಲೇ ಆಲಮಟ್ಟಿ ಅಣೆಕಟ್ಟು ಎತ್ತರ ಹೆಚ್ಚಳ ಮಾಡುತ್ತಿಲ್ಲ. 2010 ರಲ್ಲಿ ಆಗಿರುವ ಆದೇಶದ ಅನುಸಾರ ನಮ್ಮ ಪಾಲಿನ ನೀರು ಬಳಕೆಗೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.

ತುಂಗಭದ್ರಾ ಅಣೆಕಟ್ಟೆಯಿಂದ ನಮಗೆ 30 ಟಿಎಂಸಿ ನೀರು ವ್ಯರ್ಥವಾಗುತ್ತಿದ್ದು, ಇದಕ್ಕೆ ಪರ್ಯಾಯ ಮಾರ್ಗ ಕಂಡುಕೊಳ್ಳಲು ಆಂಧ್ರ ಸರ್ಕಾರ ಸಹಕಾರ ನೀಡುತ್ತಿಲ್ಲ. ಈ ಎಲ್ಲಾ ವಿಚಾರಗಳ ಬಗ್ಗೆ ಸಂಸದರ ಜತೆ ಚರ್ಚಿಸಿ ಸರ್ಕಾರದ ಮೇಲೆ ಒತ್ತಡ ಹಾಕಲು ತೀರ್ಮಾನ ಮಾಡಲಾಗುತ್ತದೆ.
■ **ಶಿವಕುಮಾರ್, ಡಿಸಿಎಂ**

ಎಲ್ಪಿಜಿ ವಿತರಣೆಗೆ ಹೊಸ ನೀತಿ

ಪುಟ ೧➡ ರೆಸ್ಟೋರೆಂಟ್, ಡಾಬಾ, ಹೋಟೆಲ್ ಮತ್ತು ಕೈಗಾರಿಕಾ ಕ್ಯಾಂಟೀನ್‌ಗಳಿಗೆ ಪ್ರತಿದಿನ 1 ಸಾವಿರ ಸಿಲಿಂಡರ್‌ಗಳನ್ನು ನಿಗದಿಪಡಿಸಲಾಗಿದೆ. ಬೀಜ ಸಂಸ್ಕರಣಾ ಉದ್ಯಮ, ಆಹಾರ ಸಂಸ್ಕರಣಾ ಉದ್ಯಮ, ಕೃಷಿ ಮತ್ತು ಸಂಬಂಧಿತ ವಲಯಗಳು, ಔಷಧೀಯ ಉದ್ಯಮ, ಮೀನುಗಾರಿಕೆ, ಪ್ರಾಣಿ ಸಂಗ್ರಹಾಲಯ, ಕ್ರೀಡಾ ಹಾಸ್ಟೆಲ್‌ಗಳು, ಕಾರ್ಪೊರೇಟ್ ಕ್ಯಾಂಟೀನ್‌ಗಳು, ಕೋಳಿ ಮತ್ತು ರೇಷ್ಮೆ ಸಾಕಾಣಿಕೆ ಉದ್ಯಮಗಳಿಗೆ ಪ್ರತಿದಿನ 500 ಸಿಲಿಂಡರ್ ಹಾಗೂ ಇತರೆ ಅಗತ್ಯಗಳಿಗೆ ನಿತ್ಯ 100 ಸಿಲಿಂಡರ್‌ಗಳನ್ನು ಪ್ರಕರಣದ ಆಧಾರದ ಮೇಲೆ ವಿತರಿಸಲು ರಾಜ್ಯ ಸರಕಾರ ಮುಂದಾಗಿದೆ.

ಎಲ್‌ಪಿಜಿ ಬಳಕೆ ಎಷ್ಟು? 2025ರ ಡಿಸೆಂಬರ್‌ನಿಂದ 2026ರ ಫೆಬ್ರವರಿ ವರೆಗೆ ರಾಜ್ಯದಲ್ಲಿ ಒಟ್ಟು 76,544 ಮೆಟ್ರಿಕ್ ಟನ್ ವಾಣಿಜ್ಯ ಎಲ್‌ಪಿಜಿ ಬಳಕೆಯಾಗಿದ್ದು, ಸರಾಸರಿ ಮಾಸಿಕ ಬಳಕೆಯು 25,515 ಮೆಟ್ರಿಕ್ ಟನ್ ಹಾಗೂ ದೈನಂದಿನ ಬಳಕೆಯು ಸರಾಸರಿ 850 ಮೆಟ್ರಿಕ್ ಟನ್ ಆಗಿದೆ. ಅದೇ ರೀತಿ ಆಟೋ ಎಲ್‌ಪಿಜಿ ದೈನಂದಿನ ಬಳಕೆಯು ಸರಾಸರಿ 56.7 ಮೆಟ್ರಿಕ್ ಟನ್. ಕೇಂದ್ರ ಸರ್ಕಾರದ ಮಾರ್ಗಸೂಚಿಗಳ ಅನ್ವಯ, ರಾಜ್ಯದಲ್ಲಿ ದಿನನಿತ್ಯ ಸರಾಸರಿ 181.34 ಮೆಟ್ರಿಕ್ ಟನ್ ವಾಣಿಜ್ಯ ಎಲ್‌ಪಿಜಿಯನ್ನು ನಿಯಂತ್ರಿತ ಹಂಚಿಕೆಗೆ ಮೀಸಲಿಡಲಾಗಿದೆ.

ಜನರು ಗಾಬರಿಯಾಗಬಾರದು. ಅಗತ್ಯಕ್ಕಿಂತ ಹೆಚ್ಚು ಸಿಲಿಂಡರ್ ಬುಕ್ ಮಾಡಬಾರದು ಹಾಗೂ ಸಂಗ್ರಹಿಸಬಾರದು. ಯಾವುದೇ ತಾಂತ್ರಿಕ ಸಮಸ್ಯೆ ಕಂಡುಬಂದರೆ ತಕ್ಷಣ ಸಂಬಂಧಿತ ಕಂಪನಿಗಳೊಂದಿಗೆ ಚರ್ಚಿಸಿ ಪರಿಹಾರ ಕಂಡುಕೊಳ್ಳಲಾಗುತ್ತದೆ. ಜನರಿಗೆ ಯಾವುದೇ ತೊಂದರೆ ಆಗದಂತೆ ಸರ್ಕಾರ ಕ್ರಮ ಕೈಗೊಳ್ಳಲಿದೆ.
■ **ಕೆ.ಎಚ್. ಮುನಿಯಪ್ಪ, ಆಹಾರ ಸಚಿವ**

ಸಂಸತ್ತಲ್ಲಿ ಕಾಂಗ್ರೆಸ್ ಸದಸ್ಯರ ವರ್ತನೆ: ಸೋನಿಯಾಗೆ ಎಚ್‌ಡಿಡಿ ಪತ್ರ

ಪುಟ ೧➡ ಇದು ಸಂಸತ್ತಿನ ಘನತೆಯನ್ನು ಕುಗ್ಗಿಸುತ್ತಿದೆ. ಸಂಸದೀಯ ಪ್ರಜಾಪ್ರಭುತ್ವದ ಮೂಲ ತತ್ವಗಳಿಗೆ ಧಕ್ಕೆ ಉಂಟು ಮಾಡುತ್ತದೆ ಎಂದು ಮಾಜಿ ಪ್ರಧಾನಿಗಳು ಆತಂಕ ವ್ಯಕ್ತಪಡಿಸಿದ್ದಾರೆ.

ಬಿಸ್ಕತ್ತು, ಪಕೋಡಾ ಸೇವನೆ ಅತಿರೇಕದ ಕ್ರಮ: ಸಂಸತ್ತಿನ ಮೆಟ್ಟಿಲುಗಳ ಮೇಲೆ ಚಹಾ ಸೇವನೆ ಮಾಡುವುದು ಸರಿಯಾದ ನಡವಳಿಕೆ ಅಲ್ಲ. ಈಹಿಂದೆ ವಿರೋಧಪಕ್ಷಗಳು ರಾಷ್ಟ್ರೀಯ ಹಿತಾಸಕ್ತಿಯನ್ನು ಗೌರವಿಸಿ ಸಂಯಮದಿಂದ ವರ್ತಿಸಿದ್ದವು. ಸಂಸತ್ತಿನ ಮೆಟ್ಟಿಲುಗಳ ಮೇಲೆ ಕುಳಿತು ಚಹಾ, ಬಿಸ್ಕತ್ತು, ಪಕೋಡಾ ತಿನ್ನುವುದು ಅತಿರೇಕದ ಕ್ರಮಗಳು. ಇವು ಅನುಚಿತ ಎಂದು ಗೌಡರು ಟೀಕಿಸಿದ್ದಾರೆ.

ಪೀಠಕ್ಕೆ ತೋರುವ ಅಗೌರವ: ವಿರೋಧ ಪಕ್ಷದ ನಾಯಕನ ಕರ್ತವ್ಯ ಸುಲಭವಲ್ಲ ಎಂಬುದನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ಅವರ ಎದುರು ಬೆಟ್ಟದಷ್ಟು ಸವಾಲುಗಳು ಇರುತ್ತವೆ. ಜನರ ಸಂಕಷ್ಟಗಳ ಬಗ್ಗೆ ಕಾಲ ಕಾಲಕ್ಕೆ ಸರಕಾರದ ಗಮನಕ್ಕೆ ತರಬೇಕಾಗುತ್ತದೆ. ಹಾಗಿದ್ದರೂ ಪ್ರತಿಭಟನೆ ಮಾಡುವ ಸಂದರ್ಭ ಬಂದರೆ ಅದಕ್ಕೆ ತನ್ನದೇ ಆದ ರೀತಿನೀತಿ ಇರುತ್ತದೆ. ಅಂತಹ ಸಂದರ್ಭದಲ್ಲಿ ಪೀಠಕ್ಕೆ ಅಗೌರವ ತೋರುವ, ಅಪಚಾರ ಎಸಗುವ ಕೆಲಸ ಆಗಬಾರದು. ನನ್ನ ಕಾಳಜಿ ಮತ್ತು ನನ್ನ ಉದ್ದೇಶವನ್ನು ನೀವು ಅರ್ಥಮಾಡಿಕೊಳ್ಳುತ್ತೀರಿ ಎಂದು ನನಗೆ ನಂಬಿಕೆಯಿದೆ. ನಾನು ಯಾರನ್ನೂ ಲಘುವಾಗಿ ನೋಡುವ ಅಥವಾ ಯಾರ ಉತ್ಸಾಹವನ್ನು ಕಡಿಮೆ ಮಾಡುವ ಉದ್ದೇಶ ಹೊಂದಿಲ್ಲ. ಆದರೆ, ವಿರೋಧ ಪಕ್ಷದ ಹಿರಿಯ ಸ್ಥಾನದಲ್ಲಿರುವ ನೀವು, ನಿಮ್ಮ ರಾಜಕೀಯ ಅನುಭವ ಮತ್ತು ಪ್ರಬುದ್ಧತೆಯನ್ನು ಬಳಸಿಕೊಂಡು ನಿಮ್ಮ ಪಕ್ಷದ ನಾಯಕರು ಮತ್ತು ಇತರರೊಂದಿಗೆ ಮಾತನಾಡಿ ಸರಿಪಡಿಸಬೇಕು ಒತ್ತಾಯಿಸುತ್ತೇನೆ ಎಂದು ದೇವೇಗೌಡರು, ಸೋನಿಯಾ ಗಾಂಧಿ ಅವರನ್ನು ಪತ್ರದ ಮೂಲಕ ಆಗ್ರಹಿಸಿದ್ದಾರೆ.

ದೇಶಕ್ಕಿಂದು ಎಲ್ಪಿಜಿ, ತೈಲ ಹೊತ್ತ 2 ನೌಕೆ

ಪುಟ ೧➡ ಶಿವಾಲಿಕ್ ಈಗಾಗಲೇ ಗುಜರಾತ್ ತಲುಪಿದ್ದು, ನಂದಾ ದೇವಿ ಮಂಗಳವಾರ ಕಾಂಡ್ಲಾ ಬಂದರನ್ನು ತಲುಪುವ ನಿರೀಕ್ಷೆಯಿದೆ. ಪ್ರಸ್ತುತ 22 ಭಾರತೀಯ ಧ್ವಜದ ಹಡಗುಗಳು ಪಶ್ಚಿಮ ಪರ್ಷಿಯನ್ ಕೊಲ್ಲಿಯಲ್ಲಿ ಉಳಿದುಕೊಂಡಿದ್ದು, ಸುರಕ್ಷಿತ ನಿರ್ಗಮನಕ್ಕೆ ರಾಜತಾಂತ್ರಿಕ ಪ್ರಯತ್ನಗಳು ನಡೆಯುತ್ತಿವೆ.

ಸಾರಿಗೆ ಸಮನ್ವಯ ಮತ್ತು ಬೆಂಬಲ: ಫೆ.28ರಂದು ಸಂಘರ್ಷ ಆರಂಭವಾದಾಗಿನಿಂದ, ಡಿಜಿ ಶಿಪ್ಪಿಂಗ್ ನಿಯಂತ್ರಣ ಕೊಠಡಿ, 8,400ಕ್ಕೂ ಹೆಚ್ಚು ಕರೆಗಳನ್ನು ನಿರ್ವಹಿಸಿದೆ. ಇಲ್ಲಿಯವರೆಗೆ ಒಟ್ಟು 286 ಭಾರತೀಯ ನಾವಿಕರನ್ನು ಸ್ವದೇಶಕ್ಕೆ ಕರೆತರಲಾಗಿದೆ. ವ್ಯಾಪಾರ ನಿರಂತರತೆಯನ್ನು ಕಾಪಾಡಿಕೊಳ್ಳಲು ಜವಾಹರಲಾಲ್ ನೆಹರು ಪೋರ್ಟ್ ಅಥಾರಿಟಿ ಸೇರಿದಂತೆ ಪ್ರಮುಖ ಬಂದರುಗಳಲ್ಲಿ ಲಂಗರು ಹಾಕುವ ಮತ್ತು ಸಂಗ್ರಹಣಾ ಶುಲ್ಕದಲ್ಲಿ ರಿಯಾಯಿತಿ ನೀಡಲಾಗುತ್ತಿದೆ. ಹಾರ್ಮುಜ್ ಜಲಸಂಧಿಯ ದಿಗ್ಬಂಧನ ಮುಂದುವರಿದಿದ್ದರೂ, ರಷ್ಯಾದಂತಹ ಪರ್ಯಾಯ ಪೂರೈಕೆದಾರರಿಂದ ತೈಲ ಪಡೆಯುವ ಮೂಲಕ ಕೊರತೆ ನೀಗಿಸಲು ಯತ್ನಿಸಲಾಗುತ್ತಿದೆ.

ಹಾರ್ಮುಜ್ ಬಗ್ಗೆ ಅಮೆರಿಕ ಜತೆ ಚರ್ಚೆಸಿಲ್ಲ: ಭಾರತ

ಪುಟ ೧➡ ಶಿಪ್ಪಿಂಗ್ ಮಾರ್ಗಗಳು ನಿರ್ಬಂಧಿತವಾಗಿದ್ದರೂ, ಎರಡು ಭಾರತೀಯ ಎಲ್‌ಪಿಜಿ ವಾಹಕ ನೌಕೆಗಳು ಶನಿವಾರ ಯಶಸ್ವಿಯಾಗಿ ಈ ಜಲಸಂಧಿ ದಾಟಿವೆ. ಪಶ್ಚಿಮ ಏಷ್ಯಾದಲ್ಲಿ ಉದ್ವಿಗ್ನತೆ ತಗ್ಗಿಸಲು ರಾಜತಾಂತ್ರಿಕ ಮಾರ್ಗ ಅಳವಡಿಸಿಕೊಳ್ಳಲು ಭಾರತ ಕರೆನೀಡಿದೆ.

ರಾಷ್ಟ್ರ ಸೇವಿಕಾ ಸಮಿತಿ ಹಿರಿಯ ಪ್ರಚಾರಿಕಾ ರೇಖಾ ರಾಜೆ ನಿಧನ

ಹೊಸದಿಲ್ಲಿ: ರಾಷ್ಟ್ರ ಸೇವಿಕಾ ಸಮಿತಿಯ ಹಿರಿಯ ಪ್ರಚಾರಿಕಾ ಮತ್ತು ಮಾಜಿ ಅಖಿಲ ಭಾರತೀಯ ಸಹ-ಸರಕಾರ್ಯವಾಹಿಕಾ ರೇಖಾ ರಾಜೆ (ರೇಖಾತಾಯಿ) ಅಲ್ಪಕಾಲದ ಅನಾರೋಗ್ಯದಿಂದ ಭಾನುವಾರ ದಿಲ್ಲಿಯ ಏಮ್ಸ್‌ನಲ್ಲಿ ನಿಧನರಾದರು.

ರೇಖಾ ರಾಜೇ ಅವರು ಕಾನ್ಪುರದಲ್ಲಿ ಜನಿಸಿದರು. ಎಳೆಯ ವಯಸ್ಸಿನಿಂದಲೇ ಸಾಮಾಜಿಕ ಮತ್ತು ರಾಷ್ಟ್ರೀಯತಾವಾದಿ ಚಳವಳಿಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ನಾಸಿಕ್‌ನಲ್ಲಿ ರಾಷ್ಟ್ರ ಸೇವಿಕಾ ಸಮಿತಿ ಶಾಖೆಯ ಸಂಪರ್ಕಕ್ಕೆ ಬಂದರು. ಅವರು ಪುಣೆಯಲ್ಲಿ ತಮ್ಮ ಆರಂಭಿಕ ಶಿಕ್ಷಣವನ್ನು ಪಡೆದರು, ಕಾನ್ಪುರ ವಿಶ್ವವಿದ್ಯಾಲಯದಿಂದ ಎಂ.ಎ. (ಸಮಾಜಶಾಸ್ತ್ರ) ಮತ್ತು ಬಿ.ಎಡ್. ಪದವಿಗಳನ್ನು ಪಡೆದರು.

ತುರ್ತು ಪರಿಸ್ಥಿತಿಯ ಸಮಯದಲ್ಲಿ, ಅವರು ಕಾನ್ಪುರದಲ್ಲಿ ಸತ್ಯಾಗ್ರಹದಲ್ಲಿ ಭಾಗವಹಿಸಿದರು. ಪ್ರತಿಭಟನಾ ಚಳವಳಿಯಲ್ಲಿ ಮಹಿಳೆಯನ್ನು ಸಜ್ಜುಗೊಳಿಸುವಲ್ಲಿ ಪ್ರಮುಖಪಾತ್ರ ವಹಿಸಿದರು. ಅಶೋಕ್ ಸಿಂಘಾಲ್ ಮತ್ತು ಸಿಂಧುತಾಯಿ ಪಾಠಕ್ ಅವರಿಂದ ಪ್ರೇರಿತರಾದ ರೇಖಾತಾಯಿ, ರಾಷ್ಟ್ರೀಯ ಸೇವಿಕಾ ಸಮಿತಿಯ ಪೂರ್ಣಕಾಲಿಕ ಪ್ರಚಾರಿಕಾರಾದರು. ತಮ್ಮ ಇಡೀ ಜೀವನವನ್ನು ಸಂಘಟನಾ ಕಾರ್ಯಕ್ಕೆ ಮೀಸಲಿಟ್ಟು ಮತ್ತು ರಾಷ್ಟ್ರದ ಸೇವೆಯಲ್ಲಿ ಅವರು ಅವಿವಾಹಿತರಾಗಿ ಉಳಿಯಲು ಪ್ರತಿಜ್ಞೆ ಮಾಡಿದರು.



ರೇಖಾತಾಯಿ ಅವರು ದಿಲ್ಲಿ ಪ್ರಾಂತ ಪ್ರಚಾರಿಕಾ, ಉತ್ತರ ಕ್ಷೇತ್ರ ಪ್ರಚಾರಿಕಾ ಮತ್ತು ಅಖಿಲ ಭಾರತೀಯ ಪ್ರಚಾರಿಕಾ ಪ್ರಮುಖ್ ಸಹಿತ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿದ್ದಾರೆ. ಹಲವು ವರ್ಷಗಳ ಕಾಲ ಜಲಂಧರ್ ಕೇಂದ್ರ ಸ್ಥಾನವಾಗಿರಿಸಿ ಉತ್ತರ ಕ್ಷೇತ್ರದಾದ್ಯಂತ ಸಮಿತಿಕಾರ್ಯವನ್ನು ವಿಸ್ತರಿಸಿದ್ದಾರೆ. ಜಮ್ಮು ಮತ್ತು ಕಾಶ್ಮೀರ, ಪಂಜಾಬ್, ಹರ್ಯಾಣ ಮತ್ತು ಹಿಮಾಚಲ ಪ್ರದೇಶದಂತಹ ಸೂಕ್ಷ್ಮ ಹಾಗೂ ಗಡಿ ಪ್ರದೇಶಗಳಲ್ಲಿ ರಾಷ್ಟ್ರೀಯ ಸೇವಿಕಾ ಸಮಿತಿಯ ಕಾರ್ಯ ವಿಸ್ತರಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ.

ಕಾಶ್ಮೀರದಲ್ಲಿ ಹಿಂದುಗಳ ಹತ್ಯಾಕಾಂಡದ ಸಮಯದಲ್ಲಿ ರೇಖಾ ತಾಯಿ ಅನೇಕ ಹುಡುಗಿಯರನ್ನು ರಕ್ಷಿಸಿದ್ದಾರೆ. ಹೆತ್ತವರನ್ನು ಕಳೆದುಕೊಂಡ ಹೆಣ್ಣುಮಕ್ಕಳಿಗಾಗಿ ಜಮ್ಮುವಿನಲ್ಲಿ ಅವರು ಅದಿತಿ ಹಾಸ್ಟೆಲ್ ಅನ್ನು ಸ್ಥಾಪಿಸಿದ್ದಾರೆ. ಲವ್ ಜಿಹಾದ್‌ನಲ್ಲಿ ಸಿಲುಕಿರುವ ಅನೇಕ ಹಿಂದು ಹುಡುಗಿಯರನ್ನು ರಕ್ಷಿಸುವಲ್ಲಿಯೂ ಅವರು ಪ್ರಮುಖ ಪಾತ್ರ ವಹಿಸಿದ್ದಾರೆ. ರೇಖಾ ರಾಜೆ ಅವರ ಪಾರ್ಥಿವ ಶರೀರವನ್ನು ದಿಲ್ಲಿಯಿಂದ ಕಾನ್ಪುರದ ಅವರ ಮನೆಗೆ ತರಲಾಯಿತು. ಅಲ್ಲಿ ಸಾರ್ವಜನಿಕ ದರ್ಶನದ ಬಳಿಕ ಅಂತಿಮ ಯಾತ್ರೆಯು ಭೈರವಘಾಟ್‌ಗೆ ತೆರಳಿ ಅಂತಿಮ ವಿಧಿವಿಧಾನಗಳೊಂದಿಗೆ ಅಂತ್ಯ ಸಂಸ್ಕಾರ ನಡೆಸಲಾಯಿತು.

ಸಚಿವರಿಂದ ಸಹಾಯವಾಣಿ ವ್ಯವಸ್ಥೆಗೆ ಚಾಲನೆ

ಬೆಂಗಳೂರು: ವ್ಯಸನಮುಕ್ತ ಸಮಾಜ ನಿರ್ಮಾಣದ ಉದ್ದೇಶದಿಂದ ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿಯ ಕಚೇರಿಯಲ್ಲಿ ಸಾರ್ವಜನಿಕರಿಗಾಗಿ ಸ್ಥಾಪಿಸಲಾದ ಸಹಾಯವಾಣಿ (ಹೆಲ್ಪ್‌ಲೈನ್) ವ್ಯವಸ್ಥೆಗೆ ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವ ಶರಣಬಸಪ್ಪಗೌಡ ದರ್ಶನಾಪುರ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಸಚಿವರು, ವಿದ್ಯಾರ್ಥಿಗಳು ಹಾಗೂ ಸಾರ್ವ ಜನಿಕರಲ್ಲಿ ಮದ್ಯಪಾನ ಮತ್ತು ಮಾದಕ ವಸ್ತುಗಳ ದುಷ್ಪರಿಣಾಮಗಳ ಕುರಿತು ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ರಾಜ್ಯದಾದ್ಯಂತ ವಿವಿಧ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ ಎಂದು ಹೇಳಿದರು.

ಮದ್ಯಪಾನ ಮತ್ತು ಮಾದಕ ವಸ್ತುಗಳ ಬಳಕೆ ವ್ಯಕ್ತಿಯ ಆರೋಗ್ಯ, ಕುಟುಂಬದ ಶಾಂತಿ ಹಾಗೂ ಸಮಾಜದ ಸ್ವಾಸ್ಥ್ಯವನ್ನು ಹಾಳು ಮಾಡುವುದರ ಜೊತೆಗೆ ಯುವ ಪೀಳಿಗೆಯ ಭವಿಷ್ಯಕ್ಕೂ ದೊಡ್ಡ ಅಪಾಯವನ್ನುಂಟು ಮಾಡುತ್ತಿದೆ. ಇದಲ್ಲದೆ ಸಮಾಜದಲ್ಲಿ ಹೆಚ್ಚುತ್ತಿರುವ ಅಕ್ರಮ ಮದ್ಯ ಸೇವನೆ, ಅಕ್ರಮ ಮಾರಾಟ ಹಾಗೂ ಮಾದಕ ವಸ್ತುಗಳ ಬಳಕೆಯನ್ನು ತಡೆಯಲು ಸಾರ್ವಜನಿಕರ ಸಹಕಾರ ಅತ್ಯಗತ್ಯವಿದೆ. ಈ ಸಂಬಂಧ ಯಾವುದೇ ರೀತಿಯ ಅಕ್ರಮ ಚಟುವಟಿಕೆಗಳ ಬಗ್ಗೆ ಮಾಹಿತಿ ದೊರೆತಲ್ಲಿ ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳು ಮಂಡಳಿಯ ಸಹಾವಾಣಿ ಸಂಖ್ಯೆ: 080-22863230ಗೆ ಕರೆ ಮಾಡಿ ದೂರು ನೀಡಬಹುದು ಎಂದರು. ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿಯ ಅಧ್ಯಕ್ಷರಾದ ಶರಣಪ್ಪ ಸಲಾದಪುರ ಅವರು ಮಾತನಾಡಿ, ಸಾರ್ವಜನಿಕರಿಂದ ಬರುವ ದೂರುಗಳು ಮತ್ತು ಮಾಹಿತಿಗಳನ್ನು ಗೌಪ್ಯವಾಗಿ ಪರಿಗಣಿಸಲಾಗುವುದಲ್ಲದೆ, ಸಂಬಂಧಪಟ್ಟವರ ಮೇಲೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು. ಮದ್ಯ ಮತ್ತು ಮಾದಕ ವಸ್ತುಗಳಿಂದ ಸಮಾಜವನ್ನು ರಕ್ಷಿಸುವುದು ಎಲ್ಲರ ಜವಾಬ್ದಾರಿಯಾಗಿದೆ. ಆದ್ದರಿಂದ ಸಾರ್ವಜನಿಕರು ಜಾಗೃತರಾಗಿದ್ದು ಇಂತಹ ಅಕ್ರಮ ಚಟುವಟಿಕೆಗಳ ವಿರುದ್ಧ ಧೈರ್ಯವಾಗಿ ಮಾಹಿತಿ ನೀಡುವ ಮೂಲಕ ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದರು.

ಈ ಸಹಾಯವಾಣಿಯು, ಸರ್ಕಾರಿ ರಜಾ ದಿನಗಳು ಹೊರತುಪಡಿಸಿ ಕಚೇರಿ ಸಮಯದ ವೇಳೆ ಅಂದರೆ ಬೆಳಗ್ಗೆ 10 ಗಂಟೆಯಿಂದ ಸಂಜೆ 5.30 ರವರೆಗೆ ಕಾರ್ಯನಿರ್ವಹಿಸಲಿದೆ. ಈ ವೇಳೆ ಕಲ್ಬುರ್ಗಿ ಡಿ.ಡಿ.ಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಸೋಮಶೇಖರ್ ಗೋನಾಯಕ್, ಮಂಡಳಿ ಅಧ್ಯಕ್ಷರ ಕಾರ್ಯದರ್ಶಿ ನರಸಿಂಹಮೂರ್ತಿ, ಮಂಡಳಿ ಕಾರ್ಯದರ್ಶಿ ಎನ್.ಎಸ್. ಮಹೇಶ್ ಮತ್ತಿತರರು ಉಪಸ್ಥಿತರಿದ್ದರು.

ರಾಜ್ಯದಲ್ಲಿ ಆಲಿಕಲ್ಲು ಮಳೆ, ಸಿಡಿಲಿಗೆ ಬಾಲಕ ಬಲಿ

ಬೆಂಗಳೂರು: ರಾಜ್ಯದ ರಾಯಚೂರು, ಕೊಡಗು ಮತ್ತು ಹಾಸನ ಜಿಲ್ಲೆಗಳಲ್ಲಿ ಆಲಿಕಲ್ಲು ಸಹಿತ ಭಾರಿ ಮಳೆಯಾಗಿದೆ. ಈ ಅಕಾಲಿಕ ಮಳೆಯು ಬಿಸಿಲಿನಿಂದ ಜನರಿಗೆ ತಂಪೆರೆದರೂ, ರಾಯಚೂರಿನ ಮಾವು ಬೆಳೆಗಾರರು ಮತ್ತು ಇತರೆ ರೈತರಿಗೆ ಬೆಳೆ ಹಾನಿಯ ಭೀತಿ ತಂದೊಡ್ಡಿದೆ.

ಹೊಲದಲ್ಲಿ ಕೆಲಸ ಮಾಡುತ್ತಿದ್ದ ಕೊಪ್ಪಳ ಜಿಲ್ಲೆ ಯಲಬುರ್ಗಾದ ಎನ್.ಜರಕುಂಟಿಯ ಮಂಜುನಾಥ್ (15) ಸಿಡಿಲಿಗೆ ಬಲಿಯಾಗಿದ್ದಾನೆ. ಬಿಸಿಲ ನಾಡು ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಮಲ್ಲದಗುಡ್ಡ ಸೇರಿದಂತೆ ವಿವಿಧೆಡೆ ಸುಮಾರು ಒಂದು ಗಂಟೆ ಕಾಲ ನಿರಂತರ ಆಲಿಕಲ್ಲು ಮಳೆಯಾಗಿದೆ. ಬಿಸಿಲಿನಿಂದ ಕಂಗೆಟ್ಟಿದ್ದ ಜನರಿಗೆ ಮಳೆ ತಂಪು ನೀಡಿದ್ದರೂ, ಆಲಿಕಲ್ಲುಗಳ ಅಬ್ಬರ ಮಾವು ಬೆಳೆಗಾರರಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿದೆ. ಹೂವು ಬಿಟ್ಟಿದ್ದ ಮಾವಿನ ಗಿಡಗಳಿಗೆ ಆಲಿಕಲ್ಲು ಮಳೆ ಏಟು ನೀಡಿದ್ದು, ಬೆಳೆ ಹಾನಿಯಾಗುವ ಭೀತಿ ಎದುರಾಗಿದೆ.

ರಾಜ್ಯದ ಕರಾವಳಿ ಮತ್ತು ಉತ್ತರ ಒಳನಾಡಿನ ಒಂದೆರಡು ಕಡೆಗಳಲ್ಲಿ ಮಳೆಯಾಗಿದೆ. ಬೀದರ್‌ನಲ್ಲಿ ಆಲಿಕಲ್ಲು ಮಳೆಯಾಗಿದ್ರೆ. ಹುಬ್ಬಳ್ಳಿಯಲ್ಲಿ ಗುಡುಗು ಸಹಿತ ಭಾರೀ ಮಳೆಗೆ ಜನರು ಬೆಚ್ಚಿದ್ದಾರೆ. ಇತ್ತ ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಮಾತ್ರ ಒಣಹವೆ ಮುಂದುವರಿದಿದೆ.



ಬೀದರ್ ನಗರದಲ್ಲಿ ಭಾರೀ ಬಿರುಸಿನ ಮಳೆಯಾಗಿದ್ದು ಸಂಜೆ ವೇಳೆಗೆ ಬಿರುಗಾಳಿ ಹಾಗೂ ಗುಡುಗು ಸಹಿತ ಭಾರೀ ಮಳೆಯಾಗಿದ್ದು, ಸುಡುಬಿಸಿಲಿನಿಂದ ಕಂಗೆಟ್ಟಿದ್ದ ಜನರಿಗೆ ತಂಪೆರೆದಿದ್ದಾನೆ. ಧಾರವಾಡ, ಕೊಡಗು ಜಿಲ್ಲೆಯ ಮಡಿಕೇರಿ ನಗರ, ಕಕ್ಕಬ್ಬೆ, ನೆಲಜಿ ಸೇರಿದಂತೆ ಸುತ್ತಮುತ್ತಲ ಗ್ರಾಮಗಳಲ್ಲಿ ಮಳೆಯಾಗಿದೆ. ಕೋಲಾರ, ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರ, ಕೊಪ್ಪ ಮತ್ತು ಕಳಸ ಭಾಗದಲ್ಲಿ ಭಾರೀ ಮಳೆಯಾಗಿದ್ದರೆ, ಶೃಂಗೇರಿ ಹಾಗೂ ಚಿಕ್ಕಮಗಳೂರು ನಗರದಲ್ಲಿ ಸಾಧಾರಣ ಮಳೆಯಾಗಿದೆ. ಮತ್ತೊಂದೆಡೆ ರೈತರು ಜೋಳವನ್ನು ಕಟಾವು ಮಾಡಿ ಜೋಳ ರಾಶಿ ಮಾಡಲು ಸಿದ್ಧತೆ ನಡೆಸಿದ್ರು. ಈ ವೇಳೆ ಅಕಾಲಿಕ ಮಳೆಯಾಗಿದ್ದು, ಹೊಲದಲ್ಲಿ ಕಟಾವು ಮಾಡಿ ಜೋಡಿಸಿದ ಜೋಳ ಭಾರೀ ಮಳೆಯಿಂದಾಗಿ ಹಾನಿಯಾಗಿದೆ. ಕೈಗೆ ತುತ್ತು ಬಾಯಿಗೆ ಬರಲಿಲ್ಲ ಅಂತ ರೈತರು ಬೇಸರಗೊಂಡಿದ್ದಾರೆ.

ಕಿರುಸುದ್ದಿ

ಉತ್ತಮ ಲಾಭದತ್ತ ಬಮುಲ್



ಹೊಸಕೋಟೆ: ಬಮುಲ್ ನಲ್ಲಿ ಡಿ.ಕೆ.ಸುರೇಶ್ ಅಧ್ಯಕ್ಷರಾಗಿ ಆಯ್ಕೆಯಾದ ಮೇಲೆ ಸೋರಿಕೆಯನ್ನು ತಡೆದು ಸಂಸ್ಥೆ ಲಾಭದತ್ತ ಮುನ್ನುಗಲು ಅಗತ್ಯ ಕ್ರಮ ಕೈಗೊಂಡಿದೆಂದು ಬಮುಲ್ ನಿರ್ದೇಶಕ ಬಿ.ವಿ.ಸತೀಶ್ ಗೌಡರು ಹೇಳಿದರು ಬೆಂಡಿಗಾನಹಳ್ಳಿ ಗ್ರಾಮದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ವ್ಯಾಪಾರ ಮತ್ತು ವಹಿವಾಟಿನಲ್ಲಿ ಬಮುಲ್ ಕಳೆದ ವರ್ಷಕ್ಕಿಂತ ಈ ವರ್ಷ ಉತ್ತಮ ಸಾಧನೆಯನ್ನು ತೋರಿದೆ. ಈ ವರ್ಷ 3400 ಕೋಟಿ ರೂ. ವಹಿವಾಟು ಮಾಡಿದೆ. ಕಳೆದ ವರ್ಷಕ್ಕಿಂತ 500 ಕೋಟಿ ರೂ. ವಹಿವಾಟು ಹೆಚ್ಚಿಸಿಕೊಂಡಿದೆ ಎಂದರು. ಈ ವರ್ಷ 60 ಕೋಟಿ ಲಾಭಗಳಿಸಿದೆ. ಹೈನುಗಾರರು ಸಾಕಷ್ಟು ಕಷ್ಟ ಪಟ್ಟು ಹೈನುಗಾರಿಕೆಯನ್ನು ಮಾಡುತ್ತಿದೆ. ಅವರ ಹಿತವನ್ನು ಗಮನದಲ್ಲಿಟ್ಟುಕೊಂಡು 2025-26ನೇ ಸಾಲಿನಲ್ಲಿ ಸಹಕಾರ ಸಂಘಗಳ ಮೂಲಕ ರೈತರು ಪೂರೈಯಿಸಿರುವ ಪ್ರತಿ ಲೀಟರ್ ಹಾಲಿಗೆ ಒಂದು ರೂ.ಬೋನಸ್ ನೀಡಲಾಗುತ್ತಿದೆಂದರು. 1800 ಗುತ್ತಿಗೆ ಕಾರ್ಮಿಕರಿಗೆ ತಲಾ 5 ಸಾವಿರದಂತೆ ಉಡುಗೊರೆ ನೀಡಲಾಗುವುದು. 90 ಲಕ್ಷ ರೂ. ವೆಚ್ಚದಲ್ಲಿ ಯುಗಾದಿ ಹಬ್ಬಕ್ಕೆ ಉಡುಗೊರೆ ರೂಪದಲ್ಲಿ ವಿತರಣೆ ಮಾಡಲಾಗುವುದು. 2300 ಪ್ರಾಥಮಿಕ ಹಾಲು ಉತ್ಪಾದಕ ಸಂಘಗಳಿಗೆ 15 ಸಾವಿರದಂತೆ ಒಟ್ಟು 3.45 ಕೋಟಿ ವಿತರಣೆ ಮಾಡಿದೆ. ಈ ಮೂಲಕ ಸದಸ್ಯ ಸಂಘಗಳ ಬಲವರ್ಧನೆಗೆ ಅನುದಾನ, ಸಂಘಗಳ ಕಾರ್ಯಕ್ಷಮತೆ ಹೆಚ್ಚಿಸಿ ಉತ್ತಮ ಸೌಲಭ್ಯ ಒದಗಿಸಲು ಕ್ರಮಕ್ಕೈಗೊಂಡಿದೆಂದರು ತಿಳಿಸಿದರು. ಗ್ರಾಪಂ ಸದಸ್ಯ ಹೊಸಹಳ್ಳಿ ಜಯರಾಮಣ್ಣ, ದೊಡ್ಡನಲ್ಲಾಳ ಗ್ರಾಪಂ ಮಾಜಿ ಅಧ್ಯಕ್ಷ ಸಂಜೀವೇಗೌಡ, ಯುವ ಮುಖಂಡ ಹಸಿಗಾಳ ಜಗದೀಶ್ ಹಾಜರಿದ್ದರು.

ಮಾ.22ಕ್ಕೆ ನಾನೂ ಕಾಫಿರ ಪುಸ್ತಕ ಲೋಕಾರ್ಪಣೆ

ಮೈಸೂರು: ಅಖಿಲ ಭಾರತೀಯ ಸಾಹಿತ್ಯ ಪರಿಷದ್, ಸಹಿತಂ ಪ್ರಕಾರ ಮತ್ತು ಸ್ವರಾಷ್ಟ್ರಪ್ರಕಾಶನ ಸಹಯೋಗದಲ್ಲಿ ನಾನು ಕಾಫಿರ (ಭಾಬಾ ಸಾಹೇಬರ ಹಿಂದುತ್ವ ಕಥನ) ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮ ಮಾ.22 ರಂದು ಮೈಸೂರಿನಲ್ಲಿ ನಡೆಯಲಿದೆ. ಅಂದು ಬೆಳಗ್ಗೆ 10.30ಕ್ಕೆ ಮೈಸೂರಿನ ಇನ್ಫೋಸಿಸ್ ಪಕ್ಕದಲ್ಲಿರುವ ಹೆಲ್ತ್‌ಕೇರ್ ಯೂನಿಟ್‌ನ ಸ್ಕ್ಯಾನ್ರೆ ಸಭಾಂಗಣದಲ್ಲಿ ನಡೆಯುವ ಕಾರ್ಯಕ್ರಮದ ಸಾನಿಧ್ಯವನ್ನು ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮನಾಥಸ್ವಾಮೀಜಿ ವಹಿಸಲಿದ್ದು, ಪುಸ್ತಕವನ್ನು ಚಿಂತಕರು ಹಾಗೂ ಹೆಸರಾಂತ ಕಾದಂಬರಿಕಾರರಾದ ಸಹನಾ ವಿಜಯ್ ಕುಮಾರ್ ಬಿಡುಗಡೆ ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕರ್ನಾಟಕ ದಕ್ಷಿಣ ಪ್ರಾಂತದ ನಿಕಟಪೂರ್ವ ಸಂಘ ಚಾಲಕರಾದ ಮಾ.ವೆಂಕಟರಾಮ್ ಆಗಮಿಸುವರು. ಸಂವಿಧಾನ ತಜ್ಞರಾದ ಲೇಖಕ ಡಾ.ಸುಧಾಕರ ಹೊಸಳ್ಳಿ ಉಪಸ್ಥಿತರಿರುವರು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಶಾಶ್ವತ ಶುದ್ಧನೀರು ಒದಗಿಸಲು ಕ್ರಮ



ಆನೇಕಲ್: ಜನತೆಗೆ ಮೂಲ ಸೌಕರ್ಯ ನೀಡುವುದು ಜನಪ್ರತಿನಿಽಗಳ ಜವಾಬ್ದಾರಿ ಈ ನಿಟ್ಟಿನಲ್ಲಿ ಶುದ್ಧ ಕುಡಿಯುವ ನೀರನ್ನು ಕ್ಷೇತ್ರಾದ್ಯಂತ ಒದಗಿಸುವುದಕ್ಕೆ ಪ್ರಮಾಣಿಕವಾಗಿ ಕೆಲಸ ಮಾಡಲಾಗುತ್ತಿದೆ ಎಂದು ಶಾಸಕ ಬಿ.ಶಿವಣ್ಣ ತಿಳಿಸಿದರು, ಹೆಬ್ಬಗೋಡಿ ನಗರ ಸಭೆ ವ್ಯಾಪ್ತಿಯ ವಾರ್ಡ್ ನಂಬರ್ 27ರ ಸಂಪಿಗೆ ನಗರದಲ್ಲಿ ನೂತನ ಶುದ್ಧ ಕುಡಿಯುವ ನೀರಿನ ಘಟಕ ಉದ್ಘಾಟಿಸಿ ಮಾತನಾಡಿ, ಬೇಸಿಗೆ ಕಾಲದಲ್ಲಿ ಯಾವುದೇ ರೀತಿಯಲ್ಲಿ ಕುಡಿಯುವ ನೀರಿಗೆ ತೊಂದರೆಯಾಗದಂತೆ ಸ್ಥಳೀಯ ಸಂಸ್ಥೆ ಅಽಕಾರಿಗಳು ನಿರ್ವಹಿಸಬೇಕು . ಜತೆಗೆ ಎಲ್ಲಾ ಗ್ರಾಮದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪನೆ ಮಾಡಿ ಶುದ್ಧ ನೀರು ಕುಡಿಯುವ ಮೂಲಕ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಎಂದರು. ಹೆಬ್ಬಗೋಡಿ ನಗರಸಭೆ ಸದಸ್ಯರಾದ ಲಕ್ಷ್ಮಿ ನಾರಾಯಣಸ್ವಾಮಿ ಮಾತನಾಡಿ, ಹೆಬ್ಬಗೋಡಿ ನಗರ ಸಭೆ ವ್ಯಾಪ್ತಿಯ ವಾರ್ಡ್ ನಂಬರ್ 27ರ ಸಂಪಿಗೆ ನಗರದಲ್ಲಿ ಶಾಸಕರ ವಿಶೇಷ ಅನುದಾನದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಿಸಿಕೊಟ್ಟಿದ್ದಾರೆಂದರು. ನಗರ ಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಡಾ. ಎಂ.ಜಯರಾಮ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬೊಮ್ಮಸಂದ್ರ ಲಿಂಗಣ್ಣ, ಅಧ್ಯಕ್ಷ ಮುನಿಕೃಷ್ಣ, ನಗರಸಭೆ ಸದಸ್ಯ ತಿರುಪಾಳ್ಯ ಮಂಜುನಾಥ ರೆಡ್ಡಿ, ಲಕ್ಷ್ಮಿ ನಾರಾಯಣ, ಕೃಷ್ಣಪ್ಪ, ರಘುನಾಥ್ ರೆಡ್ಡಿ, ಎಚ್ .ಸಿ .ವೆಂಕಟೇಶ್, ಅರುಣ್ ಕುಮಾರ್ ಇದ್ದರು.

ಮ್ಯಾಪಿಂಗ್ ಮಲೆನಾಡು ಸಂಸ್ಥೆ ನಡೆಸಿದ ಅಧ್ಯಯನದಿಂದ ಬಹಿರಂಗ

ಮಾಲಿನ್ಯಕ್ಕೊಳಗಾದ ವೃಷಭಾವತಿ ನದಿ

ಮಹೇಶ್ ಹೆಗಡೆ

ದಿಗಂತ ವಿಶೇಷ

ಬೆಂಗಳೂರು: ಬೆಂಗಳೂರಿನ ಪ್ರಮುಖ ನದಿಗಳಲ್ಲೊಂದಾದ ವೃಷಭಾವತಿ ನದಿ ದಿನದಿಂದ ದಿನಕ್ಕೆ ಹೆಚ್ಚು ಮಾಲಿನ್ಯಕ್ಕೆ ಒಳಗಾಗುತ್ತಿದೆ ಎಂಬ ಗಂಭೀರ ಸಂಗತಿ ಮ್ಯಾಪಿಂಗ್ ಮಲೆನಾಡು ಎಂಬ ಸಂಸ್ಥೆ ನಡೆಸಿದ ಇತ್ತೀಚಿನ ಅಧ್ಯಯನ ವರದಿಯಿಂದ ಬಹಿರಂಗ ವಾಗಿದೆ.

ಬೆಂಗಳೂರಿನ ಪಶ್ಚಿಮ ಭಾಗದ ಪ್ರಮುಖ, ಶುದ್ಧ ಜಲಧಾರೆ ಯಾಗಿದ್ದ ವೃಷಭಾವತಿ ನದಿ ಇಂದು ಪರಿಸರ ಸಂಕಷ್ಟದ ಸಂಕೇತವಾಗಿ ಪರಿಣಮಿಸಿದೆ. ಬಹುತೇಕ ತೆರೆದ ಒಳಚರಂಡಿಯಾಗಿ ಮಾರ್ಪಟ್ಟಿದ್ದು, ಪರಿಸರ ತಜ್ಞರು ಹಾಗೂ ನಾಗರಿಕ ಸಂಘಟನೆಗಳು ವೃಷಭಾವತಿಯ ಸ್ಥಿತಿಗತಿ ಕುರಿತು ಗಂಭೀರ ಎಚ್ಚರಿಕೆ ನೀಡಿವೆ.

ನಿರಂತರ ನಾಲ್ಕು ವರ್ಷಗಳ ಅಧ್ಯಯನ ವರದಿ ಬಿಡುಗಡೆ ಮಾಡಿರುವ ಮ್ಯಾಪಿಂಗ್ ಮಲೆನಾಡು ಸಂಸ್ಥೆ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ 2020 ರಿಂದ 2024 ರವರೆ ಸಂಗ್ರಹಿಸಿದ ಮಾಹಿತಿಯಂತೆ ನದಿಯಲ್ಲಿ ಬಯೋಲಾಜಿಕಲ್ ಆಕ್ಸಿಜನ್ ಡಿಮ್ಯಾಂಡ್ ಕಾನೂನುಬದ್ಧ ಮಿತಿಯನ್ನು ಮೀರಿರುವುದು ಕಂಡುಬಂದಿದೆ. ಅಲ್ಲದೆ ನೀರಿನಲ್ಲಿ ಪಾದರಸದ ಪ್ರಮಾಣವು ಅನುಮತಿಸಲಾದ ಮಿತಿಗಿಂತ 500 ಪಟ್ಟು ಹೆಚ್ಚಿದೆ.ಇದು ನೀರಿನ ಗುಣಮಟ್ಟ ತೀವ್ರವಾಗಿ ಕುಸಿದಿರುವುದನ್ನು ಸೂಚಿಸಿದೆ.

ಜೀವ ಜಾಲಕ್ಕೆ ಹಾನಿ: ಇದರಿಂದ ಆರೋಗ್ಯ ಮತ್ತು ಕೃಷಿಗೆ ಈಗಾಗಲೇ ಅಪಾಯ ಎದುರಾಗಿದ್ದು, ಇದರ ಪ್ರಮಾಣ ಇನ್ನೂ ಹೆಚ್ಚಾಗಲಿದೆ. ವೃಷಭಾವತಿ ನದಿಯ ಮಾಲಿನ್ಯದಿಂದ ಭವಿಷ್ಯದಲ್ಲಿ ಬೆಂಗಳೂರಿಗೆ ವಿಷಮಯ ಕುಡಿಯುವ ನೀರಿನ ಅಪಾಯ ಎದುರಾಗಲಿದೆ. ನದಿ ನೀರಿನಿಂದ ಬೆಳೆಯುವ ತರಕಾರಿಗಳಲ್ಲಿ ಭಾರಿ ಲೋಹಗಳ ಸಂಗ್ರಹ, ಆರೋಗ್ಯ ಸಮಸ್ಯೆಗಳು, ಕಾವೇರಿ ವನ್ಯಜೀವಿ ಸಂರಕ್ಷಿತ ಪ್ರದೇಶದ ಜೀವಜಾಲಕ್ಕೆ ಹಾನಿ, ಮಹಸೀರ್ ಎಂಬ ಮೀನುಗಳಂತಹ ಜಾತಿಗಳಿಗೆ ನಾಶದ ಭೀತಿ ಎದುರಾಗಲಿದೆ ಎಂದು ವರದಿ ತಿಳಿಸಿದೆ.





ಬೆಂಗಳೂರಿನ ಜೀವನಾಡಿಯಾಗಿದ್ದ ವೃಷಭಾವತಿ ನದಿಯನ್ನು ಕಂದಾಯ ದಾಖಲೆಗಳಲ್ಲಿ ನಾಲೆ ಎಂದು ದಾಖಲಿಸಲಾಗಿದೆ. ಇದನ್ನು ಬದಲಾಯಿಸಿ ನದಿ ಎಂಬ ಘನತೆ ಮತ್ತು ಗೌರವವನ್ನು ನೀಡಬೇಕು. ನದಿ ಮತ್ತು ನಾಲೆಗೆ ಇರುವ ಕಾನೂನು ನಿಯಮಗಳು ಬೇರೆಬೇರೆ. ನದಿಯಲ್ಲಿ ತ್ಯಾಜ್ಯ ನೀರನ್ನು ಬಿಡುವುದು ಅಪರಾಧ ಮತ್ತು ಅದಕ್ಕೆ ಬಫರ್ ಝೋನ್ ಇರುತ್ತದೆ. ಆದರೆ, ನಾಲೆಗೆ ಇಂತಹ ಕಟ್ಟುನಿಟ್ಟಿನ ನಿಯಮಗಳಿಲ್ಲ, ಕಾರಣ ವೃಷಭಾವತಿ ಕೊಳಚೆ ನೀರಿನ ನಾಲೆಯಾಗಿ ಮಾರ್ಪಟ್ಟಿದೆ. ಸರ್ಕಾರ ಕಂದಾಯ ದಾಖಲೆಗಳಲ್ಲಿ ತಕ್ಷಣವೇ ನದಿ ಎಂದು ಮರುನಾಮಕರಣ ಮಾಡಬೇಕು.

■ ವಿ.ರಾಮಪ್ರಸಾದ್, ಫ್ರೆಂಡ್ಸ್ ಆಫ್ ಲೇಕ್ಸ್ ಸಂಸ್ಥಾಪಕ

ವೃಷಭಾವತಿ ನದಿಯು ಬೆಂಗಳೂರಿನ ತ್ಯಾಜ್ಯವನ್ನು ಹೊತ್ತೊಯ್ಯುವ ಕಾಲುವೆಯಂತಾಗಿದೆ. ಇದರ ಪರಿಣಾಮಗಳು ಕಾವೇರಿ ಕೊಳ್ಳದ ಉದ್ದಕ್ಕೂ ಹರಡುತ್ತಿವೆ. ರಾಸಾಯನಿಕಗಳು ಮತ್ತು ಒಳಚರಂಡಿ ನೀರು ನೇರವಾಗಿ ಆಹಾರ ಸರಪಳಿಯನ್ನು ಸೇರುತ್ತಿವೆ. ವೃಷಭಾವತಿಯನ್ನು ಉಳಿಸುವುದು ಎಂದರೆ ಕೇವಲ ನೀರನ್ನು ಶುದ್ಧೀಕರಿಸುವುದಲ್ಲ, ಮುಂದಿನ ಪೀಳಿಗೆಯ ಆರೋಗ್ಯವನ್ನು ರಕ್ಷಿಸುವುದು.

■ ನಿರ್ಮಲಾಗೌಡ, ಮ್ಯಾಪಿಂಗ್ ಮಲೆನಾಡು

ವಿವಿಧ ಚಟುವಟಿಕೆಗಳ ಪರಿಣಾಮ

ವೃಷಭಾವತಿ ನದಿ ಕಣಿವೆಯಲ್ಲಿ ಹಲವು ದಶಕಗಳಿಂದ ಮಾನವ ಚಟುವಟಿಕೆಗಳ ಒತ್ತಡ ಹೆಚ್ಚುತ್ತಿದೆ. ನಗರದಿಂದ ಹರಿಯುವ ಮಲಿನ ನೀರು ನೇರವಾಗಿ ನದಿಗೆ ಸೇರುತ್ತಿದೆ. ದಿನಕ್ಕೆ ಸುಮಾರು 576 ಮಿಲಿಯನ್ ಲೀಟರ್ ಮಲಿನ ನೀರು ನದಿಗೆ ಸೇರುತ್ತಿದೆ. ಪೀಣ್ಯ, ಯಶವಂತಪುರ, ಕುಂಬಳಗೋಡು ಮೊದಲಾದ ಕೈಗಾರಿಕಾ ಪ್ರದೇಶಗಳಿಂದ ರಾಸಾಯನಿಕ ತ್ಯಾಜ್ಯಗಳು ನದಿಗೆ ಸೇರುತ್ತಿವೆ. ಪ್ಲಾಸ್ಟಿಕ್, ನಿರ್ಮಾಣ ಅವಶೇಷಗಳು ಮತ್ತು ಗೃಹ ತ್ಯಾಜ್ಯ ದೊಡ್ಡ ಪ್ರಮಾಣದಲ್ಲಿ ಸೇರುತ್ತಿವೆ. ನದಿ ಸುತ್ತಲಿನ ಬಫರ್ ವಲಯಗಳಲ್ಲಿ ಅಕ್ರಮ ಕಟ್ಟಡಗಳು ಹಾಗೂ ರಸ್ತೆ ನಿರ್ಮಾಣದಿಂದ ನದಿಯ ಸ್ವಾಭಾವಿಕ ಹರಿವು ಕುಂಠಿತವಾಗಿದೆ ಎಂದು ವರದಿ ಮಾಹಿತಿ ನೀಡಿದೆ.

ಪರಿಸರ ತಜ್ಞರ ಸಲಹೆ

- ಮಲಿನ ನೀರು ಮತ್ತು ಮಳೆನೀರು ಕಾಲುವೆಗಳನ್ನು ಸಂಪೂರ್ಣವಾಗಿ ಬೇರ್ಪಡಿಸುವುದು.
- ನದಿ ಬಫರ್ ವಲಯಗಳನ್ನು ಕಾನೂನುಬದ್ಧವಾಗಿ ರಕ್ಷಿಸುವುದು.
- ಕೈಗಾರಿಕಾ ತ್ಯಾಜ್ಯ ನಿಯಂತ್ರಣ.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

ವಿವಿಧ ಕ್ಷೇತ್ರದಲ್ಲಿ ಮಹಿಳಾ ಸಾಧನೆ

ದೊಡ್ಡಬಳ್ಳಾಪುರ: ಪ್ರಸ್ತುತ ಕಾಲಘಟ್ಟದಲ್ಲಿ ಮಹಿಳೆಯರು ಕಲೆ ಸಾಹಿತ್ಯ ಕ್ರೀಡೆ. ರಾಜಕೀಯ ಎಲ್ಲಾ ರಂಗದಲ್ಲೂ ಭಾಗವಹಿಸುತ್ತಿದ್ದಾರೆಂದು ಶ್ರೀರಾಮ ಹಾಸ್ಪಿಟಲ್ ಸಂಸ್ಥಾಪಕ ಡಾ. ವಿಜಯಕುಮಾರ್ ಹೇಳಿದರು.

ನಗರದಲ್ಲಿ ಶ್ರೀ ಸಿರಿ ಸಮೃದ್ಧಿ ಮಹಿಳಾ ಸಂಘ, ಕನ್ನಡ ಜಾಗೃತಿ ವೇದಿಕೆ, ಕನ್ನಡ ಸಾಹಿತ್ಯ ಪರಿಷತ್ ಸಹಯೋಗದೊಂದಿಗೆ ಆಯೋಜಿಸಿದ್ದ ಅಂತ ರಾಷ್ಟ್ರೀಯ ಮಹಿಳಾ ದಿನಾಚರಣೆಯ ಕಾರ್ಯಕ್ರಮ ದಲ್ಲಿ ಮಾತನಾಡಿ, ನಮ್ಮ ದೇಶದ ಹೆಮ್ಮೆಯ ರಾಷ್ಟ್ರಪತಿ ದ್ರೌಪತಿ ಮುರ್ಮು, ಹಾಗೂ ನಮ್ಮ ಹಿಂದಿನ ಪ್ರಧಾನ ಮಂತ್ರಿಯಾದ ಇಂದಿರಾಗಾಂಽ ಅವರನ್ನು ನಾವೆಲ್ಲರೂ ನೆನೆಯಲೇ ಬೇಕಾಗುತ್ತದೆ ಎಂದು ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷೆ ಪ್ರಮಿಳಾಮಹಾದೇವ ಮಾತನಾಡಿ, ವಿಶ್ವ ಅಂತಾರಾಷ್ಟ್ರೀಯಮಹಿಳಾದಿನಾಚರಣೆಪ್ರತಿವರ್ಷಮಾರ್ಚ್ 8ರಂದು ವಿಶ್ವದಾದ್ಯಂತ ಆಚರಿಸಲಾಗುತ್ತದೆ. ಈ ದಿನ ಮಹಿಳೆಯರ ಸಾಧನೆಯನ್ನು ಗೌರವಿಸುವುದಕ್ಕೂ, ಮಹಿಳಾ ಸಮಾನತೆ ಮತ್ತು ಹಕ್ಕುಗಳಿಗಾಗಿ ಜಾಗೃತಿ ಮೂಡಿಸುವುದಕ್ಕೂ ಸಮರ್ಪಿತವಾಗಿದೆಂದರು.

ಅಮೆರಿಕಾದಲ್ಲಿ ಮಹಿಳಾ ಕಾರ್ಮಿಕರು ತಮ್ಮ ಹಕ್ಕುಗಳಿಗಾಗಿ ಪ್ರತಿಭಟನೆ ನಡೆಸಿದರು. 1910ರಲ್ಲಿ ಡೆನ್ಮಾರ್ಕ್‌ನ ಕೋಪನ್‌ಹೇಗನ್‌ನಲ್ಲಿ ನಡೆದ ಮಹಿಳಾ ಸಮಾವೇಶದಲ್ಲಿ ಈ ದಿನವನ್ನು ಆಚರಿಸುವ ಆಲೋಚನೆ ಮುಂದಿಟ್ಟರು.

ನಂತರ 1975ರಲ್ಲಿ ಅಽಕೃತವಾಗಿ ಮಾರ್ಚ್ 8ಅನ್ನು ಅಂತಾರಾಷ್ಟ್ರೀಯ ಮಹಿಳಾ ದಿನವಾಗಿ ಗುರುತಿಸಿತು ಎಂದು ವಿವರಿಸಿದರು.



ಮಹಿಳೆಯರ ಸಮಾನ ಹಕ್ಕು ಮತ್ತು ಗೌರವಕ್ಕಾಗಿ ಜಾಗೃತಿ ಮೂಡಿಸುವುದು ಸಮಾಜದಲ್ಲಿ ಮಹಿಳೆಯರ ಸಾಧನೆಯನ್ನು ಗುರುತಿಸುವುದು. ಲಿಂಗ ಸಮಾನತೆ ಪ್ರೋತ್ಸಾಹಿಸುವುದು, ಮಹಿಳೆಯರ ಶಿಕ್ಷಣ, ಆರೋಗ್ಯ ಮತ್ತು ಉದ್ಯೋಗ ಅವಕಾಶವನ್ನು ನೀಡಬೇಕೆಂದು ತಿಳಿಸಿದರು.

ಮಹಿಳೆಯರಿಗೆ ಜನರಲ್ ನಾಲೆಡ್ಜ್ ಕ್ವಿಜ್, ರಸಪ್ರಶ್ನೆ ಕಾರ್ಯಕ್ರಮ, ಹಾಡುಗಾರಿಕೆ, ನೃತ್ಯ ಭರತನಾಟ್ಯ, ಜಾನಪದ, ಮತ್ತು ಮಹಿಳೆಯರ ಆರೋಗ್ಯದ ಬಗ್ಗೆ ಆರೋಗ್ಯ ತಜ್ಞರಿಂದ ಸಲಹೆಗಳನ್ನು ನೀಡಲಾಯಿತು. ನಗರಸಭೆ ಸದಸ್ಯ ತ.ನ.ಪ್ರಭುದೇವ್, ಕನ್ನಡ ಜಾಗೃತಿ ವೇದಿಕೆ ಜಿಲ್ಲಾಧ್ಯಕ್ಷ ಎಂ.ನಾಗರಾಜ್, ತಾಲೂಕು ಅಧ್ಯಕ್ಷ ಸಿ.ಶಶಿಧರ್, ಕಾರ್ಯಾಧ್ಯಕ್ಷ ಮಹದೇವ್, ಡ್ಯಾನ್ಸ್ ಅಕಾಡೆಮಿ ಮುಖ್ಯಸ್ಥರಾದ ಹಂಸವೇಣಿ, ಮಹಿಳಾ ಸಮಾಜದ ಕುಮುದ, ಶ್ರೀ ಸಮೃದ್ಧಿ ಮಹಿಳಾ ಸಂಘದ ಸಂಸ್ಥಾಪಕಿ ಜ್ಯೋತಿ ಇದ್ದರು.

ಮಠಗಳಿಂದ ಸಮುದಾಯದ ಅಭಿವೃದ್ಧಿ

ಹೊಸಕೋಟೆ: ಮಠಗಳ ಅಭಿವೃದ್ಧಿಯಿಂದ ಮಾತ್ರ ಸಮುದಾಯಗಳು ಅಭಿವೃದ್ಧಿ ಹೊಂದಲು ಸಾಧ ಎಂದು ವಹ್ನೀಕುಲ ತಿಗಳ ಸಂಘದ ಮಾಜಿ ರಾಜ್ಯಾಧ್ಯಕ್ಷ ಡಾ.ಸಿ.ಜಯರಾಜ್ ತಿಳಿಸಿದರು.

ತಾಲೂಕಿನ ಶಿವನಾಪುರದಲ್ಲಿರುವ ತಿಗಳ ಸಮುದಾಯದ ಮಠದಲ್ಲಿ ಮಠದ ಅಭಿವೃದ್ಧಿಗೆ ಎರಡು ಲಕ್ಷ ರೂ. ದೇಣಿಗೆ ನೀಡಿ ಮಾತನಾಡಿ, ಮಠದಲ್ಲಿ ಆಚಾರ ವಿಚಾರದಲ್ಲಿ ಶಿಷ್ಟಾಚಾರಗಳ ಪಾಲಿಸುವುದರ ಜತೆಗೆ ಸಮುದಾಯದ ಅಭಿವೃದ್ಧಿ ಹಾಗೂ ಸಮಾಜಮುಖಿ ಕೆಲಸ ಮಾಡುತ್ತದೆಂದರು.

ಸಮುದಾಯವನ್ನು ಉತ್ತಮ ಹಾದಿಯಲ್ಲಿ ಕೊಂಡ್ಯೊಯುವ ಮೂಲಕ ಸಮುದಾಯಗಳ ಬೆಳ ವಣಿಗೆಗೆ ಕೊಡುಗೆ ನೀಡುತ್ತದೆ. ತಿಗಳ ಸಮುದಾಯದ ಮೊದಲ ಮಠವನ್ನು ಹೊಸಕೋಟೆ ತಾಲೂಕಿನ ಶಿವನಾಪುರದಲ್ಲಿ ಸ್ಥಾಪಿಸಲಾಗಿದೆ. ಶ್ರೀ ಪ್ರಣವಾನಂದಪುರ ಸ್ವಾಮೀಜಿ ಪೀಠಾಧ್ಯಕ್ಷರನ್ನಾಗಿ ಸಮುದಾಯ ಒಪ್ಪಿಕೊಂಡಿದ್ದೇವೆ. ಅವರ ಮಾರ್ಗದರ್ಶನದಲ್ಲಿ ಸಮುದಾಯ ಉತ್ತಮ ಕೆಲಸ ಮಾಡುತ್ತಾ ಬರುತ್ತಿದೆಂದರು. ಕಳೆದ ಆಯವ್ಯಯದಲ್ಲಿ ರಾಜ್ಯ ಸರ್ಕಾರ ರಾಜ್ಯದ ಸುಮಾರು 25 ಮಠಗಳಿಗೆ 150ಕೋಟಿ ರೂ. ಅನುದಾನ ನೀಡಿದೆ ಹಾಗೂ ಸುಮಾರು 65 ಎಕರೆ ಭೂಮಿ ನೀಡಿದೆ. ಆದರೆ, ನಮ್ಮ ವಹ್ನೀಕುಲ ತಿಗಳ ಸಮುದಾಯದ ಮಠಕ್ಕೆ ಅನುದಾನ ಹಾಗೂ ಭೂಮಿ ಸಹ ನೀಡಿಲ್ಲ. ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಸಮುದಾಯದ ಕಡೆಯಿಂದ ಮನವಿ ಮಾಡುತ್ತೇವೆಂದರು. ಸಮುದಾಯದ ಮುಖಂಡರಾದ ಉಮಾಶಂಕರ್, ಮಂಜುನಾಥ್, ರವಿಕುಮಾರ್ ಸೇರಿ ಹಲವರಿದ್ದರು.



ಒಳಾಂಗಣ ಶಟಲ್ ಬ್ಯಾಡ್ಮಿಂಟನ್ ಕ್ರೀಡಾಂಗಣ ಉದ್ಘಾಟಿಸಿದ ಸಚಿವ

ಅನುದಾನದಲ್ಲಿ ಕ್ಷೇತ್ರಕ್ಕೆ ತಾರತಮ್ಯ ಮಾಡಿಲ್ಲ

ಕೃಷ್ಣ ರಾಜಪೇಟೆ: ಮಂಡ್ಯ ಜಿಲ್ಲೆಯ ಎಲ್ಲಾ ಕ್ಷೇತ್ರಗಳ ಅಭಿವೃದ್ಧಿಗೆ ಅನುದಾನವನ್ನು ನೀಡಿರುವಂತೆ ಕೃಷ್ಣರಾಜಪೇಟೆ ಕ್ಷೇತ್ರಕ್ಕೂ ಅನು ದಾನ ನೀಡಲಾಗಿದೆ. ಇದರಲ್ಲಿ ಯಾವುದೇ ತಾರತಮ್ಯ ಮಾಡಿಲ್ಲ ಎಂದು ಸಚಿವ ಎನ್.ಚಲುವರಾಯ ಸ್ವಾಮಿ ತಿಳಿಸಿದರು.

ತಾಲೂಕಿನ ಕಿಕ್ಕೇರಿ ಪಟ್ಟಣದ ಪ್ರವಾಸಿ ಮಂದಿರದ ಆವರಣದಲ್ಲಿ ಕಿಕ್ಕೇರಮ್ಮ ಗ್ರಾಮಾಂತರ ಕ್ರೀಡಾ ಸಂಘದ ಅಧ್ಯಕ್ಷ, ಕಾಂಗ್ರೆಸ್ ನಾಯಕ ಕಿಕ್ಕೇರಿಸುರೇಶ್ ಅವರ ತಂದೆ ತಾಯಿ ಜಯಲಕ್ಷ್ಮಿ ದಿವಂಗತ ಪೈಲ್ವಾನ್ ಚನ್ನೇಗೌಡರ ಹೆಸರಿನಲ್ಲಿ ಸಾರ್ವಜನಿಕರ ಉದ್ದೇಶಕ್ಕಾಗಿ ನಿರ್ಮಿ ಸಿರುವ ಒಳಾಂಗಣ ಶಟಲ್ ಬ್ಯಾಡ್ಮಿಂಟನ್ ಕ್ರೀಡಾಂಗಣವನ್ನು ಉದ್ಘಾಟಿಸಿ ಮಾತನಾಡಿ, ಮಂಡ್ಯ ಎಂದರೆ ರೈತರ ಕೃಷಿ ಪ್ರಧಾನವಾದ ಜಿಲ್ಲೆ ಎಂಬ ಹೆಸರಿದೆ, ಮೈಸೂರು ಮಹಾರಾಜರು ಮಂಡ್ಯದಲ್ಲಿ ಮೈ ಷುಗರ್ ಸಕ್ಕರೆ ಕಾರ್ಖಾನೆ ಸ್ಥಾಪಿಸಿದರು. ಕಾರ್ಖಾನೆ ಉಳುವಿಗಾಗಿ ಕಾಂಗ್ರೆಸ್ ಸರ್ಕಾರದಿಂದ ಬಹುಕೋಟಿ ಅನುದಾನ ನೀಡಿ ಶಾಶ್ವತ ನೆಲೆಗೆ ದಿಟ್ಟ ಹೆಜ್ಜೆ ಇಡಲಾಗಿದೆ ಕೃಷಿ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿ ಇತಿಹಾಸ ನಿರ್ಮಿಸಲಾಗಿದೆಂದರು.

ಶ್ರೀರಂಗಪಟ್ಟಣದಿಂದ ಪಾಂಡವಪುರ ರೈಲ್ವೆ ಸ್ಟೇಷನ್, ಚಿನಕುರಳಿ, ಕೆ.ಆರ್.ಪೇಟೆ, ಕಿಕ್ಕೇರಿ ಹಾಗೂ ಚನ್ನರಾಯಪಟ್ಟಣ ಮಾರ್ಗವಾಗಿ ಅರಸೀಕೆರೆ ರಾಜ್ಯ ಹೆದ್ದಾರಿಯ ಆಧುನಿಕರಣಕ್ಕೆ 500 ಕೋಟಿ ರೂ. ವಿಶೇಷ ಅನುದಾನ ನೀಡಲಾಗಿದೆಂದು ಹೇಳಿದರು.

ನಾಡಿನ ಪ್ರೇಮ ಕವಿ, ಮೈಸೂರು ಮಲ್ಲಿಗೆ ಖ್ಯಾತಿಯ ಕೆ.ಎಸ್. ನರಸಿಂಹಸ್ವಾಮಿ ಎಂದರೆ ನನಗೆ ಬಲು ಪ್ರೀತಿ. ಕೆ.ಎಸ್. ನರಸಿಂಹಸ್ವಾಮಿ ಟ್ರಸ್ಟ್ ಅಭಿವೃದ್ಧಿಪಡಿಸಿ ಕೆಎಸ್ ನ ಸ್ಮಾರಕ, ಅಮಾನಿಕೆರೆ ಸರೋವರಕ್ಕೆ ಅಗತ್ಯವಾದ ಜಾಗಿಂಗ್ ಪಾಥ್, ಕೃಷಿ ಇಲಾಖೆ ಕಟ್ಟಡ, ಕೆಇಬಿ ಕಚೇರಿ ಕಟ್ಟಡ ಹಾಗೂ ನಾಲೆಗಳ ಆಧುನಿಕರಣಕ್ಕೆ ಆದ್ಯತೆ ಮೇರೆಗೆ ಕ್ರಮ ಕೈಗೊಳ್ಳಲಾಗುವುದು.

ಆರು ತಿಂಗಳ ಹಿಂದೆ ನನಗೆ ತಿಳಿಸಿದ್ದರೆ ಕಿಕ್ಕೇರಿ ಪಟ್ಟಣವನ್ನು ಗ್ರಾಪಂಯಿಂದ ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲು ಅನುಕೂಲವಾಗುತ್ತಿತ್ತು ಮುಂದಿನ ದಿನಗಳಲ್ಲಿ ಪಟ್ಟಣ ಪಂಚಾಯಿತಿ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದೆಂದರು.

ಸುರೇಶ್ ಅವರು 80 ಲಕ್ಷ ರೂ. ವೆಚ್ಚದಲ್ಲಿ ಕಿಕ್ಕೇರಿ ಹೋಬಳಿ ಕೇಂದ್ರದಲ್ಲಿ ರಾಜ್ಯ ಮಟ್ಟದ ಒಳಾಂಗಣ ಶಟಲ್ ಬ್ಯಾಂಡ್ಮೆಂಟನ್ ಕ್ರೀಡಾಂಗಣ ನಿರ್ಮಿಸಿದ್ದಾರೆ. ಇವರ ಕ್ರೀಡಾಸಕ್ತಿಯು ಎಲ್ಲರಿಗೂ ಮಾದರಿಯಾಗಿದೆ. ಹಣೆಬರಹ ಗಟ್ಟಿಯಾಗಿದ್ದರೆ, ಸುರೇಶ್‌ಗೆ ಮುಂದೆ ರಾಜಕೀಯದಲ್ಲಿ ಉಜ್ವಲವಾದ ಭವಿಷ್ಯವಿದೆ ಹಾಗೂ ಉನ್ನತ ಸ್ಥಾನಮಾನಗಳು ಸಿಗಲಿವೆ ಎಂದು ಹೇಳಿದರು.

ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿ ಗೌಡ, ಡಿಸಿಸಿ ಬ್ಯಾಂಕ್ ಅಧ್ಯಕ್ಷ ಸಚಿನ್ ಚೆಲುವರಾಯ ಸ್ವಾಮಿ, ಪಾಂಡವಪುರ ಉಪ ವಿಭಾಗಾಧಿಕಾರಿ ಶ್ರೀನಿವಾಸ್, ತಹಶೀಲ್ದಾರ್ ಡಾ.ಅಶೋಕ್, ಕೆಪಿಸಿಸಿ ಸದಸ್ಯ ಸುರೇಶ್, ರಾಜ್ಯ ಯುವ ಕಾಂಗ್ರೆಸ್ ಮಾಜಿ ಉಪಾಧ್ಯಕ್ಷ ಕೆಂಪರಾಜು ಮುಖಂಡರಾದ ಬಿಎಲ್ ದೇವರಾಜು ಮಾಜಿ ಶಾಸಕ ಬಿ.ಪ್ರಕಾಶ್, ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಿ.ನಾಗೇಂದ್ರ ಕುಮಾರ್, ಎಂ.ಡಿ.ಕೃಷ್ಣಮೂರ್ತಿ, ವಿಜಯರಾಮೇಗೌಡ, ಕೋಡಿಮಾರನಹಳ್ಳಿ ದೇವರಾಜು ಮನ್ಮುಲ್ ಮಾಜಿ ಅಧ್ಯಕ್ಷ ಎಂ.ಬಿ.ಹರೀಶ್, ಡಿ.ಪ್ರೇಮ ಕುಮಾರ್, ಚಂದ್ರೇಗೌಡ, ಸಾಸಲು ಈರಪ್ಪ, ಎಲ್.ಪಿ. ನಂಜಪ್ಪ, ಕೆ.ವಿ. ಅರುಣಕುಮಾರ್, ಕೆ.ಕೆ. ಪುರುಷೋತ್ತಮ್, ಶಿವಣ್ಣ ಇದ್ದರು.



ಸಹಭೋಜನ ಸಾಮಾಜಿಕ ಸಾಮರಸ್ಯದ ಸಂಕೇತ


ಕೋಲಾರ: ಹೃದಯಪೂರ್ವಕವಾಗಿ ನಡೆಯುವ ಎಲ್ಲಾ ಸಹ ಭೋಜನ ಸತ್ಸಂಗ ಎಂದು ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ ಹೇಳಿದರು.

ಅಹಿಂದ ಮಿತ್ರ ಬಳಗದಿಂದ ರಂಜಾನ್ ಇಫ್ತಾರ್ ಕೂಟ

ನಗರದ ವಾಲ್ಮೀಕಿ ಭವನದಲ್ಲಿ ಅಹಿಂದ ಮಿತ್ರ ಬಳಗ ಆಯೋಜಿಸಿದ್ದ ಪವಿತ್ರ ರಂಜಾನ್ ಇಫ್ತಾರ್ ಕೂಟದಲ್ಲಿ ಮಾತನಾಡಿ,

ಈ ಸಹೃದಯತೆಯ ಮಿಲನದಲ್ಲಿ ನನ್ನ ಜತೆಯಾದ ಪ್ರತಿಯೊಬ್ಬರಿಗೂ ನನ್ನ ಪ್ರೀತಿಯ ನಮನಗಳು. ಸಹಬಾಳ್ವೆ, ಸಹ ಭೋಜನ, ಸೌಹಾರ್ದತೆ ಮತ್ತು ಸಹೃದಯತೆ ಕೋಲಾರ ಮಣ್ಣಿನ ಗುಣ, ಕೋಲಾರ ಸೌಹಾರ್ದತೆಯ ನೆಲದಲ್ಲಿ ಒಡನಾಡಿಗಳು, ಆತ್ಮೀ ಯರು ಮತ್ತು ಹಿತೈಷಿಗಳ ನಡುವೆ ಸಹ ಭೋಜನ ನಡೆಸಿದೆ. ಇದರಲ್ಲಿ ಸಂತಸ ದಿಂದ ಭಾಗವಹಿಸಿರುವೆ ಎಂದರು.

ಅಹಿಂದ ಮಿತ್ರ ಬಳಗದ ಸದಸ್ಯ ನಗರಸಭಾ ಸದಸ್ಯ ಅಂಬರೀಶ್ ಮಾತನಾಡಿ, ಕೆಲವು ವರ್ಷದ ಹಿಂದೆ ದಸಂಸ ಹಿರಿಯ ಮುಖಂಡ ಸಿ.ಎಂ. ಮುನಿಯಪ್ಪ ರಂಜಾನ್ ಪ್ರಯುಕ್ತ ಇಫ್ತಾರ್ ಕೂಟ ಏರ್ಪಡಿಸಿದ್ದರು. ಸೌಹಾರ್ದತೆಯ ಸಂದೇಶ ಸಾರಿದ್ದರು. ಆದರೆ, ಆನಂತರ ಕಾರಣಾಂತರದಿಂದ ಇಫ್ತಾರ್ ಕೂಟವನ್ನು ಆಯೋಜಿಸಲು ಆಗಿರಲಿಲ್ಲ. ಆದರೆ, ಈ ಸೌಹಾರ್ದತೆಯ ಪರಂಪರೆಯನ್ನು ಮುಂದುವರೆಸುವ ಉದ್ದೇಶದಿಂದ ಈ ವರ್ಷದಿಂದ ಅಹಿಂದ ಮಿತ್ರ ಬಳಗದ ಹೆಸರಿನಲ್ಲಿ ಇಫ್ತಾರ್ ಕೂಟವನ್ನು ಎಲ್ಲಾ ಧರ್ಮೀಯರು ಹಾಗೂ ಜಾತಿ ವರ್ಗಗಳ ಜನರನ್ನು ಆಹ್ವಾನಿಸಿ ಏರ್ಪಡಿಸಲಾಗಿದೆ ಎಂದರು.



ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಪರೀಕ್ಷಾ ಪರಿಕರ ವಿತರಿಸಿದ ಶಾಸಕ ಶ್ರೀನಿವಾಸ್

ಶ್ರಮದಿಂದ ಉತ್ತಮ ಫಲಿತಾಂಶ ಲಭ್ಯ

ನೆಲಮಂಗಲ: ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಶಾಸಕರಾದ ಎನ್.ಶ್ರೀನಿವಾಸ್ ಪರೀಕ್ಷಾ ಪರಿಕರಗಳನ್ನು ಕೊಡುಗೆಯಾಗಿ ನೀಡಿ ವಿದ್ಯಾರ್ಥಿಗಳಿಗೆ ಶುಭಕೋರಿದ್ದಾರೆ ಎಂದು ನಗರಸಭೆ ಅಧ್ಯಕ್ಷ ಎನ್.ಗಣೇಶ್ ತಿಳಿಸಿದರು.

ನಗರದ ಬಸವಣ್ಣ ದೇವರ ಮಠ ಆವರಣದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಪರೀಕ್ಷಾ ಕಿಟ್ ವಿತರಣಾ ಸಮಾರಂಭಕ್ಕೆ ಚಾಲನೆ ನೀಡಿ ಮಾತನಾಡಿ, ಶಿಕ್ಷಣ ಕ್ಷೇತ್ರದ ಬಗ್ಗೆ ಹೆಚ್ಚು ಆಸಕ್ತಿ ಹಾಗೂ ಪ್ರೀತಿ ಹೊಂದಿರುವ ಶಾಸಕರು ವಿದ್ಯಾರ್ಥಿಗಳಿಗೆ ಶಾಲೆ ಆರಂಭವಾದಾಗ ನೋಟ್‌ಪುಸ್ತಕ, ಪರೀಕ್ಷಾ ಸಮಯದಲ್ಲಿ ಪರಿಕರಗಳು, ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದಾಗ ಪ್ರತಿಭಾ ಪುರಸ್ಕಾರ ನೀಡುತ್ತಿರುವುದು ಮರೆಯುವಂತಿಲ್ಲ ಎಂದರು.

ವಿದ್ಯಾರ್ಥಿಗಳ ಶಿಕ್ಷಣದ ಪ್ರಮುಖ ಹಂತ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಾಗಿದ್ದು ಸತತ ಮೂರನೇ ಬಾರಿಗೆ ಶಾಸಕರು ಕ್ಷೇತ್ರದ ಎಲ್ಲಾ ಸರಕಾರಿ, ಅನುದಾನಿತ ಹಾಗೂ ಖಾಸಗಿ ಶಾಲಾ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅನುಕೂಲವಾಗುವ ಪರಿಕರಗಳನ್ನು ವಿತರಣೆ ಮಡುವ ಮೂಲಕ ಶುಭಕೋರುವ ಸಂದೇಶವನ್ನು ಸಹ ಶಾಸಕರು ನೀಡಿದ್ದಾರೆ. ಶಿಕ್ಷಣ ಇಲಾಖೆಯಿಂದ ಎಲ್ಲಾ ವಿದ್ಯಾರ್ಥಿಗಳಿಗೆ ತಲುಪಿಸುವ ಕೆಲಸವಾಗುತ್ತಿದೆಂ ದರು. ನಗರಸಭೆ ವ್ಯಾಪ್ತಿಯಲ್ಲಿ ಮಂಜುನಾಥ ಬಾಲಕಿಯರ ಶಾಲೆಯ ಮಕ್ಕಳಿಗೆ ವಿತರಣೆ ಮಾಡಿ ಚಾಲನೆ ನೀಡಿದರೆ, ಕಸಬಾ ಹೋಬಳಿ ವ್ಯಾಪ್ತಿಯಲ್ಲಿ ಬರದಿಮಂಡಿಗೆರೆ ಶಾಲೆಯ ವಿದ್ಯಾರ್ಥಿಗಳಿಗೆ ಪರಿಕರ ವಿತರಣೆ ಮಾಡಿ ಚಾಲನೆ ನೀಡಿದರು. ಪ್ರತಿ ವಿದ್ಯಾರ್ಥಿಗೂ ರೈಟಿಂಗ್ ಪ್ಯಾಡ್, ಜಾಮಟ್ರಿ ಬಾಕ್ಸ್, ಪೆನ್ನುಗಳು,ಫೈಲ್ ಸೇರಿದಂತೆ ವಿವಿಧ ಪರಿಕರಗಳು ಹಾಗೂ ಶುಭಕೋರುವ ಸಂದೇಶ ಪತ್ರವನ್ನು ನೀಡಲಾಯಿತು. ಪ್ರತಿ ಶಾಲೆಗೆ ಶಿಕ್ಷಕರು,ಮುಖಂಡರು ಭೇಟಿ ಮಾಡಿ ವಿದ್ಯಾರ್ಥಿಗಳಿಗೆ ತಲುಪಿಸಿದರು. ಬಿಇಒ ಕೆ.ಸಿ.ರಮೇಶ್ ಮಾತನಾಡಿ, ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ಪರೀಕ್ಷೆಗೆ ತಯಾರಾಗಿದ್ದು 13ಕೇಂದ್ರಗಳಲ್ಲಿ ಪರೀಕ್ಷೆಗೆ ಸಿದ್ಧತೆ ಮಾಡಿಕೊಳ್ಳಲಾಗಿದೆ. ಶಾಸಕರು ವಿದ್ಯಾರ್ಥಿಗಳಿಗೆ ವಿಶೇಷ ಕಾರ್ಯಗಾರವನ್ನು ಮಾಡಿಸುವ ಜತೆ ಪ್ರತಿ ವಿದ್ಯಾರ್ಥಿಗಳಿಗೂ ಪರೀಕ್ಷಾ ಪರಿಕರ ಕೊಡುಗೆಯಾಗಿ ನೀಡಿದ್ದು 3180 ವಿದ್ಯಾರ್ಥಿಗಳಿಗೆ ತಲುಪಿಸಲಾಗಿದೆ. ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಮೂಲಭೂತ ಸೌಕರ್ಯಗಳ ವ್ಯವಸ್ಥೆ ಮಾಡಲಾಗಿದೆಂದರು. ಬ್ಲಾಕ್ ಕಾಂಗ್ರೆಸ್ ಕಸಬಾ ಅಧ್ಯಕ್ಷ ಮಂಜುನಾಥ್‌ಗೌಡ, ಮುಖಂಡ ನಾರಾಯಣರಾವ್,ರವೀಂದ್ರಕುಮಾರ್, ರಮೇಶ್, ಮುಖ್ಯಶಿಕ್ಷಕ ಮೃತ್ಯುಂಜಯ, ಸಿಆರ್‌ಪಿ ಸಿದ್ದಗಂಗಯ್ಯ, ಮಂಜುನಾಥ್, ಗಂಗಾಧರ್ ಸೇರಿದಂತೆ ಮತ್ತಿತರರಿದ್ದರು.



ಆನೇಕಲ್ ವಕೀಲರ ಸಂಘದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

ಪುರುಷರಷ್ಟೇ ಮಹಿಳೆಯೂ ಸಮಾನಳು

ಆನೇಕಲ್: ಪ್ರತಿ ಕ್ಷೇತ್ರದಲ್ಲಿ ಮಹಿಳೆಯರು ಪುರುಷ ರಿಗಿಂತ ಹೆಚ್ಚು ಸಾಧನೆ ಮಾಡಿದ್ದಾರೆ ಎಂದು 3ನೇ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಸೋಮಶೇಖರ್ .ಬಿ ರವರು ಶ್ಲಾಘಿಸಿದರು.

ಪಟ್ಟಣದ ನ್ಯಾಯಾಲಯದ ಆವರಣ ದಲ್ಲಿ ವಕೀಲರ ಸಂಘದಿಂದ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಉದ್ಘಾಟಿಸಿ ಮಾತನಾಡಿ, ಮಹಿಳೆ ತಾಯಿ, ಮಗಳು, ಅಕ್ಕ-ತಂಗಿ, ಗೆಳತಿ, ಹೆಂಡತಿಯಾಗಿ ಸರ್ವರಿಗೂ ಒಳಿತು ಬಯಸುತ್ತ ಸಂಸಾರ ನೌಕೆಯನ್ನು ಉತ್ತಮವಾಗಿ ಸಾಗಿಸುತ್ತಿದ್ದಾರೆಂದರು.

ಅಲ್ಲದೆ ಪುರುಷರಂತೆ ಮಹಿಳೆಯರೂ ಇರಬೇಕು ಎಂಬ ಉದ್ದೇಶ ಸಂವಿಧಾನ ವಿಶೇಷ ಸ್ಥಾನಮಾನ ಕೊಟ್ಟಿದೆ. ಎಲ್ಲಾ ರಂಗದಲ್ಲಿಯೂ ಇಂದು ತಮ್ಮ ಛಾಪು ಮೂಡಿಸಿದ್ದಾರೆ. ಮಹಿಳೆಯರಿಗೆ ಕಾನೂನು ಅರಿತು ಕೊಳ್ಳಬೇಕೆಂದು ಸಲಹೆ ನೀಡಿದರು. ಜತೆಗೆ ವೇದಿಕೆ ಕಾರ್ಯಕ್ರಮದಲ್ಲಿ ಚಲನಚಿತ್ರ ಗೀತೆ ಹಾಡುವ ಮೂಲಕ ಮನೋರಂಜನೆ ನೀಡಿದರು.

ಪ್ರಧಾನ ಸಿವಿಲ್ ನ್ಯಾಯಾಽಶರು ಶಂಕರರೆಡ್ಡಿ .ಡಿ ಮಾತನಾಡಿ, ಮಹಿಳೆಯರಿಗೆ ಕಾನೂನಿನಲ್ಲಿ ಸಿಗುವ ಸ್ಥಾನಮಾನ, ಮಹಿಳೆಯರ ಶೋಷಣೆ ತಡೆಗಟ್ಟುವ ಕ್ರಮಗಳ ಬಗ್ಗೆ ಚರ್ಚೆ ಅತ್ಯಗತ್ಯವಾಗಿದೆ ಎಂದು ಹೇಳಿದರು. ಇನ್ನು ಕಾರ್ಯಕ್ರಮದಲ್ಲಿ ಮಹಿಳಾ ವಕೀಲರು ಹಾಡು, ನೃತ್ಯ ಮಾಡುವ ಮೂಲಕ ನೆರೆದಿದ್ದ ವಕೀಲರನ್ನು ರಂಜಿಸಿದರು. ಹಾಗೆಯೇ ವೇದಿಕೆ ಕಾರ್ಯಕ್ರಮದಲ್ಲಿ ಸಿವಿಲ್ ನ್ಯಾಯಾಧೀಶರ ಪರೀಕ್ಷೆಯಲ್ಲಿ 48ನೇ ರ್ಯಾಂಕ್ ಪಡೆದ ನಾಗಿಣಿ ಹಾಗೂ ಅಂತರಾಷ್ಟ್ರೀಯ ಕ್ರೀಡಾಪಟು ರೇಣುಕಾ ರವರನ್ನು ಸನ್ಮಾನಿ ಸುವ ಮೂಲಕ ಅಭಿನಂದಿಸಲಾಯಿತು. ಪ್ರಧಾನ ಹಿರಿಯ ನ್ಯಾಯಾಧೀಶರು ಕೃಷ್ಣರಾಜ್ .ಕೆ, 2ನೇ ಹೆಚ್ಚುವರಿ ಹಿರಿಯ ನ್ಯಾಯಾಽಶರಾದ ಎಂ. ಮಂಜುನಾಥ್, 3ನೇ ಹೆಚ್ಚುಚರಿ ಸಿವಿಲ್ ನ್ಯಾಯಾಧೀಶರುರಕ್ಷಿತಾ.ಎಸ್, 4ನೇಹೆಚ್ಚುಚರಿಸಿವಿಲ್‌ನ್ಯಾಯಾಧೀಶರು ಜನಾರ್ದನ .ಎಸ್, ಮತ್ತು ವಕೀಲರ ಸಂಘದ ಅಧ್ಯಕ್ಷ ಪಟಾಪಟ್ ಪ್ರಕಾಶ್, ವಕೀಲರ ಸಂಘದ ಖಜಾಂಚಿ ಶಾರದಾಮಣಿ, ಕಾರ್ಯದರ್ಶಿ ರವೀಶ, ಉಪಾಧ್ಯಕ್ಷ ಹರೀಶ್‌ಕುಮಾರ್, ಸಂಘದ ಪದಾಽಕಾರಿಗಳಾದ ಎಚ್.ಎನ್.ನಾರಾಯಣಸ್ವಾಮಿ, ಆರ್. ಸತೀಶ್, ಉದಯ್ ಕುಮಾರ್, ಮೋಹನ್ ಕಾಂತ್, ಮೋಹನ್, ತಿಮ್ಮರಾಜು, ಪುರುಷೋತ್ತಮ್, ನಿರ್ಮಲಾ, ನೀಲಮ್ಮ, ನಾಗರತ್ನ, ನಾಗರಾಜು, ಪ್ರವೀಣ್ ಕುಮಾರ್ ಲಕ್ಷ್ಮಿ ಸಂಪತ್ ಹಾಗೂ ಸೇರಿದಂತೆ ಹಲವು ವಕೀಲರಿದ್ದರು.



ಟೊಮೆಟೊ ಬೆಲೆ ನಿಗದಿಯಲ್ಲಿ ತಾರತಮ್ಯ | ಅಧಿಕಾರಿಗಳ ವಿರುದ್ಧ ಬೆಳೆಗಾರರ ಆಕ್ರೋಶ

ರಸ್ತೆಗೆ ಟೊಮೆಟೊ ಸುರಿದು ಧರಣಿ

ಚಾಮರಾಜನಗರ: ರೈತರು ಬೆಳೆದ ಟೊಮೆಟೊ ಖರೀದಿ ಮಾಡುವಲ್ಲಿ ಡೀಲರ್‌ಗಳು ತಾರತಮ್ಯ ಮಾಡುತ್ತಿದ್ದು, ಒಂದೊಂದು ದರ ನೀಡುವ ಮೂಲಕ ರೈತರಿಗೆ ವಂಚನೆ ಮಾಡಲಾಗುತ್ತಿದೆ ಎಂದು ಆರೋಪಿಸಿ ರೈತರು ನಗರದಲ್ಲಿಂದು ಟೊಮೆಟೊ ಸುರಿದು ಜಿಲ್ಲಾಡಳಿತ ಭವನದ ಮುಂದೆ ಪ್ರತಿಭಟನೆ ನಡೆಸಿದ ಪರಿಣಾಮ ಜಿಲ್ಲಾಧಿಕಾರಿ ಶ್ರೀರೂಪ ಅವರು ಎಪಿಎಂಸಿ ಅಧಿಕಾರಿಗಳ ಮುಖಾಂತರ ಟೊಮೆಟೊ ಖರೀದಿದಾರರು ಹಾಗು ರೈತರ ಸಭೆ ನಡೆಸಿ, ಸಮಸ್ಯೆಯನ್ನು ಇತ್ಯರ್ಥ ಪಡಿಸಿದರು.

ನಗರದ ಜಿಲ್ಲಾಡಳಿತ ಭವನವ ಮುಂಭಾಗ ಸಾಮೂಹಿಕ ನಾಯಕತ್ವದ ರೈತ ಸಂಘಟನೆಯ ಅಧ್ಯಕ್ಷರಾದ ಹೊನ್ನೂರು ಪ್ರಕಾಶ್ ನೇತೃತ್ವದಲ್ಲಿ ಹರದನಹಳ್ಳಿ, ಹರವೆ ಹಾಗೂ ಇತರೇ ಭಾಗಗಳ ರೈತರು ತಾವು ಬೆಳೆದ ಟೊಮೆಟೊ ವನ್ನು ಜಿಲ್ಲಾಡಳಿತ ಭವನದ ಮುಂದೆ ತಂದು ಟೊಮೆಟೊ ಖರೀದಿದರರು ಹಾಗೂ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿತ್ತ ಪ್ರತಿಭಟನೆಗೆ ಮುಂದಾದರು. ರೈತ ಸಂಘದ ಅಧ್ಯಕ್ಷ ಹೊನ್ನೂರು ಪ್ರಕಾಶ್ ಮಾತನಾಡಿ, ಜಿಲ್ಲೆಯಲ್ಲಿ ಟೊಮೆಟೊ ಬೆಳೆಯುವ ರೈತರಿಗೆ ಖರೀದಿದಾರರು ತೊಂದರೆ ನೀಡುತ್ತಿದ್ದಾರೆ. ಒಂದೊಂದು ಕಡೆ ತರವಾರಿ ದರವನ್ನು ನೀಡುವ ಮೂಲಕ ರೈತರಿಗೆ ಮೋಸ ಮಾಡಲಾಗುತ್ತಿದೆ. ಚಿಕ್ಕಹೊಳೆ ಹಾಗೂ ಇತರೇ ಕಡೆಯಲ್ಲಿ ದರ ನೀಡುವಲ್ಲಿ ತಾರತಮ್ಯ ಮಾಡುತ್ತಿದ್ದು, ಮೈಸೂರು, ಗುಂಡ್ಲುಪೇಟೆ ಹಾಗೂ ತೆರಕಣಾಂಬಿಯಲ್ಲಿ ನಡೆಯುವ ದರವನ್ನು ನೀಡದೇ ಅದಕ್ಕಿಂತ ಕೆಜಿಗೆ 5 ರಿಂದ 10 ರೂ. ಕಡಿಮೆ ನೀಡುವ ಮೂಲಕ ರೈತರ ಶೋಷಣೆ ಮಾಡಲಾಗುತ್ತಿದೆ. ಈ ತಾರತಮ್ಯ ನಿಲ್ಲಬೇಕು. ಜಿಲ್ಲಾಧಿಕಾರಿಗಳು, ಎಪಿಎಂಸಿ ಅಧಿಕಾರಿಗಳು ಈ ಕೂಡಲೇ ಸ್ಥಳಕ್ಕೆ ಬಂತು ನಮ್ಮ ಸಮಸ್ಯೆಯನ್ನು ಬಗೆಹರಿಸಬೇಕು ಎಂದು ಒತ್ತಾಯಿಸಿದರು.



ಬಳಿಕ ಎಪಿಎಂಸಿ ಸಹಾಯಕ ಕಾರ್ಯದರ್ಶಿ ಬಸವಣ್ಣ, ಕಾರ್ಯದರ್ಶಿ ಜಗದೀಶ್ ಹಾಗೂ ಎಪಿಎಂಸಿ ನಿರ್ದೇಶಕ ವೆಂಕಟರಾವ್ ಸಾಠೆ ಅವರು ಟಮೋಟೋ ಖರೀದಿದಾರರೊಂದಿಗೆ ಆಗಮಿಸಿ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸಭೆ ಆಯೋಜನೆ ಮಾಡಿದರು. ರೈತರು ಹಾಗೂ ಖರೀದಿದಾರರ ನಡುವೆ ಕಾಲಕಾಲ ಚರ್ಚೆ ನಡೆಯಿತು. ರೈತ ಮುಖಂಡರು ಮೈಸೂರಿನಲ್ಲಿ ಯಾವ ದರ ನಡೆಯುತ್ತಿದೆ. ಅದನ್ನು ಇಲ್ಲಿಯು ಕೊಡಬೇಕು. ಇಲ್ಲದಿದ್ದರೆ ನಮಗೆ ಅನ್ಯಾಯವಾಗುತ್ತದೆ. ಹೆಚ್ಚು ಬೇಡ ಕಡಿಮೆಯು ಬೇಡ ಸ್ಥಿರವಾದ ಒಂದು ಬೆಲೆಯನ್ನು ನಿಗಧಿ ಮಾಡಿ ಎಂದು ಪಟ್ಟು ಹಿಡಿದರು.

ಸಭೆಯಲ್ಲಿ ರೈತ ಮುಖಂಡರಾದ ಅರಕಲವಾಡಿ ಮಹೇಶ್, ಕಿರಣ್, ಲೋಕೇಶ್, ನಾಗೇಂದ್ರ, ಖರೀದಿದಾರರಾದ ಎಪಿಎಂಸಿ ಮಾಜಿ ನಿರ್ದೇಶಕ ಬಿ. ಶಿವಕುಮಾರ್, ಪಳನಿಸ್ವಾಮಿ, ಸುಹೇಲ್ ಅನಂದ್, ಬಸವರಾಜು, ಮಹೇಶ್, ಅಭಿ, ಸಚಿ, ಮಹೇಶ್, ಎಸ್.ಎಂ.ಗುರು, ನಾಜಿಮ್ ಸೇರಿದಂತೆ ಅನೇಕರು ಇದ್ದರು.

ಬೆಳೆಗಾರರ ಹೋರಾಟಕ್ಕೆ ಡಿಸಿ ಸ್ಪಂದನೆ

ರೈತರು ಹಾಗೂ ಖರೀದಿದಾರರ ಅಹವಾಲುಗಳನ್ನು ಆಲಿಸಿ, ನಮ್ಮಜಿಲ್ಲೆಯ ರೈತರು ಉಳಿಯಬೇಕು.ಟೊಮೆಟೊ ಬೆಲೆ ಯಾವ ಹಂತದಲ್ಲಿ ಎಷ್ಟು ಕುಸಿತ ಮತ್ತು ಏರುತ್ತದೆ ಎಂಬುವುದು ಯಾರು ಊಹೇ ಮಾಡಲು ಸಾಧ್ಯವಿಲ್ಲ. ಹೀಗಾಗಿ ಮೈಸೂರು ಭಾಗದಲ್ಲಿ ಯಾವ ದರ ಇರುತ್ತದೆ ಅದರನ್ವಯ 2ರೂ. ಕಡಿಮೆ ಮಾಡಿ ನಮ್ಮ ಜಿಲ್ಲೆಯ ರೈತರ ಟೊಮೆಟೋ ಖರೀದಿ ಮಾಡಬೇಕು. ಇದಕ್ಕೆ ಎಲ್ಲರೂ. ಒಪ್ಪಿಗೆ ಸೂಚಿಸಬೇಕು ಎಂದು ಜಿಲ್ಲಾಧಿಕಾರಿ ಶ್ರೀರೂಪಾ ತಿಳಿಸಿದರು.

ಅಧಿಕಾರಿಗಳು, ನೌಕರರಿಗೆ ಆರೋಗ್ಯ ಸೇವೆ

ಬೆಂಗಳೂರು: ರಾಜ್ಯದ ಮಹಾನಗರ ಪಾಲಿಕೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ ಹಾಗೂ ನೌಕರರು ಮತ್ತು ಅವರ ಕುಟುಂಬ ಸದಸ್ಯರಿಗೆ ಆರೋಗ್ಯ ಚಿಕಿತ್ಸಾ ಸೌಲಭ್ಯ ಜಾರಿಗೊಳಿಸುವಂತೆ ಹೈಕೋರ್ಟ್ ಮಹತ್ವದ ಆದೇಶ ನೀಡಿದೆ.

ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆ ನೌಕರರ ಸಂಘದ ರಾಜ್ಯಾಧ್ಯಕ್ಷ ಎ. ಅಮೃತ್ ರಾಜ್ ಅವರು ಈ ಕುರಿತು ಹೈಕೋರ್ಟ್‌ನಲ್ಲಿ ದಾವೆ ಹೂಡಿದ್ದರು. ಈ ದಾವೆಗೆ ಸಂಬಂಧಿಸಿದಂತೆ ನ್ಯಾಯಾಲಯವು ಸರ್ಕಾರಕ್ಕೆ ಎರಡು ತಿಂಗಳೊಳಗೆ ಕ್ರಮಕೈಗೊಳ್ಳುವಂತೆ ಸೂಚನೆ ನೀಡಿದೆ. ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ದಾವಣಗೆರೆ, ಮೈಸೂರು, ಬೆಳಗಾವಿ, ವಿಜಯಪುರ, ಮಂಗಳೂರು, ಬಳ್ಳಾರಿ, ಹುಬ್ಬಳ್ಳಿ-ಧಾರವಾಡ, ಶಿವಮೊಗ್ಗ, ಕಲಬುರಗಿ ಹಾಗೂ ತುಮಕೂರು ಮಹಾನಗರ ಪಾಲಿಕೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ ಮತ್ತು ನೌಕರರು ಹಾಗೂ ಅವರ ಕುಟುಂಬ ಸದಸ್ಯರಿಗೆ ಆರೋಗ್ಯ ಸಂಜೀವಿನಿ ಯೋಜನೆ ಅಥವಾ ಪೊಲೀಸ್ ಇಲಾಖೆ, ಕೆಎಸ್‌ಆರ್‌ಟಿಸಿ ಹಾಗೂ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಧಿಕಾರಿ-ನೌಕರರಿಗೆ ನೀಡಲಾಗುತ್ತಿರುವಂತೆಯೇ ಆರೋಗ್ಯ ಚಿಕಿತ್ಸಾ ಸೌಲಭ್ಯವನ್ನು ಜಾರಿಗೊಳಿಸುವಂತೆ ಆದೇಶಿಸಿದೆ.

> ಉಚ್ಚ ನ್ಯಾಯಾಲಯದ ಅದೇಶ ಐತಿಹಾಸಿಕ ಜಯವಾಗಿದೆ. ರಾಜ್ಯದ ಮಹಾನಗರ ಪಾಲಿಕೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸಾವಿರಾರು ನೌಕರರಿಗೆ ನೆರವು ಸಿಗಲಿದೆ. ಅಧಿಕಾರಿ-ನೌಕರರು ಮತ್ತು ಅವರ ಕುಟುಂಬ ಸದಸ್ಯರಿಗೆ ಆರೋಗ್ಯ ಚಿಕಿತ್ಸೆಗೆ ಸಹಕಾರಿಯಾಗಲಿದೆ.
> ■ ಎ.ಅಮೃತ್‌ರಾಜ್, ರಾಜ್ಯ ಮಹಾನಗರ ಪಾಲಿಕೆ ಸಂಘದ ರಾಜ್ಯಾಧ್ಯಕ್ಷ

» ಜಿಬಿಎಗೆ ಹೈಕೋರ್ಟ್ ಮಹತ್ವದ ಆದೇಶ

ಈ ಕುರಿತು ಹಲವು ವರ್ಷಗಳಿಂದ ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆ ನೌಕರರ ಸಂಘವು ರಾಜ್ಯ ಸರ್ಕಾರದ ಮುಖ್ಯಕಾರ್ಯದರ್ಶಿಗಳು ಹಾಗೂ ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿಗಳಿಗೆ ಮನವಿ ಪತ್ರ ಸಲ್ಲಿಸುತ್ತ ಬಂದಿದ್ದರೂ ಯಾವುದೇ ಸಕಾರಾತ್ಮಕ ಸ್ಪಂದನೆ ದೊರಕಿರಲಿಲ್ಲ.ಇದರಿಂದಾಗಿ ವಿಷಯವನ್ನು ನ್ಯಾಯಾಲಯದ ಗಮನಕ್ಕೆ ತಂದು ದಾವೆ ಹೂಡಲಾಗಿದೆ.

ವಿಚಾರಣೆ ನಡೆಸಿದ ಹೈಕೋರ್ಟ್ ಎರಡು ತಿಂಗಳೊಳಗೆ ಅಗತ್ಯ ಕ್ರಮ ಕೈಗೊಂಡು ಮಹಾನಗರ ಪಾಲಿಕೆಗಳ ಅಧಿಕಾರಿ-ನೌಕರರು ಮತ್ತು ಅವರ ಕುಟುಂಬ ಸದಸ್ಯರಿಗೆ ಆರೋಗ್ಯ ಚಿಕಿತ್ಸಾ ಸೌಲಭ್ಯವನ್ನು ಜಾರಿಗೆ ತರಲು ಸರ್ಕಾರಕ್ಕೆ ಆದೇಶಿಸಿದೆ. ಈ ತೀರ್ಪಿನಿಂದ ರಾಜ್ಯದ ಮಹಾನಗರ ಪಾಲಿಕೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸಾವಿರಾರು ನೌಕರರಿಗೆ ನೆರವು ಸಿಗಲಿದೆ ಎಂದು ಸಂಘದ ಪದಾಧಿಕಾರಿಗಳು ತಿಳಿಸಿದ್ದಾರೆ.

ಕಿರುಸುದ್ದಿ

ಫಲಾನುಭವಿಗಳಿಗೆ ಸಲಕರಣೆ ನಾಳೆ ವಿತರಣೆ

ಚಾಮರಾಜನಗರ: ಭಾರತ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ಅಲಿಮ್ಕೊ ಸಂಸ್ಥೆ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಹಯೋಗದಲ್ಲಿ ಕಳೆದ ಅಕ್ಟೋಬರ್ ತಿಂಗಳ ಶಿಬಿರದಲ್ಲಿ ಆಯ್ಕೆಗೊಂಡ ವಿಕಲಚೇತನರು ಮತ್ತು ಹಿರಿಯ ನಾಗರಿಕ ಫಲಾನುಭವಿಗಳಿಗೆ ಉಚಿತ ಸಾಧನ ಸಲಕರಣೆ ವಿತರಿಸುವ ಕಾರ್ಯಕ್ರಮವನ್ನು ಲೋಕಸಭಾ ಸದಸ್ಯರ ನೇತೃತ್ವದಲ್ಲಿ ಮಾರ್ಚ್ 18ರಂದು ಬೆಳಗ್ಗೆ 11.30 ಗಂಟೆಗೆ ನಗರದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ. ಆರ್‌ಬಿವೈ, ಎಡಿಐಪಿ ಯೋಜನೆಯಲ್ಲಿ ಉಚಿತವಾಗಿ ಸಾಧನ ಸಲಕರಣೆಗಳನ್ನು ವಿತರಿಸುವ ಈ ಕಾರ್ಯಕ್ರಮದಲ್ಲಿ ಫಲಾನುಭವಿಗಳು ಭಾಗವಹಿಸಿ ಪ್ರಯೋಜನ ಪಡೆದುಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕ ಸಬಲೀಕರಣ ಇಲಾಖೆ ದೂ.ಸಂ 08226-223688, 224688, ಎಂ.ಆರ್.ಡಬ್ಲ್ಯೂಗಳಾದ ಚಾಮರಾಜನಗರ ರಾಜೇಶ್ ಮೊ.ಸಂ 8073716208, ಕೊಳ್ಳೇಗಾಲ, ಹನೂರು ಕವಿರತ್ನ ಮೊ.ಸಂ 7892715408, ಗುಂಡ್ಲುಪೇಟೆ ಮಂಜುಳಾ ಮೊ. ಸಂ 9742423332, ಯಳಂದೂರು ಮಹದೇವಮ್ಮ ಮೊ. ಸಂ 9740164149 ಇವರನ್ನು ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಲಿಂಗ ಸಮನ್ವಯ ಮೇಳ

ಚಾಮರಾಜನಗರ: ತಾಲೂಕಿನ ಭೋಗಾಪುರದ ವಸತಿಯುಕ್ತ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸಾವಿತ್ರಿಬಾಯಿಪುಲೆ ತಂಡದವರ ನೇತೃತ್ವದಲ್ಲಿ ಮಹಿಳಾ ದಿನಾಚರಣೆ ಪ್ರಯುಕ್ತ ಲಿಂಗಸಮನ್ವಯ ಮೇಳವನ್ನು ಮಾ.17ರಂದು ಬೆಳಗ್ಗೆ 10ಗಂಟೆಗೆ ವಸತಿಯುಕ್ತ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ಅಜೀಂ ಪ್ರೇಮ್‌ಜಿ ಪ್ರತಿಷ್ಠಾನದ ಜಿಲ್ಲಾ ಸಂಯೋಜಕ ಎನ್. ಸೌಮ್ಯ ಕಾರ್ಯಕ್ರಮ ಉದ್ಘಾಟಿಸುವರು. ವಸತಿಯುಕ್ತ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ. ಪಿ. ದೇವರಾಜು ಅವರು ಅಧ್ಯಕ್ಷತೆ ವಹಿಸುವರು. ಯಳಂದೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರಾಜ್ಯಶಾಸ್ತ್ರ ವಿಭಾಗದ ಸಹಾಯಕ ಉಪನ್ಯಾಸಕ ಶ್ವೇತ ಅವರು ಲಿಂಗ ಸಮಾನತೆ ಮತ್ತು ಸಂವಿಧಾನಿಕ ಪ್ರಾತಿನಿಧ್ಯ ವಿಷಯ ಕುರಿತು ಉಪನ್ಯಾಸ ನೀಡುವರು ಎಂದು ಪ್ರಕಟಣೆ ತಿಳಿಸಿದೆ.

ವ್ಯಕ್ತಿ ನಾಪತ್ತೆ: ಮಾಹಿತಿಗೆ ಮನವಿ

ಚಾಮರಾಜನಗರ: ತೆರಕಣಾಂಬಿ ಪೊಲೀಸ್ ಠಾಣಾ ವ್ಯಾಪ್ತಿಯ ಕೆ.ಕೆ.ಹುಂಡಿ ಗ್ರಾಮದ ತೋಟವೊಂದರಲ್ಲಿ ಅರಿಶಿನ ಬೇಯಿಸುವ ಕೆಲಸ ಮಾಡುತ್ತಿದ್ದ ಈರೋಡ್ ಜಿಲ್ಲೆಯ ಹಂದಿಯೂರ್ ತಾಲೂಕಿನ ನಲ್ಲಿಗೌಂಡರ್ ಕೊಟ್ಟೈಲ ಗ್ರಾಮದ ಮುರುಗೇಶನ್ ಎಂಬ ಪುರುಷ ಕಾಣೆಯಾಗಿದ್ದು, ಇವರ ಪತ್ತೆಗೆ ಸಹಕರಿಸುವಂತೆ ಕೋರಲಾಗಿದೆ. 47 ವರ್ಷದ ಮುರುಗೇಶನ್ 156 ಸೆಂ.ಮೀ ಎತ್ತರ, ಸಾಧಾರಣ ಮೈಕಟ್ಟು, ಕಪ್ಪು ಮೈ ಬಣ್ಣ, ಕೋಲು ಮುಖ, ಕಪ್ಪು ಬಿಳಿ ತಲೆಗೂದಲು, ಕುರುಚಲು ಗಡ್ಡ ಹೊಂದಿದ್ದು, ತಮಿಳು, ಕನ್ನಡ ಭಾಷೆ ಮಾತನಾಡುತ್ತಾರೆ. ಕಾಣೆಯಾದಾಗ ಕೆಂಪು ಬಣ್ಣದ ಅರ್ಧ ತೋಳಿನ ಶರ್ಟ್, ಕಪ್ಪು ನೀಲಿ, ಬಿಳಿ ಮಿಶ್ರಿತ ಬಣ್ಣದ ಲುಂಗಿ ಧರಿಸಿದ್ದರು. ಇವರ ಸುಳಿವು ದೊರೆತಲ್ಲಿ ತೆರಕಣಾಂಬಿ ಪೊಲೀಸ್ ಠಾಣೆ ಮೊ.ಸಂ 9480804652, ಚಾಮರಾಜನಗರ ಜಿಲ್ಲಾ ನಿಸ್ತಂತು ಕೊಠಡಿ 08226-222383 ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಫೋಟೋಶೂಟ್: ಕಟ್ಟಡದಿಂದ ಬಿದ್ದು ಬಾಲಕ ಸಾವು

ಬೆಂಗಳೂರು: ಅನ್ನಪೂರ್ಣೇಶ್ವರಿ ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಫೋಟೋ ಶೂಟ್‌ಗೆ ಗೆಳೆಯರ ಜತೆ ಹೋಗಿದ್ದ 15 ವರ್ಷದ ಬಾಲಕನೊಬ್ಬ 40 ಅಡಿ ಎತ್ತರದ ಕಟ್ಟಡದಿಂದ ಆಕಸ್ಮಿಕವಾಗಿ ಬಿದ್ದು ಮೃತಪಟ್ಟಿದ್ದಾನೆ. ಉಲ್ಲಾಳು ನಿವಾಸಿ ನಿಶಾಂತ್ (15) ಮೃತ ಬಾಲಕ. ಶನಿವಾರ ಸಂಜೆ ಘಟನೆ ನಡೆದಿದ್ದು, ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಮೂವರು ಸ್ನೇಹಿತರು ಫೋಟೋ ಶೂಟ್ ಮಾಡಲು ಠಾಣಾ ವ್ಯಾಪ್ತಿಯಲ್ಲಿನ ಪಾಳು ಬಿದ್ದ ಕಟ್ಟಡಕ್ಕೆ ಬಂದಿದ್ದರು. ಆ ಕಟ್ಟಡದಲ್ಲಿ ಫೋಟೋ ಶೂಟ್ ಮಾಡುತ್ತಾ ಎರಡನೇ ಮಹಡಿವರೆಗೂ ಹೋಗಿದ್ದಾರೆ. ಈ ವೇಳೆ ಗೋಪುರ ಮಾದರಿ ಇರುವ ಹತ್ತು ಅಡಿ ಎತ್ತರವಿರುವ ಸ್ಥಳದಲ್ಲಿ ನಿಶಾಂತ್ ಹೋಗಿದ್ದು, ಅದರ ಮೇಲೆ ನಿಂತುಕೊಂಡು ಫೋಟೊ ತೆಗೆಯುವಂತೆ ಸ್ನೇಹಿತರಿಗೆ ಹೇಳಿದ್ದ ಎಂದು ಪೊಲೀಸರು ತಿಳಿಸಿದ್ದಾರೆ. ಪ್ಲಾಸ್ಟಿಕ್ ಶೀಟ್ ಮೇಲೆ ಕಾಲು ಇಟ್ಟಿದ್ದು, ನಿಯಂತ್ರಣ ತಪ್ಪಿ ಸುಮಾರು 40 ಅಡಿ ಎತ್ತರದಿಂದ ನಿಶಾಂತ್ ಕೆಳಗೆ ಬಿದ್ದು ಗಂಭೀರವಾಗಿ ಗಾಯಗೊಂಡಿದ್ದನು. ವೈದ್ಯರು ಮಾರ್ಗ ಮಧ್ಯದಲ್ಲಿಯೇ ಮೃತಪಟ್ಟಿದ್ದಾನೆ ಎಂದು ದೃಢಪಡಿಸಿದ್ದಾರೆ.

ಗ್ರಾಹಕರು ಗೊಂದಲಕ್ಕೊಳಗಾಗಬೇಡಿ| ಒಂದೆರಡು ವಾರದಲ್ಲಿ ಸಹಜ ಸ್ಥಿತಿಗೆ ಬರಲಿದೆ : ಸಚಿವ ಕೆಎಚ್‌ಎಂ

ಹೋಟೆಲ್‌ಗಳಿಗೆ ಶೀಘ್ರ ಅಡುಗೆ ಅನಿಲ

ದೇವನಹಳ್ಳಿ: ರಾಜ್ಯದಲ್ಲಿ ಎಲ್‌ಪಿಜಿ ಸಿಲಿಂಡರ್ ಕೊರತೆ ಇಲ್ಲದೆ ಸರಬರಾಜು ನಿಯಮಿತವಾಗಿ ನಡೆಯುತ್ತಿದೆ. ಕೆಲವೆಡೆ ಜನರು ಪ್ಯಾನಿಕ್‌ನಿಂದ ಅಗತ್ಯಕ್ಕಿಂತ ಹೆಚ್ಚು ಬುಕ್ಕಿಂಗ್ ಮಾಡುತ್ತಿರುವುದರಿಂದ ಗೊಂದಲ ಉಂಟಾಗಿದೆ ಎಂದು ಸಚಿವ ಕೆ.ಎಚ್. ಮುನಿಯಪ್ಪ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯದಲ್ಲಿ ಎಲ್‌ಪಿಜಿ ಸಿಲಿಂಡರ್ ಸರಬರಾಜಿನ ಸ್ಥಿತಿಗತಿ ಕುರಿತು ಮಹತ್ವದ ಸಭೆ ನಡೆಸಿದ ನಂತರ ಅವರು ಮಾಧ್ಯಮದವರೊಂದಿಗೆ ಮಾತನಾಡಿ, ರಾಜ್ಯದಲ್ಲಿ ಒಂದು ದಿನಕ್ಕೆ 850 ಮೆಟ್ರಿಕ್ ಟನ್ ಗ್ಯಾಸ್ ಪೂರೈಕೆ ಆಗುತ್ತಿದ್ದು ಬಳಕೆಯ ಪ್ರಮಾಣ ಅಧಿಕವಾಗಿದೆ ಈ ಸಂದರ್ಭದಲ್ಲಿ ಮಿತವ್ಯಯವಾಗಿ ಬಳಸಲು ಗ್ರಾಹಕರಲ್ಲಿ ಮನವಿ ಮಾಡಿದರು.

ರಾಜ್ಯದಲ್ಲಿ ಎಲ್‌ಪಿಜಿ ವಿತರಣೆ ಪ್ರತಿ ರಾಜ್ಯದ ಬಳಕೆ ಆಧಾರದ ಮೇಲೆ ಕೇಂದ್ರದಿಂದ ನಿರ್ಧರಿಸಲಾಗುತ್ತದೆ. ಸಿಲಿಂಡರ್ ಸರಬರಾಜು ಆಗುತ್ತಿದೆ. ಇದರಲ್ಲಿ ಯಾವುದೇ ರಾಜಕೀಯ ಇಲ್ಲ ಎಂದು ಸ್ಪಷ್ಟಪಡಿಸಿದರು. ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರ ಮತ್ತು ಸಂಬಂಧಿಸಿದ ಸಂಸ್ಥೆಗಳೊಂದಿಗೆ ನಿರಂತರ ಸಂಪರ್ಕದಲ್ಲಿದೆ. ಅಗತ್ಯವಿದ್ದಲ್ಲಿ ರಾಜ್ಯದ ಅಗತ್ಯವನ್ನು ತಿಳಿಸಿ ಪತ್ರಗಳ ಮೂಲಕ ಗಮನಕ್ಕೆ ತರುತ್ತಿದ್ದಾರೆ ಎಂದರು.

ಅತ್ಯಾವಶ್ಯಕ ಸೇವೆಗಳಾದ ಆಸ್ಪತ್ರೆಗಳು ಸೇರಿದಂತೆ ಹೋಟೆಲ್ ಹಾಗೂ ವ್ಯಾಪಾರಿಕ ಬಳಕೆದಾರರಿಗೆ ಯಾವುದೇ ರೀತಿಯ ಸರಬರಾಜು ಸಮಸ್ಯೆ ಇಲ್ಲ ಅವರಿಗೆ ಅಗತ್ಯವಿರುವಷ್ಟು ಸಿಲಿಂಡರ್ ಒದಗಿಸಲಾಗುತ್ತಿದೆ ಎಂದು ತಿಳಿಸಿದರು. ಸಾಮಾನ್ಯವಾಗಿ ನಗರ ಪ್ರದೇಶಗಳಲ್ಲಿ 25 ಮತ್ತು 30 ದಿನಗಳಿಗೆ ಒಂದು ಸಿಲಿಂಡರ್ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಸುಮಾರು 45ದಿನಗಳಿಗೆ ಒಂದು ಸಿಲಿಂಡರ್ ಬಳಕೆಯಾಗುತ್ತದೆ. ಇದಕ್ಕೆ ಅನುಗುಣವಾಗಿ ಸರಬರಾಜು ನಡೆಯುತ್ತಿದೆ ಎಂದರು. ಜನರು ಪ್ಯಾನಿಕ್ ಆಗಬಾರದು, ಅಗತ್ಯಕ್ಕಿಂತ ಹೆಚ್ಚು ಸಿಲಿಂಡರ್ ಬುಕ್ ಮಾಡಬಾರದು ಹಾಗೂ ಸ್ಟಾಕ್ ಇಟ್ಟುಕೊಳ್ಳಬಾರದು. ಯಾವುದೇ ತಾಂತ್ರಿಕ ಸಮಸ್ಯೆ ಕಂಡುಬಂದರೆ ತಕ್ಷಣ ಸಂಬಂಧಿತ ಕಂಪನಿಗಳೊಂದಿಗೆ ಚರ್ಚಿಸಿ ಪರಿಹಾರ ಕಂಡುಕೊಳ್ಳಲಾಗುತ್ತದೆ. ಜನರಿಗೆ ಯಾವುದೇ ತೊಂದರೆ ಆಗದಂತೆ ಸರ್ಕಾರ ಕ್ರಮ ಕೈಗೊಳ್ಳುತ್ತದೆ ಎಂದರು. ಸಭೆಯಲ್ಲಿ ಸರ್ಕಾರದ ಕಾರ್ಯದರ್ಶಿ ಕನಗವಲ್ಲಿ, ಆಯುಕ್ತರಾದ ರವಿಕುಮಾರ್, ಸಚಿವರ ಆಪ್ತ ಕಾರ್ಯದರ್ಶಿ ಡಾ.ಎಚ್.ನಟರಾಜ್, ಅನಿಲ ಕಂಪನಿಗಳ ಅಧಿಕಾರಿಗಳಾದ ನೀರಾ ಸಿಂಗ್,ಅರುಂದಿಗೊಯಲ್,ದಿವ್ಯಾ, ಮುರಳಿ ಚಾರ್, ಸುಬ್ರತ್ ಚಟರ್ಜಿ, ರಾಜೇಶ್ ಸಿಂಗ್,ಸಂಜಯ್ ಕುಮಾರ್‌ಸಿಂಗ್, ಪ್ರಣಯ ದೇವನಾಗನ್, ರವಿಕುಮಾರ್ ತಂಡಲ್, ಪ್ರಸೂನ್ ಉಪಸ್ಥಿತರಿದ್ದರು.



ಸಿಲಿಂಡರ್ ವಿತರಣೆಯಲ್ಲಿ ಸಮಸ್ಯೆಯಾಗದಂತೆ ಕ್ರಮ

ದೊಡ್ಡಬಳ್ಳಾಪುರ/ದೇವನಹಳ್ಳಿ: ಜಿಲ್ಲಾದ್ಯಂತ ಎಲ್ಪಿಜಿ ಸಿಲಿಂಡರ್ ಪೂರೈಕೆಯಲ್ಲಿ ಸಾರ್ವಜನಿಕ ಕೊರತೆ ಕಂಡು ಬಂದಲ್ಲಿ ತಾಲೂಕಿನ ಆಹಾರ ಶಾಖೆ ಆಹಾರ ನಿರೀಕ್ಷಕರನ್ನು ದೂರವಾಣಿ ಮೂಲಕ ಸಂಪರ್ಕಿಸಿ ಎಂದು ಜಿಲ್ಲಾಧಿಕಾರಿ ಡಾ. ಕೆ.ಎನ್ ಅನುರಾಧಾ ತಿಳಿಸಿದ್ದಾರೆ.



ಗ್ಯಾಸ್ ಸರಬರಾಜುನಲ್ಲಿ ಏನಾದರೂ ಸಮಸ್ಯೆ ಉಂಟಾದಲ್ಲಿ ಆಹಾರ ನಿರೀಕ್ಷಕರು, ಶಿರಸ್ತೇದಾರ್ ಅವರ ದೂರವಾಣಿ ಸಂಖ್ಯೆಗಳು ದೇವನಹಳ್ಳಿ ಮೊ.9449269001, ದೊಡ್ಡಬಳ್ಳಾಪುರ ಮೊ.9483482766, ನೆಲಮಂಗಲ ಮೊ.9036434552, ಹೊಸಕೋಟೆ ಮೊ, 9902805563 ಸಂಪರ್ಕಿಸಬಹುದಾಗಿದೆ. ಯಾವುದೇ ಅನಧಿಕೃತ ಗ್ಯಾಸ್ ಸಿಲಿಂಡರ್ ಸಂಗ್ರಹಣೆ ಅಥವಾ ಅಕ್ರಮ ಮಾರಾಟ ಕಂಡುಬಂದಲ್ಲಿ ಅಗತ್ಯ ವಸ್ತುಗಳ ಕಾಯ್ದೆ ಹಾಗೂ 1955 2000 ಸಂಬಂಧಿತ ನಿಯಂತ್ರಣ ಆದೇಶದಲ್ಲಿ ಕಾನೂನು ಕ್ರಮಕೈಗೊಳ್ಳಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಾಂತ ರೀತಿ ಯುಗಾದಿ, ರಂಜಾನ್ ಆಚರಿಸಲಿ

ಚಾಮರಾಜನಗರ: ಮುಂಬರಲಿರುವ ಯುಗಾದಿ ಹಾಗೂ ರಂಜಾನ್ ಹಬ್ಬವನ್ನು ಜಿಲ್ಲೆಯಲ್ಲಿ ಸೌಹಾರ್ದ ಹಾಗೂ ಸಾಮರಸ್ಯವಾಗಿ ಆಚರಿಸೋಣ ಎಂದು ಜಿಲ್ಲಾಧಿಕಾರಿ ಶ್ರೀರೂಪಾ ಹೇಳಿದರು.

ನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿಂದು ಯುಗಾದಿ, ರಂಜಾನ್ ಹಬ್ಬದ ಆಚರಣೆ ಹಿನ್ನೆಲೆಯಲ್ಲಿ ಕರೆಯಲಾಗಿದ್ದ ಸೌಹಾರ್ದ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿ, ಎಲ್ಲರೂ ಒಂದೇ ಎಂಬ ಭ್ರಾತೃತ್ವ ಭಾವನೆ ಸಂತಸ ಹಂಚಿಕೊಳ್ಳುವ ಸಲುವಾಗಿಯೇ ಹಬ್ಬಗಳನ್ನು ಆಚರಿಸುತ್ತಾ ಬರಲಾಗಿದೆ. ಜಿಲ್ಲೆಯಲ್ಲಿ ಈ ಹಿಂದಿನಿಂದಲೂ ಎಲ್ಲ ಕೋಮು ಧರ್ಮಗಳ ಹಬ್ಬವನ್ನು ಶಾಂತಿ ಸೌಹಾರ್ದಯುತವಾಗಿ ಆಚರಿಸಿಕೊಂಡು ಬಂದಿರುವ ಸಂಪ್ರದಾಯವಿದೆ. ಈ ಉತ್ತಮ ನಡೆ ಹೀಗೆಯೇ ಮುಂದುವರೆಯಲಿ ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಹಬ್ಬದ ಸಂದರ್ಭದಲ್ಲಿ ಕುಡಿಯುವ ನೀರಿಗೆ ಯಾವುದೇ ತೊಂದರೆಯಾಗಬಾರದು. ಜಿಲ್ಲಾ ಉಸ್ತುವಾರಿ ಸಚಿವರು ಸಹ ಈ ಹಿಂದೆಯೇ ಸಭೆ ನಡೆಸಿ ಯಾವುದೇ ಭಾಗದಲ್ಲಿ ಕುಡಿಯುವ ನೀರಿಗೆ ಸಮಸ್ಯೆಯಾಗದಂತೆ ನೋಡಿಕೊಳ್ಳಲು ಸೂಚನೆ ನೀಡಿದ್ದಾರೆ. ತೀವ್ರ ತೊಂದರೆ ಇರುವ ಕಡೆ ಟ್ಯಾಂಕರ್ ಗಳಲ್ಲಿ ನೀರು ಪೂರೈಸಬೇಕು. ನಗರಸಭೆ, ಸ್ಥಳೀಯ ಸಂಸ್ಥೆಗಳು ಸೇರಿದಂತೆ ಎಲ್ಲೆಡೆ ಜನತೆಗೆ ಹಬ್ಬದ ವೇಳೆ ಸಮರ್ಪಕವಾಗಿ ನೀರು ಒದಗಿಸಲು ಅಧಿಕಾರಿಗಳಿಗೆ ಸೂಚಿಸಲಾಗುವುದು ಎಂದರು.

ನಗರ, ಪಟ್ಟಣ, ಗ್ರಾಮಾಂತರ ಪ್ರದೇಶಗಳಲ್ಲಿ ಸ್ವಚ್ಛತೆಗೆ ಜನರ ಸಹಕಾರವು ತುಂಬಾ ಅಗತ್ಯವಾಗಿದೆ. ಪ್ರತಿಯೊಬ್ಬರು ತಮ್ಮ ಸುತ್ತಮುತ್ತಲ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕಿದೆ. ಹಸಿ ಕಸ, ಒಣಕಸವನ್ನಾಗಿ ಬೇರ್ಪಡಿಸಿ ಕಸ ಸಂಗ್ರಹಿಸುವ ವಾಹನಗಳಿಗೆ ನೀಡಬೇಕು. ಕಸ ವಿಲೇವಾರಿಗೆ ವೈಜ್ಞಾನಿಕವಾಗಿ ಕ್ರಮ ತೆಗೆದುಕೊಳ್ಳಲು ಹಾಗೂ ಸ್ವಚ್ಛ ನಗರಿ ಯೋಜನೆಗೆ ಈಗಾಗಲೇ ಸಮಾಲೋಚನೆ ನಡೆಸಲಾಗಿದೆ ಎಂದು ಳಿಸಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ. ಮುತ್ತುರಾಜು ಮಾತನಾಡಿ, ಹಬ್ಬ ಎನ್ನುವುದು ಎಲ್ಲರೂ ಸೇರಿ ಸಂತೋಷದಿಂದ ಆಚರಿಸುವ ಸಂಪ್ರದಾಯ. ಹಬ್ಬದ ಸಂದರ್ಭದಲ್ಲಿ ಐಕ್ಯತೆ, ಸಹೋದರತೆ ಇರಲಿ. ಇನ್ನೊಬ್ಬರಿಗೆ ಯಾವುದೇ ತೊಂದರೆ ಕೊಡುವುದು ಬೇಡ. ಹಬ್ಬದ ಆಚರಣೆಯಲ್ಲಿ ಸಣ್ಣಪುಟ್ಟ ವ್ಯತ್ಯಾಸಗಳಾದರೂ ನಮ್ಮ ಗಮನಕ್ಕೆ ತನ್ನಿ ಎಂದು ಸಲಹೆ ಮಾಡಿದರು.

ಸಾಮಾಜಿಕ ಜಾಲತಾಣಗಳ ಮೇಲೆ ನಿಗಾ ಇಡಲು ಪ್ರತ್ಯೇಕ ತಂಡವಿದೆ. ಪ್ರಚೋದನಾತ್ಮಕ ಸಂದೇಶ ಹೇಳಿಕೆಗಳನ್ನು ಸಾಮಾಜಿಕ ತಾಲತಾಣಗಳ ಮೂಲಕ ರವಾನಿಸುವವರ ವಿರುದ್ಧ ಕ್ರಮ ವಹಿಸಲಿದ್ದೇವೆ. ಎಲ್ಲರೂ ಪರಸ್ಪರ ಪ್ರೀತಿ, ಗೌರವದಿಂದ ಇದ್ದು ಸೌಹಾರ್ದಯುತ ಹಬ್ಬ ಆಚರಿಸಬೇಕು ಎಂದು ಎಂ. ಮುತ್ತುರಾಜು ತಿಳಿಸಿದರು. ಸಭೆಯಲ್ಲಿ ಭಾಗವಹಿಸಿದ್ದ ವಿವಿಧ ಕೋಮುಗಳ ಮುಖಂಡರು ಮಾತನಾಡಿ, ನಾವೆಲ್ಲರೂ ಸೌಹಾರ್ದಯುತವಾಗಿ ಹಬ್ಬಗಳನ್ನು ಆಚರಿಸಿಕೊಂಡು ಬಂದಿದ್ದೇವೆ. ಇದೇ ರೀತಿಯಾಗಿ ಎಲ್ಲರು ಮುಂಬರಲಿರುವ ಹಬ್ಬಗಳನ್ನು ಪರಸ್ಪರ ಗೌರವ ಶಾಂತಿ ಪ್ರೀತಿಯಿಂದ ಆಚರಿಸುತ್ತೇವೆ. ಹಬ್ಬದ ವೇಳೆ ಕುಡಿಯುವ ನೀರು ಸ್ವಚ್ಛತೆಗೆ ವಿಶೇಷ ವ್ಯವಸ್ಥೆಗಳನ್ನು ಕಲ್ಪಿಸುವಂತೆ ಹೇಳಿದರು.

ಡಿವೈಎಸ್‌ಪಿ ಸ್ನೇಹರಾಜು, ನಗರಸಭೆ ಆಯುಕ್ತರಾದ ಪರಶುರಾಮ್ ಛಲವಾದಿ, ವಿವಿಧ ಕೋಮುಗಳ ಮುಖಂಡರು, ಸಂಘಟನೆಗಳ ಮುಖ್ಯಸ್ಥರು, ಪ್ರತಿನಿಧಿಗಳು ಸಭೆಯಲ್ಲಿ ಉಪಸ್ಥಿರಿದ್ದರು.

ಮಡಿವಾಳರನ್ನು ಪ.ಜಾತಿಗೆ ಸೇರಿಸಿ

ಬೆಂಗಳೂರು: ಮಡಿವಾಳ ಜನಾಂಗವನ್ನು ಪರಿಶಿಷ್ಟ ಜಾತಿಗೆ ಸೇರ್ಪಡೆ ಮಾಡಲು ರಾಜ್ಯ ಸರ್ಕಾರ ಕೇಂದ್ರಕ್ಕೆ ಶಿಫಾರಸು ಮಾಡಬೇಕು ಎಂದು ಕರ್ನಾಟಕ ರಾಜ್ಯ ಮಡಿವಾಳ ಸಂಘಟನೆಗಳು ಒತ್ತಾಯಿಸಿವೆ.

ನಗರದ ಸ್ವಾತಂತ್ರ್ಯ ಉದ್ಯಾನವನದಲ್ಲಿ ಕರ್ನಾಟಕ ರಾಜ್ಯ ಮಡಿವಾಳರ ಕ್ಷೇಮಾಭಿವೃದ್ಧಿ ಸಂಘ ಹಾಗೂ ಉತ್ತರ ಕರ್ನಾಟಕ ಮಡಿವಾಳರ ಸಂಘದವರು ಪ್ರತಿಭಟನೆ ನಡೆಸಿದರು. ಈ ವೇಳೆ ಕರ್ನಾಟಕ ರಾಜ್ಯ ಮಡಿವಾಳರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎಂ.ಕೆ. ಹನುಮಂತಪ್ಪ ಮಾತನಾಡಿ, ನಮ್ಮ ಸಮಾಜವನ್ನು ಎಸ್‌ಸಿ, ಎಸ್‌ಟಿಗೆ ಸೇರ್ಪಡೆ ಮಾಡಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವಂತೆ 19 ಮಂತ್ರಿಗಳು ಹಾಗೂ ರಾಜ್ಯದ 137 ಶಾಸಕರುಗಳಿಂದ ಶಿಫಾರಸ್ಸು ಪತ್ರವನ್ನು ಪಡೆದುಕೊಳ್ಳಲಾಗಿದೆ. ಈವರೆಗೆ ಪ್ರೊ. ಡಾ.ಅನ್ನಪೂರ್ಣ ವರದಿಯನ್ನು ಜಾರಿಗೊಳಿಸಲು ಒಟ್ಟು 156 ಶಿಫಾರಸ್ಸು ಪತ್ರಗಳನ್ನು ಪಡೆದುಕೊಂಡಿದ್ದೇವೆ. ಇದನ್ನು ಮುಖ್ಯಮಂತ್ರಿಗಳು ಹಾಗೂ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಹಾಗೂ ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಯವರಿಗೆ ಸಲ್ಲಿಸಲಾಗಿದೆ. ಇಷ್ಟೆಲ್ಲಾ ಪ್ರಯತ್ನಗಳು ಮಾಡಿದ್ದರೂ ಸಹ ಸರ್ಕಾರ ನಮ್ಮ ಜನಾಂಗದ ಮನವಿ ಸರಿಯಾಗಿ ಪರಿಗಣಿಸದೆ ನಮ್ಮ ಹಕ್ಕನ್ನು ಕಸಿದುಕೊಂಡಿದೆಂದರು. ಸಿಎಂ ಸಿದ್ದರಾಮಯ್ಯ ಅವರು ಮಡಿವಾಳ ಸಮುದಾಯವನ್ನು ಪರಿಶಿಷ್ಟ ಜಾತಿಗೆ ಸೇರ್ಪಡೆ ಮಾಡಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕು. ನಮ್ಮ ಜಾಗದಲ್ಲಿ ಬಲಿಷ್ಠ ಜಾತಿಗಳು ಆಕ್ರಮಿಸಿಕೊಂಡು ನಮ್ಮ ಸಮಾಜ ಸಂಪೂರ್ಣವಾಗಿ ನಿರ್ಲಕ್ಷಿತವಾಗಿದೆ. ಜನಾಂಗದವರ ಕಷ್ಟಗಳನ್ನು ಆಲಿಸಿ ಅವರನ್ನು ಪರಿಶಿಷ್ಟರ ಜಾತಿಗೆ ಸೇರಿಸ ಬೇಕೆ ಬೇಡವೇ ಎಂಬುದರ ಬಗ್ಗೆ ಅಧ್ಯಯನ ನಡೆಸಲು ಮೈಸೂರು ವಿವಿ ಪ್ರೊ.ಡಾ.ಅನ್ನಪೂರ್ಣ ಅವರನ್ನು ನೇಮಿಸಿದ್ದರು. ಆಸಮಿತಿ ನಮಗೆ ಪೂರಕವಾದ ವರದಿಯನ್ನು ಸಲ್ಲಿಸಿದೆ. ಈ ವರದಿಯನ್ನು ಜಾರಿಗೆ ತರಲು ನಮ್ಮ ಸಮುದಾಯದ ಡಾ.ಬಸವ ಮಾಚಿದೇವ ಸ್ವಾಮೀಜಿ, ಮಡಿವಾಳರ ಕ್ಷೇಮಾಭಿವೃದ್ಧಿ ಸಂಘ , ಮಡಿವಾಳರ ಸಂಘಟನೆಗಳು ಒಟ್ಟುಗೂಡಿ ರಾಜ್ಯದ 224 ಶಾಸಕರನ್ನುಭೇಟಿ ಮಾಡಿ ಮನವಿ ಮಾಡಲಾಗಿದೆ ಎಂದರು.



ಹಣ ಅಕ್ರಮ ವರ್ಗಾವಣೆ:ಆರೋಪ

ಬೆಂಗಳೂರು: ಅಕ್ರಮ ಹಣ ವರ್ಗಾವಣೆ ಆರೋಪದ ಹಿನ್ನೆಲೆಯಲ್ಲಿ ರಿಯಲ್ ಎಸ್ಟೇಟ್ ಸಂಸ್ಥೆ ಮೆಸರ್ಸ್ ಮಂತ್ರಿ ಡೆವಲಪರ್ಸ್ ಪ್ರೈವೇಟ್ ಲಿಮಿಟೆಡ್ ಮೇಲೆ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಸೋಮವಾರ ಬೆಳಂಬೆಳಗ್ಗೆ ದಾಳಿ ನಡೆಸಿದ್ದಾರೆ.

» ರಿಯಲ್ ಎಸ್ಟೇಟ್ ಸಂಸ್ಥೆ ಮೇಲೆ ಇಡಿ ಬೆಳ್ಳಂಬೆಳಗ್ಗೆ ದಾಳಿ

ಹೊಸದಿಲ್ಲಿಯಿಂದ ಆಗಮಿಸಿದ 10 ಹೆಚ್ಚು ಅಧಿಕಾರಿಗಳ ತಂಡವು ಸಂಸ್ಥೆಯ ಕಚೇರಿ ಹಾಗೂ ಮಾಲೀಕ ಸುಶೀಲ್ ಮಂತ್ರಿ ಅವರ ನಿವಾಸಗಳಲ್ಲಿ ಮಹತ್ವದ ದಾಖಲೆಗಳ ಪರಿಶೀಲನೆ ನಡೆಸಿದ್ದಾರೆ. ಬೆಳಗ್ಗೆ ಆರು ವಾಹನಗಳಲ್ಲಿ ಬಂದ ಇ.ಡಿ. ಅಧಿಕಾರಿಗಳ ತಂಡವು ವಿಠ್ಠಲಮಲ್ಯ ರಸ್ತೆಯಲ್ಲಿರುವ ಮಂತ್ರಿ ಡೆವಲಪರ್ಸ್ ಕಚೇರಿ ಹಾಗೂ ಸುಶೀಲ್ ಮಂತ್ರಿ ಅವರ ನಿವಾಸದ ಮೇಲೆ ದಾಳಿ ಮಾಡಿದ್ದಾರೆ. ಸುಶೀಲ್ ಮಂತ್ರಿ ಅವರ ಮನೆ ಮತ್ತು ಕಚೇರಿಯ ಪಾರ್ಕಿಂಗ್ ಮೇಲೆ ಸುಮಾರು 14 ಅಧಿಕಾರಿಗಳು ಶೋಧ ನಡೆಸಿದ್ದು, ಇನ್ ಫ್ಯಾಂಟ್ರಿ ರಸ್ತೆಯಲ್ಲಿರುವ ಸುಶೀಲ್ ಅವರ ಮತ್ತೊಂದು ನಿವಾಸದ ಮೇಲೂ ದಾಳಿ ಮಾಡಿದ್ದಾರೆ.

ಗ್ರಾಹಕರಿಗೆ ಅಪಾರ್ಟ್‌ಮೆಂಟ್ ನೀಡುವುದಾಗಿ ಹಣ ಪಡೆದು ವಂಚಿಸಿರುವ ಹಾಗೂ ಆ ಹಣವನ್ನು ಹೊರದೇಶಗಳಲ್ಲಿ ಹೂಡಿಕೆ ಮಾಡಿರುವ ಗಂಭೀರ ಆರೋಪ ಸಂಸ್ಥೆಯ ಮೇಲಿದೆ. ಈ ಹಿನ್ನೆಲೆಯಲ್ಲಿ ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡಿರುವ ಇ.ಡಿ. ಅಧಿಕಾರಿಗಳು ತನಿಖೆ ಚುರುಕುಗೊಳಿಸಿದ್ದಾರೆ.

ಹಳೆಯ ಪ್ರಕರಣದ ಮುಂದುವರಿಕೆ: ಮಂತ್ರಿ ಡೆವಲಪರ್ಸ್ ಮೇಲೆ ಈ ಹಿಂದೆ 2022ರಲ್ಲಿಯೂ ಇಡಿ ದಾಳಿ ದಾಳಿ ನಡೆದಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ 2023ರಲ್ಲಿ ಸಂಸ್ಥೆಗೆ ಸೇರಿದ ಸುಮಾರು 300 ಕೋಟಿ ರೂ. ಮೌಲ್ಯದ ಸ್ಥಿರಾಸ್ತಿಯನ್ನು ಜಾರಿ ನಿರ್ದೇಶನಾಲಯ ಜಪ್ತಿ ಮಾಡಿತ್ತು. ಈಗ ಮತ್ತೆ ಅಕ್ರಮ ಹಣ ವರ್ಗಾವಣೆಯ ಸುಳಿವು ಸಿಕ್ಕಿರುವ ಹಿನ್ನೆಲೆಯಲ್ಲಿ ಈ ಎರಡನೇ ಹಂತದ ಬೃಹತ್ ಕಾರ್ಯಾಚರಣೆ ನಡೆದಿದೆ. 1999ರಲ್ಲಿ ಸ್ಥಾಪನೆಯಾದ ಈ ಸಂಸ್ಥೆಯು ಬೆಂಗಳೂರು ಮಾತ್ರವಲ್ಲದೆ ಚೆನ್ನೈ, ಹೈದರಾಬಾದ್ ಹಾಗೂ ಪುಣೆಯಲ್ಲೂ ಶಾಖೆಯನ್ನು ಹೊಂದಿದೆ.

ಕಲೆ ಬಗ್ಗೆ ಆಸಕ್ತಿ, ಕಾಳಜಿ ಇರಲಿ

ಬೆಂಗಳೂರು: ಕಲೆಯ ಬಗೆಗಿನ ಆಸಕ್ತಿ ಹಾಗೂ ಕಾಳಜಿ ಪ್ರತಿಯೊಬ್ಬರಿಗೂ ಅತ್ಯವಶ್ಯ ಎಂದು ಅಂತರಾಷ್ಟ್ರೀಯ ಮನ್ನಣೆ ಪಡೆದ ಸಾವಧಾನತೆಯ ಜೀವನ ತರಬೇತಿದಾರೆ ಹಾಗೂ ಕಲಾಚಿಕಿತ್ಸಕಿ ಅಶ್ವತಿ ಸುಬ್ರಮಣಿಯನ್ ತಿಳಿಸಿದರು.

ನಿಟ್ಟೆ ಯೂನಿವರ್ಸಿಟಿಯ ಅಂಗಸಂಸ್ಥೆ ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾದ್ಯಾಲಯದ ಮಹಿಳಾ ಒಕ್ಕೂಟ ಆರಾ ಆಯೋಜಿಸಿದ್ದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಮಾತನಾಡಿದ ಅವರು, ನೀವು ಇಂಜಿನಿಯರ್ ಆಗಿರಿ, ವೈದ್ಯರಾಗಿರಿ ಅಥವಾ ಅರ್ಥತಜ್ಞರಾಗಿರಿ, ನಿಮ್ಮೊಳಗಿನ ಕಲೆಯ ಬಗೆಗಿನ ಅನುರಾಗ, ಬಹುತೇಕ ಸಂದರ್ಭಗಳಲ್ಲಿ ನಿಮ್ಮ ಅನಾರೋಗ್ಯವನ್ನು ನಿವಾರಣೆ ಮಾಡುವ ಔಷಧವಾಗಿರುತ್ತದೆ. ವಿಶ್ವದಾದ್ಯಂತ ಕಲಾಚಿಕಿತ್ಸೆ ಅಥವಾ ಆರ್ಟ್ ಥೆರಪಿ, ಮಾನಸಿಕ ಚಿಕಿತ್ಸೆಯ ಅಂಗವಾಗಿದ್ದು, ಇದು ಉದ್ವೇಗವನ್ನು ಗಣನೀಯ ಪ್ರಮಾಣದಲ್ಲಿ ತಗ್ಗಿಸುತ್ತದೆ ಮತ್ತು ಸ್ವಾಭಿಮಾನವನ್ನು ಹೆಚ್ಚಿಸುತ್ತದೆ. ಅಲ್ಲದೇ ಅನಿರೀಕ್ಷಿತ ಆಘಾತದಿಂದ ಚೇತರಿಸಿಕೊಳ್ಳಲು ಆಗತ್ಯರುವ ಅರಿವಿನ ಸಾಮರ್ಥ್ಯ ವೃದ್ಧಿಗೆ ನೆರವಾಗುತ್ತದೆ ಎಂದರು.

ನನ್ನ ವೈಯಕ್ತಿಕ ಬದುಕಿನಲ್ಲಿ ಅನೇಕ ಸಮಸ್ಯೆಗಳನ್ನು ಎದುರಿಸಿದೆ. ಸಾವಿನ ಬಾಗಿಲು ತಟ್ಟಿ ಬಂದೆ. ನನ್ನ 26ನೇ ವಯಸ್ಸಿನಲ್ಲಿ ನರ ಅಂಗಾಂಶದ ಅವನತಿಯಿಂದ ನನ್ನ ದೇಹ ಮತ್ತು ಮನಸ್ಸು ಜರ್ಜರಿತವಾಗಿತ್ತು. ಆಗ ನನಗೆ ಸವಾಲುಗಳನ್ನು ಮೆಟ್ಟಿ ನಿಲ್ಲಲು ಸ್ಫೂರ್ತಿ ತುಂಬಿದ್ದೇ ಸಾವಧಾನತೆ ಹಾಗೂ ಕಲಾ ಚಿಕಿತ್ಸಾ ವಿಧಾನ. ನಾನು ಅಸ್ವಸ್ಥಳಾಗುವ ಮುನ್ನ ನಾನು ಭರತನಾಟ್ಯ ಕಲಾದೆಯಾಗಿದ್ದೆ. ಅದೇ ನನ್ನ ಪಾಲಿಗೆ ಔಷಧವಾಯ್ತು ಮತ್ತು ಗಾಲಿಕುರ್ಚಿಯಲ್ಲಿಯೇ ಹೊಸ ಬದುಕು ಕಟ್ಟಿಕೊಳ್ಳಲು ಪ್ರೇರೇಪಿಸಿತು ಎಂದು ವಿವರಿಸಿದರು.

ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾದ್ಯಾಲಯದ ಪ್ರಾಂಶುಪಾಲ ಡಾ.ಎಚ್.ಸಿ.ನಾಗರಾಜ್, ಸಂಸ್ಥೆಯ ಪಠ್ಯಕ್ರಮ ಅಭಿವೃದ್ಧಿ ವಿಭಾಗದ ನಿರ್ದೇಶಕ ಡಾ.ಜೆ.ಸುಧೀರ್ ರೆಡ್ಡಿ, ವಿದ್ಯಾರ್ಥಿ ಕಲ್ಯಾಣ ವಿಭಾಗದ ಡೀನ್ ಡಾ.ಹಿತಾ ಡಿ. ಶೆಟ್ಟಿ ಹಾಗೂ ಆರಾ ಸಂಯೋಜಕಿ ಮೋನಿಕಾ ರಾಣಿ ಎಚ್.ಜಿ ಸೇಋುಇದಂತೆ ಇತರರಿದ್ದರು.



» ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾದ್ಯಾಲಯದಲ್ಲಿ ಮಹಿಳಾ ದಿನಾಚರಣೆ
ವಿದ್ಯಾರ್ಥಿಗಳಿಂದ ಗಮನ ಸೆಳೆದ ಸಾಂಸ್ಕೃತಿಕ ಕಾರ್ಯಕ್ರಮ

ಸದೃಢ ಸಮಾಜಕ್ಕಾಗಿ ಬಿಜೆಪಿಗೆ ಅಧಿಕಾರ

ಕೆಂಗೇರಿ: ಸದೃಢ ಸಮಾಜ ನಿರ್ಮಾಣಕ್ಕೆ ರಾಜ್ಯದಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆ ಮತ್ತು ಬಿಜೆಪಿ ಅಧಿಕಾರಕ್ಕೆ ತರುವಲ್ಲಿ ಕಾರ್ಯಕರ್ತರು ಮುಂದಾಗಬೇಕು ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

ನೂತನವಾಗಿ ಅಧಿಕಾರ ಸ್ವೀಕರಿಸಿದ ಯಶವಂತಪುರ ವಿಧಾನಸಭಾ ಕ್ಷೇತ್ರದ ನಗರ ಮತ್ತು ಗ್ರಾಮಾಂತರ ಮಂಡಲದ ಅಧ್ಯಕ್ಷರ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ಸ್ಥಳೀಯ ಚುನಾವಣೆ ಜಿಬಿಎ ತಾಲೂಕು ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳಬೇಕು. ಬಿಜೆಪಿ ಪಕ್ಷದ ಬಲವರ್ಧನೆಗೆ ತಳ ಮಟ್ಟದ ಸಂಘಟನೆ ಅವಶ್ಯಕತೆಯಿದ್ದು, ಎಲ್ಲಾ ಬಿಜೆಪಿ ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪಕ್ಷದ ಬಲವರ್ಧನೆಗೆ ಶ್ರಮಿಸಬೇಕು ಎಂದು ತಿಳಿಸಿದರು. ನೂತನ ಗ್ರಾಮಾಂತರ ಮಂಡಲ ಅಧ್ಯಕ್ಷ ಆರ್.ಟಿ.ಪ್ರಕಾಶ್ ಮಾತನಾಡಿ, ಗ್ರಾಮೀಣ ಭಾಗದ ಎಲ್ಲಾ ಗ್ರಾಮಗಳಿಗೂ ಭೇಟಿ ನೀಡಿ ಯುವಕರು ಮತ್ತು ಬಿಜೆಪಿ ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪಕ್ಷದ ಸಂಘಟನೆ ಒತ್ತು ನೀಡುವ ಮೂಲಕ, ಬಿಜೆಪಿ ಪಕ್ಷ ರಾಜ್ಯದಲ್ಲಿ ಅಧಿಕಾರಕ್ಕೆ ತರುವಲ್ಲಿ ಶ್ರಮಿಸಲಾಗುವುದು ಎಂದು ತಿಳಿಸಿದರು. ಬಿಜೆಪಿ ನಗರ ಮಂಡಲ ಅಧ್ಯಕ್ಷ ಜಯರಾಮೇಗೌಡ, ಗ್ರಾಮಾಂತರ ಮಂಡಲದ ಅಧ್ಯಕ್ಷ ಆರ್.ಪಿ. ಪ್ರಕಾಶ್, ಮಾಜಿ ನಗರ ಮಂಡಲ ಅಧ್ಯಕ್ಷ ಸಿ.ಎಂ.ಮಾರೇಗೌಡ, ಅನಿಲ್ ಚಳಗೇರಿ, ನಗರ ಮೂಲಕ ಪ್ರಧಾನ ಕಾರ್ಯದರ್ಶಿ ಜಯರಾಮ್, ಗ್ರಾಮಾಂತರ ಮಂಡಲದ ಪ್ರಧಾನ ಕಾರ್ಯದರ್ಶಿ ಯತೀಶ್, ಬಿಜೆಪಿ ಮುಖಂಡ ದೇವರಾಜ್ ಹಾಗೂ ಮತ್ತಿತರರು ಉಪಸ್ಥಿತರಿದ್ದರು.



ಬಯೋಮೆಟ್ರಿಕ್ ಕಡ್ಡಾಯಕ್ಕಾಗಿ ಆಗ್ರಹ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ) ಮತ್ತು ಪಾಲಿಕೆಗಳ ಅಧಿಕಾರಿ, ನೌಕರರ ಹಾಜರಾತಿಗೆ ಸಂಬಂಧಿಸಿದಂತೆ ಕಡ್ಡಾಯವಾಗಿ ಬಯೋಮೆಟ್ರಿಕ್ ಪದ್ಧತಿಯನ್ನು ಜಾರಿಗೊಳಿಸಬೇಕು ಎಂದು ಬಿಜೆಪಿ ನಾಯಕ ಎನ್.ಆರ್ .ರಮೇಶ್ ಆಗ್ರಹಿಸಿದರು.



» ಜಿಬಿಎ ಆಯುಕ್ತರಿಗೆ ಬಿಜೆಪಿ ನಾಯಕ ಎನ್.ಆರ್. ರಮೇಶ್ ಮನವಿ

ಸೋಮವಾರ ಜಿಬಿಎ ಮುಖ್ಯ ಆಯುಕ್ತರಿಗೆ ಮನವಿ ಸಲ್ಲಿಸಿದ ನಂತರ ಮಾತನಾಡಿ, ಪ್ರಸ್ತುತ ಜಿಬಿಎ ಮತ್ತು ಬೆಂಗಳೂರಿನ 5 ನಗರ ಪಾಲಿಕೆಗಳ ಕಚೇರಿಗಳಲ್ಲಿ ಒಟ್ಟು 2,818 ವಿವಿಧ ಹುದ್ದೆಗಳನ್ನು ಹೊಂದಿರುವ ಅಧಿಕಾರಿ, ನೌಕರರು ಕಾರ್ಯನಿರ್ವಹಿಸುತ್ತಿದ್ದಾರೆ. ಈ 2,818 ಮಂದಿ ಅಧಿಕಾರಿ, ನೌಕರರ ಪೈಕಿ, ಕನಿಷ್ಠ ಶೇ.50ರಷ್ಟು ಮಂದಿ ಅಧಿಕಾರಿ, ನೌಕರರು ಪ್ರತೀ ನಿತ್ಯ ನಿಗದಿತ ಸಮಯಕ್ಕೆ ಅಂದರೆ ಬೆಳಗ್ಗೆ 10 ಗಂಟೆಗೆ ಕರ್ತವ್ಯಕ್ಕೆ ಹಾಜರಾಗಿ ಸಂಜೆ 5 ಗಂಟೆಯವರೆಗೆ ಕಾರ್ಯನಿರ್ವಹಿಸಬೇಕೆಂಬ ಕಡ್ಡಾಯ ನಿಯಮವಿದ್ದರೂ ಸಹ, ಬೆಳಗ್ಗೆ 11ಗಂಟೆಯಿಂದ 12ಗಂಟೆಯವರೆಗೆ ತಮ್ಮ ತಮ್ಮ ಕಚೇರಿಗಳಲ್ಲಿ ಕರ್ತವ್ಯಕ್ಕೆ ಹಾಜರಾಗದೇ ಭಾರಿ ಪ್ರಮಾಣದ ಕರ್ತವ್ಯ ಲೋಪವನ್ನು ಎಸಗುತ್ತಿದ್ದಾರೆ. ಇದರಿಂದಾಗಿ ಜಿಬಿಎ ಸೇರಿದಂತೆ ಐದು ನಗರ ಪಾಲಿಕೆಗಳಿಗೆ ಬೃಹತ್ ಪ್ರಮಾಣದ ಮಾನವ ಸಂಪನ್ಮೂಲದ ವಂಚನೆ ಕಾರ್ಯ ನಿರಂತರವಾಗಿ ಆಗುತ್ತಿದೆ ಎಂದರು.

ಈ ಹಿಂದೆ ಎಲ್ಲಾ ವಲಯಗಳ, ವಿಭಾಗಗಳ ಮತ್ತು ಕೇಂದ್ರ ಕಚೇರಿಗಳಲ್ಲಿ ಬಯೋಮೆಟ್ರಿಕ್ ಪದ್ಧತಿಯನ್ನು ಕಡ್ಡಾಯಗೊಳಿಸಲಾಗಿತ್ತು. ಅದರಂತೆ, ಕರ್ತವ್ಯಕ್ಕೆ ಹಾಜರಾಗುವ ಪ್ರತಿಯೊಬ್ಬನ ಬಯೋಮೆಟ್ರಿಕ್ ಪದ್ಧತಿಯ ಮೂಲಕ ತಮ್ಮ ಹಾಜರಾತಿಯನ್ನು ಡಿಜಿಟಲ್ ತಂತ್ರಜ್ಞಾನದ ಮೂಲಕ ಕಡ್ಡಾಯವಾಗಿ ನಮೂದು ಮಾಡಬೇಕಿತ್ತು. ಕೂಡಲೇ ಎಲ್ಲಾ ಐದು ಪಾಲಿಕೆಗಳು ಮತ್ತು ಜಿಬಿಎ ಕೇಂದ್ರ ಕಚೇರಿಯ ಅಧಿಕಾರಿ, ನೌಕರರುಗಳು ಕಡ್ಡಾಯವಾಗಿ ಬಯೋಮೆಟ್ರಿಕ್ ಪದ್ಧತಿಯಲ್ಲಿ ಹಾಜರಾತಿಯನ್ನು ನಮೂದು ಮಾಡಬೇಕೆಂಬ ಆಗ್ರಹಿಸಿದರು.

ಚಾಮಲಾಪುರ ಹುಂಡಿ ಅಪೋಲೊ ವೃತ್ತದಲ್ಲಿ ಸಂಚಾರಕ್ಕೆ ಅಡ್ಡಿ : ಕ್ರಮಕ್ಕಾಗಿ ಒತ್ತಾಯ

ರೈಲ್ವೆ ಗೇಟ್ ಮುಚ್ಚದಂತೆ ನಾಗರಿಕರ ಪ್ರತಿಭಟನೆ

ನಂಜನಗೂಡು: ನಗರದ ಊಟಿ ಮುಖ್ಯರಸ್ತೆಯ ಅಪೋಲೊ ವೃತ್ತದಲ್ಲಿರುವ ರೈಲ್ವೆ ಗೇಟ್ 18 ನ್ನು ಮುಚ್ಚದೆ ಯಥಾ ಸ್ಥಿತಿ ಕಳೆದುಕೊಳ್ಳಬೇಕು ಎಂದು ಒತ್ತಾಯಿಸಿ ಚಾಮ ಲಾಪುರದ ಹುಂಡಿಯ ಗ್ರಾಮಸ್ಥರು ಬೃಹತ್ ಪ್ರತಿಭಟನೆ ನಡೆಸಿದರು.

ಅಪೋಲೊ ವೃತ್ತದ ರೈಲ್ವೆ ಗೇಟ್ ಬಳಿ ಜಮಾವಣೆಗೊಂಡ ಚಾಮಲಾಪುರ ಹುಂಡಿಯ ಗ್ರಾಮಸ್ಥರು ರೈಲ್ವೆ ಅಧಿಕಾರಿಗಳು, ರೈಲ್ವೆ ಸಚಿವರು ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಶಂಕರಪ್ಪ ಮಾತನಾಡಿ, ನಗರದ ಚಾಮಲಾಪುರ ಹುಂಡಿ ಬಡಾವಣೆಯು ಅತ್ಯಂತ ಹಳೆಯದಾದ ಬಡಾವಣೆಯಾಗಿದ್ದು ಸುಮಾರು 12 ಸಾವಿರದಷ್ಟು ಜನಸಂಖ್ಯೆಯನ್ನು ಹೊಂದಿದ್ದು 4 ನಗರಸಭಾ ವಾರ್ಡ್‌ಗಳಿವೆ. ಇಲ್ಲಿನ ಗ್ರಾಮಸ್ಥರು ಸ್ಮಶಾನಕ್ಕೆ ತೆರಳುವುದು ಮತ್ತು ಹಬ್ಬದ ಸಂದರ್ಭದಲ್ಲಿ ಕಪಿಲಾ ನದಿ ತೀರದಲ್ಲಿ ಪೂಜಾ ಕಾರ್ಯಕ್ರಮವನ್ನು ನೆರವೇರಿಸಿ ಸತ್ತಿಗೆ ಸುರಪಾನಿ ಮತ್ತು ಪಲ್ಲಕ್ಕಿ ಹಾಲರವಿ ಸೇರಿದಂತೆ ಹಲವಾರು ಸಾಂಪ್ರದಾಯಕ ಆಚರಣೆ ಮತ್ತು ಪೂಜಾ ಕಾರ್ಯಕ್ರಮಕ್ಕೆ ಈ ರೈಲ್ವೆ ಗೇಟ್ 18ನ್ನೇ ಅವಲಂಬಿಸಿಕೊಂಡಿದ್ದು ನಮ್ಮ ಗ್ರಾಮದ ಜೀವನಾಡಿಯಾಗಿದೆಂದದರು.



ಆದರೆ, ರೈಲ್ವೆ ಅಧಿಕಾರಿಗಳು ಈ ರೈಲ್ವೆ ಗೇಟ್ ಅನ್ನು ಮುಚ್ಚಲು ಮುಂದಾಗಿದ್ದಾರೆ. ರೈಲ್ವೆ ಅಧಿಕಾರಿಗಳು ಕೈಗೊಂಡಿರುವ ಈ ನಿಲುವು ಅವೈಜ್ಞಾನಿಕವಾಗಿದ್ದು ಚಾಮಲಾಪುರದ ಹುಂಡಿ ಮತ್ತು ಸುತ್ತಮುತ್ತಲ ಗ್ರಾಮಸ್ಥರಿಗೆ ಈ ರೈಲ್ವೆ ಗೇಟ್ ಅನ್ನು ಮುಚ್ಚುವುದರಿಂದ ಬಾರಿ ತೊಂದರೆಯಾಗುತ್ತದೆ ಎಂದು ದೂರಿದರು.

ಆದ್ದರಿಂದ ಈ ನಿರ್ಧಾರವನ್ನು ಕೈಬಿಟ್ಟು ರೈಲ್ವೆ ಗೇಟ್ ನ್ನು ಮುಚ್ಚದೆ ಯಥಾ ಸ್ಥಿತಿಯನ್ನು ಕಾಪಾಡಿಕೊಳ್ಳಬೇಕು ಎಂದು ಒತ್ತಾಯಿಸಿ ಕಳೆದ ನಾಲ್ಕು ವರ್ಷದಿಂದ ಗ್ರಾಮಸ್ಥರು ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಾ ಬಂದಿದ್ದೇವೆ. ಜತೆಗೆ ಈ ಸಂಬಂಧ ರೈಲ್ವೆ ಮಂತ್ರಿಗಳು, ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು ಸಂಸದರು ಸೇರಿದಂತೆ ರಾಷ್ಟ್ರಪತಿಗೂ ಪತ್ರ ಬರೆದಿದ್ದೇವೆಂದರು.

ಸಂಸದರು ಮತ್ತುಶಾಸಕರು ಸ್ಥಳಕ್ಕೆ ಭೇಟಿ ನೀಡಿದ್ದ ವೇಳೆ ಈ ರೈಲ್ವೆ ಗೇಟ್ ಅನ್ನು ಮುಚ್ಚದೆ ಹಬ್ಬದ ಸಂದರ್ಭದಲ್ಲಿ ತೆರೆದು ಸಾಂಪ್ರದಾಯಿಕ ಆಚರಣೆಗೆ ಅವಕಾಶ ಕಲ್ಪಿಸುವುದಾಗಿ ಭರವಸೆ ನೀಡಿದ್ದರು. ಆದರೆ, ರೈಲ್ವೆ ಅಧಿಕಾರಿಗಳು ಸ್ಕೈ ವಾಕ್ ನಿರ್ಮಿಸಿ ಏಕಾಏಕಿ ರೈಲ್ವೆ ಗೇಟ್ ಮುಚ್ಚಲು ಮುಂದಾಗಿದ್ದಾರೆ ಒಂದು ವೇಳೆ ರೈಲ್ವೆ ಗೇಟ್ ಮುಚ್ಚಲು ಮುಂದಾದರೆ ಉಗ್ರ ಪ್ರತಿಭಟನೆಯನ್ನು ರೂಪಿಸುವುದಾಗಿ ಎಚ್ಚರಿಸಿದರು. ಪ್ರತಿಭಟನೆಯಲ್ಲಿ ಮಾಜಿ ಪುರಸಭಾ ಅಧ್ಯಕ್ಷ ರಾಜು, ಗ್ರಾಮದ ಯಜಮಾನರಾದ ಶಿವರಾಜು, ಮಹದೇವು, ಮಾದೇಶ, ಚಂದ್ರಶೇಖರ್, ಮಲ್ಲು, ಶಾಂತಮೂರ್ತಿ, ಸ್ವಾಮಿ, ದೇವರಾಜು, ಬಸವಣ್ಣ, ಸೋಮಣ್ಣ, ರಂಗಯ್ಯ, ಶ್ರೀಕಂಠ, ರಾಜಪ್ಪ, ಸಿದ್ದಯ್ಯ, ಬಸವಣ್ಣ, ಪುಟ್ಟಸ್ವಾಮಿ, ಶಾಂತಮೂರ್ತಿ ಸೇರಿದಂತೆ ಗ್ರಾಮದ ಗ್ರಾಮಸ್ಥರು ಉಪಸ್ಥಿತರಿದ್ದರು.

IN THE COURT OF THE PRL CIVIL JUDGE AND JMFC AT ANEKAL

C.Misc. No. 402/2026

BETWEEN: Sri.Lakshman, S/o Late Ashwathappa, Aged about 46 years, R/at Bayasabi Layout, Anekal Town, Anekal Taluk, Bangalore District. **...PETITIONER.**

AND: The Chief Officer, Anekal Town - **RESPONDENT**

Whereas the petitioners have filed the above petition for seeking the death certificate of petitioner's great grandfather namely Munisvamappa S/o Late Mariyappa who was died on 16-04-1964 at Bayasabi Layout, Anekal Town, Anekal Taluk, Bangalore District before the Prl Civil Judge and JMFC at Anekal, whereas the above petition is fixed for hearing date on **15-04-2026** at 11.00 AM if anybody interest in this matter regard to appear in this court in person or by a pleader to file objections the same of you failing which the petition will be disposed on enquiry.

Given under my hand and seal of the Court on 12-03-2026.

By order of the court, Sheristedar, Civil Judge Jr Dvn and JMFC Court at Anekal.

SRI.MANJUNATH.H.V,
SRI SHIVARAJ KUMAR, Advocates
Office at STB Complex, Attibele Main Road, Anekal Town, Anekal Taluk, Bangalore District.

IN THE COURT OF THE ASSISTANT COMMISSIONER AT TUMAKURU

RRT (A) T 500/2020-21

APPELLANT: Saggadeeraiah -V/s-
RESPONDENTS : Thashiladar and others

RESPONDENT No.2: Siddagangamma, W/o Late Gangasiddiah, aged about 65 years, R/at Doddathimmaiahnapalya, Hirehalli post Urdigere Hobli, Tumkur Taluk. Now Residing at Hotel Renuka Bhavana, in front of SBI ATM, Hirehalli Industrial Area, Tumkur, Tumkur Taluk

NOTICE

That the appellant has filed this suit for set aside the MR & other reliefs. You the above named Siddagangamma is made as Respondents No.2 in the above case. Inspite of several steps taken through RPAD, the suit summons was not served on you. You Respondents No.2 is hereby notified that, the above case is posted for your appearance on **09-04-2026**. Therefore, after taking this notice, you should appear before this Hon'ble court, in person or through Advocate, otherwise the case will be decided in your absence by placing exparte.

Given under my hand and seal of the court on this 13/03/2026

By order of the Court, Assistant Commissioner at Tumakuru

B V VASANTHAKUMAR, Advocate
Tumakuru

IN THE COURT OF THE HON'BLE PRL. CIVIL JUDGE AND J.M.F.C. AT GUBBI

C.Mis. No. 26/2026

Petitioner: 1. Gangamma, W/o Late. Mahadevaiah, aged about 64 years. **2. Rani** W/o Lakshminarayana, D/o Late. Mahadevaiah, aged about 34 years. Both are R/at, Cheluru, Cheluru Hobli, Gubbi Taluk, Tumakuru District. **-V/s-**
Respondent: The Tahasildar, Gubbi Taluk, Gubbi

NOTICE

WHEREAS, the above Petitioners above named has presented petition to this Hon'ble Court under section 13(3) of Registration of Birth and Death Act, 1969 for order direct the respondent authority to get enter the date of death of Husband of the Petitioner No.1 and father of the Petitioner No.2 by name **MAHADEVAIAH** S/o LATE. NARASIMHAIAH who is died on 15-03-2017 at Petitioner residence i.e, Cheluru, Cheluru Hobli, Gubbi Taluk. If anybody have objection or right with respect to the above said fact and petition may file objection in the above said case by personally or by counsel. The case is posted on **21/04/2026** at **11.00 AM.** otherwise the said matter will be disposed in accordance with law

Given under my hand and the seal of the court on this 17/02/2026 at Gubbi.

By order of the Court, Sheristedar (Administration) Prl. Civil Judge & JMFC Court, Gubbi

Advocate for Petitioner: **Mahesh D.M**
KSM Law Associates
M.G. Road, Gubbi. Mob. No.9945739575.

IN THE COURT OF THE PRINCIPAL CIVIL JUDGE AT KUNIGAL

EX. No: 29/2023

Decree Holder :
Akarsh Deepa Chits India Pvt Ltd.
-V/s-
Judgement Debtor :
Lavakumar HR and others

Cause Notice to Judgement Debtor No. 2 :
2. Sri. Sunil ,C S/o Channegowda, R/o No. 22, Kariobanahalli, 8th Cross, Tigalarapalya Main Road, KG Vidhya Mandira, Bangalore-58.

Whereas the DHR have filed the above suit against the JDR's for relief of partition and such other reliefs, Hence the above case come and participate in the above proceedings. Hence this paper publication.

Take this petition notice that you are hereby called upon to appear before the Prl Civil Judge at Kunigal, Tumkur Dist, on **17.04.2026 at 11-00 a.m.** Therefore you are hereby informed to appear on the said date. Failing, which the case shall be heard and determined in your absence.

Respect to Schedule

Schedule: Rs 2,51,272/- (rupees two lakhs fifty one thousand two hundred seventy two only)

Given, under my hand and the seal of the court on this 16th day of March 2026 at Kunigal.

By Order of the Court, Chief Ministerial Officer, Court of Prl. Civil Judge, (JD) & JMFC, Kunigal.

Advocate for plaintiff: **Sri Chandregowda**
Sri. BS Harsha, Advocates, Kunigal.

PUBLIC NOTICE

DOCUMENT LOST

I. Lokesh Banagir, S/o. Sri B.G. Somashekarappa, aged about 55 years, residing at No. 1719, 6th Main Road, 6th Cross, Judicial Layout, GKVK Post, Bengaluru-560 065, would like to inform the general public that I, lost the Registered Original Sale Deed of Document No.7158/97-98 dated 02-02-1998.

Accordingly I has lodged the Complainant on Bengaluru City Police with E-Lost dated 11-03-2026, Lost Report No.2104161/2026 for

SCHEDULE PROPERTY

All that site bearing No.1719, in the Layout in several Survey Numbers at Allalasandra Chikkabommasandra and Jakkur Plantation Yelahanka Hobli, Bangalore North Taluk, Bangalore, formed by the Karnataka State Judicial Department Employees House Building Co- Operative Society Ltd., Bangalore, as per plan approved by the Bangalore Development Authority. Measuring :East to West:50'.3", North to South:30' in all total Area 167.5 Sq. Yards with all rights, appurtenances, whatsoever whether underneath or above the surface and boundaries as follows: East by: Site No.1712, West by: Road, North by: Site No.1718, South by :1720.

If anyone finding the aforesaid documents is hereby requested to handover the same to me at the above stated address.

Contact No. 9901900888.

ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮಾಲೂರು

ಸಂಕೀರ್ಣ ಪ್ರಕರಣ ಸಂಖ್ಯೆ : 22/2026

ಅರ್ಜಿದಾರರು:- ಶ್ರೀ ಕೆ.ಬಿ.ಬಸವರಾಜ್, ಬಿನ್ ಭದ್ರಯ್ಯ ಶೆಟ್ಟಿ, ಸುಮಾರು 72 ವರ್ಷ, ವಾಸ: ನಂ.717/8, ಗ್ರೌಂಡ್ ಫ್ಲೋರ್,6ನೇ ಮೈನ್ ರಸ್ತೆ, ಶ್ರೀನಗರ, ಬೆಂಗಳೂರು, ದಕ್ಷಿಣ ತಾಲ್ಲೂಕು,ಬನಶಂಕರಿ, ಬೆಂಗಳೂರು (ಜಿ) : ಪಿನ್ 560 050.

-ವಿರುದ್ಧ-

ಎದುರುದಾರರು:-ತಹಶೀಲ್ದಾರ್,ಮಾಲೂರು ತಾಲ್ಲೂಕು, ಮಾಲೂರು, ಕೋಲಾರ ಜಿಲ್ಲೆ.

ಸಾರ್ವಜನಿಕ ಸೂಚನೆ

ಅರ್ಜಿದಾರರು ಮೇಲ್ಕಂಡ ಪ್ರಕರಣವನ್ನು ಅವರ ತಾಯಿ ನಂಜಮ್ಮ ಕೋಂ. ಭದ್ರಯ್ಯ ಶೆಟ್ಟಿ ರವರು ದಿನಾಂಕ: 21/04/2003 ರಂದು ಮಾಲೂರು ತಾಲ್ಲೂಕು, ಕಸಬಾ ಹೋಬಳಿ, ಕುಡಿಯನೂರು ಗ್ರಾಮದಲ್ಲಿ ಮರಣ ಹೊಂದಿರುವುದಾಗಿ ಹಾಗೂ ಅವರ ಮರಣ ದಿನಾಂಕವನ್ನು ನೋಂದಣಿ ಮಾಡಿ ಪ್ರಮಾಣ ಪತ್ರವನ್ನು ನೀಡಬೇಕೆಂದು ಮೇಲ್ಕಂಡ ಘನ ನ್ಯಾಯಾಲಯದಲ್ಲಿ ಪರಿಹಾರವನ್ನು ಬೇಡಿ ಎದುರುದಾರರ ವಿರುದ್ಧ ತಕರಾರು ಇದ್ದಲ್ಲಿ ಅರ್ಜಿಯನ್ನು ಸಲ್ಲಿಸಿ ನಿವೇದಿಸಿ ಕೊಂಡಿರುತ್ತಾರೆ, ತತ್ಸಂಬಂಧವಾಗಿ ಯಾರಾದರೂ ಅಂತಹವರು : 16.04.2026 ರಂದು ಬೆಳಿಗ್ಗೆ 11-00 ಘಂಟೆಗೆ ಈ ಘನ ನ್ಯಾಯಾಲಯದಲ್ಲಿ ನ್ಯಾಯಿಕ ಪ್ರಕ್ರಿಯೆಗೆ ಖುದ್ದಾಗಿ ಆಗಲಿ ಅಥವಾ ವಕೀಲರ ಮೂಲಕ ಆಗಲಿ ಹಾಜರಾಗಿ ತಮ್ಮ ಬಳಿ ಇರುವ ದಾಖಲೆಗಳೊಂದಿಗೆ ತಕರಾರು ಸಲ್ಲಿಸತಕ್ಕದ್ದು, ತಪ್ಪಿದ್ದಲ್ಲಿ ಏಕಪಕ್ಷೀಯವಾಗಿ ಪರಿಗಣಿಸಿ ಅರ್ಜಿಯನ್ನು ವಿಲೇವಾರಿ ಮಾಡಲಾಗುವುದೆಂದು ತಿಳಿಯುವುದು.

ನ್ಯಾಯಾಲಯದ ಮೊಹರು ಮತ್ತು ದಿನಾಂಕ 12/3/2026 ರಂದು ನೀಡಿರುತ್ತದೆ.

ನ್ಯಾಯಾಲಯದ ಆದೇಶದ ಮೇರೆಗೆ,
ಶಿರಸ್ತೇದಾರರು, 2ನೇ ಹೆಚ್ಚುವರಿ ಜಡ್ಜ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ನ್ಯಾಯಾಲಯ,ಮಾಲೂರು.

ಅರ್ಜಿದಾರರ ಪರ ವಕೀಲರು : ಶ್ರೀ. ಹೆಚ್. ವಿ. ರಮೇಶ್, 9448662887, ವಕೀಲರು,ಟಿ.ಡಿ.ಎಸ್. ಬಿಲ್ಡಿಂಗ್ಸ್, 1ನೇ ಮಹಡಿ,ಬಸ್ ನಿಲ್ದಾಣದ ಹತ್ತಿರ, ಮಾಲೂರು.

IN THE COURT OF MOTOR ACCIDENT CLAIMS TRIBUNAL AT BENGALURU

MVC No 6301/2025 (SCCH-03)

BETWEEN: Sri Chalapathi ...PETITIONER

AND: Sri.Krishnappa & another. ...RESPONDENTS

NOTICE TO RESPONDENT No. 1

Sri.Krishnappa, S/o Pillakempanna, Major, R/at Gangasandra Village, Hadonahalli Post, Doddabalapura Taluk, Bengaluru Rural Dist.,-561205.

R.c. owner of car Bearing No. KA -03-MS-3270. Take notice that the above petitioner has filed the claim petition against the respondents for the compensation of Rs. 10,00,000/- for the injuries of the petitioner in a RTA, dated 06-06-2025 at about 09.30 p.m., on V.kota-KGF Main Road, near NG Hulkur Cross by offending Car bearing No.KA-03-MS-3270. The respondent No. 1 above named is hereby directed to appear before this Hon'ble Court either in person or through the pleader on **30-04-2026** before SCCH-03 at 11:00 A.M, to defend the above case, failing which the matter will be determined as Ex-parte.

Given under my hand and seal of the court on 09-03-2026.

By order of the court, Assistant Registrar, Court of Small Causes, Bangalore.

N.M.ANANDA Advocate
No.39/2, ASVNV Bhavana, 5th Floor, K.G.Road, Bengaluru-560 009.

ಮಾನ್ಯ ಮೂರನೇ ಅಪರ ಜಿಲ್ಲಾ ನ್ಯಾಯಾಧೀಶರ ನ್ಯಾಯಾಲಯ ಪೀಠಾಸೀನ ಶ್ರೀರಂಗಪಟ್ಟಣ

ಪಿ ಅಂಡ್ ಎಸ್ ಸಿ : 28/2025

ಅರ್ಜಿದಾರರು : ಶ್ರೀ ಪುಟ್ಟೇಗೌಡ ಬಿನ್ ಲೇಟ್ ನರಸೇಗೌಡ ಸುಮಾರು 41 ವರ್ಷ ವಯಸ್ಸು, ಮಾಣಿಕ್ಯನಹಳ್ಳಿ ಗ್ರಾಮ, ಮೇಲುಕೋಟೆ ಹೋಬಳಿ ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ / ವಿರುದ್ಧ /

ಎದುರುದಾರರು : ಶ್ರೀಮತಿ ಗೌರಮ್ಮ ಕೋಂ ಲೇಟ್ ಕೆಂಪೇಗೌಡ ಸುಮಾರು 41 ವರ್ಷ ವಯಸ್ಸು , ಮಾಣಿಕ್ಯನಹಳ್ಳಿ ಗ್ರಾಮ, ಮೇಲುಕೋಟೆ ಹೋಬಳಿ, ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ

ಸಾರ್ವಜನಿಕ ಪ್ರಕಟಣೆ

ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕು, ಮೇಲುಕೋಟೆ ಹೋಬಳಿ, ಮಾಣಿಕ್ಯನಹಳ್ಳಿ ಗ್ರಾಮದ ವಾಸಿ ಲೇಟ್ ಹುಲಿಪುರುಷಯ್ಯನ ಬೋರೇಗೌಡರ ಮಗ ನರಸೇಗೌಡ ರವರಿಗೆ ಅರ್ಜಿದಾರರು 2ನೇ ಮಗನಾಗಿದ್ದು, ಎದುರುದಾರರು 1ನೇ ಮಗ ಲೇಟ್ ಕೆಂಪೇಗೌಡನ ಹೆಂಡತಿಯಾಗಿದ್ದು, ಖಾಸಾ ಸೊಸೆಯಾಗಿರುತ್ತಾರೆ. ಇವರುಗಳಿಗೆ ಕೆಳಕಂಡ ಷೆಡ್ಯೂಲ್ ಸ್ವತ್ತುಗಳನ್ನು ದಿನಾಂಕ : 17/12/2009 ರಂದು ನೋಂದಾಯಿತ ವಿಲ್-ಯಾ-ಮರಣ ಶಾಸನವನ್ನು ಮಾಡಿದ್ದು ಸದರಿ ವಿಲ್-ಯಾ-ಮರಣಶಾಸನದ ಪ್ರೊಬೇಟ್ ಕೋರಿ ಮಾನ್ಯ ಮೂರನೇ ಅಪರ ಜಿಲ್ಲಾ ನ್ಯಾಯಾಧೀಶರ ನ್ಯಾಯಾಲಯ ಪೀಠಾಸೀನ ಶ್ರೀರಂಗಪಟ್ಟಣದಲ್ಲಿ ಭಾರತೀಯ ಉತ್ತರಾಧಿಕಾರಿ ಅಧಿನಿಯಮ 1925 ರ ಕಲಂ 276 ರಡಿಯಲ್ಲಿ ಅರ್ಜಿ ಸಲ್ಲಿಸಿದ್ದು ಸದರಿ ಈ ಬಗ್ಗೆ ಯಾರಿಗಾದರೂ ಯಾವುದೇ ರೀತಿಯ ತಂಟೆ ತಕರಾರು ಅಥವಾ ಹಿತಾಸಕ್ತಿ ಹಕ್ಕು ಭಾದ್ಯತೆ ಇದ್ದಲ್ಲಿ ಅಂತಹವರು ಸದರಿ ನ್ಯಾಯಾಲಯದಲ್ಲಿ ದಿನಾಂಕ : 02.09.2026ರಂದು ಬೆಳಿಗ್ಗೆ 11-00 ಗಂಟೆ ಸರಿಯಾಗಿ ಖುದ್ದಾಗಿಯಾಗಲೀ ಅಥವಾ ತಮ್ಮ ವಕೀಲರ ಮೂಲಕ ಹಾಜರಾಗಿ ತಮ್ಮ ತಂಟೆ ತಕರಾರು ಸಲ್ಲಿಸಲು ಈ ಮೂಲಕ ಸಾರ್ವಜನಿಕವಾಗಿ ತಿಳಿಸಲಾಗಿದೆ. ಇಲ್ಲವಾದಲ್ಲಿ ನ್ಯಾಯಾಲಯ ಏಕಪಕ್ಷೀಯವಾಗಿ ತೀರ್ಮಾನಿಸಿ ಅರ್ಜಿದಾರರ ಪರ ಆದೇಶ ನೀಡವುದೆಂದು ಈ ಮೂಲಕ ತಿಳಿಯ ಪಡಿಸಲಾಗಿದೆ.

-:ಷೆಡ್ಯೂಲ್ ಸ್ವತ್ತಿನ ವಿವರ :-

1) ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕು, ಮೇಲುಕೋಟೆ ಹೋಬಳಿ, ಮಾಣಿಕ್ಯನಹಳ್ಳಿ, ಗ್ರಾಮದ ಜಮಾಬಂದಿಗೆ ಸೇರಿದ ಸರ್ವೆ ನಂ 123/3ಎ ರಲ್ಲಿ ಒಟ್ಟು ವಿಸ್ತೀರ್ಣ 0-02.12 (ಎರಡು ಮುಕ್ಕಾಲು ಗುಂಟೆ) ಪೈಕಿ ಉತ್ತರ-ದಕ್ಷಿಣ ದೆಳೆಯಾಗಿ ಪೂರ್ವ ಭಾಗದ ಕಡೆ ಆದ ಹಾಗೆ 0-01.08(ಒಂದುವರೆ ಗುಂಟೆ) ಜಮೀನಿಗೆ ಚಕ್ಕುಬಂದಿ :- ಪೂರ್ವಕ್ಕೆ : ಹು.ವು ಕೆಂಪೇಗೌಡ ರವರ ಜಮೀನು, ಪಶ್ಚಿಮಕ್ಕೆ : ಗೌರಮ್ಮನಿಗೆ ವಿಲ್ ಮಾಡಿರುವ ಸ್ವತ್ತು, ಉತ್ತರಕ್ಕೆ : ಲೇಟ್ ಕಾಡಮ್ಮನ ಪುಟ್ಟೇಗೌಡರವರ ಜಮೀನು, ದಕ್ಷಿಣಕ್ಕೆ : ಚಿಕ್ಕಕೆಂಪೇಗೌಡರವರ ಮಗ ನರಸೇಗೌಡ ರವರ ಜಮೀನು, 2)ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕು,ಮೇಲುಕೋಟೆ ಹೋಬಳಿ, ಮಾಣಿಕ್ಯನಹಳ್ಳಿ ಗ್ರಾಮದ ಜಮಾಬಂದಿಗೆ ಸೇರಿದ ಸರ್ವೆ ನಂ 144/1ಎ2 ರಲ್ಲಿ ಒಟ್ಟು ವಿಸ್ತೀರ್ಣ 0.13 (ಹದಿಮೂರು ಗುಂಟೆ) ಪೈಕಿ ಪೂರ್ವ-ಪಶ್ಚಿಮದೆಳೆಯಾಗಿ ಉತ್ತರ ಭಾಗದ ಕಡೆ ಆದ ಹಾಗೆ 0- 06.08(ಆರುವರೆ ಗುಂಟೆ) ಜಮೀನಿಗೆ ಚಕ್ಕುಬಂದಿ :- ಪೂರ್ವಕ್ಕೆ : ನಲ್ಲಹಳ್ಳಿ, ಪುಟ್ಟೇಗೌಡರ ಜಮೀನು, ಪಶ್ಚಿಮಕ್ಕೆ : ಹು.ಪು ಮರೀಗೌಡರ ಜಮೀನು, ಉತ್ತರಕ್ಕೆ : ಕೆಂಪೇಗೌಡ ಪಾಪೇಗೌಡ ರವರ ಜಮೀನು, ದಕ್ಷಿಣಕ್ಕೆ : ಗೌರಮ್ಮನಿಗೆ ವಿಲ್ ಮಾಡಿರುವ ರವರ ಜಮೀನು, 3) ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕು, ಮೇಲುಕೋಟೆ ಹೋಬಳಿ, ಮಾಣಿಕ್ಯನಹಳ್ಳಿ ಗ್ರಾಮದ ಜಮಾಬಂದಿಗೆ ಸೇರಿದ ಸರ್ವೆ ನಂ 157/1ಬಿ ರಲ್ಲಿ ಒಟ್ಟು ವಿಸ್ತೀರ್ಣ 0.37 (ಮುವತ್ತೇಳು ಗುಂಟೆ) ಪೈಕಿ ಉತ್ತರ-ದಕ್ಷಿಣದೆಳೆಯಾಗಿ ಪೂರ್ವ ಭಾಗದ ಕಡೆ ಆದ ಹಾಗೆ 0-18.08 (ಹದಿನೆಂಟುವರೆ ಗುಂಟೆ) ಜಮೀನಿಗೆ ಚಕ್ಕುಬಂದಿ :- ಪೂರ್ವಕ್ಕೆ : ಹು.ವು ಕೆಂಪೇಗೌಡರ ಜಮೀನು, ಪಶ್ಚಿಮಕ್ಕೆ : ಗೌರಮ್ಮನಿಗೆ ವಿಲ್ ಮಾಡಿರುವ ಜಮೀನು, ಉತ್ತರಕ್ಕೆ : ನಿಂಗೇಗೌಡರ ಜಮೀನು , ದಕ್ಷಿಣಕ್ಕೆ : ಹು.ವು ಕರೀಗೌಡರ ಜಮೀನು, 4) ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕು, ಮೇಲುಕೋಟೆ ಹೋಬಳಿ ಮಾಣಿಕ್ಯನಹಳ್ಳಿ ಗ್ರಾಮದ ಜಮಾಬಂದಿಗೆ ಸೇರಿದ ಸರ್ವೆ ನಂ 115/1ಬಿ ರಲ್ಲಿ ಒಟ್ಟು ಖುಷ್ಕಿ ವಿಸ್ತೀರ್ಣ 0.08 (ಎಂಟು ಗುಂಟೆ) ಪೈಕಿ ಪೂರ್ವ- ಪಶ್ಚಿಮದೆಳೆಯಾಗಿ ಉತ್ತರ ಭಾಗದ ಕಡೆ ಆದ ಹಾಗೆ0.04(ನಾಲ್ಕುಗುಂಟೆ) ಜಮೀನಿಗೆ ಚಕ್ಕುಬಂದಿ:- ಪೂರ್ವಕ್ಕೆ : ಹು.ಪು ಕೆಂಪೇಗೌಡರ ಜಮೀನು, ಪಶ್ಚಿಮಕ್ಕೆ : ಗೌರಮ್ಮನಿಗೆ ವಿಲ್ ಮಾಡಿರುವ ಜಮೀನು, ಉತ್ತರಕ್ಕೆ : ನಿಂಗೇಗೌಡ ರ ಜಮೀನು, ದಕ್ಷಿಣಕ್ಕೆ : ಹು.ಪು ಕರೀಗೌಡರ ಜಮೀನು, 5) ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕು ಮೇಲುಕೋಟೆ ಹೋಬಳಿ, ಬೆಳ್ಳಾಳ ಗ್ರಾಮದ ಜಮಾಬಂದಿಗೆ ಸೇರಿದ ಸರ್ವೆ ನಂ 108/4ಪೈ-ಪಿ-1 ರಲ್ಲಿ ಒಟ್ಟು ಖುಷ್ಕಿ ವಿಸ್ತೀರ್ಣ 0.25 (ಇಪತ್ತೈದು ಗುಂಟೆ) ಪೈಕಿ ಉತ್ತರ- ದಕ್ಷಿಣದೆಳೆಯಾಗಿ ಪಶ್ಚಿಮ ಭಾಗದ ಕಡೆ ಆದ ಹಾಗೆ 0-12.08 (ಹನ್ನೆರಡುವರೆ ಗುಂಟೆ) ಜಮೀನಿಗೆ ಚಕ್ಕುಬಂದಿ :- ಪೂರ್ವಕ್ಕೆ : ಗೌರಮ್ಮನಿಗೆ ವಿಲ್ ಮಾಡಿರುವ ಜಮೀನು ಹು. ಪಶ್ಚಿಮಕ್ಕೆ : ಹು.ಪು ಕೆಂಪೇಗೌಡ ಪಾಪೇಗೌಡರ ಜಮೀನು ಉತ್ತರಕ್ಕೆ : ರಾಮೇಗೌಡ ರ ಜಮೀನು, ದಕ್ಷಿಣಕ್ಕೆ : ಚಿಕ್ಕಕೆಂಪೇಗೌಡರ ಮಗ ನರಸೇಗೌಡರ ಜಮೀನು, 6) ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕು ಮೇಲುಕೋಟೆ ಹೋಬಳಿ ಬೆಳ್ಳಾಳ ಗ್ರಾಮದ ಜಮಾಬಂದಿಗೆ ಸೇರಿದ ಸರ್ವೆ ನಂ 99/ಪೈ-ಪಿ-1 ರಲ್ಲಿ ಒಟ್ಟು ಖುಷ್ಕಿ ವಿಸ್ತೀರ್ಣ 0.16 (ಹದಿನಾರು ಗುಂಟೆ) ಪೈಕಿ ಉತ್ತರ- ದಕ್ಷಿಣದೆಳೆಯಾಗಿ ಪಶ್ಚಿಮ ಭಾಗದ ಕಡೆ ಆದ ಹಾಗೆ 0-08 (ಎಂಟು ಗುಂಟೆ) ಜಮೀನಿಗೆ ಚಕ್ಕುಬಂದಿ:- ಪೂರ್ವಕ್ಕೆ : ಗೌರಮ್ಮನಿಗೆ ವಿಲ್ ಮಾಡಿರುವ ಜಮೀನು ಪಶ್ಚಿಮಕ್ಕೆ : ಹು.ಪು ನಿಂಗೇಗೌಡರ ಜಮೀನು , ಉತ್ತರಕ್ಕೆ : ಕೊಪ್ಪಲು ಕರಿಕಾಳೇಗೌಡರ ಮಗ ಪಾಪೇಗೌಡರ ಜಮೀನು, ದಕ್ಷಿಣಕ್ಕೆ : ಕೊಪ್ಪಲು ಕೆಂಪೇಗೌಡರ (ಯಾಕುಪ್ಪ) ಜಮೀನು 7) ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕು ಮೇಲುಕೋಟೆ ಹೋಬಳಿ ಬೆಳ್ಳಾಳ ಗ್ರಾಮದ ಜಮಾಬಂದಿಗೆ ಸೇರಿದ ಸರ್ವೆ ನಂ 11/2ಪಿ-1 ರಲ್ಲಿ ಒಟ್ಟು ಖುಷ್ಕಿ ವಿಸ್ತೀರ್ಣ 0.09 (ಒಂಭತ್ತು ಗುಂಟೆ) ಪೈಕಿ ಉತ್ತರ- ದಕ್ಷಿಣದೆಳೆಯಾಗಿ ಪೂರ್ವ ಭಾಗದ ಕಡೆ ಆದ ಹಾಗೆ 0-04.08 (ನಾಲ್ಕುವರೆ ಗುಂಟೆ) ಜಮೀನಿಗೆ ಚಕ್ಕುಬಂದಿ :- ಪೂರ್ವಕ್ಕೆ : ಗೌರಮ್ಮನಿಗೆ ವಿಲ್ ಮಾಡಿರುವ ಜಮೀನು, ಪಶ್ಚಿಮಕ್ಕೆ : ಹು.ಪು ನಿಂಗೇಗೌಡರ ಜಮೀನು, ಉತ್ತರಕ್ಕೆ : ಕೊಪ್ಪಲು ಕರಿಕಾಳೇಗೌಡರ ಮಗ ಪಾಪೇಗೌಡರ ಜಮೀನು , ದಕ್ಷಿಣಕ್ಕೆ : ಕೊಪ್ಪಲು ಕೆಂಪೇಗೌಡರ (ಯಾಕುಪ್ಪ) ಜಮೀನು, 8) ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕು ಮೇಲುಕೋಟೆ ಹೋಬಳಿ ಗೊಡಗೆರೆ ಗ್ರಾಮದ ಜಮಾಬಂದಿಗೆ ಸೇರಿದ ಸರ್ವೆ ನಂ 51/3ಪೈ-ಪಿ-1 ರಲ್ಲಿ ಒಟ್ಟು ಖುಷ್ಕಿ ವಿಸ್ತೀರ್ಣ 0.05 (ಐದು ಗುಂಟೆ) ಪೈಕಿ ಉತ್ತರ- ದಕ್ಷಿಣದೆಳೆಯಾಗಿ ಪೂರ್ವ ಭಾಗದ ಕಡೆ ಆದ ಹಾಗೆ 0-02.08 (ಎರಡುವರೆ ಗುಂಟೆ) ಜಮೀನಿಗೆ ಚಕ್ಕುಬಂದಿ :- ಪೂರ್ವಕ್ಕೆ : ಹು.ಪು ಕೆಂಪೇಗೌಡ ಪಾಪೇಗೌಡರ ಜಮೀನು ಪಶ್ಚಿಮಕ್ಕೆ : ಗೌರಮ್ಮನಿಗೆ ವಿಲ್ ಮಾಡಿರುವ ಜಮೀನು ಉತ್ತರಕ್ಕೆ : ಚಿಕ್ಕತಿಮ್ಮೇಗೌಡರ ಜಮೀನು, ದಕ್ಷಿಣಕ್ಕೆ : ಹೊಂಬಾಳಮ್ಮನ ಶಿವಣ್ಣ ರವರ ಜಮೀನು, 9) ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕು, ಮೇಲುಕೋಟೆ ಹೋಬಳಿ ಗೊಡಗೆರೆ ಗ್ರಾಮದ ಜಮಾಬಂದಿಗೆ ಸೇರಿದ ಸರ್ವೆ ನಂ 28/5 ಪೈ-ಪಿ-9 ರಲ್ಲಿ ಒಟ್ಟು ಖುಷ್ಕಿ (ಬಾವಿ ಹೊಲ) ವಿಸ್ತೀರ್ಣ 0.15 (ಹದಿನೈದು ಗುಂಟೆ) ಪೈಕಿ ಉತ್ತರ-ದಕ್ಷಿಣದೆಳೆಯಾಗಿ ಪೂರ್ವ ಭಾಗದ ಕಡೆ ಆದ ಹಾಗೆ 0-07.08 (ಏಳುವರೆ ಗುಂಟೆ) ಜಮೀನಿಗೆ ಚಕ್ಕುಬಂದಿ ಪೂರ್ವಕ್ಕೆ : ಮಾಟಣ್ಣನ ಮಹೇಶ ರವರ ಜಮೀನು, ಪಶ್ಚಿಮಕ್ಕೆ : ಗೌರಮ್ಮನಿಗೆ ವಿಲ್ ಮಾಡಿರುವ ಜಮೀನು, ಉತ್ತರಕ್ಕೆ : ಚಾಮೇಗೌಡರ ಜಮೀನು, ದಕ್ಷಿಣಕ್ಕೆ : ಪಟ್ಟಪ್ಪನ ಸಿದ್ದೇಗೌಡ ರವರ ಜಮೀನು, 10)ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕು ಮೇಲುಕೋಟೆ ಹೋಬಳಿ ಗೊಡಗೆರೆ ಗ್ರಾಮದ ಜಮಾಬಂದಿಗೆ ಸೇರಿದ ಸರ್ವೆ ನಂ 40/2 ರಲ್ಲಿ ಒಟ್ಟು ಖುಷ್ಕಿ ವಿಸ್ತೀರ್ಣ 0.03 (ಮೂರು ಗುಂಟೆ) ಮತ್ತು 40/2-ಬಿ ರಲ್ಲಿ ಒಟ್ಟು ಖುಷ್ಕಿ ವಿಸ್ತೀರ್ಣ 0.04(ನಾಲ್ಕು ಗುಂಟೆ) ಜುಮ್ಲಾ 0.07 (ಏಳು ಗುಂಟೆ) ಜಮೀನಿಗೆ ಚಕ್ಕುಬಂದಿ :- ಪೂರ್ವಕ್ಕೆ : ಗೊಡಗೆರೆ ಪಟೇಲ್ ಈರೇಗೌಡರ ಜಮೀನು ಮತ್ತು ಮೊಳೆಬೋರೇಗೌಡ, ಮುದ್ದೇಗೌಡರ ಜಮೀನು ಪಶ್ಚಿಮಕ್ಕೆ : ಲೇಟ್ ವೆಂಕಟೇಗೌಡರ ಕುಟುಂಬದವರ ಜಮೀನು, ಉತ್ತರಕ್ಕೆ : ಹಳ್ಳ, ದಕ್ಷಿಣಕ್ಕೆ : ಚಾಮೇಗೌಡ ರವರ ಜಮೀನು, 11)ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕು ಮೇಲುಕೋಟೆ ಹೋಬಳಿ ಮಾಣಿಕ್ಯನಹಳ್ಳಿ ಗ್ರಾಮದ ಖಾತಾ ನಂ 69 ರಂತೆ ಪೂ-ಪ=13 ಅಡಿ ಉ- ದ= 33 ಅಡಿವುಳ್ಳ ನಾಡು ಹೆಂಚಿನ ಮನೆಗೆ ಚಕ್ಕುಬಂದಿ :- ಪೂರ್ವಕ್ಕೆ : ಅಣ್ಣಯ್ಯಪ್ಪನ ಕೆಂಪೇಗೌಡರ ಮನೆ, ಪಶ್ಚಿಮಕ್ಕೆ: ಬುಂಡಪ್ಪನ ನರಸೇಗೌಡರ ಮನೆ, ಉತ್ತರಕ್ಕೆ : ಹು.ಪು ಪುಟ್ಟೇಗೌಡ ರವರ ಮನೆ , ದಕ್ಷಿಣಕ್ಕೆ : ಗೌರಮ್ಮ ಕೋಂ ಲೇಟ್ ಕೆಂಪೇಗೌಡರಿಗೆ ಕೊಟ್ಟಿರುವ ಮನೆ

ನ್ಯಾಯಾಲಯದ ಅಪ್ಪಣೆಯ ಮೇರೆಗೆ
ಶಿರಸ್ತೇದಾರ್, 3ನೇ ಅಪರ ಮತ್ತು ಜಿಲ್ಲಾ ನ್ಯಾಯಾಧೀಶರ ನ್ಯಾಯಾಲಯ ಪೀಠಾಸೀನ ಶ್ರೀರಂಗಪಟ್ಟಣ

ಅರ್ಜಿದಾರರ ಪರ ವಕೀಲರು
ಶಶಿಕುಮಾರ್ ಹೆಚ್ ಎಸ್, ವಕೀಲರು
ಮೋ: 9964201730, ಪಾಂಡವಪುರ

ಪ್ರಧಾನ ಹೆಚ್ಚುವರಿ ಜಿಲ್ಲೆ ಜಡ್ಜ್ ಮತ್ತು ಎಮ್.ಎ.ಸಿ.ಟಿ, ನ್ಯಾಯಾಲಯ ಕೊಳ್ಳೇಗಾಲ.

ಎಂ.ವಿ.ಸಿ ನಂ.: 492/2025.

ಅರ್ಜಿದಾರರು : ನಿಂಗರಾಜು ಬಿನ್ ದೊಡ್ಡರಸಯ್ಯ, ವಯಸ್ಸು 24 ವರ್ಷ, ಎಸ್.ಸಿ.ಬೀದಿ, 3ನೇ ಬ್ಲಾಕ್, ಸಗ್ಗಿಯಂ ಗ್ರಾಮ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ.

ವಿರುದ್ಧ

ಎದುರುದಾರರು : ಮನೋಹರ ಬಿನ್ ಗಣೇಶ್ ಎನ್, ವಯಸ್ಸು 45 ವರ್ಷ, ಹೊಸ ಬಡಾವಣೆ ಮಾರ್ತಹಳ್ಳಿ ಗ್ರಾಮ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ - 571441,

(ಮಾಲೀಕರು : ಅಶೋಕ್ ಲೇಲ್ಯಾಂಡ್ ಬಸ್ ಸಂಖ್ಯೆ: ಕೆಎ-10-2975ರ ಆರ್ ಸಿ ಪ್ರಕಾರ)

ನ್ಯಾಯಾಲಯದ ನೋಟೀಸು

ಪ್ರಕರಣದ ಅರ್ಜಿದಾರರಾದ ನಿಂಗರಾಜು ಎಂಬುವವರು ದಿನಾಂಕ:09-03-2025 ರಂದು ಉಂಟಾದ ರಸ್ತೆ ಅಫಘಾತದಲ್ಲಿ ಗಾಯಗೊಂಡ ಬಗ್ಗೆ ಆತನು ಪರಿಹಾರ ಕೋರಿ ಎದುರುದಾರರ ವಿರುದ್ಧ ಈ ಪರಿಹಾರದ ಕೇಸನ್ನು ಈ ಘನ ನ್ಯಾಯಾಲಯದಲ್ಲಿ ಹೂಡಿದ್ದು ಸದರಿ ಪ್ರಕರಣದ ವಿಚಾರಣೆಯು ದಿನಾಂಕ: 09.04.2026 ರಂದು ಇರುತ್ತದೆ. ಆದ್ದರಿಂದ ಸದರಿ ಪ್ರಕರಣದಲ್ಲಿ 1ನೇ ಎದುರುದಾರರಾಗಿರುವ ನೀವು ಮೇಲ್ಕಂಡ ವಿಚಾರಣಾ ದಿನದಂದು ಬೆಳಗ್ಗೆ 11-00 ಗಂಟೆಗೆ ಸರಿಯಾಗಿ ನೀವೇ ಖುದ್ದಾಗಲೀ ಅಥವಾ ನಿಮ್ಮ ವಕೀಲರ ಮೂಲಕವಾಗಲೀ ನ್ಯಾಯಾಲಯಕ್ಕೆ ಹಾಜರಾಗಿ ಈ ಪ್ರಕರಣದಲ್ಲಿ ತಮ್ಮ ತಕರಾರೇನಾದರು ಇದ್ದಲ್ಲಿ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಈ ಪ್ರಕರಣದಲ್ಲಿ ಏಕಪಕ್ಷೀಯ ಎಂದು ಪರಿಗಣಿಸಿ ನಿಮ್ಮ ಅನುಪಸ್ಥಿತಿಯಲ್ಲಿ ಈ ಪರಿಹಾರದ ಅರ್ಜಿಯನ್ನು ತೀರ್ಮಾನಿಸಲಾಗುವುದು.

ದಿನಾಂಕ: 12.03.2026 ರಂದು ನಮ್ಮ ಸ್ವಂತ ದಸ್ಕತ್ತು ಹಾಗೂ ನ್ಯಾಯಾಲಯದ ಮೊಹರು ನದಿಯೊಂದಿಗೆ ಕೊಡಲ್ಪಟ್ಟಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು,
ಹೆಚ್ಚುವರಿ ಜಿಲ್ಲೆ ಜಡ್ಜ್ ನ್ಯಾಯಾಲಯ ಕೊಳ್ಳೇಗಾಲ.
ಶ್ರೀ ಮಲ್ಲಿಕಾರ್ಜುನ ಸ್ವಾಮಿ, ವಕೀಲರು, ಮಂಡ್ಯ.

ಮಾನ್ಯ ಅಪರ ಜಿಲ್ಲಾ ನ್ಯಾಯಾಧೀಶರ ಮತ್ತು ಎಂ.ಎ.ಸಿ.ಟಿ.ರವರ ನ್ಯಾಯಾಲಯ, ಕೊಳ್ಳೇಗಾಲ.

ಎಂ.ವಿ.ಸಿ ನಂ.474/2025.

ಅರ್ಜಿದಾರರು : ವರದರಾಜು. ಎಸ್ ಬಿನ್ ಸಿದ್ದರಾಜು ವಯಸ್ಸು ಸುಮಾರು 22 ವರ್ಷ, ನಂ.563, ಚಿಕ್ಕೊಂಗರ ಹಳ್ಳಿ ಬೀದಿ, ಕಾಮಗೆರೆ ಗ್ರಾಮ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ.

ವಿರುದ್ಧ

1ನೇ ಎದುರುದಾರರು : ರಂಗಪ್ಪ. ಎನ್ ಬಿನ್ ನಾಗಪ್ಪ ರೆಡ್ಡಿ, ವಯಸ್ಸು ಸುಮಾರು 23 ವರ್ಷ, ನಂ.369, ರಾಮ ದೇವಸ್ಥಾನದ ರಸ್ತೆ, ಜರಗನಹಳ್ಳಿ, ಬೆಂಗಳೂರು ಜಿಲ್ಲೆ-560078, (ಮಾಲೀಕ: ಮಾರುತಿ ಸುಜ್ಜುಕಿ ಟೂರ್ ಕಾರ್ ನಂ. ಕೆಎ-01-ಎಎಲ್-8646).

ನ್ಯಾಯಾಲಯದ ನೋಟೀಸು

ಪ್ರಕರಣದ ಅರ್ಜಿದಾರನಾದ ವರದರಾಜು.ಎಸ್ ರವರು ದಿನಾಂಕ: 10-03-2025 ರಂದು ಉಂಟಾದ ರಸ್ತೆ ಅಫಘಾತದಲ್ಲಿ ಗಾಯಗೊಂಡ ಬಗ್ಗೆ ಪರಿಹಾರ ಕೋರಿ ಎದುರುದಾರರ ವಿರುದ್ಧ ಈ ಪರಿಹಾರದ ಕೇಸನ್ನು ಈ ಘನ ನ್ಯಾಯಾಲಯದಲ್ಲಿ ಹೂಡಿದ್ದು ಸದರಿ ಪ್ರಕರಣದ ವಿಚಾರಣೆಯು ದಿನಾಂಕ: 09.04.2026 ರಂದು ಇರುತ್ತದೆ. ಆದ್ದರಿಂದ ಸದರಿ ಪ್ರಕರಣ ದಲ್ಲಿ 1ನೇ ಎದುರುದಾರರಾಗಿರುವ ನೀವು ಮೇಲ್ಕಂಡ ವಿಚಾರಣಾ ದಿನದಂದು ಬೆಳಗ್ಗೆ 11-00 ಗಂಟೆಗೆ ಸರಿಯಾಗಿ ನೀವೇ ಖುದ್ದಾಗಲೀ ಅಥವಾ ನಿಮ್ಮ ವಕೀಲರ ಮೂಲಕವಾಗಲೀ ನ್ಯಾಯಾಲಯಕ್ಕೆ ಹಾಜರಾಗಿ ಈ ಪ್ರಕರಣ ದಲ್ಲಿ ತಮ್ಮ ತಕರಾರೇನಾದರು ಇದ್ದಲ್ಲಿ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಈ ಪ್ರಕರಣದಲ್ಲಿ ಏಕಪಕ್ಷೀಯ ಎಂದು ಪರಿಗಣಿಸಿ ನಿಮ್ಮ ಅನುಪಸ್ಥಿತಿಯಲ್ಲಿ ಈ ಪರಿಹಾರದ ಅರ್ಜಿಯನ್ನು ತೀರ್ಮಾನಿಸಲಾಗುವುದು.

ದಿನಾಕ: 12.03.2026 ರಂದು ನಮ್ಮ ಸ್ವಂತ ದಸ್ಕತ್ತು ಹಾಗೂ ನ್ಯಾಯಾಲಯದ ಮೊಹರು ನಿಷಿಯೊಂದಿಗೆ ಕೊಡಲ್ಪಟ್ಟಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು,
ಹೆಚ್ಚುವರಿ ಜಿಲ್ಲೆ ಜಡ್ಜ್ ನ್ಯಾಯಾಲಯ ಕೊಳ್ಳೇಗಾಲ.
ಶ್ರೀ ಮಲ್ಲಿಕಾರ್ಜುನ ಸ್ವಾಮಿ, ವಕೀಲರು, ಮಂಡ್ಯ.

ಮಾನ್ಯ ಅಪರ ಜಿಲ್ಲಾ ನ್ಯಾಯಾಧೀಶರ ಮತ್ತು ಎಂ.ಎ.ಸಿ.ಟಿ.ರವರ ನ್ಯಾಯಾಲಯ, ಕೊಳ್ಳೇಗಾಲ

ಎಮ್.ವಿ.ಸಿ ನಂ.12/2026.

ಅರ್ಜಿದಾರರು : ಕಲೀಮ್ ಉಲ್ಲಾ ಬಿನ್ ರಹೀಮ್ ಉಲ್ಲಾ, ವಯಸ್ಸು ಸುಮಾರು 42 ವರ್ಷಗಳು, ನಂ.9/151, ಸತ್ತಿ ರಸ್ತೆ, ನೀರ ಲಾರಿ ಸ್ಟ್ಯಾಂಡ್, ಚಾಮರಾಜನಗರ ಟೌನ್ ಮತ್ತು ಜಿಲ್ಲೆ-571313.

ವಿರುದ್ಧ

1ನೇ ಎದುರುದಾರರು : ಚಂದ್ರಕಾಂತ್ ಡೊಳ್ಳಿ ಬಿನ್ ಶರಣಪ್ಪ, ವಯಸ್ಸು ಸುಮಾರು 45 ವರ್ಷ, ವಾರ್ಡ್ ನಂ.1, ನೆಹರೂ ನಗರ, 1ನೇ ಬಸ್ ಡಿಪೋ ಹಿಂಭಾಗ, ಬಿಜಾಪುರ ಜಿಲ್ಲೆ - 586102. (ಮಾಲೀಕ: ಮಾರುತಿ ಸುಜುಕಿ ಟೂ ಎಸ್ ಡಿಸೇಲ್ ಕಾರ್ ನಂ. ಕೆಎ-50-ಬಿ-0037)

ನ್ಯಾಯಾಲಯದ ನೋಟೀಸು

ಪ್ರಕರಣದ ಅರ್ಜಿದಾರರಾದ: ಕಲೀಮ್ ಉಲ್ಲಾ ಮತ್ತು ಮತ್ತೊಬ್ಬರು, ದಿನಾಂಕ: 16.09.2025 ರಂದು ಉಂಟಾದ ರಸ್ತೆ ಅಪಘಾತದಲ್ಲಿ ಗಾಯಗೊಂಡ ಸೈಯದ್ ರಾಯನ್ ರವರು ಮೃತಪಟ್ಟ ಬಗ್ಗೆ ಪರಿಹಾರ ಕೋರಿ ಎದುರುದಾರರ ವಿರುದ್ಧ ಈ ಪರಿಹಾರದ ಕೇಸನ್ನು ಈ ಘನ ನ್ಯಾಯಾಲಯದಲ್ಲಿ ಹೂಡಿದ್ದು ಸದರಿ ಪ್ರಕರಣದ ವಿಚಾರಣೆಯು ದಿನಾಂಕ: 03.04.2026 ರಂದು ಇರುತ್ತದೆ. ಆದ್ದರಿಂದ ಸದರಿ ಪ್ರಕರಣದಲ್ಲಿ 1ನೇ ಎದುರು ದಾರರಾಗಿರುವ ನೀವು ಮೇಲ್ಕಂಡ ವಿಚಾರಣಾ ದಿನದಂದು ಬೆಳಗ್ಗೆ 11-00 ಗಂಟೆಗೆ ಸರಿಯಾಗಿ ನೀವೇ ಖುದ್ದಾಗಲೀ ಅಥವಾ ನಿಮ್ಮ ವಕೀಲರ ಮೂಲಕವಾಗಲೀ ನ್ಯಾಯಾಲಯಕ್ಕೆ ಹಾಜರಾಗಿ ಪ್ರಕರಣದಲ್ಲಿ ತಮ್ಮ ತಕರಾರೇನಾದರು ಇದ್ದಲ್ಲಿ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ನಿಮ್ಮನ್ನು ಈ ಪ್ರಕರಣದಲ್ಲಿ ಏಕಪಕ್ಷೀಯ ಎಂದು ಪರಿಗಣಿಸಿ ನಿಮ್ಮ ಅನುಪಸ್ಥಿತಿಯಲ್ಲಿ ಈ ಪರಿಹಾರದ ಅರ್ಜಿಯನ್ನು ತೀರ್ಮಾನಿಸಲಾಗುವುದು.

ದಿನಾಂಕ: 12.03.2026 ರಂದು ನಮ್ಮ ಸ್ವಂತ ದಸ್ಕತ್ತು ಹಾಗೂ ನ್ಯಾಯಾಲಯದ ಮೊಹರು ಸಹಿಯೊಂದಿಗೆ ಕೊಡಲ್ಪಟ್ಟಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಸಿ.ಎ.ಓ., ಅಪರ ಜಿಲ್ಲಾ ನ್ಯಾಯಾಧೀಶರ ಮತ್ತು ನ್ಯಾಯಾಲಯ, ಕೊಳ್ಳೇಗಾಲ.
ಶ್ರೀ ಮಲ್ಲಿಕಾರ್ಜುನ ಸ್ವಾಮಿ, ವಕೀಲರು, ಮಂಡ್ಯ.

IN THE V ADDL DIST AND SESSIONS JUDGE TUMAKURU SITTING AT TIPTUR

R. A. No. 10028/2025

BETWEEN: G.B.Rukmangada ... APPELLANT

AND: Prabhamani and others ... **RESPONDENTS**

NOTICE/SUMMONS UNDER ORDER V RULE 20(1-A) OF THE CODE OF CIVIL PROCEDURE

RESPONDENT No. 3. G.B.Pushpavathi, D/of Basavaraju, W/of Janardhana, Aged about 51 years, R/at Neralakere Village, Nuggehalli Hobli, Channarayapatna Taluk, Hassan Dist 573116. **4. G.B.Sharavathi,** D/o Basavaraju, W/of Doreswamy, Aged about 47 years, R/at Dasarighatta Village Nonavinakere Hobli, Tiptur taluk-572201, Tumkur District. **...RESPONDENTS**

Whereas, the above named appellant have instituted the above appeal against the respondents for challenging the Judgement and decree in O.S.No.95/2022 in R.A. No.10028/2025 and consequential reliefs, where in the above named is the defendant No.3 and 4, respectively. The suit, been posted 22-04-2026, for your appearance at 11-00 am. Take notice to appear before this Hon'ble court on the above mentioned date. i.e., **22-04-2026** at 11:00 A.M Either personally or through your counsel to answer to the above suit. If you failed to appear on the above mentioned date, the matter will be disposed of in your absence as ex-parte.

Issued as per the orders of this Hon'ble court on 12-03-2026 with seal of this Hon'ble Court, Tiptur.

By order of the court, Sheristedar, V ADDL, District & Sessions Judge Court, Tiptur

NYAYADHAMA, ASSOCIATES
K.R.SANTHOSHA, Advocate
No.03, 2nd Floor, baggir Dore complex, Tiptur Road, Tavarekere Town.

ಪ್ರಧಾನ ಹೆಚ್ಚುವರಿ ಜಿಲ್ಲೆ ಜಡ್ಜ್ ಮತ್ತು ಎಮ್.ಎ.ಸಿ.ಟಿ, ನ್ಯಾಯಾಲಯ ಕೊಳ್ಳೇಗಾಲ.

ಎಂ.ವಿ.ಸಿ ನಂ.: 494/2025.

ಅರ್ಜಿದಾರರು : ಮಾದೇಶ್ ಬಿನ್ ವದೊಡ್ಡಯ್ಯ, ವಯಸ್ಸು 39 ವರ್ಷ, ಎಸ್.ಸಿ.ಬೀದಿ, ವಾಟರ್ ಟ್ಯಾಂಕ್, 3ನೇ ಬ್ಲಾಕ್, ಶಾಗ್ಯ ಗ್ರಾಮ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ.

ವಿರುದ್ಧ

ಎದುರುದಾರರು : ಮನೋಹರ ಬಿನ್ ಗಣೇಶ್ ಎನ್, ವಯಸ್ಸು 45 ವರ್ಷ, ಹೊಸ ಬಡಾವಣೆ ಮಾರ್ತಹಳ್ಳಿ ಗ್ರಾಮ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ - 571441, (ಮಾಲೀಕರು : ಅಶೋಕ್ ಲೇಲ್ಯಾಂಡ್ ಬಸ್ ಸಂಖ್ಯೆ: ಕೆಎ- 10-2975ರ ಆರ್ ಸಿ ಪ್ರಕಾರ)

ನ್ಯಾಯಾಲಯದ ನೋಟೀಸು

ಪ್ರಕರಣದ ಅರ್ಜಿದಾರರಾದ ಮಾದೇಶ್ ಎಂಬುವವರು ದಿನಾಂಕ: 09-03-2025 ರಂದು ಉಂಟಾದ ರಸ್ತೆ ಅಫಘಾತದಲ್ಲಿ ಗಾಯಗೊಂಡ ಬಗ್ಗೆ ಆತನು ಪರಿಹಾರ ಕೋರಿ ಎದುರುದಾರರ ವಿರುದ್ಧ ಈ ಪರಿಹಾರದ ಕೇಸನ್ನು ಈ ಘನ ನ್ಯಾಯಾಲಯದಲ್ಲಿ ಹೂಡಿದ್ದು ಸದರಿ ಪ್ರಕರಣದ ವಿಚಾರಣೆಯು ದಿನಾಂಕ: 09.04.2026 ರಂದು ಇರುತ್ತದೆ. ಆದ್ದರಿಂದ ಸದರಿ ಪ್ರಕರಣದಲ್ಲಿ 1ನೇ ಎದುರುದಾರರಾಗಿರುವ ನೀವು ಮೇಲ್ಕಂಡ ವಿಚಾರಣಾ ದಿನದಂದು ಬೆಳಗ್ಗೆ 11-00 ಗಂಟೆಗೆ ಸರಿಯಾಗಿ ನೀವೇ ಖುದ್ದಾಗಲೀ ಅಥವಾ ನಿಮ್ಮ ವಕೀಲರ ಮೂಲಕವಾಗಲೀ ನ್ಯಾಯಾಲಯಕ್ಕೆ ಹಾಜರಾಗಿ ಈ ಪ್ರಕರಣದಲ್ಲಿ ತಮ್ಮ ತಕರಾರೇನಾದರು ಇದ್ದಲ್ಲಿ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಈ ಪ್ರಕರಣದಲ್ಲಿ ಏಕಪಕ್ಷೀಯ ಎಂದು ಪರಿಗಣಿಸಿ ನಿಮ್ಮ ಅನುಪಸ್ಥಿತಿಯಲ್ಲಿ ಈ ಪರಿಹಾರದ ಅರ್ಜಿಯನ್ನು ತೀರ್ಮಾನಿಸಲಾಗುವುದು.

ದಿನಾಂಕ: 12.03.2026 ರಂದು ನಮ್ಮ ಸ್ವಂತ ದಸ್ಕತ್ತು ಹಾಗೂ ನ್ಯಾಯಾಲಯದ ಮೊಹರು ನದಿಯೊಂದಿಗೆ ಕೊಡಲ್ಪಟ್ಟಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು,
ಹೆಚ್ಚುವರಿ ಜಿಲ್ಲೆ ಜಡ್ಜ್ ನ್ಯಾಯಾಲಯ ಕೊಳ್ಳೇಗಾಲ.
ಶ್ರೀ ಮಲ್ಲಿಕಾರ್ಜುನ ಸ್ವಾಮಿ, ವಕೀಲರು, ಮಂಡ್ಯ.

ಪ್ರಧಾನ ಹೆಚ್ಚುವರಿ ಜಿಲ್ಲೆ ಜಡ್ಜ್ ಮತ್ತು ಎಮ್.ಎ.ಸಿ.ಟಿ, ನ್ಯಾಯಾಲಯ ಕೊಳ್ಳೇಗಾಲ.

ಎಂ.ವಿ.ಸಿ ನಂ.: 535/2025.

ಅರ್ಜಿದಾರರು : ಸಿದ್ದರಾಜು ಬಿನ್ ಲೇಟ್ ರಂಗಯ್ಯ, ಪ್ರಾಯ ವಯಸ್ಸು 41, ಅಂಕಶೆಟ್ಟಿಮೋಳೆ ಗ್ರಾಮ, ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ.

ವಿರುದ್ಧ

ಎದುರುದಾರರು : ತಿರುಪತಿ ಎನ್ ಬಿನ್ ನಲ್ಲಪ್ಪ ಗೌಂಡರ್, ವಯಸ್ಸು 30, ಸಂತೆಮರಹಳ್ಳಿ ಗ್ರಾಮ, ಮೈಸೂರು ರಸ್ತೆ, ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ - 57115

(ಮಾಲೀಕರು : ಆರ್.ಡಿ ಖಾಸಗಿ ಬಸ್ ಬೇರಿಂಗ್ ಸಂಖ್ಯೆ: ಕೆಎ-10-1772ರ ಆರ್ ಸಿ ಪ್ರಕಾರ)

ನ್ಯಾಯಾಲಯದ ನೋಟೀಸು

ಪ್ರಕರಣದ ಅರ್ಜಿದಾರರಾದ ಸಿದ್ದರಾಜು ಎಂಬುವವರು ದಿನಾಂಕ: 22-05-2025 ರಂದು ಉಂಟಾದ ರಸ್ತೆ ಅಫಘಾತದಲ್ಲಿ ಗಾಯಗೊಂಡ ಬಗ್ಗೆ ಆತನು ಪರಿಹಾರ ಕೋರಿ ಎದುರುದಾರರ ವಿರುದ್ಧ ಈ ಪರಿಹಾರದ ಕೇಸನ್ನು ಈ ಘನ ನ್ಯಾಯಾಲಯದಲ್ಲಿ ಹೂಡಿದ್ದು ಸದರಿ ಪ್ರಕರಣದ ವಿಚಾರಣೆಯು ದಿನಾಂಕ: 09.04.2026 ರಂದು ಇರುತ್ತದೆ. ಆದ್ದರಿಂದ ಸದರಿ ಪ್ರಕರಣದಲ್ಲಿ 1ನೇ ಎದುರುದಾರರಾಗಿರುವ ನೀವು ಮೇಲ್ಕಂಡ ವಿಚಾರಣಾ ದಿನದಂದು ಬೆಳಗ್ಗೆ 11-00 ಗಂಟೆಗೆ ಸರಿಯಾಗಿ ನೀವೇ ಖುದ್ದಾಗಲೀ ಅಥವಾ ನಿಮ್ಮ ವಕೀಲರ ಮೂಲಕವಾಗಲೀ ನ್ಯಾಯಾಲಯಕ್ಕೆ ಹಾಜರಾಗಿ ಈ ಪ್ರಕರಣದಲ್ಲಿ ತಮ್ಮ ತಕರಾರೇನಾದರು ಇದ್ದಲ್ಲಿ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಈ ಪ್ರಕರಣದಲ್ಲಿ ಏಕಪಕ್ಷೀಯ ಎಂದು ಪರಿಗಣಿಸಿ ನಿಮ್ಮ ಅನುಪಸ್ಥಿತಿಯಲ್ಲಿ ಈ ಪರಸ್ಥಾನದ ಅರ್ಜಿಯನ್ನು ತೀರ್ಮಾನಿಸಲಾಗುವುದು. ದಿನಾಂಕ : 12.03.2026 ರಂದು ನಮ್ಮ ಸ್ವಂತ ದಸ್ಕತ್ತು ಹಾಗೂ ನ್ಯಾಯಾಲಯದ ಮೊಹರು ನಿಷಿಯೊಂದಿಗೆ ಕೊಡಲ್ಪಟ್ಟಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು,
ಹೆಚ್ಚುವರಿ ಜಿಲ್ಲೆ ಜಡ್ಜ್ ನ್ಯಾಯಾಲಯ ಕೊಳ್ಳೇಗಾಲ.
ಶ್ರೀ ಮಲ್ಲಿಕಾರ್ಜುನ ಸ್ವಾಮಿ, ವಕೀಲರು, ಮಂಡ್ಯ.

ಪ್ರಧಾನ ಹೆಚ್ಚುವರಿ ಜಿಲ್ಲೆ ಜಡ್ಜ್ ಮತ್ತು ಎಮ್.ಎ.ಸಿ.ಟಿ, ನ್ಯಾಯಾಲಯ ಕೊಳ್ಳೇಗಾಲ.

ಎಂ.ವಿ.ಸಿ ನಂ.: 493/2025.

ಅರ್ಜಿದಾರರು : ಬಸವರಾಜು ಬಿನ್ ಮಾದಪ್ಪ, ವಯಸ್ಸು 36 ವರ್ಷ, ನಂ.250, ಎಸ್.ಸಿ.ಬೀದಿ, 3ನೇ ಬ್ಲಾಕ್, ಸಗ್ಗಿಯಂ ಗ್ರಾಮ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ.

ವಿರುದ್ಧ

ಎದುರುದಾರರು : ಮನೋಹರ ಬಿನ್ ಗಣೇಶ್ ಎನ್, ವಯಸ್ಸು 45 ವರ್ಷ, ಹೊಸ ಬಡಾವಣೆ ಮಾರ್ತಹಳ್ಳಿ ಗ್ರಾಮ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ - 571441, (ಮಾಲೀಕರು : ಅಶೋಕ್ ಲೇಲ್ಯಾಂಡ್ ಬಸ್ ಸಂಖ್ಯೆ: ಕೆಎ- 10-2975ರ ಆರ್ ಸಿ ಪ್ರಕಾರ)

ನ್ಯಾಯಾಲಯದ ನೋಟೀಸು

ಪ್ರಕರಣದ ಅರ್ಜಿದಾರರಾದ ಬಸವರಾಜು ಎಂಬುವವರು ದಿನಾಂಕ:09-03-2025 ರಂದು ಉಂಟಾದ ರಸ್ತೆ ಅಫಘಾತದಲ್ಲಿ ಗಾಯಗೊಂಡ ಬಗ್ಗೆ ಆತನು ಪರಿಹಾರ ಕೋರಿ ಎದುರುದಾರರ ವಿರುದ್ಧ ಈ ಪರಿಹಾರದ ಕೇಸನ್ನು ಈ ಘನ ನ್ಯಾಯಾಲಯದಲ್ಲಿ ಹೂಡಿದ್ದು ಸದರಿ ಪ್ರಕರಣದ ವಿಚಾರಣೆಯು ದಿನಾಂಕ: 09.04.2026 ರಂದು ಇರುತ್ತದೆ. ಆದ್ದರಿಂದ ಸದರಿ ಪ್ರಕರಣದಲ್ಲಿ 1ನೇ ಎದುರುದಾರರಾಗಿರುವ ನೀವು ಮೇಲ್ಕಂಡ ವಿಚಾರಣಾ ದಿನದಂದು ಬೆಳಗ್ಗೆ 11-00 ಗಂಟೆಗೆ ಸರಿಯಾಗಿ ನೀವೇ ಖುದ್ದಾಗಲೀ ಅಥವಾ ನಿಮ್ಮ ವಕೀಲರ ಮೂಲಕವಾಗಲೀ ನ್ಯಾಯಾಲಯಕ್ಕೆ ಹಾಜರಾಗಿ ಈ ಪ್ರಕರಣದಲ್ಲಿ ತಮ್ಮ ತಕರಾರೇನಾದರು ಇದ್ದಲ್ಲಿ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಈ ಪ್ರಕರಣದಲ್ಲಿ ಏಕಪಕ್ಷೀಯ ಎಂದು ಪರಿಗಣಿಸಿ ನಿಮ್ಮ ಅನುಪಸ್ಥಿತಿಯಲ್ಲಿ ಈ ಪರಿಹಾರದ ಅರ್ಜಿಯನ್ನು ತೀರ್ಮಾನಿಸಲಾಗುವುದು.

ದಿನಾಂಕ: 12.03.2026 ರಂದು ನಮ್ಮ ಸ್ವಂತ ದಸ್ಕತ್ತು ಹಾಗೂ ನ್ಯಾಯಾಲಯದ ಮೊಹರು ನದಿಯೊಂದಿಗೆ ಕೊಡಲ್ಪಟ್ಟಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು,
ಹೆಚ್ಚುವರಿ ಜಿಲ್ಲೆ ಜಡ್ಜ್ ನ್ಯಾಯಾಲಯ ಕೊಳ್ಳೇಗಾಲ.
ಶ್ರೀ ಮಲ್ಲಿಕಾರ್ಜುನ ಸ್ವಾಮಿ, ವಕೀಲರು, ಮಂಡ್ಯ.

ಕರ್ನಾಟಕ ಸರ್ಕಾರ

ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ

ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ ಯೋಜನಾ ವಿಭಾಗ,
1-11-264 ಎರಡನೇ ಮಹಡಿ ಎ.ಟಿ.ಎಂ. ಸರ್ಕಲ್, ನಿಜಲಿಂಗಪ್ಪ ಕಾಲೋನಿ ರಾಯಚೂರು-584101
e-mail: eekrrdarcr@gmail.com

ಸಂ.:ಕಾನಿಅ/ಯೋ.ವಿ.ರಾ/ಪಿ.ಬಿ/2025-26/935 ದಿನಾಂಕ:13.03.2026

ಅಲ್ಪಾವಧಿ ಟೆಂಡರ್ ಪ್ರಕಟಣೆ-01

ಕರ್ನಾಟಕ ರಾಜ್ಯದ ರಾಜ್ಯ ಪಾಲರ ಪರವಾಗಿ ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಯಿಂದ 2025-26ನೇ ಸಾಲಿನ ಕೆ.ಕೆ.ಆರ್.ಡಿ.ಬಿ. ಅಡಿಯಲ್ಲಿ ಮಸ್ಕಿ ವಿಧಾನ ಸಭಾ ಕ್ಷೇತ್ರದ ಕಾಮಗಾರಿಗಳನ್ನು KW-3, KW-4 ಮಾನದಂಡಗಳನ್ನು ಅನುಸರಿಸಿ ಐಟಂ ರೇಟ್ ದರಗಳನ್ನು KPPP ಪೋರ್ಟಲ್ ಮುಖಾಂತರ ಟೆಂಡರ್‌ಗಳನ್ನು ಕರೆಯಲಾಗಿದೆ.

ಟೆಂಡರ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿವೆ

1) **E.M.D.:** As per KPPP portal 2) **ಟೆಂಡರ್ ಇಂಡೆಂಟ್ ನಂಬರಗಳು:** KRRDA/2025-26/RD/WORK_INDENT331, KRRDA/2025-26/RD/WORK_INDENT332, KRRDA/2025-26/RD/WORK_INDENT334, KRRDA/2025-26/RD/WORK_INDENT335, KRRDA/2025-26/RD/WORK_INDENT338, KRRDA/2025-26/RD/WORK_INDENT 339 , **3) e-procurement portal** ನಲ್ಲಿ ಟೆಂಡರ್ ಬಿಡ್ ದಾಖಲಾತಿಗಳನ್ನು ನೋಡಬಹುದಾದ ದಿನಾಂಕ, **Date of commencement of downloading of bidding document:** 16-03-2026 4) ತಾಂತ್ರಿಕ ಬಿಡ್‌ಗಳನ್ನು **online** ಆನ್‌ಲೈನ ಮುಖಾಂತರ ಸಲ್ಲಿಸುವ ಕೊನೆಯ ದಿನಾಂಕ, **last date to submit bid on E-portal:** 30-03-2026 (17.00 Hours) **5)** ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 01-04-2026 (10:30 Hours) **6)** ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: ನಂತರ ತಿಳಿಸಲಾಗುವುದು. 7) ಟೆಂಡರ್ ಗುತ್ತಿಗೆದಾರರ ದರ್ಜೆ: KPPP ತಂತ್ರಾಂಶದಲ್ಲಿ ಸೂಚಿಸಿದಂತೆ **8)** ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ ಕಾರ್ಯಪಾಲಕ ಅಭಿಯಂತರರು, ಯೋಜನಾ ವಿಭಾಗ ರಾಯಚೂರು **9)** ಹೆಚ್ಚಿನ ಮಾಹಿತಿಗೆ ವೆಬ್‌ಸೈಟ್ ನೋಡಬಹುದು: https://www. kppp.karnataka.gov.in

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು
ಯೋಜನಾ ವಿಭಾಗ, ರಾಯಚೂರು.

DIP/RCR/765/KSMCA/768/2025-26

ಮಾನ್ಯ 3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಹಾಗೂ ಹೆಚ್ಚುವರಿ ಅಪಘಾತ ಪರಿಹಾರ ಪ್ರಾಧಿಕಾರ, ಶಿವಮೊಗ್ಗ.

ಎಂ.ವಿ.ಸಿ.ಸಂಖ್ಯೆ : 426/2024

ಅರ್ಜಿದಾರರು:1)ಟಿ.ಎಂ.ಮಂಜುನಾಥ ಬಿನ್ ಮರಿಯಪ್ಪ, ಸುಮಾರು 48 ವರ್ಷ, ವಯಸ್ಸು, ವಾಸ: ಸ್ವರತೆಯತನಹಳ್ಳಿ, ಹಿಳಿಯೂರು, ಬೆಂಗಳೂರು ಗ್ರಾಮಾಂತರ, ಬೆಂಗಳೂರು.2)ಟಿ.ಎಂ. ಕೃಷ್ಣಮೂರ್ತಿ ಬಿನ್ ಟಿ.ಎಂ. ಮಂಜುನಾಥ, ಸುಮಾರು 26 ವರ್ಷ,ವಯಸ್ಸು, ವಾಸ:ಸ್ವರತೆಯತನಹಳ್ಳಿ, ಹಿಳಿಯೂರು, ಬೆಂಗಳೂರು ಗ್ರಾಮಾಂತರ, ಬೆಂಗಳೂರು. 3)ಪ್ರೇಮಾ ಕೋಂ ಎನ್.ನಾಗೇಶ್, ಸುಮಾರು 23 ವರ್ಷ ವಯಸ್ಸು, ವಾಸ: ಮುಖ್ಯ ರಸ್ತೆ, ಹಿರಿಬೇನಹಳ್ಳಿ ಗ್ರಾಮ, ಸಿದ್ಲಘಟ್ಟ ತಾ॥, ಗಂಗಮ್ಮ ಕೋಟೆ ಹೋಬಳಿ, ಚಿಕ್ಕಬಳ್ಳಾಪುರ ಜಿಲ್ಲೆ.

ವಿರುದ್ಧ

ಎದುರುದಾರರು : ಅಭಿನಂದನ್ ಎನ್ ಹಾಗೂ ಇತರರು.

1ನೇ ಎದುರುದಾರರು : ಅಭಿನಂದನ್ ಎನ್ ಬಿನ್ ನಾಗರಾಜ್, ಸುಮಾರು 26 ವರ್ಷ. ವಾಸ: ಅವರೇಹಳ್ಳಿ, ರಾಮನಗರ ತಾ॥. **2ನೇ ಎದುರುದಾರರು :** ಮೋಹನ್ ಕುಮಾರ್ ಕೆ ಬಿನ್ ಕೆಂಪಯ್ಯ, ಸುಮಾರು 25 ವರ್ಷ, ವಾಸ: ಕುಂಬಳಗೂಡು, ಕೆಂಗೇರಿ, ಬೆಂಗಳೂರು ಸಿಟಿ.

ಸಾರ್ವಜನಿಕ ಪ್ರಕಟಣೆ

ಮೇಲ್ಕಂಡ ಅರ್ಜಿದಾರರು ಸದರಿ ಪ್ರಕರಣವನ್ನು ಎದುರುದಾರರ ವಿರುದ್ಧ ಮಾನ್ಯ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿದ್ದು, ಸದರಿ ಪ್ರಕರಣದಲ್ಲಿ ನ್ಯಾಯಾಲಯದಿಂದ 1ನೇ ಮತ್ತು 2ನೇ ಎದುರುದಾರರಿಗೆ ಜಾರಿಯಾದ ನೋಟಿಸ್, ಸಮನ್ಸ್, ಜಾರಿಯಾಗಿರುವುದಿಲ್ಲ. ಸದರಿ ಮೇಲ್ಕಂಡ ಪ್ರಕರಣದ ಮುಂದಿನ ವಿಚಾರಣಾ **ದಿನಾಂಕ:02-04-2026** ರಂದು ನಿಗಧಿಯಾಗಿರುತ್ತದೆ. ಆ ದಿನಾಂಕದಂದು ತಾವುಗಳು ಖುದ್ದಾಗಿ ಆಗಲೀ ಅಥವಾ ತಮ್ಮಿಂದ ನಿಯೋಜಿತಗೊಂಡ ವಕೀಲರ ಮೂಲಕವಾಗಲೀ ಆ ದಿನ **ಬೆಳಿಗ್ಗೆ 11 ಗಂಟೆಗೆ** ಘನ ನ್ಯಾಯಾಲಯದಲ್ಲಿ ಹಾಜರಾಗತಕ್ಕದ್ದು. ಒಂದು ವೇಳೆ ಹಾಜರಾಗದೇ ಇದ್ದಲ್ಲಿ ನ್ಯಾಯಾಲಯವು ಸದರಿ ಪ್ರಕರಣವನ್ನು ತಮ್ಮ ಗೈರು ಹಾಜರಿನಲ್ಲಿ ಏಕಪಕ್ಷೀಯವಾಗಿ ತೀರ್ಮಾನಿಸಲಾಗುತ್ತದೆ ಎಂದು ತಿಳಿಯತಕ್ಕದ್ದು.

ಅರ್ಜಿದಾರರ ಪರ ವಕೀಲರು
ವಿ.ರವಣ್ಣಪ್ಪ, ವಕೀಲರು
ಬೆಂಗಳೂರು
ದಿನಾಂಕ:16-03-2026

ನ್ಯಾಯಾಲಯದ ಅಪ್ಪಣೆಯ ಮೇರೆಗೆ
ಸಹಿ/-ಶಿರಸ್ತೇದಾರರು, ಮಾನ್ಯ 3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಹಾಗೂ ಹೆಚ್ಚುವರಿ ಅಪಘಾತ ಪರಿಹಾರ ಪ್ರಾಧಿಕಾರ, ಶಿವಮೊಗ್ಗ

IN THE COURT OF THE CITY CIVIL JUDGE (CCH-03) AT BENGALURU

O.S. No. 1525 OF 2022

BETWEEN : Sri. Channakeshava and others both are Resident at No. B-77, NAL Staff Quarters, Airport Road, Bengaluru - 560 025. **...Plaintiffs**

AND : Sri. Mohan and others ...Defendants

NOTICE TO DEFENDANT No. 1 TO 3 AND 7

1. Mohan, Grand Son of late Sri. Late Mudduveerappa and D/o late Smt. Sumitra, Aged about 30 years. **2. Mrs. Niveditha,** grand daughter of Mudduveerappa and D/o late Smt. Sumithra, aged about 28 years. **3. Sri. Ramachandra** Son-in-law, of MudduVeerappa and husband of late Sumithra, 55 years.

Respondent No. 1 to 3 are residents of No. 10/2, Rudrappa Garden, 9th Cross, Kasturibai Nagara, Bangalore-560026.

7. Smt. Dhanalakshmi, W/o late Nagaraj D/o late, Mudduveerappa, 66 years, C/o Hamsaveni, No.64, Pipeline East, 3rd Main Road, 3rd Cross, Kasturibai Nagara, Mysore Road, Tollgate, Bangalore-560026.

WHEREAS The petitioners have filed the above suit against you, before the Hon'ble XV Addl. City Civil and Sessions Judge (CCH-03) at Bengaluru for restoration of suit in OS No. 7054/2014 in respect of the suit schedule properties. You are Respondent No. 1 to 3 and 7, in the above suit.

You are hereby directed to appear before the Hon'ble Addl. City Civil and Sessions Judge (CCH-03) at Bengaluru **on 28.04.2026 at 11 a.m.** either in person or through your counsel to answer the claim. If you fail to appear before the Hon'ble Court on the said day, you will be placed ex-parte and case will be disposed of in accordance with law.

Given under my hand, signature and seal of this Hon'ble Court, on this 16th day of March 2026.

By order of the Court, Senior Sheristedar, City Civil Court, Bengaluru.

ADVOCATE FOR PETITIONERS
SRINATHA .H, Advocate
SGR LAW ASSOCIATES, No.60, 1st Floor, South End Road, Nagasandra Circle, Basavanagudi, Bangalore-560004. Mobile No. 9164087816
Hshreenath80@gmail.com

IN THE COURT OF THE HON'BLE SENIOR CIVIL JUDGE AT MALUR

O.S. No 113/2017

BETWEEN: Smt. Sarojamma & others ... **PLAINTIFFS**

AND: Sri. Nyanappa & others ... **DEFENDANTS**

ADDRESS FOR SERVICE LRS OF DEFENDANT No 21 (a) to (c).

D 21 (a) Smt. Uma, W/o Late Ramesh, Aged about 32 years, **D 21 (b) Keerthan,** D/o Late Ramesh, Aged about 9 years, **D 21 (c) Master Srushanth,** S/o Late Ramesh, Aged about 5 years, D 21 (b) and (c) are minors represented by their mother namely Smt Uma. All are Residing at Abbenahalli village, Kasaba hobli, Malur taluk. Kolar District.

Take notice that the plaintiff no 1, Smt Sarojamma d/o Late B.Siddappaa aged about 59 years R/at Sarjapura village & hobali, Anekal taluk, and others have instituted a suit for partition and separate possession, against you and other defendants, in respect of land bearing,

1) Sy no 20/1 measuring 3 acres 35 guntas.
2) Sy no 13 measuring 2 acres 10 guntas. Including 3 guntas karab, both properties are situated at M. Sonnahalli village kasaba hobli Malur taluk, Kolar district.
3) Sy no 195/1 and sy no 195/2 measuring 4 acres. Both properties are situated at Abbenahalli village kasaba hobali Malur Taluk, Kolar district.

Hence you are directed to present before this Hon'ble court on **18-04-2026** at 11.00 A.M. personally or through a pleader duly instructed by you, failing which the matter will be heard in your absence placing you ex-parte.

Issued on this dated 06-03-2026 as per the orders of the court with seal and signature.

By order of the court, Chief Ministerial officer, Senior Civil Judge Court at Malur.

Advocate for Plaintiff:
M.S. SUBRAMANI KUMAR
M.S.S.K. ASSOCIATES
No.11, C. Muniyappa Layout, Attibele Road, Anekal Town Bengaluru Rural district.

ಕರ್ನಾಟಕ ಗೃಹ ಮಂಡಳಿ

3ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು-560009

ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮುಖಾಂತರ)

Notification No: KHB/AEF/STP/Suryanagara 4th Ph/ KHB/2025-26/ SE0355 Dated: 12.03.2026

ಕರ್ನಾಟಕ ಗೃಹ ಮಂಡಳಿ ವತಿಯಿಂದ ನಿರ್ಮಿಸಲು ಉದ್ದೇಶಿಸಿರುವ ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಜಿಗಣಿ/ಕಸಬಾ ಹೋಬಳಿಯ ಸೂರ್ಯನಗರ 4ನೇ ಹಂತದ ಕರ್ನಾಟಕ ಗೃಹ ಮಂಡಳಿ ಬಡಾವಣೆಯ ಬ್ಲಾಕ್-1 ರಲ್ಲಿ 20 MLD ಸಾಮರ್ಥ್ಯದ STP ಮತ್ತು ಬ್ಲಾಕ್ 12 ರಲ್ಲಿ 5 MLD ಸಾಮರ್ಥ್ಯದ ನಿರ್ಮಾಣ ಕಾಮಗಾರಿಗೆ ವಾಸ್ತುಶಿಲ್ಪಿ ಸಂಸ್ಥೆ (AEF) ನೇಮಕಾತಿಗಾಗಿ KPP Portal ಟೆಂಡರ್ ಅನ್ನು ಕರೆಯಲಾಗಿದೆ.

ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ: 25.03.2026 ಸಂಜೆ 4.00 ಗಂಟೆಯವರೆಗೆ.

ಕಾಮಗಾರಿಗಳ ಬಗ್ಗೆ ಹಾಗೂ ಇನ್ನಿತರ ವಿವರಗಳನ್ನು ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ. ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು. ದೂರವಾಣಿ: 080-22273511/080-22100077 website: https://kppp.karnataka.gov.in

ಸಹಿ/- ಕಾರ್ಯಪಾಲಕ ಅಭಿಯಂತರರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ/6284/ಆಕಾರ್/2025-26

(ಲೋಕೋಪಯೋಗಿ ಇಲಾಖೆ)
ಧಾರವಾಡ ವಿಭಾಗ, ಧಾರವಾಡ

ಕಾರ್ಯನಿರ್ವಾಹಕ ಇಂಜನೀಯರರವರ ಕಛೇರಿ, ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ, ಧಾರವಾಡ.

ಕ್ರಸಂ: ಕಾನಿಇಂಧಾ/ಗುತ್ತಿಗೆ/ಪಿ.ಬಿ.1,2,3,4,5/2025-26/7151 ದಿನಾಂಕ: 13.03.2026

ಟೆಂಡರ್ ಪ್ರಕಟಣೆ

I.F.T-KW-1, 2, 3, 4

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ (ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ಮುಖಾಂತರ)

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಧಾರವಾಡರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ 2000 ರನ್ವಯ ಮತ್ತು ಸ್ಟ್ಯಾಂಡರ್ಡ ಡಾಕ್ಯೂಮೆಂಟ್ ಕೆಡಬ್ಲ್ಯೂ-1,2,3,4 ರ ನಿಯಮದಂತೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ.ಪಿ. (**kppp.karnataka.gov.in**) ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಗುತ್ತಿಗೆದಾರರಿಂದ ದ್ವಿ-ಲಕೋಟೆ ಪದ್ಧತಿಯಲ್ಲಿ ರೂ. 8.00 ಲಕ್ಷಗಳಿಂದ ಗರಿಷ್ಠ ರೂ. 500.00 ಲೆಕ್ಕಶೀರ್ಷಿಕೆ: 2025-26ನೇ ಸಾಲಿನಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಯೋಜನೆ, 2216-07-053-0-01-200 ಲೋಕೋಪಯೋಗಿ ವಸತಿ ಹಾಗೂ ನ್ಯಾಯಾಂಗ ವಸತಿ ಗೃಹಗಳ ದುರಸ್ತಿ/ನಿರ್ವಹಣೆ, 4059-80-051-0-60-422 ಮುಖ್ಯಮಂತ್ರಿ ಮೂಲಸೌಕರ್ಯ ಅಭಿವೃದ್ಧಿ-ಪರಿಶಿಷ್ಟ ಜಾತಿ ಉಪಯೋಜನೆ, 3054-03-337-0-05-200 ರಾಜ್ಯ ಹೆದ್ದಾರಿ ನಿರ್ವಹಣೆ , 2025-26 ನೇ ಸಾಲಿನ ಲೆಕ್ಕ ಶೀರ್ಷಿಕೆ 3054-04-337-1-10-200 ಜಿಲ್ಲಾ ಮುಖ್ಯ ರಸ್ತೆ ನಿರ್ವಹಣೆ ಕಾಮಗಾರಿಗಳು & 2059-80-053-4-00-200 ವಿವಿಧ ಇಲಾಖಾ ಕಟ್ಟಡಗಳ ದುರಸ್ತಿ/ನಿರ್ವಹಣೆ ಯೋಜನೆಯಡಿ ಟೆಂಡರ ಅಹ್ವಾನಿಸಲಾಗಿದೆ. ಕಾಮಗಾರಿಗಳ ವಿವರ ಈ ಕೆಳಗಿನಂತಿದೆ.

ಸಾಮಾನ್ಯ: 1) PWD/2025-26/RD/WORK_INDENT33915, 2) PWD/2025-26/RD/WORK_INDENT34417, 3) PWD/2025-26/RD/WORK_INDENT33999, 4) PWD/2025-26/RD/WORK_INDENT33899, 5) PWD/2025-26/RD/WORK_INDENT33833, 6) PWD/2025-26/RD/WORK_INDENT34043, 7) PWD/2025-26/RD/WORK_INDENT33954, 8) PWD/2025-26/RD/WORK_INDENT33900, 9) PWD/2025-26/RD/WORK_INDENT33895, 10) PWD/2025-26/RD/WORK_INDENT33958, 11) PWD/2025-26/RD/WORK_INDENT34054, 12) PWD/2025-26/BR/WORK_INDENT34256, 13) PWD/2025-26/RD/WORK_INDENT31525, 14) PWD/2025-26/RD/WORK_INDENT34077, 15) PWD/2025-26/RD/WORK_INDENT34137, 16) PWD/2025-26/RD/WORK_INDENT34356, 17) PWD/2025-26/RD/WORK_INDENT34238, 18) PWD/2025-26/BD/WORK_INDENT34412, 19) PWD/2024-25/SE0244, **ಪರಿಶಿಷ್ಟ ಜಾತಿ:** 20) PWD/2025-26/RD/WORK_INDENT34243 **ಪ್ರವರ್ಗ-2ಎ:** 21) PWD/2025-26/RD/WORK_INDENT34382

Calander of Events: 1) ಪ್ರೀಬಿಡ್ / ಆಕ್ಷೇಪಣೆಯನ್ನು /ಸಲ್ಲಿಸುವ ಕೊನೆಯ ದಿನಾಂಕ: 25.03.2026 (ಬೆಳಿಗ್ಗೆ 12:30 ಗಂಟೆಯವರೆಗೆ). 2) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 26.03.2026 (ಸಾಯಂಕಾಲ 04:00 ಗಂಟೆಯವರೆಗೆ). 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 27.03.2026 (ಸಾಯಂಕಾಲ 04:30 ಗಂಟೆಯ ನಂತರ). 4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 30.03.2026(ಸಾಯಂಕಾಲ 04:30 ಗಂಟೆಯ ನಂತರ)

ಕಾಮಗಾರಿಗಳಿಗೆ ಸಂಬಂದಿಸಿದ ಎಲ್ಲಾ ವಿವರಗಳನ್ನು ಅಂತರ್‌ಜಾಲ ವಿಳಾಸ **http://www.kppp.karnataka.gov.in** ದಲ್ಲಿ ಹಾಗೂ ಲೋಕೋಪಯೋಗಿ ಇಲಾಖೆ ಧಾರವಾಡ ವಿಭಾಗ ಕಛೇರಿಯಿಂದ ಕಚೇರಿಯ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/-
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ,
ಧಾರವಾಡ ವಿಭಾಗ, ಧಾರವಾಡ.

ವಾಸಾಸಂಇ/ಧಾರವಾಡ/ದಿಶಾ/1357/2025-26

ನಗರಸಭಾ ಕಾರ್ಯಾಲಯ, ಹೂಟಗಳ್ಳಿ

ಎಸ್.ಆರ್.ಎಸ್.ಸ್ಟೇಷನ್ ಎದುರು, ಹೈಟೆನ್ಷನ್, ಜೋಡಿ ರಸ್ತೆ, ಹೂಟಗಳ್ಳಿ, ಮೈಸೂರು ಜಿಲ್ಲೆ-570018
ಸಹಾಯವಾಣಿ ಸಂಖ್ಯೆ : 0821-2001737, E-Mail: ka.hootagalli.cmc@gmail.com

ಸಂಖ್ಯೆ: ನಸಹೂ/ತಾಂತ್ರಿಕ/ಟೆಂಡರ್ ಪ್ರಕಟಣೆ/ಸಿ.ಆರ್.18/2025-26 ದಿನಾಂಕ: 13.03.2026

ಟೆಂಡರ್ ಪ್ರಕಟಣೆ

ಹೂಟಗಳ್ಳಿ ನಗರಸಭೆ ವಾಪ್ತಿಯಲ್ಲಿ 2025-26ನೇ ಸಾಲಿನ ನಗರಸಭಾ ನಿಧಿ ಅನುದಾನದಲ್ಲಿ ಕೆ.ಟಿ.ಪಿ.ಪಿ. ಕಾಯ್ದೆ 2000ರ ಪ್ರಕಾರ ಕೆ.ಡಬ್ಲ್ಯೂ-04 ನಿಯಮದಂತೆ ಕೆ.ಪಿ.ಪಿ. ಪೋರ್ಟಲ್ ಮೂಲಕ ಕಾಮಗಾರಿಗೆ ಐಟಂವಾರು ಟೆಂಡರ್ ಕರೆಯಲಾಗಿದ್ದು, ಸಿವಿಲ್ ಲೋಕೋಪಯೋಗಿ ಇಲಾಖೆಯ ಅರ್ಹ ನೋಂದಾಯಿತ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ಗಳನ್ನು **https://kppp.karnataka.gov.in** ಇ-ಪೋರ್ಟಲ್ ಮೂಲಕ ಸಲ್ಲಿಸಬಹುದಾಗಿದೆ. ಅರ್ಹ ಗುತ್ತಿಗೆದಾರರಿಂದ ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 30.03.2026 ಸಂಜೆ 5:30 ಗಂಟೆಯವರೆಗೆ** ಹಾಗೂ ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ **ದಿನಾಂಕ:01.04.2026 ಬೆಳಗ್ಗೆ 11:00 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ ಕಛೇರಿ ತಾಂತ್ರಿಕ ಶಾಖೆ ಅಭಿಯಂತರರನ್ನು ಸಂಪರ್ಕಿಸಬಹುದಾಗಿದೆ. ಟೆಂಡರ್‌ನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ನಗರಸಭೆ ಕಾಯ್ದಿರಿಸಿಕೊಂಡಿದೆ. ಪೂರ್ಣಗೊಂಡ ಕಾಮಗಾರಿಗೆ ನಗರಸಭೆ ನಿಧಿಯ ಅನುದಾನಕ್ಕೆ ಅನುಗುಣವಾಗಿ ಬಿಲ್ ಪಾವತಿಸಲಾಗುವುದು.

ಕ್ರ. ಸಂ.	ಕಾಮಗಾರಿಗಳ ಇಂಡೆಂಟ್ ವಿವರ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ)
01	DMA/2025-26/RD/WORK_INDENT56215	200.00	2,54,000/-

ಸಹಿ/- ಪೌರಾಯುಕ್ತರು
ನಗರಸಭೆ, ಹೂಟಗಳ್ಳಿ

ವಾಸಾಸಂಇ/ಮೈಸೂರು/ಶಿರಡಿಸಾಯಿ/1841/2025-26

ಬೆಂಗಳೂರು ಉತ್ತರ ನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ವಿದ್ಯುತ್ ವಿಭಾಗ, ಬೆಂ.ಉ.ನ.ಪಾ
ಬಳ್ಳಾರಿ ಮುಖ್ಯ ರಸ್ತೆ, ಬ್ಯಾಟರಾಯನಪುರ, ಬೆಂಗಳೂರು - 560 092.

ಸಂಖ್ಯೆ:ಬೆಉನಪಾ/ಕಾಪಾಅ/ವಿವಿ/ಟೆಂಡರ್/ಜಿಎನ್/04/2025-26 ದಿನಾಂಕ: 16-03-2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಏಕಲಕೋಟೆ)

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ಬೆಂ.ಉ.ನ.ಪಾಲಿಕೆ ಬೆಂಗಳೂರು, ಇವರು ಆಯುಕ್ತರು ಬೆಂ.ಉ.ನ.ಪಾ ಇವರ ಪರವಾಗಿ ಕೆಟಿಪಿಪಿ ಕಾಯಿದೆಗಳು 2000ಕ್ಕೆ ಅನುಗುಣವಾಗಿ ಬೆಂಗಳೂರು ಉತ್ತರ ನಗರ ಪಾಲಿಕೆ ಜಿಬಿಎ/ಕೆಪಿಡಬ್ಲ್ಯೂಡಿ/ಸಿಪಿಡಬ್ಲ್ಯೂಡಿ/ರೈಲ್ವೇಸ್/ಎಮ್‌ಇಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ತತ್ಸಮಾನವಾಗಿ ಇನ್ನಿತರ ಯಾವುದೇ ರಾಜ್ಯ/ಕೇಂದ್ರ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ವಿದ್ಯುತ್ ಕಾಮಗಾರಿಗಳಿಗೆ ಟೆಂಡರುಗಳನ್ನು ಆಹ್ವಾನಿಸಿದ್ದಾರೆ.

Sl No.	ಕಾಮಗಾರಿಗಳ ಹೆಸರು
1.	ವಾರ್ಡ್ ಸಂಖ್ಯೆ-04 ಮಿನಿ ವಿಧಾನಸೌಧ, ಯಲಹಂಕ, ಬೆಂಗಳೂರು ಉತ್ತರ ನಗರ ಪಾಲಿಕೆ ಕಚೇರಿಗೆ ಡೀಸಲ್ ಜನರೇಟರ್ ಮತ್ತು ಸಲಕರಣೆಗಳನ್ನು ಒದಗಿಸುವುದು ಮತ್ತು ಅಳವಡಿಸುವುದು. **ಅಂದಾಜು ಮೊತ್ತ: ₹.15.00 ಲಕ್ಷಗಳು, ಟೆಂಡರ್‌ಗಿಟ್ಟ ಮೊತ್ತ: ₹.12.70 ಲಕ್ಷಗಳು, ಇಎಂಡಿ ಮೊತ್ತ: ₹.31,800/-**

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ: **17-03-2026**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಬಿಡ್‌ಗಳನ್ನು ಕೆಪಿಪಿ ಆನ್‌ಲೈನ್ ಮೂಲಕ ಪೋರ್ಟಲ್‌ನಲ್ಲಿ ದಿನಾಂಕ: **24-03-2026**ರ ಸಂಜೆ **4:00** ಗಂಟೆಯೊಳಗೆ ಸಲ್ಲಿಸತಕ್ಕದ್ದು. (3) ಆರ್ಥಿಕ ಬಿಡ್‌ಗಳನ್ನು ದಿನಾಂಕ:**25-03-2026**ರ ಸಂಜೆ **4:00** ಗಂಟೆಗೆ ತೆರೆಯಲಾಗುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು,
ವಿದ್ಯುತ್ ವಿಭಾಗ, ಬೆಂ.ಉ.ನ.ಪಾ

ಮಾನ್ಯ ಘನ 3ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಕಡೂರು

ಅಸಲು ದಾವಾ ಸಂಖ್ಯೆ : 632/2025

ವಾದಿ : ಶ್ರೀಮತಿ ಬಿ.ಜಿ.ಪದ್ಮಾವತಿ ಕೋಂ ರಾಜಪ್ಪ ಕೆ.ವಿ, ಬಿನ್ ಲೇಟ್ ಗಂಗಪ್ಪ ಯಾನೆ ಗಂಗಯ್ಯ, ಸುಮಾರು 60ವರ್ಷ,ಗೃಹಿಣಿ, ವಾಸ-ನಂ.35,ಶ್ರೀ ಲಕ್ಷ್ಮೀವೆಂಕಟೇಶ್ವರ ನಿಲಯ, 1ನೇ ಕ್ರಾಸ್, ಅಕ್ಷಯ ಲೇಔಟ್, ಹೆಸರಘಟ್ಟ ಹೋಬಳಿ, ಮುತುಗದ ಹಳ್ಳಿ, ಬೆಂಗಳೂರು-560089.

ವಿರುದ್ಧ

ಪ್ರತಿವಾದಿಗಳು : ಜಿ.ನಾಗರಾಜ್ ಮತ್ತು ಇತರರು.

1ನೇ ಪ್ರತಿವಾದಿ : ಜಿ.ನಾಗರಾಜ್ ಬಿನ್ ಲೇಟ್ ಗಂಗಪ್ಪ ಯಾನೆ ಗಂಗಯ್ಯ, ಸುಮಾರು 70 ವರ್ಷ, ನಿವೃತ್ತ ಪತ್ರಾಂಕಿತ ಸಹಾಯಕರು, ವಾಸ: ಚನ್ನಸಂದ್ರ, ಮುಖ್ಯ ರಸ್ತೆ 1ನೇ ಕ್ರಾಸ್, ಪೆಟ್ರೋಲ್ ಬಂಕ್ ಹಿಂಭಾಗ, ಕೆಂಗೇರಿ, ಬೆಂಗಳೂರು.

ಸಾರ್ವಜನಿಕ ಪ್ರಕಟಣೆ

ಈ ಮೇಲ್ಕಂಡ ದಾವಾದಲ್ಲಿ ವಾದಿಯು ಮೇಲ್ಕಂಡ ದಾವೆಯನ್ನು ಪ್ರತಿವಾದಿಗಳ ವಿರುದ್ಧ ವಿಭಾಗ ಮತ್ತು ಸ್ವಾಧೀನ ಕೋರಿ ದಾವೆ ಸಲ್ಲಿಸಿರುತ್ತಾರೆ. ಸದರಿ ದಾವೆಯಲ್ಲಿ ನೀವು ಮೇಲ್ಕಂಡ ವಿಳಾಸದಲ್ಲಿ ವಾಸವಾಗಿದ್ದರೂ ಸಹ ನ್ಯಾಯಾಲಯದ ಮುಖಾಂತರ ಸಮನ್ಸ್ ಕಳುಹಿಸಿದ್ದರೂ ಸಹ ನೀವು ಅದನ್ನು ಪಡೆದುಕೊಂಡಿರುವುದಿಲ್ಲ ಎಂದು ವಾದಿಯು ತಿಳಿಸಿದ್ದರ ಮೇರೆಗೆ ಮೇಲ್ಕಂಡ ನಿಮಗೆ ಈ ಪ್ರಕಟಣೆಯ ಮೂಲಕ ತಿಳಿಯಪಡಿಸುವು ದೇನೆಂದರೆ ಸದರಿ ಕೇಸು **ದಿನಾಂಕ:17-04-2026**ಕ್ಕೆ ನ್ಯಾಯಾಲಯದ ಮುಂದೆ ನಿಮ್ಮ ಹಾಜರಾತಿಗಾಗಿ ಹಿಯರಿಂಗ್ ಇದ್ದು, ಆ ದಿವಸ ನೀವು ನ್ಯಾಯಾಲಯದ ಮುಂದೆ **ಬೆಳಿಗ್ಗೆ 11 ಗಂಟೆಗೆ** ಖುದ್ದಾಗಿ ಆಗಲೀ ಅಥವಾ ನಿಮ್ಮ ವಕೀಲರ ಮೂಲಕವಾಗಿ ಆಗಲೀ ಹಾಜರಾಗಲು ತಿಳಿಯಪಡಿಸಿರುತ್ತೆ. ತಪ್ಪಿದಲ್ಲಿ ನ್ಯಾಯಾಲಯವು ನಿಮ್ಮನ್ನು ಏಕತರ್ಪ ಎಂದು ಆದೇಶ ಮಾಡಿ, ನಿಮ್ಮ ಗೈರು ಹಾಜರಾತಿಯಲ್ಲಿ ವಾದಿಯ ವಿಚಾರಣೆಯನ್ನು ನಡೆಸಿ ಸದರಿ ದಾವೆಯನ್ನು ಇತ್ಯರ್ಥಪಡಿಸಲಾಗುವುದೆಂದು ಈ ಮೂಲಕ ತಿಳಿಯಪಡಿಸಿರುತ್ತೆ ತಿಳಿಯಿರಿ. ಕರಡು ಪತ್ರಿಕಾ ಪ್ರಕಟಣೆಯನ್ನು ಅನುಮೋದಿಸಿದ ದಿನಾಂಕ:02-03-2026.

ವೈ.ಎನ್.ನರಸಿಂಹಮೂರ್ತಿ
ವಾದಿಯ ಪರ ವಕೀಲರು
ಸ್ಥಳ : ಕಡೂರು
ದಿನಾಂಕ:02-03-2026

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/-ನ್ಯಾಯಿಕ ಮುಖ್ಯ ಲಿಪಿಕಾಧಿಕಾರಿಗಳು
3ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಲಯ, ಕಡೂರು

ಸಹಕಾರ ಸಂಘಗಳ ಸಹಾಯಕ ನಿಬಂಧಕರು (ನಿ.441) ಹಾಗೂ ವಸೂಲಾಧಿಕಾರಿಗಳು
ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾ ಮಂಡಳ ನಿ. ಇವರ ನ್ಯಾಯಾಲಯ
ನಂ.132, 1ನೇ ಮಹಡಿ, ಕೆ. ಹೆಚ್ ರಸ್ತೆ, ಬೆಂಗಳೂರು-560027.

ಕರ್ನಾಟಕ ಸಹಕಾರ ಸಂಘಗಳ 1959ನೇ ಇಸವಿ ಆಕ್ಟಿನ ಮೇರೆಗೆ ಏರ್ಪಡಿಸಿದ ರೂಲ್ಸುಗಳ ಮೇರೆಗೆ ಜಾರಿಗೆ ತಂದ ಫಾರ್ಮುಗಳು

CEP No.ARE/UBF/450/2025-2026 ಫಾರಂ ನಂ.2

34 (3) ನೇ ರೂಲಿನ ಕಲಂ ತಗಾದೆ ಪತ್ರ (ಜಪ್ತಿ ಹುಕುಂ)

ಈ ಕೆಳಗೆ ಕಾಣಿಸಿದ ಬಾಕಿದಾರರಿಂದ ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ನಿಯಮಿತ, ಇವರಿಗೆ ಬರಬೇಕಾದ ಹಣಗಳ ಬಗ್ಗೆ ಸದರಿಯವರ ಆಸ್ತಿಯನ್ನು ಜಪ್ತಿ ಮಾಡುವುದಕ್ಕೆ ಸಹಕಾರಿ ಇಲಾಖೆಯ ಹುದ್ದೇದಾರ / ಸೇಲ್ ಆಫೀಸರ್ 441 ರನ್ವಯ, ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ನಿಯಮಿತ, ಮಾರಾಟಾಧಿಕಾರಿ ಇವರಿಗೆ ಅಧಿಕಾರ ಕೊಡಲ್ಪಟ್ಟಿದೆ.

1. ಬಾಕಿದಾರರ ಹೆಸರು ಮತ್ತು ವಿಳಾಸ: 1) ಶ್ರೀ.ಆರ್.ಷಣ್ಮುಗಂ ಬಿನ್ ಲೇಟ್ ರಾಜು 2) ಶ್ರೀ.ರವಿಚಂದ್ರನ್.ಎಸ್ ಬಿನ್ ಶ್ರೀ.ಆರ್.ಷಣ್ಮುಗಂ, ಇವರುಗಳ ವಾಸ ಸ್ಥಳ : ನಂ.20, 10ನೇ ಕ್ರಾಸ್, ಪೈಪ್‌ಲೇನ್ ರಸ್ತೆ, ಚೋಳೂರುಪಾಳ್ಯ, ಮಾಗಡಿ ರಸ್ತೆ, ಬೆಂಗಳೂರು-560073 **ಮತ್ತೊಂದು ವಿಳಾಸ :** ಶ್ರೀ.ರವಿಚಂದ್ರನ್.ಎಸ್ ಬಿನ್ ಶ್ರೀ.ಆರ್.ಷಣ್ಮುಗಂ, ಮೆ॥ ಸೂರ್ಯ ಇಂಜನೀಯರಿಂಗ್ ವರ್ಕ್ಸ್, ಇವರುಗಳ ವಾಸ ಸ್ಥಳ : ನಂ. 6/1ಎ, ಪೈಪ್‌ಲೇನ್ ರಸ್ತೆ, ಹೊಯ್ಸಳನಗರ, ಸುಂಕದಕಟ್ಟೆ, ಮಾಗಡಿ ಮುಖ್ಯರಸ್ತೆ, ವಿಶ್ವನೀಡಂ ಪೋಸ್ಟ್, ಬೆಂಗಳೂರು-560091. ಶ್ರೀ.ಆರ್.ಷಣ್ಮುಗಂ ಬಿನ್ ಲೇಟ್ ರಾಜು, ಮೆ॥ ಸೂರ್ಯ ಇಂಜನೀಯರಿಂಗ್ ವರ್ಕ್, ಇವರುಗಳ ವಾಸ ಸ್ಥಳ : ನಂ. 105, ಸೆಲ್ವಂ ಇಂಡಸ್ಟ್ರಿಯಲ್ ಎಸ್ಟೇಟ್, ಪ್ರಶಾಂತ್‌ನಗರ ಮುಖ್ಯರಸ್ತೆ, ಕೆ.ಹೆಚ್.ಬಿ ಕಾಲೋನಿ, ಮಾಗಡಿ ಮುಖ್ಯರಸ್ತೆ, ಬೆಂಗಳೂರು-560079. (3) ಅವಾರ್ಡ್ ಯಾ ಡಿಕ್ರಿ ತೀರ್ಪು ವ ಹುಕುಂ ಪ್ರಕಾರ ಪಾವತಿಯಾಗಬೇಕಾದ ಮೊಬಲಗು: ರೂ. 1,07,22,432/-, ದಿನಾಂಕ 01.12.2025 ಕ್ಕೆ ಇದ್ದಂತೆ ಬಡ್ಡಿ: 1,06,41,233-00 (01.12.2025), ಇತರೆ: 81,199-00 ಒಟ್ಟು: 1,07,22,432-00, ಅಮಲ್ದಾರಿ ಶುಲ್ಕ : 65,460-00, ಒಟ್ಟು :1,07,87,892-00 (4)ಜಪ್ತಿ ಮಾಡುವವನಿಗೆ ಕೊಡಬೇಕಾದ ಭತ್ಯೆ : **ರೂ.65,460-00.** (5) ಅವಾರ್ಡಿನ, ಡಿಕ್ರಿಯ ತೀರ್ಪಿನ ವ ಹುಕುವಿನ ಮೊಬಲಗಿನ ಮೇಲೆ ಅದರ ತಾರೀಖಿನ ನಂತರ ಈ ತಾರೀಖಿನವರೆಗೆ ಆಗುವ ಬಡ್ಡಿ: 1,06,41,233-00 (01.12.2025) (6) ಇನ್ನು ಮೇಲಿನ ಬಡ್ಡಿಯನ್ನು ವಸೂಲು ಮಾಡಬೇಕಾದ ಬಡ್ಡಿಯ ದರ : 15.25 + 2% (7) ಜಪ್ತಿ ಮಾಡಿದ ತಾರೀಖು ಮತ್ತು ಬಾಕಿದಾರನಿಗೆ ಜಪ್ತಿ ಪಟ್ಟಿಯ ನಕಲನ್ನು ಕೊಟ್ಟ ತಾರೀಖಿನ ಅಥವಾ ಜಪ್ತಿ ಮಾಡದೇ ಇದ್ದ ಪಕ್ಷಕ್ಕೆ ಬಾಕಿಯಾದ ಹಣವನ್ನು ವಸೂಲು ಕೊಟ್ಟ ತಾರೀಖು:ಬಾಕಿಯಾದ ಹಣವನ್ನು ಅಮಲ್ದಾರಿ ಖರ್ಚು ಸಮೇತ ಮುಂಚೆಯೇ ಕೊಡಲಿಲ್ಲವಾದ ಪಕ್ಷಕ್ಕೆ ಜಪ್ತಿ ಮಾಡಿದಸ್ವತ್ತನ್ನು ಬಹಿರಂಗವಾಗಿ ಹರಾಜಿನಲ್ಲಿ ಕೂಡಲೇ ಮಾರಾಟ ಮಾಡಲಾಗುವುದು ಎಂಬುದಾಗಿ ಈ ಮೂಲಕ ಬಾಕಿದಾರರಿಗೆ ತಿಳಿಸಲಾಗುತ್ತಿದೆ.

ಸಹಿ/-
ಸಹಕಾರ ಸಂಘಗಳ ಸಹಾಯಕ ನಿಬಂಧಕರು (ನಿ. 441)
ಹಾಗೂ ವಸೂಲಾಧಿಕಾರಿಗಳು
ಕ.ರಾ.ಸ.ಪ.ಬ್ಯಾಂಕುಗಳ ಮಹಾಮಂಡಳ ನಿ., ಬೆಂಗಳೂರು-560 027

ಮೊಕ್ಕಾಂ: ಬೆಂಗಳೂರು.
ತಾರೀಖು: 16.03.2026

ಗೌರವಾನ್ವಿತ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ (ಹಿ.ವಿ) ಮತ್ತು ಎಂ.ಎ.ಸಿ. ಟಿ. ಮದ್ದೂರು.

ಎಸ್.ಸಿ.11/2024

ವಾದಿ: ರವಿ ಬಿನ್ ಸಿದ್ದಯ್ಯ ಸುಮಾರು 45 ವರ್ಷ, ವೃತ್ತಿ-ವ್ಯವಸಾಯ, ವಾಸ: ತೊಪ್ಪನಹಳ್ಳಿ ಗ್ರಾಮ, ಕೆ.ಹೊನ್ನಲಗೆರೆ ಅಂಚೆ, ಕಸಬಾ ಹೋಬಳಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ, - ವಿರುದ್ಧ-

ಪ್ರತಿವಾದಿ : ಅಂಜನ್‌ಕುಮಾರ್.ಎಂ.ಬಿ. ಬಿನ್ ಲೇಟ್ ಬೋರೇಗೌಡ ಸುಮಾರು 40 ವರ್ಷ,ಮರಚಾಕನಹಳ್ಳಿ ಗ್ರಾಮ, ದುದ್ದಾ ಹೋಬಳಿ, ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ.

ಸಾರ್ವಜನಿಕ ಪ್ರಕಟಣೆ

ಈ ಮೇಲ್ಕಂಡ ದಾವೆಯನ್ನು ವಾದಿಯು ಪ್ರತಿವಾದಿಯ ವಿರುದ್ಧ ಹಣದ ವಸೂಲಾತಿಗಾಗಿ ಈ ಘನ ನ್ಯಾಯಾಲಯದ ಮುಂದೆ ಸಲ್ಲಿಸಿರುತ್ತಾರೆ. ಸದರಿ ಪ್ರಕರಣದ ಸುನಾವಣೆ ದಿನಾಂಕ: 28.03.2026 ರಂದು ಬೆಳಿಗ್ಗೆ 11-00 ಘಂಟೆಗೆ ಇದ್ದು, ನೀವು ಈ ಪ್ರಕಟಣೆಯನ್ನೇ ನೋಟೀಸ್ ಎಂದು ತಿಳಿದು ಖುದ್ದಾಗಿ ಅಥವಾ ನಿಮ್ಮ ವಕೀಲರ ಮೂಲಕ ಹಾಜರಾಗಿ ತಕರಾರು ಸಲ್ಲಿಸುವುದು,ತಪ್ಪಿದ್ದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು ಎಂದು ತಿಳಿಯುವುದು.

ಈ ಪ್ರಕಟಣೆಯನ್ನು ನ್ಯಾಯಾಲಯದ ಅಪ್ಪಣೆ ಮತ್ತು ಮೊಹರಿನೊಂದಿಗೆ ದಿನಾಂಕ: 12/03/2026 ರಂದು ನೀಡಲಾಗಿದೆ.

ನ್ಯಾಯಾಲದ ಅಪ್ಪಣೆ ಮೇರೆಗೆ
ಶಿರಸ್ತೆದಾರರು, ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಎಂ.ಎ.ಸಿ.ಟಿ. ಮದ್ದೂರು

ವಾದಿಯ ಪರ ವಕೀಲರು
ಎಂ.ಸಿ.ಅಶೋಕ್‌ಕುಮಾರ್ ಬಿ.ಕಾಂ., ಎಲ್.ಎಲ್.ಬಿ., ವಕೀಲರು, ಷಾದಿ ಮಹಲ್ ಕಾಂಪ್ಲೆಕ್ಸ್, ರೂಂ ನಂ.16, ಸ್ವಾಮಿ ವಿವೇಕಾನಂದ ನಗರ, ಮದ್ದೂರು.

ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ

ಕಹಾಮ ಸಂಕೀರ್ಣ, ಡಾ॥ ಎಂ.ಹೆಚ್.ಮರಿಗೌಡ ರಸ್ತೆ, ಬೆಂಗಳೂರು-560029.
ಫೋನ್: 26096832/26096910 ಫ್ಯಾಕ್ಸ್: 080-25536105 ಇಮೇಲ್: purchase@kmf.coop

ಸಂ. ಕಹಾಮ/ಖರೀದಿ/ಟೆಂಡರ್-887/2025-26 ದಿನಾಂಕ: 16.03.2026

ಟೆಂಡರ್ ಪ್ರಕಟಣೆ

(ಕೆಪಿಪಿ ಪೋರ್ಟಲ್ ಮುಖಾಂತರ)

ಕರ್ನಾಟಕ ಸಹಕಾರ ಹಾಲು ಮಹಾಮಂಡಳ, ಬೆಂಗಳೂರು ಈ ಕೆಳಗೆ ತಿಳಿಸಿದ ಸಾಮಗ್ರಿಯ ಸರಬರಾಜಿಗಾಗಿ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

Sl. No.	Item Description	Qty (No/kg)	EMD (Rs.)
1	Supply of EVP Flex Boards to KMF Central Office and KMF Milk Unions.	6259 No	42,000/-
2	Supply of Formaldehyde to KMF Cattle Feed Plant Hassan for a Period of Three months.	25000 Kg	18,000/-

ಇ-ಪ್ರೊಕ್ಯೂರ್‌ಮೆಂಟ್ **https://kppp.karnataka.gov.in** ಮೂಲಕ ಟೆಂಡರ್ ಅನ್ನು **ದಿನಾಂಕ: 30.03.2026 ರಂದು 05.00 ಗಂಟೆಯ** ಒಳಗೆ ಸಲ್ಲಿಸಬಹುದಾಗಿದೆ.

ಇಎಂಡಿ ಹಾಗೂ ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/- ನಿರ್ದೇಶಕರು (ಖರೀದಿ)

ಅಖಿಲ ಭಾರತೀಯ ವೇದ ಸಮ್ಮೇಳನ: ವಿಶ್ವಪ್ರಸನ್ನತೀರ್ಥ ಶ್ರೀಪಾದರು

ವೇದಾಧ್ಯಯನ ಕೇವಲ ಓದುವುದಲ್ಲ

• **ಬೆಂಗಳೂರು:** ವೇದಾಧ್ಯಯನ ಎನ್ನುವುದು ಕೇವಲ ಓದುವುದಲ್ಲ, ಅದು ಜೀವನದ ತಪಸ್ಸು. ಸ್ವಶಾಖೆಯ ಅಧ್ಯಯನದಲ್ಲಿ ತೊಡಗಿಸಿಕೊಳ್ಳುವುದೇ ನಿಜವಾದ ತಪೋಮಾರ್ಗ ಎಂದು ಉಡುಪಿ ಪೇಜಾವರ ಮಠದ ಪೀಠಾಧಿಪತಿಗಳಾದ ವಿಶ್ವಪ್ರಸನ್ನತೀರ್ಥ ಶ್ರೀಪಾದರು ಹೇಳಿದರು.

ಪೂರ್ಣಪ್ರಜ್ಞ ವಿದ್ಯಾಪೀಠದ ಆವರಣದಲ್ಲಿ ಪೂರ್ಣಪ್ರಜ್ಞ ಸಂಶೋಧನ ಮಂದಿರ, ಉಜ್ಜಯಿನಿಯ ಮಹರ್ಷಿ ಸಾಂದೀಪನಿ ರಾಷ್ಟ್ರೀಯ ವೇದವಿದ್ಯಾ ಪ್ರತಿಷ್ಠಾನ, ಕರ್ನಾಟಕ ಸಂಸ್ಕೃತ ವಿಶ್ವ ವಿದ್ಯಾಲಯ ಹಾಗೂ ಪೂರ್ಣಪ್ರಜ್ಞ ವೇದ ಪಾಠಶಾಲೆಯ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿರುವ ಅಖಿಲ ಭಾರತೀಯ ವೇದ ಸಮ್ಮೇಳನದಲ್ಲಿ ಮಾತನಾಡಿದ ಅವರು, ಹಿಂದಿನ ಕಾಲದಲ್ಲಿ ತಪಸ್ಸಿಗಾಗಿ ಜನರು ಅರಣ್ಯಕ್ಕೆ ತೆರಳುತ್ತಿದ್ದರು. ಇಂದಿನ ಧಾವಂತದ ಬದುಕಿನಲ್ಲಿ ಅದು ಅಸಾಧ್ಯವಾದರೂ, ತಪಸ್ಸನ್ನು ಕೈಬಿಡಬೇಕಿಲ್ಲ. ಸ್ವಾಧ್ಯಾಯ ಪ್ರವಚನವೇ ತಪಸ್ಸು ಅಂದರೆ ವೇದ ವಿದ್ವಾಂಸರು ತಮ್ಮ ಶಾಖೆಯ ವೇದವನ್ನು ಅಧ್ಯಯನ ಮಾಡುವುದೇ ಪರಮೋಚ್ಚ ತಪಸ್ಸಾಗಿದೆ ಎಂದು ನುಡಿದರು. ನಿವೃತ್ತ ಕುಲಪತಿ ಪ್ರೊ. ರಾಮಚಂದ್ರ ಭಟ್ ಕೋಟೆಮನೆ ಮಾತನಾಡಿ, ವೇದ ಕೇವಲ ಧಾರ್ಮಿಕ ಗ್ರಂಥಗಳಲ್ಲ, ಜೀವನದ ಕೈಗನ್ನಡಿ. ವೇದ ಅನೇಕ ರೋಗ ಉಪಶಮನ ಮಾಡಿಕೊಳ್ಳಲು ಸಾಧ್ಯವಿದೆಂದರು. ಮಹರ್ಷಿ ಸಾಂದೀಪನಿ ರಾಷ್ಟ್ರೀಯ ವೇದವಿದ್ಯಾ ಪ್ರತಿಷ್ಠಾನದ ಸದಸ್ಯ ಕಾರ್ಯದರ್ಶಿ ಪ್ರೊ. ವಿರೂಪಾಕ್ಷ ವಿ. ಜಡ್ಡಿಪಾಲ್ ಮಾತನಾಡಿ, ವೇದ ರಕ್ಷೆಯೇ ರಾಷ್ಟ್ರದ ರಕ್ಷೆ. ಇಂತಹ ಸಮ್ಮೇಳನಗಳಿಂದ ವೇದ ವಿದ್ಯಾರ್ಥಿಗಳ ಸಂಖ್ಯೆ ವೃದ್ಧಿಸಲು ಸಾಧ್ಯ ಎಂದರು. ಪೂರ್ಣಪ್ರಜ್ಞ ಸಂಶೋಧನ ಮಂದಿರದ ನಿರ್ದೇಶಕ ಡಾ. ಎನ್.ವೀರನಾರಾಯಣಾಚಾರ್ಯ ಪಾಂಡುರಂಗಿ, ರಾಷ್ಟ್ರೀಯ ಸಂಶೋಧನಾ ಸಂಸ್ಥೆ ಮೇಲುಕೋಟೆಯ ಕುಲಸಚಿವ ಎಸ್. ಕುಮಾರ್, ಡಾ. ಮಹಾಬಲೇಶ್ವರ ಭಟ್ ಇತರರಿದ್ದರು.



ವೇದಮಯವಾದ ವಿದ್ಯಾಪೀಠ
ವಿದ್ಯಾಪೀಠದ ಆವರಣದ ನಾನಾ ಶಾಖೆಯ ವೇದ ವಿದ್ವಾಂಸರು ಏಕಕಾಲಕ್ಕೆ ಪಾರಾಯಣ ನಡೆಸಿದರು. ಬ್ರಹ್ಮದೇವನ ನಾಲ್ಕು ಮುಖದಿಂದ ವೇದಗಳು ಹೊರಹೊಮ್ಮುವಂತೆ, ವಿದ್ಯಾಪೀಠದ ಸನ್ನಿಧಿಯಲ್ಲಿ ಮೊಳಗಿದ ವೇದಘೋಷ ನೆರೆದಿದ್ದ ಭಕ್ತಾದಿಗಳಿಗೆ ಮತ್ತು ಶಿಷ್ಯವೃಂದಕ್ಕೆ ಜ್ಞಾನದ ರಸದೌತಣ ನೀಡಿತು.

ರಂಜಾನ್ ಹಿನ್ನೆಲೆಯಲ್ಲಿ ಗೋಹತ್ಯೆ ತಡೆಗೆ ಆಗ್ರಹ

• **ಬೆಂಗಳೂರು:** ರಂಜಾನ್ ಹಬ್ಬದ ಸಂದರ್ಭದಲ್ಲಿ ಅಕ್ರಮ ಗೋಸಾಗಾಟ ಮತ್ತು ಗೋಹತ್ಯೆ ನಡೆಯದಂತೆ ತಡೆಯಲು ಕಾನೂನುಬದ್ಧ ಹಾಗೂ ಮುಂಜಾಗ್ರತಾ ಕ್ರಮ ತೆಗೆದುಕೊಳ್ಳುವಂತೆ ಆಗ್ರಹಿಸಿ ಜಿಲ್ಲಾಧಿಕಾರಿಗಳ ಮೂಲಕ ರಾಜ್ಯ ಗೃಹ ಸಚಿವರಿಗೆ ಹಿಂದೂ ರಾಷ್ಟ್ರ ಸಮನ್ವಯ ಸಮಿತಿಯಿಂದ ಮನವಿ ಮಾಡಿದೆ.



ಹಿಂದು ಧರ್ಮದ ಪರಂಪರೆ ಪ್ರಕಾರ ಹಸುವನ್ನು ಗೋಮಾತೆ ಎಂದು ಪೂಜಿಸಲಾಗುತ್ತದೆ. ಗೋವು ಧಾರ್ಮಿಕವಾಗಿ ದೇವತೆ ಸ್ವರೂಪವೆಂದು ಗೌರವಿಸಲಾಗುತ್ತದೆ. ಭಗವಾನ್ ಶ್ರೀಕೃಷ್ಣನು ಸಹ ಗೋಮಾತೆಯ ರಕ್ಷಣೆಗೆ ಹಾಗೂ ಪಾಲನೆಗೆ ಮಹತ್ವ ನೀಡಿದ್ದಾನೆ. ಇದರ ಜೊತೆಗೆ ಗೋವುಗಳು ಕೃಷಿ ಹಾಗೂ ಗ್ರಾಮೀಣ ಆರ್ಥಿಕ ವ್ಯವಸ್ಥೆಯ ಪ್ರಮುಖ ಆಧಾರವಾಗಿವೆ. ಆದರೆ, ಕೆಲವು ಸಂದರ್ಭಗಳಲ್ಲಿ, ವಿಶೇಷವಾಗಿ ರಂಜಾನ್ ಹಬ್ಬಗಳ ಸಮಯದಲ್ಲಿ, ರಾಜ್ಯದ ವಿವಿಧ ಭಾಗಗಳಲ್ಲಿ ಅಕ್ರಮವಾಗಿ ಗೋಸಾಗಾಟ ಮತ್ತು ಗೋಹತ್ಯೆ ನಡೆಯುತ್ತಿರುವುದಾಗಿ ವರದಿಗಳು ಹಾಗೂ ಸುದ್ದಿಗಳ ಮೂಲಕ ತಿಳಿದುಬರುತ್ತಿದೆ. ಕೆಲವು ಸ್ಥಳಗಳಲ್ಲಿ ರಸ್ತೆ ಬದಿಗಳಲ್ಲಿ ಅಥವಾ ಸಾರ್ವಜನಿಕ ಸ್ಥಳಗಳಲ್ಲಿ ಪ್ರಾಣಿಗಳ ವಧೆ ನಡೆಯುವುದು ಕಂಡುಬಂದಿದೆ.

ಪ್ರಶಸ್ತಿ ಪ್ರದಾನ



ಹಂಸಜ್ಯೋತಿ ಟ್ರಸ್ಟ್ ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಿದ್ದ ಹಂಸ ಸಾಂಸ್ಕೃತಿಕ ಸಂಭ್ರಮ ಹಾಗೂ ಹಂಸ ಸಮ್ಮಾನ್ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ನಿವೃತ್ತ ಲೋಕಾಯುಕ್ತ ನ್ಯಾ.ಸಂತೋಷ್ ಹೆಗ್ಡೆ, ಉಪ ಲೋಕಾಯುಕ್ತ ನ್ಯಾ.ಬಿ.ವೀರಪ್ಪ ಸೇರಿದಂತೆ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ 15 ಸಾಧಕರಿಗೆ ಹಂಸ ಸಮ್ಮಾನ್-2026 ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕಿರುಸುದ್ದಿ

ಮೇನಲ್ಲಿ ಗುಲಾಬಿ ಮೆಟ್ರೊ ಸಂಚಾರ

• **ಬೆಂಗಳೂರು:** ನಮ್ಮ ಮೆಟ್ರೊದ ಗುಲಾಬಿ ಬಣ್ಣದ ರೈಲು ಮಾರ್ಗಕ್ಕೆ ನಾಲ್ಕನೇ ರೈಲು ಬಿಎಂಆರ್‌ಸಿಎಲ್ ಕೊತ್ತನೂರು ಡಿಪೋಗೆ ಬಂದಿದೆ. ಮೇ ತಿಂಗಳಲ್ಲಿ ಸಂಚಾರ ಆರಂಭವಾಗಲಿದೆ. ಕಾಳೇನ ಅಗ್ರಹಾರದಿಂದ ನಾಗವಾರ ಸಂಪರ್ಕ ಕಲ್ಪಿಸುವ ನಮ್ಮ ಮೆಟ್ರೊ ಗುಲಾಬಿ ಬಣ್ಣದ ಮಾರ್ಗಕ್ಕೆ ಆರು ಕೋಚ್‌ಗಳಿರುವ ನಾಲ್ಕನೇ ರೈಲು ಸೆಟ್ ಬಿಇಎಂಎಲ್ ಸಂಸ್ಥೆಯ ನ್ಯೂ ತಿಪ್ಪಸಂದ್ರ ಘಟಕದಿಂದ ಬನ್ನೇರುಘಟ್ಟ ರಸ್ತೆಯಲ್ಲಿರುವ ಕೊತ್ತನೂರು ಡಿಪೋಗೆ ತರಲಾಗಿದೆ ಎಂದು ಮೆಟ್ರೊ ಅಧಿಕಾರಿಗಳು ತಿಳಿಸಿದ್ದಾರೆ.



ಈ ರೈಲನ್ನು ಪ್ರಸ್ತುತ ಕೊತ್ತನೂರು ಡಿಪೋದಲ್ಲಿನ ಇನ್ಸ್‌ಪೆಕ್ಷನ್ ಬೇ ಲೈನ್‌ಗೆ ಸ್ಥಳಾಂತರಿಸಿ ಅಗತ್ಯ ತಾಂತ್ರಿಕ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ. ಎಲ್ಲಾ ಪರೀಕ್ಷೆಗಳು ಮತ್ತು ನಿಯಮಾನುಸಾರ ಅನುಮತಿ ಪ್ರಕ್ರಿಯೆಗಳು ಪೂರ್ಣಗೊಂಡ ಬಳಿಕ ರೈಲು ಸೇವೆಗೆ ಸಿದ್ಧವಾಗಲಿದೆ.

ಗುಲಾಬಿ ಬಣ್ಣದ ಮಾರ್ಗಕ್ಕೆ ಮೊದಲ ರೈಲು ಬಿಇಎಂಎಲ್ ಸಂಸ್ಥೆ ಡಿಸೆಂಬರ್ ಬಿಡುಗಡೆ ಮಾಡಿತ್ತು. ಬಳಿಕ ಫೆಬ್ರವರಿಯಲ್ಲಿ ಇನ್ನೂ ಎರಡು ರೈಲುಗಳನ್ನು ಬಿಎಂಆರ್‌ಸಿಎಲ್‌ಗೆ ಹಸ್ತಾಂತರಿಸಿತ್ತು. ಈಗ ನಾಲ್ಕನೇ ರೈಲು ಕೂಡ ಬಂದಿರುವುದರಿಂದ ಗುಲಾಬಿ ಬಣ್ಣದ ರೈಲು ಸೇವೆ ಆರಂಭದ ಸಿದ್ಧತೆಗಳು ವೇಗ ಪಡೆದುಕೊಂಡಿವೆ. ಸುಮಾರು 7.5 ಕಿ.ಮೀ. ಉದ್ದದ ಮಾರ್ಗದಲ್ಲಿ ಮೇ ತಿಂಗಳಲ್ಲಿ ರೈಲು ಸಂಚಾರ ಆರಂಭಿಸಲು ಬಿಎಂಆರ್‌ಸಿಎಲ್ ಉದ್ದೇಶಿಸಿದೆ.

ಮಾ.29ರಂದು ಒಕ್ಕಲಿಗ ಸಂಘದ ಸರ್ವಸದಸ್ಯರ ಸಭೆ

• **ಬೆಂಗಳೂರು:** ಅಡುಗೆ ಅನಿಲದ ಪೂರೈಕೆಯಲ್ಲಿ ಅಭಾವ ಉಂಟಾಗಿರುವ ಹಿನ್ನೆಲೆಯಲ್ಲಿ ಮಾ.29ರಂದು ಅರಮನೆ ಮೈದಾನದ ಗಾಯಿತ್ರಿ ವಿಹಾರದಲ್ಲಿ ರಾಜ್ಯ ಒಕ್ಕಲಿಗರ ಸಂಘದ ಸರ್ವಸದಸ್ಯರ ಸಭೆ ನಡೆಸಲು ತೀರ್ಮಾನಿಸಿ ಎಲ್ಲಾ ರೀತಿಯ ಸಿದ್ಧತೆಯನ್ನು ಮಾಡಿಕೊಳ್ಳಲಾಗಿತ್ತು. ಆದರೆ, ಅನಿವಾರ್ಯ ಕಾರಣಗಳಿಂದ ಸರ್ವ ಸದಸ್ಯರ ಸಭೆಯನ್ನು ಮುಂದೂಡಲಾಗಿದೆ ಎಂದು ಸಂಘದ ಅಧ್ಯಕ್ಷ ಎಲ್. ಶ್ರೀನಿವಾಸ್ ತಿಳಿಸಿದ್ದಾರೆ. ಸರ್ವ ಸದಸ್ಯರ ಸಭೆಯ ದಿನದಂದು ಉಪಹಾರ, ಊಟ ಒದಗಿಸಲು ಗುತ್ತಿಗೆ ಪಡೆದಿದ್ದ ಅಡುಗೆಯವರು ಸಹ ಅಡುಗೆ ಅನಿಲದ ಅಭಾವ ಉಂಟಾಗಿರುವುದನ್ನು ಸಂಘದ ಗಮನಕ್ಕೆ ತಂದಿದ್ದಾರೆ. ಸರ್ವ ಸದಸ್ಯರ ಸಭೆಗೆ ಸಂಘದ ಸಾವಿರಾರು ಸದಸ್ಯರು ಆಗಮಿಸುವ ನಿರೀಕ್ಷೆಯಿದ್ದು, ಊಟೋಪಚಾರದಲ್ಲಿ ಅಡಚಣೆ ಆಗಬಾರದು ಎಂಬ ಕಾರಣದಿಂದ ಮುನ್ನೆಚ್ಚರಿಕೆ ಕ್ರಮವಾಗಿ ಸರ್ವ ಸದಸ್ಯರ ಸಭೆಯನ್ನು ತಾತ್ಕಾಲಿಕವಾಗಿ ಮುಂದೂಡಲಾಗಿದೆ ಎಂದು ಹೇಳಿದ್ದಾರೆ. ಮುಂದಿನ ಸರ್ವ ಸದಸ್ಯರ ಸಭೆಯ ದಿನಾಂಕ ಮತ್ತು ಸ್ಥಳವನ್ನು ಶೀಘ್ರವಾಗಿ ಪ್ರಕಟಿಸಲಾಗುವುದು ಎಂದು ತಿಳಿಸಿದ್ದಾರೆ.

ಮದ್ಯಪಾನ ಮಾಡಿ ವಾಹನ ಚಾಲನೆ: 730 ಪ್ರಕರಣ ದಾಖಲು

• **ಬೆಂಗಳೂರು:** ನಗರದಲ್ಲಿ ರಸ್ತೆ ಸುರಕ್ಷತೆಯನ್ನು ಕಾಪಾಡುವ ನಿಟ್ಟಿನಲ್ಲಿ ಮತ್ತು ಮದ್ಯಪಾನ ಮಾಡಿ ವಾಹನ ಚಲಾಯಿಸುವವರ ಹಾವಳಿಯನ್ನು ತಡೆಗಟ್ಟಲು ಸಂಚಾರ ಪೊಲೀಸರು ಮಾ.9 ರಿಂದ ಮಾ.15ರ ವರೆಗೆ 53 ಸಂಚಾರ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ವಿಶೇಷ ಕಾರ್ಯಾಚರಣೆ ನಡೆಸಿದ್ದಾರೆ. ಒಟ್ಟು 50,760 ವಿವಿಧ ಮಾದರಿ ವಾಹನ ತಪಾಸಣೆ ನಡೆಸಿದ್ದಾರೆ. 730ಚಾಲಕರು ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ವಾರ್ಡ್ ಅದಲು-ಬದಲಿನ ಹಿಂದೆ ಅನುಮಾನ | ಅಧಿಕಾರಿಗಳ ನಿಲುವಿಗೆ ಸಾರ್ವಜನಿಕರಿಂದಲೂ ಆಕ್ರೋಶ

ವಿವಾದದ ಸುಳಿಯಲ್ಲಿ ಜಿಬಿಎ ಮತಪಟ್ಟಿ

▸ ಮಹೇಶ್ ಹೆಗಡೆ

ದಿಗಂತ ವಿಶೇಷ

• **ಬೆಂಗಳೂರು:** ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ)ದ ಐದು ಪಾಲಿಕೆಗಳ ಚುನಾವಣೆಗೆ ಸಂಬಂ ಧಿಸಿದಂತೆ ಜಿಬಿಎ ಕರಡು ಮತಪಟ್ಟಿ ವಿವಾದಕ್ಕೆ ನಾಂದಿ ಹಾಡಿದೆ. ತಾಂತ್ರಿಕ ಅಡೆತಡೆಗಳು ಮತ್ತು ವಾರ್ಡ್‌ಗಳ ಅದಲು-ಬದಲಿನ ಹಿಂದೆ ಅನೇಕ ಅನುಮಾನವನ್ನು ಸಾರ್ವಜನಿಕರು ವ್ಯಕ್ತಪಡಿಸುತ್ತಿದ್ದಾರೆ.

ರಾಜ್ಯ ಚುನಾವಣೆ ಆಯೋಗದ ನಿರ್ದೇಶನದಂತೆ, 2025-ಅಕ್ಟೋಬರ್ 1 ಕ್ಕೆ ಅರ್ಹತಾ ದಿನಾಂಕ ಅನ್ವಯವಾಗುವಂತೆ ಜ.19 ರಂದು ಕರಡು ಮತದಾರರ ಪಟ್ಟಿಯನ್ನು ಜಿಬಿಎ ಬಿಡುಗಡೆಗೊಳಿಸಿತ್ತು. ಆದರೆ ಸಾರ್ವಜನಿಕರು ಮತ್ತು ರಾಜಕೀಯ ಪಕ್ಷಗಳಿಂದ ಸದರಿ ಮತಪಟ್ಟಿಯ ಬಗ್ಗೆ ನೂರಾರು ದೂರುಗಳು ಬಂದ ಹಿನ್ನೆಲೆಯಲ್ಲಿ, ಸರಿಪಡಿಸಿ ಮಾರ್ಚ್ 9 ರಂದು ಹೊಸ ಕರಡು ಮತಪಟ್ಟಿಯನ್ನು ಬಿಡುಗಡೆಗೊಳಿಸಿದೆ. ಆದರೆ ಈ ಮತ ಪಟ್ಟಿಯಲ್ಲೂ ಹಲವಾರು ದೋಷಗಳಿದ್ದು, ಮತದಾರರು ತಮ್ಮ ಹೆಸರನ್ನು ಹುಡಕಲು ಹರಸಾಹಸ ಪಡುತ್ತಿದ್ದೇವೆ ಎಂದು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಸರ್ಚ್ ಆಯ್ಕೆಗೆ ಕತ್ತರಿ: ಜಿಬಿಎಯ ವೋಟರ್ ಸರ್ವಿಸ್ ಪೋರ್ಟಲ್ https://gba.karnataka.gov.in/electoral2026/ ವೆಬ್‌ಸೈಟ್‌ನಲ್ಲಿ ಹೆಸರು ಅಥವಾ ಎಪಿಕ್ ಸಂಖ್ಯೆ ಮೂಲಕ ಮತದಾರರ ವಿವರ ಹುಡುಕುವ ಆಯ್ಕೆಯನ್ನು ನಿಷ್ಕ್ರಿಯಗೊಳಿಸಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. ಕೇವಲ ಮತಗಟ್ಟೆವಾರು ಪಟ್ಟಿ ನೀಡಿರುವುದರಿಂದ, ಸಾವಿರಾರು ಹೆಸರುಗಳ ನಡುವೆ ತನ್ನ ಹೆಸರು ಹುಡುಕುವುದು ಸಾಮಾನ್ಯ ಜನರಿಗೆ ಅಸಾಧ್ಯವಾಗಿದೆ. ಆಕ್ಷೇಪಣೆ ಸಲ್ಲಿಸಲು ಅಲ್ಪ ಕಾಲಾವಕಾಶ ನೀಡಿ, ಹುಡುಕಾಟಕ್ಕೆ ತಾಂತ್ರಿಕ ಅಡೆತಡೆ ಒಡ್ಡಿರುವುದು ಮತದಾರರನ್ನು ಪ್ರಕ್ರಿಯೆಯಿಂದ ಹೊರಗಿಡುವ ತಂತ್ರದಂತೆ ಕಾಣುತ್ತಿದೆ ಹಲವರು ಆರೋಪಿಸಿದ್ದಾರೆ. ಹೆಸರು ಅಥವಾ ಎಪಿಕ್ ಸಂಖ್ಯೆ ಮೂಲಕ ಹುಡುಕುವ ಅವಕಾಶವಿದ್ದರೆ ಸುಲಭವಾಗಲಿದೆ. ಇಲ್ಲವಾದಲ್ಲಿ ಆಕ್ಷೇಪಣೆ ಸಲ್ಲಿಸಲು ಕಷ್ಟವಾಗಲಿದೆಂದು ಮತದಾರರು ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ.

ಎಐ ಫೋಟೋ



ವಾರ್ಡ್‌ಗಳ ವಿಭಾಗೀಕರಣದಲ್ಲಿ ಎಡವಟ್ಟು

ವಾರ್ಡ್‌ಗಳ ವಿಭಾಗೀಕರಣದಲ್ಲೂ ಎಡವಟ್ಟು ನಡೆದಿದ್ದು, ಒಂದೇ ಅಪಾರ್ಟ್‌ಮೆಂಟ್ ಅಥವಾ ಬೀದಿಯ ನಿವಾಸಿಗಳನ್ನು ಬೇರೆ ಬೇರೆ ವಾರ್ಡ್‌ಗಳಿಗೆ ಹಂಚಿಕೆ ಮಾಡಲಾಗಿದೆ. ಉದಾಹರಣೆಗೆ, ನಾಗನಾಥಪುರ ಮತ್ತು ಚಿಕ್ಕತೋಗೂರು ವಾರ್ಡ್‌ಗಳಲ್ಲಿ ನೂರಾರು ಮತದಾರರು ತಪ್ಪು ವಾರ್ಡ್‌ಗಳಿಗೆ ಸೇರ್ಪಡೆಯಾಗಿದ್ದಾರೆ. 2024ರ ಪರಿಷ್ಕೃತ ಪಟ್ಟಿಯ ಬದಲಿಗೆ 2023ರ ಹಳೆಯ ದತ್ತಾಂಶವನ್ನೇ ಆಧಾರವಾಗಿಟ್ಟುಕೊಂಡು ಈ ಕರಡು ಸಿದ್ಧಪಡಿಸಿರುವ ಸಾಧ್ಯತೆ ದಟ್ಟವಾಗಿದೆ ಎಂದು ಹಲವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಮತದಾರರಿಗೆ ತಾವು ಯಾವ ವಾರ್ಡ್‌ಗೆ ಸೇರಿದ್ದೇವೆ ಎಂಬುದನ್ನೇ ಪತ್ತೆಹಚ್ಚಲು ಸಾಧ್ಯವಾಗದಿದ್ದಾಗ, ಚುನಾವಣಾ ಪ್ರಕ್ರಿಯೆಯ ವಿಶ್ವಾಸಾರ್ಹತೆಯ ಬಗ್ಗೆ ಮೂಲಭೂತ ಪ್ರಶ್ನೆಗಳನ್ನು ಎತ್ತುತ್ತದೆ.

ವಿರೋಧದ ನಂತರ ಅವಧಿ ವಿಸ್ತರಣೆ

ಮತ್ತ ಪಟ್ಟಿಯಲ್ಲಿನ ನೂರಾರು ದೋಷ ಹಾಗೂ ತಾಂತ್ರಿಕ ಅಡಚಣೆಯಿಂದ ಆಕ್ಷೇಪಣೆ ಸಲ್ಲಿಸಲು ಆಗುತ್ತಿಲ್ಲ ಎಂಬ ಸಾರ್ವಜನಿಕರ ವಿರೋಧದ ಹಿನ್ನೆಲೆಯಲ್ಲಿ ಸಲಹೆ ಮತ್ತು ಆಕ್ಷೇಪಣೆ ಸಲ್ಲಿಸಲು ಇದ್ದ ಮಾ.16 ಅಂತಿಮ ದಿನವನ್ನು ವಿಸ್ತರಣೆ ಮಾಡಿರುವ ಜಿಬಿಎ ಈಗ ಮಾರ್ಚ್ 20 ರ ವರೆಗೆ ಅವಕಾಶ ನೀಡಿದೆ. ಆದರೆ ಈ ಅವಧಿಯೂ ಸಾಕಾಗುವುದಿಲ್ಲ, ಇನ್ನೂ 15 ದಿನಗಳ ಕಾಲಾವಕಾಶ ನೀಡಬೇಕೆಂದು ಸಾರ್ವಜನಿಕರು ಆಗ್ರಹಿಸುತ್ತಿದ್ದಾರೆ.

> ಜಿಬಿಎ ಪೋರ್ಟಲ್‌ನಲ್ಲಿ ಹೆಸರಿನ ಮೂಲಕ ಅಥವಾ ಎಪಿಕ್ ಸಂಖ್ಯೆಯ ಮೂಲಕ ಪರಿಷ್ಕೃತ ಮತದಾರರ ಪಟ್ಟಿ ಪರಿಶೀಲಿಸಲು ಅವಕಾಶ ಒದಗಿಸದೆ ಇರುವುದು ವಿಪರ್ಯಾಸ. ಇದು ನಾಗರಿಕರ ಮತದಾನದ ಹಕ್ಕು ಕಸಿದುಕೊಳ್ಳುವ ವ್ಯವಸ್ಥಿತ ಸಂಚು ಅಲ್ಲವೇ?
> ■ ತೇಜಸ್ವಿ ಸೂರ್ಯ, ಸಂಸದ

> ಎಪಿಕ್ ಮೂಲಕ ಹುಡುಕಾಟ ಸೌಲಭ್ಯವನ್ನು ನಿಷ್ಕ್ರಿಯಗೊಳಿಸಿರುವುದರಿಂದ ಜನರು ತಮ್ಮ ಹೆಸರು ಪಟ್ಟಿಯಲ್ಲಿ ದೆಯೇ ಎಂದು ಪರಿಶೀಲಿಸಲು ಕಷ್ಟವಾಗುತ್ತಿದೆ. ಕೂಡಲೇ ಇದನ್ನು ಸರಿಪಡಿಸಬೇಕು.
> ■ ಭರತ್‌ಮುನಿಯಪ್ಪ, ಬೆಂಗಳೂರು ಕೇಂದ್ರ ಜಿಲ್ಲೆ ಬಿಜೆಪಿ ಕಾರ್ಯದರ್ಶಿ

> ಎಪಿಕ್ ಮೂಲಕ ಹುಡುಕಾಟ ಸೌಲಭ್ಯವನ್ನು ನಿಷ್ಕ್ರಿಯಗೊಳಿಸಿರುವುದು ಗಂಭೀರ ಸಮಸ್ಯೆ. ಕೂಡಲೇ ಇದನ್ನು ಸಕ್ರಿಯಗೊಳಿಸಬೇಕು. ಆಕ್ಷೇಪಣೆ ಸಲ್ಲಿಸಲು ಇರುವ ಗಡುವನ್ನು ಎರಡು ವಾರ ವಿಸ್ತರಿಸಬೇಕು.
> ■ ಶ್ರೀಕಾಂತ್ ನರಸಿಂಹನ್, ಬಿಎನ್‌ಪಿ ಸ್ಥಾಪಕ

ಅಕ್ಷಯಪಾತ್ರ ಫೌಂಡೇಷನ್ ಐತಿಹಾಸಿಕ ಸಾಧನೆ

500 ಕೋಟಿ ಪೌಷ್ಟಿಕ ಊಟ ವಿತರಣೆ

• **ಬೆಂಗಳೂರು:** ಶಾಲಾ ಮಕ್ಕಳ ಹಸಿವು ನೀಗಿಸುವಲ್ಲಿ ಜಾಗತಿಕ ಮಟ್ಟದ ಕ್ರಾಂತಿ ಮಾಡಿರುವ ಅಕ್ಷಯಪಾತ್ರ ಫೌಂಡೇಷನ್ ಭಾರತದಾದ್ಯಂತ ಇರುವ ಮಕ್ಕಳಿಗೆ ಒಟ್ಟು 500 ಕೋಟಿ ಪೌಷ್ಟಿಕ ಊಟ ವಿತರಣೆ ಮಾಡಿರುವ ಐತಿಹಾಸಿಕ ಸಾಧನೆ ಮಾಡಿದೆ. ಸಂಸ್ಥೆಯು 25 ವರ್ಷಗಳ ಸುದೀರ್ಘ ಕಾಲ ಈ ಸೇವೆ ಮಾಡಿದ್ದು, ಸಂಸ್ಥೆಯ ಈ ಸಾಧನೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮಂಗಳವಾರ ಹೊಸದಿಲಿಯಲ್ಲಿ ಗೌರವ ಸಲ್ಲಿಸಲಿದ್ದಾರೆ.

ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಪಿಎಂ ಪೋಷಣ್ ಯೋಜನೆಯಲ್ಲಿ ಈ ಸಾಧನೆ ಮಾಡಲಾಗಿದೆ. ಮಾ.17ರಂದು ರಾಷ್ಟ್ರಪತಿ ಭವನದ ಸಾಂಸ್ಕೃತಿಕ ಕೇಂದ್ರದಲ್ಲಿ ಅದ್ದೂರಿ ಕಾರ್ಯಕ್ರಮ ಆಯೋಜಿಸಲಾಗಿದೆ.

ವಿಕಸಿತ ಭಾರತಕ್ಕಾಗಿ ಪೌಷ್ಟಿಕ ಮತ್ತು ಸುಶಿಕ್ಷಿತ ಭಾರತ ಎಂಬ ಆಶಯದೊಂದಿಗೆ ನಡೆಯಲಿರುವ ಈ ಸಮಾರಂಭದಲ್ಲಿ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಅಕ್ಷಯಪಾತ್ರ ಫೌಂಡೇಶನ್ ಅಧ್ಯಕ್ಷ ಮಧು ಪಂಡಿತ ದಾಸ, ಉಪಾಧ್ಯಕ್ಷ ಚಂಚಲಪತಿ ದಾಸ ಉಪಸ್ಥಿತರಿರಲಿದ್ದಾರೆ.

2000ನೇ ಇಸವಿಯಲ್ಲಿ ಬೆಂಗಳೂರಿನಲ್ಲಿ ಅಲ್ಪ ಪ್ರಮಾಣದಲ್ಲಿ ಆರಂಭವಾದ ಅಕ್ಷಯ ಪಾತ್ರದ ಮಧ್ಯಾಹ್ನದ ಬಿಸಿಯೂಟ ಯೋಜನೆ ಇಂದು ಹೆಮ್ಮರವಾಗಿ ಬೆಳೆದಿದೆ. ಪ್ರಸ್ತುತ ದೇಶದ 16 ರಾಜ್ಯಗಳು ಹಾಗೂ ಮೂರು ಕೇಂದ್ರಾಡಳಿತ ಪ್ರದೇಶಗಳ ಸುಮಾರು 23.5 ಲಕ್ಷಕ್ಕೂ ಅಧಿಕ ಮಕ್ಕಳಿಗೆ ಪ್ರತಿ ದಿನ ಶುಚಿಯಾದ, ಪೌಷ್ಟಿಕ ಆಹಾರವನ್ನು ತಲುಪಿಸಲಾಗುತ್ತಿದೆ.

ಸಹಕಾರಿ ಕ್ಷೇತ್ರದ ಭೀಷ್ಮ ಕೆ.ಎಚ್.ಪಾಟೀಲ್

• **ಬೆಂಗಳೂರು:** ಸಹಕಾರ ಸಂಘದ ಭೀಷ್ಮರೆಂದು ಖ್ಯಾತರಾಗಿದ್ದ ಕೆ.ಎಚ್. ಪಾಟೀಲ್ ಅವರ ಕೊಡುಗೆ ಸಹಕಾರ ಕ್ಷೇತ್ರಕ್ಕೆ ಅನನ್ಯವಾಗಿದೆ. ಸಹಕಾರಿ ಚಳವಳಿಯನ್ನು ಬಲಪಡಿಸುವಲ್ಲಿ ಪ್ರಮುಖ ಪಾತ್ರವಹಿಸಿದವರೆಂದು ಎಂದು ಶ್ರೀ ತ್ಯಾಗರಾಜ ಕೋ-ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಎಂ.ಆರ್. ವೆಂಕಟೇಶ್ ಹೇಳಿದರು.



ಕೆ.ಎಚ್.ಪಾಟೀಲರ 101ನೇ ಜಯಂತ್ಯುತ್ಸವದ ಅಂಗವಾಗಿ ಬ್ಯಾಂಕ್‌ನಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿ, ಸಹಕಾರ ಕ್ಷೇತ್ರದಲ್ಲಿ ಅಹರ್ನಿಸಿ ದುಡಿಯುತ್ತಾ ರೈತಾಪಿ ವರ್ಗ ಸೇರಿದಂತೆ ಎಲ್ಲರ ಏಳಿಗೆಗಾಗಿ ಶ್ರಮಿಸಿದವರು ಎಂದು ತಿಳಿಸಿದರು. ಸಹಕಾರ ಕ್ಷೇತ್ರದಲ್ಲಿ ರಾಜ್ಯದ ಹೆಸರನ್ನು ರಾಷ್ಟ್ರ-ಅಂತಾರಾಷ್ಟ್ರೀಯ ಮಟ್ಟಕ್ಕೆ ಏರಿಸಿದವರು ಎಂದರು. ಅಲ್ಲದೇ ರಾಜಕೀಯ ರಂಗದಲ್ಲಿಯೂ ತಮ್ಮದೇ ಆದ ವಿಶಿಷ್ಟ ಛಾಪನ್ನು ಮೂಡಿಸಿದ್ದರು ಎಂದು ವೆಂಕಟೇಶ್ ಹೇಳಿದರು. ಜಯಂತ್ಯುತ್ಸವದ ಅಂಗವಾಗಿ ಬಿಬಿಎಂಪಿ ಸರ್ಕಾರಿ ಆಸ್ಪತ್ರೆಯ ಬಾಣಂತಿಯರಿಗೆ ಹಣ್ಣು ವಿತರಿಸಲಾಯಿತು.

ಪ್ರತ್ಯೇಕ ಅಪಘಾತ: ಇಬ್ಬರ ಸಾವು

• **ಬೆಂಗಳೂರು:** ಎರಡು ಪ್ರತ್ಯೇಕ ರಸ್ತೆ ಅಪಘಾತಗಳಲ್ಲಿ ಯುವಕ ಹಾಗೂ ಯುವತಿಯೊಬ್ಬರು ಮೃತಪಟ್ಟ ಘಟನೆ ಮಲ್ಲೇಶ್ವರ ಹಾಗೂ ಎಲೆಕ್ಟ್ರಾನಿಕ್ ಸಿಟಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ನಡೆದಿದೆ.

ಮಲ್ಲೇಶ್ವರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ವೆಸ್ಟ್ ಆಫ್ ಕಾರ್ಡ್ ರಸ್ತೆಯ ಇಸ್ಕಾನ್ ದೇವಾಲಯದ ಮುಂಭಾಗ ಅತಿವೇಗವಾಗಿ ಬಂದ ಬೈಕ್ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದಿದೆ. ಕುರುಬರಹಳ್ಳಿಯ ಕಮಲಾನಗರ ನಿವಾಸಿ ಚೇತನ್ (24) ಮೃತಪಟ್ಟ ದುರ್ದೈವಿ. ಭಾನುವಾರ ರಾತ್ರಿ 11.30ರ ಸುಮಾರಿನಲ್ಲಿ ಸ್ನೇಹಿತರನ್ನು ಭೇಟಿ ಮಾಡಿ ಮನೆಗೆ ಮರಳುತ್ತಿದ್ದಾಗ ಈ ಅಪಘಾತ ಸಂಭವಿಸಿದೆ. ಬೈಕ್ ನಿಯಂತ್ರಣ ತಪ್ಪಿ ಡಿಕ್ಕಿ ಹೊಡೆದ ರಭಸಕ್ಕೆ ಚೇತನ್ ಗಂಭೀರವಾಗಿ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಪೊಲೀಸರ ತಿಳಿಸಿದ್ದಾರೆ.

ಎಲೆಕ್ಟ್ರಾನಿಕ್ ಸಿಟಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಹೊಸ ರೋಡ್‌ನ ಚೂಡಸಂದ್ರ ಸಮೀಪ ಸ್ಕೂಟರ್‌ನಿಂದ ಬಿದ್ದು ಜಾರ್ಖಂಡ್ ಮೂಲದ ಯುವತಿಯೊಬ್ಬರು ಪ್ರಾಣ ಕಳೆದುಕೊಂಡಿದ್ದಾರೆ. ಖಾಸಗಿ ಕಂಪನಿಯ ನೌಕರರಾಗಿದ್ದ ವೃಣಾಲ್ (25) ಮೃತಪಟ್ಟವರು. ಭಾನುವಾರ ಮಧ್ಯಾಹ್ನ 12.30ರ ಸುಮಾರಿನಲ್ಲಿ ಇವರು ತಮ್ಮ ಸ್ನೇಹಿತನ ಜತೆ ಸ್ಕೂಟರ್‌ನಲ್ಲಿ ತೆರಳುತ್ತಿದ್ದಾಗ ವಾಹನ ನಿಯಂತ್ರಣ ತಪ್ಪಿ ಉರುಳಿ ಬಿದ್ದಿದೆ. ಈ ವೇಳೆ ತಲೆಗೆ ತೀವ್ರ ಪೆಟ್ಟು ಬಿದ್ದಿದ್ದರಿಂದ ವೃಣಾಲ್ ಮೃತಪಟ್ಟಿದ್ದು, ಅವರ ಸ್ನೇಹಿತ ಸಣ್ಣಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಈ ಎರಡೂ ಪ್ರಕರಣಗಳಿಗೆ ಸಂಬಂಧಿಸಿದಂತೆ ಆಯಾ ವ್ಯಾಪ್ತಿಯ ಸಂಚಾರ ಪೊಲೀಸ್ ಠಾಣೆಗಳಲ್ಲಿ ಪ್ರಕರಣ ದಾಖಲಾಗಿದ್ದು, ಮೃತದೇಹಗಳನ್ನು ಮರಣೋತ್ತರ ಪರೀಕ್ಷೆ ನಡೆಸಿ ಕುಟುಂಬಸ್ಥರಿಗೆ ರವಾನಿಸಲಾಗಿದೆ ಪೊಲೀಸರು ತಿಳಿಸಿದ್ದಾರೆ.

ಯುವತಿ ಜತೆ ಮಾತನಾಡುತ್ತಿದ್ದವನಿಗೆ ಬೆದರಿಕೆ: ಪೊಲೀಸರಿಂದ ಇಬ್ಬರ ಬಂಧನ

• **ಬೆಂಗಳೂರು:** ಯುವತಿಯೊಂದಿಗೆ ಮಾತನಾಡುತ್ತಿದ್ದ ಯುವಕನನ್ನು ಅಡ್ಡಗಟ್ಟಿ, ಆಟೋದಲ್ಲಿ ಅಪಹರಿಸಿ ಬೆದರಿಕೆ ಹಾಕಿದ್ದ ಐವರ ತಂಡದ ಪೈಕಿ ಇಬ್ಬರು ಆರೋಪಿಗಳನ್ನು ಮಹದೇವಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಟಿ.ಸಿ. ಪಾಳ್ಯ ನಿವಾಸಿಗಳಾದ ಸಾಜಿದ್ (23) ಸುಬ್ರಮಣಿ (19) ಬಂಧಿತ ಆರೋಪಿಗಳು. ಸಾಜಿದ್ ಖಾಸಗಿ ಡೆಲಿವರಿ ಸಂಸ್ಥೆಯೊಂದರಲ್ಲಿ ಕೆಲಸ ಮಾಡುತ್ತಿದ್ದ. ಸುಬ್ರಮಣಿ ಬೇಕರಿ ನೌಕರನಾಗಿದ್ದಾನೆ. ತಲೆಮರೆಸಿಕೊಂಡಿರುವ ಆಟೋ ಚಾಲಕ ಹಾಗೂ ಇನ್ನು ಇಬ್ಬರ ಆರೋಪಿಗಳಿಗಾಗಿ ಪೊಲೀಸರು ಶೋಧ ನಡೆಸುತ್ತಿದ್ದಾರೆ.

ಮಾ.15ರ ರಂದು ಮಧ್ಯಾಹ್ನ ಕೆ.ಆರ್. ಪುರದ ಟಿ.ಸಿ.ಪಾಳ್ಯದಲ್ಲಿ ಸಮೀರ್ ಎಂಬ ಯುವಕನು ಯುವತಿಯೊಬ್ಬಳ ಜತೆ ಮಾತನಾಡುತ್ತಾ ಕುಳಿತಿದ್ದನು. ಇದನ್ನು ಗಮನಿಸಿದ ಸಾಜಿದ್ ತನ್ನ ಮೊಬೈಲ್‌ನಲ್ಲಿ ವಿಡಿಯೋ ಮಾಡಿಕೊಂಡಿದ್ದನು.

ಇದೇ ವಿಚಾರಕ್ಕೆ ಸಂಬಂಧಿಸಿದಂತೆ ಅಂದು ರಾತ್ರಿ 11.45ರ ಸುಮಾರಿಗೆ ಲಕ್ಷ್ಮೀ ಸಾಗರ್ ಲೇಔಟ್‌ನಲ್ಲಿ ಸಮೀರ್ ತನ್ನ ಸ್ನೇಹಿತನೊಂದಿಗೆ ಹೋಗುತ್ತಿದ್ದಾಗ, ಆಟೋದಲ್ಲಿ ಬಂದ ಐವರು ಆರೋಪಿಗಳ ತಂಡ ಆತನನ್ನು ಅಪಹರಿಸಿದ್ದರು.

ಅಪಹರಿಸಿದ ಯುವಕನನ್ನು ರಾಮಮೂರ್ತಿ ನಗರದ ನಿರ್ಜನ ಪ್ರದೇಶಕ್ಕೆ ಕರೆದೊಯ್ದ ಆರೋಪಿಗಳು, ಆತನಿಗೆ ದೈಹಿಕವಾಗಿ ಹಲ್ಲೆ ನಡೆಸಿ, ಬಳಿಕ ಅಲ್ಲಿಯೇ ಬಿಟ್ಟು ಪರಾರಿಯಾಗಿದ್ದಾರೆ. ಈ ಕುರಿತು ಸಂತ್ರಸ್ತ ಸಮೀರ್ ಮಹದೇವಪುರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದ. ತಕ್ಷಣ ಕಾರ್ಯಪ್ರವೃತ್ತರಾದ ಪೊಲೀಸರು ಇಬ್ಬರು ಆರೋಪಿಗಳನ್ನು ಸೆರೆಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ. ಪ್ರಕರಣದ ಹೆಚ್ಚಿನ ತನಿಖೆ ಮುಂದುವರಿದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪತ್ನಿಯ ಕತ್ತು ಕೊಯ್ದು ಕೊಲೆ: ಪತಿ ಪರಾರಿ

• **ಬೆಂಗಳೂರು:** ಕ್ಷುಲ್ಲಕ ಕಾರಣಕ್ಕಾಗಿ ದಂಪತಿಗಳ ನಡುವೆ ನಡೆದ ಜಗಳ ವಿಕೋಪಕ್ಕೆ ಹೋಗಿ, ಪತಿಯೇ ಪತ್ನಿಯ ಕತ್ತು ಕೊಯ್ದು ಭೀಕರವಾಗಿ ಕೊಲೆ ಮಾಡಿರುವ ಘಟನೆ ಮೈಕೋ ಲೇಔಟ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಬಿಳೇಕಹಳ್ಳಿ ನಿವಾಸಿ ರಂಗಮ್ಮ (47) ಕೊಲೆಯಾದ ದುರ್ದೈವಿ. ಸೆಕ್ಯೂರಿಟಿ ಗಾರ್ಡ್ ಆಗಿ ಕೆಲಸ ಮಾಡುತ್ತಿರುವ ನಾಗರಾಜ ಹಾಗೂ ಮೃತ ರಂಗಮ್ಮ ದಂಪತಿಗಳ ನಡುವೆ ಕೌಟುಂಬಿಕ ವಿಚಾರವಾಗಿ ಆಗಾಗ ಜಗಳ ನಡೆಯುತ್ತಿತ್ತು ಎನ್ನಲಾಗಿದೆ. ರಂಗಮ್ಮ ಅವರು ಮನೆಗೆಲಸ ಮಾಡಿಕೊಂಡಿದ್ದರು. ಭಾನುವಾರ ರಾತ್ರಿ ಮಗ ಕೆಲಸಕ್ಕೆ ಹೋಗಿದ್ದ ಸಮಯದಲ್ಲಿ ದಂಪತಿಗಳ ನಡುವೆ ಮತ್ತೆ ಜಗಳ ಆರಂಭವಾಗಿದೆ. ಸುಮಾರು 10 ಗಂಟೆಯ ಹೊತ್ತಿಗೆ ಮಾತಿಗೆ ಮಾತು ಬೆಳೆದು ಗಲಾಟೆ ವಿಕೋಪಕ್ಕೆ ಹೋದಾಗ, ಆಕ್ರೋಶಗೊಂಡ ನಾಗರಾಜ ಅಡುಗೆ ಮನೆಯಿಂದ ಚಾಕು ತೆಗೆದುಕೊಂಡು ಬಂದು ಪತ್ನಿ ರಂಗಮ್ಮ ಅವರ ಕತ್ತು ಕೊಯ್ದು ಕೊಲೆ ಮಾಡಿದ್ದಾನೆ. ಕೃತ್ಯ ಎಸಗಿದ ಬಳಿಕ ಆರೋಪಿ ಸ್ಥಳದಿಂದ ಪರಾರಿಯಾಗಿದ್ದಾನೆ.

ಮನೆಯಲ್ಲಿ ಜೋರಾಗಿ ಗಲಾಟೆಯಾಗುತ್ತಿರುವುದನ್ನು ಗಮನಿಸಿದ ಅಕ್ಕಪಕ್ಕದವರು ಬಂದು ನೋಡಿದಾಗ, ರಂಗಮ್ಮ ಅವರು ರಕ್ತದ ಮಡುವಿನಲ್ಲಿ ಬಿದ್ದಿರುವುದು ಕಂಡುಬಂದಿದೆ. ಈ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಲಾಗಿದೆ. ಮೈಕೋ ಲೇಔಟ್ ಪೊಲೀಸರು ಪರಿಶೀಲನೆ ನಡೆಸಿ, ಪ್ರಕರಣ ದಾಖಲಿಸಿ ಕೊಂಡಿದ್ದಾರೆ. ತಲೆಮರೆಸಿಕೊಂಡಿರುವ ಆರೋಪಿ ನಾಗರಾಜನ ಪತ್ತೆಗಾಗಿ ಪೊಲೀಸರು ಬಲೆ ಬೀಸಿದ್ದಾರೆ.

ಕ್ಷುಲ್ಲಕ ಕಾರಣಕ್ಕಾಗಿ ನಡೆದ ಜಗಳ: ಮೆಕ್ಯಾನಿಕ್ ಕೊಲೆ

• **ಬೆಂಗಳೂರು:** ಕ್ಷುಲ್ಲಕ ಕಾರಣಕ್ಕೆ ಆರಂಭವಾದ ಗಲಾಟೆ ವಿಕೋಪಕ್ಕೆ ತಿರುಗಿ ಮೆಕ್ಯಾನಿಕ್ ಒಬ್ಬನನ್ನು ಬ್ಯಾಟ್‌ನಿಂದ ಹೊಡೆದು ಭೀಕರವಾಗಿ ಕೊಲೆ ಮಾಡಿರುವ ಘಟನೆ ವಿಲ್ಸನ್ ಗಾರ್ಡನ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.


ಈ ಸಂಬಂಧ ಕಾರ್ಯಾಚರಣೆ ನಡೆಸಿದ ಪೊಲೀಸರು ಕೃತ್ಯ ನಡೆದ ಕೆಲವೇ ಗಂಟೆಗಳಲ್ಲಿ ಸಿದ್ದಯ್ಯ ರಸ್ತೆ ನಿವಾಸಿಗಳಾದ ಪರ್ವೇಜ್, ಅಫ್ರೋಜ್ ಮತ್ತು ಸಮೀರ್ ಸೇರಿದಂತೆ ಏಳು ಜನ ಆರೋಪಿಗಳು ಬಂಧಿಸಿರುವುದಾಗಿ ತಿಳಿಸಿದ್ದಾರೆ. ಮೃತರನ್ನು ರಶೀದ್ ಪಾಷಾ (45) ಎಂದು ಗುರುತಿಸಲಾಗಿದೆ. ಇವರು ಸಿದ್ದಯ್ಯ ರಸ್ತೆಯ ಮಾರ್ಟಿನ್ ಬಳಿ ಮೆಕ್ಯಾನಿಕ್ ಅಂಗಡಿ ಇಟ್ಟುಕೊಂಡಿದ್ದರು. ಇವರ ಅಂಗಡಿಯ ಪಕ್ಕದಲ್ಲೇ ಆರೋಪಿ ಪರ್ವೇಜ್ ಕೂಡ ಅಂಗಡಿ ಹೊಂದಿದ್ದ ಎನ್ನಲಾಗಿದೆ.

ಆರೋಪಿ ಪರ್ವೇಜ್ ತನ್ನ ಅಂಗಡಿಯ ಮುಂಭಾಗದ ನೆಲಕ್ಕೆ ಕಾಂಕ್ರೀಟ್ ಹಾಕಿಸಿದ್ದ. ಇದೇ ವಿಚಾರವಾಗಿ ಭಾನುವಾರ ರಾತ್ರಿ 9.30ರ ಸುಮಾರಿಗೆ ರಶೀದ್ ಪಾಷಾ ಮತ್ತು ಪರ್ವೇಜ್ ನಡುವೆ ತೀವ್ರ ಮಾತಿನ ಚಕಮಕಿ ನಡೆದಿದೆ. ಜಗಳ ವಿಕೋಪಕ್ಕೆ ತಿರುಗಿದಾಗ ಪರ್ವೇಜ್ ತನ್ನ ಸ್ನೇಹಿತರೊಂದಿಗೆ ಸೇರಿಕೊಂಡು ಬ್ಯಾಟ್‌ನಿಂದ ರಶೀದ್ ಮೇಲೆ ಮನಬಂದಂತೆ ಹಲ್ಲೆ ನಡೆಸಿದ್ದಾನೆ.

ದಾಳಿಯ ತೀವ್ರತೆಗೆ ತಲೆಗೆ ಗಂಭೀರ ಪೆಟ್ಟು ಬಿದ್ದಿದ್ದ ರಶೀದ್ ರಕ್ತದ ಮಡುವಿನಲ್ಲಿ ಬಿದ್ದಿದ್ದರು. ತಕ್ಷಣವೇ ಅವರನ್ನು ಆಸ್ಪತ್ರೆಗೆ ದಾಖಲಿಸಿದರು, ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ಕೃತ್ಯ ಎಸಗಿದ ಬಳಿಕ ಸ್ಥಳದಿಂದ ಪರಾರಿಯಾಗಿದ್ದ ಆರೋಪಿಗಳ ಪತ್ತೆಗಾಗಿ ಪೊಲೀಸರು ವಿಶೇಷ ತಂಡ ರಚಿಸಿ, ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಘಟನೆ ಕುರಿತು ತನಿಖೆ ಮುಂದುವರೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ವಿವಾದಕ್ಕೀಡಾದ ಜಿಬಿಎ ಪ್ರೀಮಿಯಂ ಎಫ್‌ಎಆರ್ ನೀತಿ

• **ಬೆಂಗಳೂರು:** ರಾಜ್ಯ ಸರ್ಕಾರ ಇತ್ತೀಚೆಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ) ವ್ಯಾಪ್ತಿಯಲ್ಲಿ ಜಾರಿಗೆ ತಂದಿರುವ ಪ್ರೀಮಿಯಂ ಎಫ್‌ಎಆರ್ ನೀತಿಯು ವಿವಾದಕ್ಕೆ ಕಾರಣವಾಗಿದೆ. ಈ ನಿಯಮದಿಂದಾಗಿ ಸಿಲಿಕಾನ್ ಸಿಟಿಯ ಮೂಲಸೌಕರ್ಯಗಳ ಮೇಲೆ ಅತಿಯಾದ ಒತ್ತಡ ಬೀಳಲಿದ್ದು, ಕೂಡಲೇ ಈ ನೀತಿಯನ್ನು ಹಿಂಪಡೆಯದಿದ್ದರೆ ಉಗ್ರ ಹೋರಾಟ ನಡೆಸುವುದಾಗಿ ಆರ್‌ಟಿಐ ಕಾರ್ಯಕರ್ತರು ಮತ್ತು ನಾಗರಿಕ ಹಿತರಕ್ಷಣಾ ವೇದಿಕೆಗಳು ಎಚ್ಚರಿಸಿವೆ.



» ಆರ್‌ಟಿಐ ಕಾರ್ಯಕರ್ತರು, ನಾಗರಿಕ ಹಿತರಕ್ಷಣಾ ವೇದಿಕೆ ಎಚ್ಚರಿಕೆ

ನಗರದ ಯೋಜನಾ ವ್ಯಾಪ್ತಿಯಲ್ಲಿ ಕಟ್ಟಡಗಳ ಎತ್ತರ ಮತ್ತು ವಿಸ್ತೀರ್ಣವನ್ನು ನಿರ್ಧರಿಸುವ ಮಹಡಿ ವಿಸ್ತೀರ್ಣ ಅನುಪಾತಕ್ಕೆ (ಎಫ್‌ಎಆರ್) ಸಂಬಂಧಿಸಿದಂತೆ 2026-ಫೆಬ್ರವರಿ 5ರಂದು ನಗರಾಭಿವೃದ್ಧಿ ಇಲಾಖೆಯು ಹೊಸ ನಿಯಮಾವಳಿ ಜಾರಿಗೆ ತಂದಿದೆ. ಆದರೆ ಸದರಿ ನೀತಿಯಿಂದ ಮೊದಲು 10 ಅಂತಸ್ತಿನ ಕಟ್ಟಡಕ್ಕೆ ಅನುಮತಿ ಇದ್ದ ಕಡೆಗಳಲ್ಲಿ, ಈಗ 16 ರಿಂದ 20 ಅಂತಸ್ತುಗಳ ನಿರ್ಮಾಣಕ್ಕೆ ಅವಕಾಶ ಸಿಗಲಿದೆ. ಆದರೆ, ಅದಕ್ಕೆ ಪೂರಕವಾದ ರಸ್ತೆಗಳು, ಒಳಚರಂಡಿ ಮತ್ತು ನೀರಿನ ವ್ಯವಸ್ಥೆ ನಗರದಲ್ಲಿಲ್ಲ. ಇದು ಮೂಲಸೌಕರ್ಯದ ಮೇಲಿನ ಒತ್ತಡವಾಗಲಿದೆ. ಈಗಾಗಲೇ ವಾಹನ ದಟ್ಟಣೆಯಿಂದ ನಲುಗುತ್ತಿರುವ ವಸತಿ, ವಾಣಿಜ್ಯ ಸಂಕೀರ್ಣಗಳ ವಿಸ್ತೀರ್ಣ ಹೆಚ್ಚಾದರೆ ಸಂಚಾರ ದಟ್ಟಣೆ ನಿಯಂತ್ರಣಕ್ಕೆ ಬಾರದಂತಾಗುತ್ತದೆ. ಹೆಚ್ಚಿನ ಕಟ್ಟಡಗಳು ತಲೆಎತ್ತುವುದರಿಂದ ಮಳೆ ನೀರು ಇಂಗುವಿಕೆ ಕಡಿಮೆಯಾಗಿ, ನಗರದಲ್ಲಿ ಕೃತಕ ಪ್ರವಾಹ ಉಂಟಾಗುವ ಅಪಾಯವಿದೆ ಎಂದರು.

ಕೆಎಲ್‌ಇ ಕಾನೂನು ಮಹಾವಿದ್ಯಾಲಯದಲ್ಲಿ ಸ್ನೇಹ ಸಮ್ಮಿಲನ

ಮೌಲ್ಯದ ಹೊಳಪು ಎಂದಿಗೂ ಮಾಸಲ್ಲ

• **ಕೆಂಗೇರಿ:** ಜಾಗತಿಕ ಬದಲಾವಣೆಯಿಂದ ವಸ್ತು ವಿಷಯಗಳ ಹಿರಿಮೆ ಕಡಿತಗೊಳ್ಳಬಹುದು ವಿನಃ ಮೌಲ್ಯಗಳ ಮಹತ್ವಕ್ಕೆ ಎಂದಿಗೂ ಧಕ್ಕೆ ಬರುವುದಿಲ್ಲ, ಮೌಲ್ಯಗಳ ಹೊಳಪು ಎಂದಿಗೂ ಮಾಸುವುದಿಲ್ಲ ಎಂದು ಲೋಕಾಯುಕ್ತ ಬಿ.ಎಸ್.ಪಾಟೀಲ್ ಹೇಳಿದರು.

ಯಶವಂತಪುರ ವಿಧಾನಸಭಾ ಕ್ಷೇತ್ರದ ಬಲ್ಲಾಳ್ ವಾರ್ಡ್‌ನಲ್ಲಿರುವ ಕೆಎಲ್‌ಇ ಕಾನೂನು ಮಹಾವಿದ್ಯಾಲಯದಲ್ಲಿ ಆಯೋಜಿಸಲಾಗಿದ್ದ ಹಳೆಯ ವಿದ್ಯಾರ್ಥಿ ಹಾಗೂ ಸಿಬ್ಬಂದಿ ಸಮ್ಮಿಲನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 70ರ ದಶಕದ ಶಿಕ್ಷಣ ಕ್ರಮ ಇಂದು ಮರೆಯಾಗಿದೆ. ಪ್ರಸ್ತುತ ಬೇಡಿಕೆಗಳಿಗೆ ಅನುಗುಣವಾಗಿ ಶಿಕ್ಷಣದ ರೀತಿ ನೀತಿಗಳು ಬದಲಾಗಿವೆ. ವಿಜ್ಞಾನ, ತಂತ್ರ ಜ್ಞಾನಗಳು ನವ ಪಥದಲ್ಲಿದೆ. ಈ ಎಲ್ಲಾ ಬೆಳವಣಿಗೆಗಳು ಮೌಲ್ಯಗಳೊಂದಿಗೆ ಸಮಾನಾಂತರವಾಗಿ ಸಾಗಬೇಕು. ಮೌಲ್ಯ ರಹಿತ ಬೆಳವಣಿಗೆಯು ಅರ್ಥಹೀನ ಎಂದು ಕಿವಿಮಾತು ಹೇಳಿದರು.

ಅನಾದಿ ಕಾಲದಿಂದ ನಮ್ಮ ಪೂರ್ವಜರು ದೇಶೀಯ ಸಾಂಸ್ಕೃತಿಕ ಮೌಲ್ಯಗಳು ಹಾಗೂ ಸಂಸ್ಕಾರಗಳನ್ನು ಪಾಲಿಸಿ ಕೊಂಡು ಬಳುವಳಿಯಾಗಿ ನೀಡಿ ಹೋಗಿದ್ದಾರೆ. ಅಂತಹ ಮೌಲ್ಯಗಳನ್ನು ಮುಂದಿನ ಪೀಳಿಗೆಗೆ ದಾಟಿಸುವುದು ನಮ್ಮೆಲ್ಲರ ಕರ್ತವ್ಯ ಎಂದರು.



ದೇಶದ ನ್ಯಾಯಾಂಗ ಪರಂಪರೆಯು ತನ್ನದೇ ಹಿರಿಮೆಯನ್ನು ಕಾಪಿಟ್ಟುಕೊಂಡು ಬಂದಿದೆ. ಈ ಹಿರಿಮೆ ಯನ್ನು ವಿಸ್ತರಿಸುವ ಮಹತ್ತರ ಜಾವಾಬ್ದಾರಿ ಯುವ ವಕೀಲರ ಮೇಲಿದೆ. ಬದುಕನ್ನು ಸಂಭ್ರಮಿಸಬೇಕು. ಸಮಾಜವನ್ನು ಪ್ರೀತಿಸಬೇಕು. ಅಧ್ಯಯನ ಶೀಲರಾಗಿ, ಸಮಾಜಕ್ಕೆ ಕೊಡುಗೆ ನೀಡುವ ಮೂಲಕ ಉತ್ತಮ ಪರಂಪರೆಯನ್ನು ಸೃಷ್ಟಿಸಿ ಹೋಗಬೇಕು. ಇದೇ ಪರಿಪೂರ್ಣ ಬದುಕಿನ ನಿಜಾರ್ಥ ಎಂದು ಹೇಳಿದರು. ಹಿರಿಯ ಸಂಧಾನಕಾರ ವಿಶ್ವನಾಥ್ ವಿ.ಅಂಗಡಿ, ಪ್ರಾಂಶುಪಾಲ ಜೆ.ಎಂ.ಮಲ್ಲಿಕಾರ್ಜುನಯ್ಯ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಇಂದು ನಗರದಲ್ಲಿ...

- ವಿಜ್ಞಾನ ಉತ್ಸವ-2026.ಸ್ಥಳ: ಜ್ಞಾನಭಾರತಿ ಆವರಣ ಬೆಂಗಳೂರು ವಿಶ್ವವಿದ್ಯಾಲಯ, ಬೆಳಗ್ಗೆ 9:00
- ಅಖಿಲ ಭಾರತೀಯ ವೇದ ಸಮ್ಮೇಳನ. ಸ್ಥಳ: ಪೂರ್ಣ ಪ್ರಜ್ಞಾ ಸಂಶೋಧನ ಸಂಸ್ಥೆ ವಿದ್ಯಾಪೀಠ, ಬೆಳಗ್ಗೆ 10:00
- ಡಿ.ವಿ. ಗುಂಡಪ್ಪನವರ ಸ್ಮರಣಾರ್ಥ ಛಾಯಾಚಿತ್ರ ಪ್ರದರ್ಶನ. ಸ್ಥಳ : ಡಿಜಿವಿ ಸಭಾಂಗಣ, ಗೋಖಲೆ ಇನ್ಸ್ಟಿಟ್ಯೂಟ್ ಆಫ್ ಪಬ್ಲಿಕ್ ಅಫೇರ್, ಬುಲ್ ಟೆಂಪಲ್ ರಸ್ತೆ. ಬೆಳಗ್ಗೆ 10:00
- ತುಳಸಿ ರಾಮಾಯಣ ಸುಂದರಕಾಂಡ ಉಪನ್ಯಾಸ, ಸ್ಥಳ: ರಾಗೀಗುಡ್ಡ ಪ್ರಸನ್ನ ಆಂಜನೇಯ ಸ್ವಾಮಿ ದೇವಸ್ಥಾನ, ಸಂಜೆ 6.30

ಕಿರುಸುದ್ದಿ

ಪಾಕ್ ಆಟಗಾರನಿಗೆ ನೀಡುವ ವೇತನವು ಭಾರತಕ್ಕೆ ಮಾರಕ

ಹೊಸದಿಲ್ಲಿ: ಸನ್ ಟಿವಿ ನೆಟ್‌ವರ್ಕ್ ಹಾಗೂ ಸನ್ ರೈಸರ್ಸ್ ಹೈದರಾಬಾದ್ ಮುಖ್ಯಸ್ಥೆ ಕಾವ್ಯಾ ಮಾರನ್ ಒಡೆತನದ ದಿ ಹಂಡ್ರೆಡ್‌ನ ಸನ್‌ರೈಸರ್ಸ್ ಲೀಡ್ಸ್ ಪಾಕಿಸ್ತಾನಿ ಸ್ಪಿನ್ನರ್ ಅಬ್ರಾರ್ ಅಹ್ಮದ್‌ರನ್ನು ಖರೀದಿಸಿರುವುದನ್ನು ಮಾಜಿ ಕ್ರಿಕೆಟಿಗರ ಲಿಟಲ್ ಮಾಸ್ಟರ್ ಸುನಿಲ್ ಗವಾಸ್ಕರ್ ಕಟುವಾಗಿ ವಿರೋಧಿಸಿದ್ದಾರೆ. ಪಾಕಿಸ್ತಾನಿ ಆಟಗಾರರಿಗೆ ವೇತನ ನೀಡುವುದು ಭಾರತದ ವಿರುದ್ಧ ಹಾನಿ ಮಾಡಲು ಕೊಡುಗೆ ನೀಡಿದಂತೆ ಎಂದು ನೇರ ಮಾತಿನಲ್ಲಿ ವಿರೋಧ ವ್ಯಕ್ತಪಡಿಸಿದ್ದಾರೆ. ದಿ ಹಂಡ್ರೆಡ್ ಪಂದ್ಯಾವಳಿಯಲ್ಲಿ ಭಾರತೀಯ ಫ್ರಾಂಚೈಸಿ ಮಾಲೀಕರು ಪಾಕ್ ಆಟಗಾರನನ್ನು ಖರೀದಿಸಿರುವುದು ನಿಜಕ್ಕೂ ನನಗೆ ಆಶ್ಚರ್ಯ ಮೂಡಿಸಿದೆ.

ಸಚಿನ್ 100ನೇ ಶತಕಕ್ಕೆ 14 ವರ್ಷ

ಮುಂಬೈ: ಕ್ರಿಕೆಟ್ ದೇವರೆಂದೇ ಕರೆಯಲ್ಪಡುವ ಸಚಿನ್ ತೆಂಡುಲ್ಕರ್ ಅವರ 100ನೇ ಅಂತಾರಾಷ್ಟ್ರೀಯ ಶತಕದ ಮೈಲಿಗಲ್ಲಿಗೆ 14 ವರ್ಷಗಳಾಗಿವೆ. 2012ರ ಮಾ.16ರಂದು ಢಾಕಾದಲ್ಲಿ ನಡೆದಿದ್ದ ಬಾಂಗ್ಲಾದೇಶ ತಂಡದ ವಿರುದ್ಧದ ಏಷ್ಯಾ ಕಪ್ ಏಕದಿನ ಪಂದ್ಯದಲ್ಲಿ ಸಚಿನ್ ತಮ್ಮ 100ನೇ ಅಂತಾರಾಷ್ಟ್ರೀಯ ಶತಕವನ್ನು ದಾಖಲಿಸಿದ್ದರು. ಪಂದ್ಯದಲ್ಲಿ 147 ಎಸೆತಗಳನ್ನು ಎದುರಿಸಿದ್ದ ತೆಂಡುಲ್ಕರ್ ಅವರು 12 ಬೌಂಡರಿಗಳನ್ನು ಮತ್ತು ಏಕೈಕ ಸಿಕ್ಸರ್ ಒಳಗೊಂಡಿದ್ದ 114 ರನ್‌ಗಳನ್ನು ಕಲೆಹಾಕಿದ್ದರು. ಸ್ಕ್ವೇರ್ ಲೆಗ್ ಕ್ಷೇತ್ರದಲ್ಲಿ ಒಂದು ರನ್ ಕಸಿಯುವ ಮೂಲಕ ತೆಂಡುಲ್ಕರ್ ಮೈಲಿಗಲ್ಲು ಪೂರೈಸಿದ್ದರು. ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಸಚಿನ್ 51 ಟೆಸ್ಟ್ ಮತ್ತು 49 ಏಕದಿನ ಶತಕಗಳನ್ನು ದಾಖಲಿಸಿದ್ದರು.

ಜೇಮ್ಸ್ ಫೋಸ್ಟರ್ ಸಿಎಸ್‌ಕೆ ನೂತನ ಫೀಲ್ಡಿಂಗ್ ಕೋಚ್

ಚೆನ್ನೈ: ಇಂಗ್ಲೆಂಡ್‌ನ ಮಾಜಿ ಕ್ರಿಕೆಟಿಗ ಜೇಮ್ಸ್ ಫೋಸ್ಟರ್ ಅವರನ್ನು ನೂತನ ಫೀಲ್ಡಿಂಗ್ ಕೋಚ್ ಆಗಿ ನೇಮಿಸಿರುವುದಾಗಿ ಐಪಿಎಲ್ ಫ್ರಾಂಚೈಸಿ ಚೆನ್ನೈ ಸೂಪರ್ ಕಿಂಗ್ಸ್ ಸೋಮವಾರ ದೃಢೀಕರಿಸಿದೆ. ಫೋಸ್ಟರ್ ಅವರು ಇಂಗ್ಲೆಂಡ್ ಪರ 7 ಟೆಸ್ಟ್, 12 ಏಕದಿನ ಮತ್ತು 5 ಟಿ20 ಅಂತಾರಾಷ್ಟ್ರೀಯ ಪಂದ್ಯಗಳನ್ನು ಆಡಿದ ಅನುಭವ ಹೊಂದಿದ್ದಾರೆ. ಫ್ರಾಂಚೈಸಿ ಮತ್ತು ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಕೋಚಿಂಗ್ ಅನುಭವವನ್ನು ಫೋಸ್ಟರ್ ಹೊಂದಿದ್ದಾರೆ. ದಿ ಹಂಡ್ರೆಡ್ ಟೂರ್ನಿಯಲ್ಲಿ ಅವರು ಬರ್ಮಿಂಗಮ್ ಫೀನಿಕ್ಸ್‌ನ ಸಹಾಯಕ ಕೋಚ್ ಆಗಿದ್ದರು.

ಕೆಎಸ್‌ಸಿಎ, ಆರ್‌ಸಿಬಿಗೆ ರಾಜ್ಯ ಸರ್ಕಾರದ ಅಧಿಕೃತ ಅನುಮತಿ

ಸರ್ಕಾರದ ಗ್ರೀನ್ ಸಿಗ್ನಲ್ ಚಿನ್ನಸ್ವಾಮಿನಲ್ಲಿ ಐಪಿಎಲ್

ಹೊಸದಿಲ್ಲಿ: ಐಪಿಎಲ್ 2026ರ ಪಂದ್ಯಗಳನ್ನು ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆಯೋಜಿಸಲು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಫ್ರಾಂಚೈಸಿಗೆ ಕರ್ನಾಟಕ ಸರ್ಕಾರದಿಂದ ಸೋಮವಾರ ಅಧಿಕೃತ ಅನುಮತಿ ಲಭಿಸಿದೆ. ಈ ನಿರ್ಧಾರದಿಂದ, ಆರ್‌ಸಿಬಿ ತನ್ನ ಚೊಚ್ಚಲ ಐಪಿಎಲ್ ಪ್ರಶಸ್ತಿಯನ್ನು ಗೆದ್ದ ನಂತರದ ಸಂಭ್ರಮಾಚರಣೆಯ ವೇಳೆ ಕಾಲ್ತುಳಿತ ದುರಂತ ಸಂಭವಿಸಿತ್ತು. ಕಾಲ್ತುಳಿತ ದುರಂತದ ನಂತರ ಮೈದಾನದಲ್ಲಿ ಯಾವುದೇ ಐಪಿಎಲ್ ಅಥವಾ ಅಂತಾರಾಷ್ಟ್ರೀಯ ಪಂದ್ಯಗಳು ನಡೆಯುವ ಬಗ್ಗೆ ಇದ್ದ ಅನಿಶ್ಚಿತತೆ ಅಂತ್ಯಗೊಂಡಿದೆ.

ಕೆಎಸ್‌ಸಿಎ ಕೃತಜ್ಞತೆ

ಈ ಅನುಮತಿ ಪ್ರಕ್ರಿಯೆಗೆ ನೆರವಾದ ರಾಜ್ಯ ಸರ್ಕಾರ ಮತ್ತು ತಜ್ಞ ಸಮಿತಿಗೆ ಕೆಎಸ್‌ಸಿಎ ಧನ್ಯವಾದ ತಿಳಿಸಿದೆ. ತಜ್ಞ ಸಮಿತಿ ಕಾರ್ಯದರ್ಶಿ ಹಾಗೂ ಬೆಂಗಳೂರು ಪೊಲೀಸ್ ಆಯುಕ್ತ ಶ್ರೀಮಂತ್ ಕುಮಾರ್ ಸಿಂಗ್ ಅವರಿಗೆ ನಮ್ಮ ವಿಶೇಷ ಧನ್ಯವಾದಗಳು. ಅವರು ಸಕ್ರಿಯ ಸಂಯೋಜನೆ ನಡೆಸಿ, ಎಲ್ಲಾ ಭದ್ರತಾ ಹಾಗೂ ಕಾರ್ಯಾಚರಣಾ ಅಂಶಗಳನ್ನು ಸಮಗ್ರವಾಗಿ ಪರಿಶೀಲಿಸಲು ನೆರವಾದರು ಎಂದು ಪ್ರಕಟಣೆಯಲ್ಲಿ ತಿಳಿಸಿದೆ. ತಜ್ಞ ಸಮಿತಿಯ ಗೌರವಾನ್ವಿತ ಸದಸ್ಯರು ಹಾಗೂ ಅದರ ಉಪಸಮಿತಿಗಳ ಅಧಿಕಾರಿಗಳು ನೀಡಿದ ಸೂಕ್ಷ್ಮ ಪರಿಶೀಲನೆ ಮತ್ತು ರಚನಾತ್ಮಕ ಶಿಫಾರಸುಗಳು ಈ ಮಹತ್ವದ ನಿರ್ಧಾರಕ್ಕೆ ನೆರವಾದವು ಎಂದು ತಿಳಿಸಿದೆ.

ತಜ್ಞರ ಸಮಿತಿಯ ಪರಿಶೀಲನೆ ಬಳಿಕ ಅನುಮತಿ

ಅನುಮತಿ ನೀಡುವ ಮೊದಲು, ಕರ್ನಾಟಕ ಗೃಹ ಸಚಿವ ಜಿ.ಪರಮೇಶ್ವರ್ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ರಾಜ್ಯ ಸರ್ಕಾರ ನೇಮಿಸಿದ್ದ ತಜ್ಞರ ಸಮಿತಿ ಈ ಸಭೆಯಲ್ಲಿ ಭಾಗವಹಿಸಿತು. ಸಭೆಯಲ್ಲಿ ಕೆಎಸ್‌ಸಿಎ, ಆರ್‌ಸಿಬಿ ಮತ್ತು ಕಾರ್ಯಕ್ರಮ ನಿರ್ವಹಣಾ ಸಂಸ್ಥೆ ಡಿಎನ್‌ಎ ಪ್ರತಿನಿಧಿಗಳೂ ಹಾಜರಿದ್ದರು. ಚರ್ಚೆಯ ವೇಳೆ ಮುಂಬರುವ ಐಪಿಎಲ್ ಪಂದ್ಯಗಳ ಆಯೋಜನೆಗೂ ಮುನ್ನ ಮೈದಾನದಲ್ಲಿ ಕೈಗೊಳ್ಳಲಾದ ಸಿದ್ಧತೆಗಳು ಹಾಗೂ ಭದ್ರತಾ ಕ್ರಮಗಳ ಕುರಿತು ತಜ್ಞ ಸಮಿತಿ ವಿವರವಾದ ವರದಿ ಮಂಡಿಸಿತು. ಕೆಎಸ್‌ಸಿಎ ವಕ್ತಾರ ವಿನಯ್ ಮೃತ್ಯುಂಜಯ ಅವರ ಪ್ರಕಾರ, ಸಮಿತಿಯ ಶಿಫಾರಸುಗಳು ಹಾಗೂ ಸರ್ಕಾರದ ಪರಿಶೀಲನೆಯ ಬಳಿಕ ಅಧಿಕೃತ ಅನುಮತಿ ನೀಡಲಾಗಿದೆ. ತಜ್ಞರ ಸಮಿತಿಯು ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕೈಗೊಂಡಿರುವ ಸಿದ್ಧತೆಗಳು ಹಾಗೂ ನಿಯಮಾನುಸರಣೆ ಕ್ರಮಗಳ ಬಗ್ಗೆ ವರದಿ ಮಂಡಿಸಿತು. ವ್ಯವಸ್ಥೆಗಳನ್ನೆಲ್ಲಾ ಸಮಗ್ರ ಪರಿಶೀಲಿಸಿದ ನಂತರ ಗೌರವಾನ್ವಿತ ಗೃಹ ಸಚಿವರು ಐಪಿಎಲ್ ಪಂದ್ಯಗಳನ್ನು ಇಲ್ಲಿ ನಡೆಸಲು ಅಧಿಕೃತ ಅನುಮತಿ ನೀಡಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಚಿನ್ನಸ್ವಾಮಿ ಮೈದಾನದಲ್ಲೇ ಟೂರ್ನಿಯ ಆರಂಭ

ಐಪಿಎಲ್ 19ನೇ ಆವೃತ್ತಿ ಮಾ.28ರಂದು ಆರಂಭವಾಗಲಿದೆ. ಉದ್ಘಾಟನಾ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಆರ್‌ಸಿಬಿ ತಂಡವು ಸನ್ ರೈಸರ್ಸ್ ಹೈದರಾಬಾದ್ (ಎಸ್‌ಆರ್‌ಎಚ್) ವಿರುದ್ಧ ತವರಿನ ಎಂ.ಚಿನ್ನಸ್ವಾಮಿ ಮೈದಾನದಲ್ಲಿ ಕಣಕ್ಕಿಳಿಯಲಿದೆ. ಉದ್ಘಾಟನಾ ಪಂದ್ಯ ಮಾತ್ರವಲ್ಲದೆ, ಟೂರ್ನಿಯ ಉದ್ಘಾಟನಾ ಸಮಾರಂಭ ಹಾಗೂ ಆರ್‌ಸಿಬಿ ತಂಡದ ಪ್ರಸಿದ್ಧ ಅನ್‌ಬಾಕ್ಸಿಂಗ್ ಕಾರ್ಯಕ್ರಮವೂ ಇದೇ ಮೈದಾನದಲ್ಲಿ ನಡೆಯಲಿದೆ. ಇದು ಸಾಮಾನ್ಯವಾಗಿ ಹೊಸ ಆವೃತ್ತಿಯ ಆರಂಭವನ್ನು ಸೂಚಿಸುವ ಕಾರ್ಯಕ್ರಮವಾಗಿದೆ.

ಆರ್‌ಸಿಬಿ ತವರಿನ ಪಂದ್ಯಗಳ ವೇಳಾಪಟ್ಟಿ

ಐಪಿಎಲ್ 2026 ಆವೃತ್ತಿಯಲ್ಲಿ ಆರ್‌ಸಿಬಿ ತನ್ನ 7 ತವರಿನ ಪಂದ್ಯಗಳಲ್ಲಿ, ಐದು ಪಂದ್ಯಗಳನ್ನು ಅಭಿಮಾನಿಗಳ ನೆಚ್ಚಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆಡಲಿದೆ. ಉಳಿದ ಎರಡು ತವರಿನ ಪಂದ್ಯಗಳನ್ನು ರಾಯ್ಪುರ್‌ನ ಶಹೀದ್ ವೀರ್ ನಾರಾಯಣ್ ಸಿಂಗ್ ಅಂತಾರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂನಲ್ಲಿ ಆಯೋಜಿಸಲು ಫ್ರಾಂಚೈಸಿ ನಿರ್ಧರಿಸಿದೆ. ಈ ವ್ಯವಸ್ಥೆಯಿಂದ ಬೆಂಗಳೂರು ತಂಡದ ಮುಖ್ಯ ತವರಿನ ಮೈದಾನವಾಗಿಯೇ ಉಳಿದಿದೆ, ಜೊತೆಗೆ ಕೆಲವು ಪಂದ್ಯಗಳನ್ನು ಪರ್ಯಾಯ ಮೈದಾನದಲ್ಲಿ ನಡೆಸಲು ಅವಕಾಶ ಸಿಗುತ್ತದೆ.



2027ರ ಒಡಿಐ ವಿಶ್ವಕಪ್ ಗೆಲ್ಲುವುದೇ ಗುರಿ: ಗಿಲ್



ಹೊಸದಿಲ್ಲಿ: ಮುಂದಿನ ವರ್ಷ ನಡೆಯಲಿರುವ ಐಸಿಸಿ ಏಕದಿನ ವಿಶ್ವಕಪ್ ಗೆಲ್ಲುವುದೇ ತಮ್ಮ ತಂಡದ ಪ್ರಮುಖ ಗುರಿ ಎಂದು ಭಾರತದ ಏಕದಿನ ಕ್ರಿಕೆಟ್ ತಂಡದ ನಾಯಕ ಶುಬ್ಮನ್ ಗಿಲ್ ಸೋಮವಾರ ಹೇಳಿದ್ದಾರೆ.

2023ರ ಆವೃತ್ತಿಯ ತವರಿನ ವಿಶ್ವಕಪ್‌ನಲ್ಲಿ ಅಜೇಯ ತಂಡವಾಗಿ ಫೈನಲ್ ಪ್ರವೇಶಿಸಿದ್ದ ರೋಹಿತ್ ಶರ್ಮಾ ನೇತೃತ್ವದ ತಂಡ, ಅಹಮದಾಬಾದ್‌ನ ನರೇಂದ್ರ ಮೋದಿ ಸ್ಟೇಡಿಯಂನಲ್ಲಿ ನಡೆದ ಫೈನಲ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧ ಸೋಲುಂಡಿತ್ತು. ವಿಶ್ವಕಪ್ ಫೈನಲ್ ಸೋಲು ಭಾರತೀಯ ಕ್ರಿಕೆಟ್ ತಂಡ ಮತ್ತು ಕ್ರಿಕೆಟ್ ಅಭಿಮಾನಿಗಳಿಗೆ ಆಘಾತವನ್ನು ನೀಡಿತ್ತು.

ಟಿ20 ಗೆದ್ದಾಯ್ತು, ಇನ್ನು ಏಕದಿನ: ಭಾರತ ತಂಡ ಸತತ ಎರಡು ಟಿ20 ವಿಶ್ವಕಪ್ ಗೆದ್ದ ಬಳಿಕ ಇದೀಗ ಶುಬ್ಮನ್ ಗಿಲ್ ನೇತೃತ್ವದ ತಂಡವು ಏಕದಿನ ವಿಶ್ವಕಪ್ ಟ್ರೋಫಿಯ ಮೇಲೆ ಕಣ್ಣಿಟ್ಟಿದೆ. ಮುಂದಿನ ವರ್ಷ ಅಕ್ಟೋಬರ್-ನವೆಂಬರ್ ತಿಂಗಳಲ್ಲಿ ದಕ್ಷಿಣ ಆಫ್ರಿಕಾ, ಜಿಂಬಾಬ್ವೆ ಮತ್ತು ನಮೀಬಿಯಾ ರಾಷ್ಟ್ರಗಳ ಜಂಟಿ ಆತಿಥ್ಯದಲ್ಲಿ ಏಕದಿನ ವಿಶ್ವಕಪ್ ನಡೆಯಲಿದೆ.

> **ಹಿಂದಿನ ವಿಶ್ವಕಪ್‌ನಲ್ಲಿ ನಾವು ಗೆಲುವಿನ ಬಹಳ ಸಮೀಪದಲ್ಲಿದ್ದೆವು. ದಕ್ಷಿಣ ಆಫ್ರಿಕಾದಲ್ಲಿ ಪ್ರಶಸ್ತಿ ಗೆಲ್ಲಲು ಇನ್ನೊಂದು ಅವಕಾಶ ಸಿಕ್ಕರೆ, ನಮಗದು ದೊಡ್ಡ ಅವಕಾಶ. ಯಾವುದೇ ಮಾದರಿಯ ಕ್ರಿಕೆಟ್‌ನಲ್ಲಿ ದೇಶಕ್ಕಾಗಿ ವಿಶ್ವಕಪ್ ಗೆಲ್ಲುವುದು ನಮ್ಮ ತಂಡದ ಪ್ರಮುಖ ಗುರಿ. ಆ ಯೋಚನೆ ಸದಾ ನನ್ನ ಮನಸ್ಸಿನಲ್ಲಿದೆ.**
> ■ **ಶುಬ್ಮನ್ ಗಿಲ್, ಭಾರತ ಏಕದಿನ ತಂಡದ ನಾಯಕ**

ದಕ್ಷಿಣ ಆಫ್ರಿಕಾದಲ್ಲಿ ಇನ್ನೊಂದು ಅವಕಾಶ?

ಭಾನುವಾರ ರಾತ್ರಿ, ಬಿಸಿಸಿಐ ಆಯೋಜಿಸಿದ್ದ ನಮನ್ ವಾರ್ಷಿಕ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಮಾತನಾಡಿದ ನಾಯಕ ಶುಬ್ಮನ್, ಹಿಂದಿನ ವಿಶ್ವಕಪ್‌ನಲ್ಲಿ ನಾವು ಗೆಲುವಿನ ಬಹಳ ಸಮೀಪದಲ್ಲಿದ್ದೆವು. ದಕ್ಷಿಣ ಆಫ್ರಿಕಾದಲ್ಲಿ ಪ್ರಶಸ್ತಿ ಗೆಲ್ಲಲು ಇನ್ನೊಂದು ಅವಕಾಶ ಸಿಕ್ಕರೆ, ನಮಗದು ದೊಡ್ಡ ಅವಕಾಶ. ಯಾವುದೇ ಮಾದರಿಯ ಕ್ರಿಕೆಟ್‌ನಲ್ಲಿ ದೇಶಕ್ಕಾಗಿ ವಿಶ್ವಕಪ್ ಗೆಲ್ಲುವುದು ನಮ್ಮ ತಂಡದ ಪ್ರಮುಖ ಗುರಿ. ಆ ಯೋಚನೆ ಸದಾ ನನ್ನ ಮನಸ್ಸಿನಲ್ಲಿದೆ ಎಂದು ಅಭಿಪ್ರಾಯಿಸಿದ್ದಾರೆ.

ಯಶಸ್ಸಿನ ಪಥದಲ್ಲಿ ಭಾರತೀಯರು: ಸೂರ್ಯ



ಈ ಮಧ್ಯೆ, ಕಾರ್ಯಕ್ರಮದಲ್ಲಿ ಮಾತನಾಡಿದ ಭಾರತದ ಟಿ20 ತಂಡದ ನಾಯಕ ಸೂರ್ಯ ಕುಮಾರ್ ಯಾದವ್, 2024ರ ಟಿ20 ವಿಶ್ವಕಪ್ ಜಯವು ಭಾರತೀಯ ಕ್ರಿಕೆಟಿಗರು ಯಶಸ್ಸಿನ ಪಥದಲ್ಲಿ ಓಡಲು ನೆರವಾಗಿದೆ. ಪುರುಷರ ತಂಡ ಚಾಂಪಿಯನ್ಸ್ ಟ್ರೋಫಿ ಮತ್ತು ವನಿತೆಯರು ಚೊಚ್ಚಲ ಏಕದಿನ ವಿಶ್ವಕಪ್ ಗೆದ್ದಿದ್ದರು ಎಂದು ಹೇಳಿದರು.


ಆ ಒಂದು ಹೆಜ್ಜೆ ಬಹಳ ಮುಖ್ಯವಾಗಿತ್ತು. ಐಸಿಸಿ ಟ್ರೋಫಿ ಗೆಲ್ಲಲು ಏನು ಬೇಕು ಎಂಬುದನ್ನು ಎಲ್ಲರೂ ಅರ್ಥಮಾಡಿಕೊಳ್ಳಲು ಆ ಅನುಭವ ಬಹಳ ಮುಖ್ಯ ಎಂದು ನಾಯಕ ಸೂರ್ಯ ಕುಮಾರ್ ಹೇಳಿದರು. ಇನ್ನು ಹಿಂದೆ ತಿರುಗಿ ನೋಡುವ ಪ್ರಶ್ನೆಯೇ ಇಲ್ಲ. ಈ ಯಶಸ್ಸು ಆರಂಭವಾಗಿರುವುದರಿಂದ ಸಾಧ್ಯವಾದಷ್ಟು ಹೆಚ್ಚು ಟ್ರೋಫಿಗಳನ್ನು ಗೆಲ್ಲಲು ಪ್ರಯತ್ನಿಸೋಣ ಎಂದು ಸೂರ್ಯ ಹೇಳಿದರು.

- ಅಕ್ಟೋಬರ್-ನವೆಂಬರ್‌ನಲ್ಲಿ ಐಸಿಸಿ ಏಕದಿನ ವಿಶ್ವಕಪ್
- ದಕ್ಷಿಣ ಆಫ್ರಿಕಾ, ಜಿಂಬಾಬ್ವೆ ಮತ್ತು ನಮೀಬಿಯಾ ಜಂಟಿ ಆತಿಥ್ಯ

ಸಿನ್ನರ್, ಸೆಬಲೆಂಕಾ ಚಾಂಪಿಯನ್ಸ್

» ಇಂಡಿಯನ್ ವೆಲ್ಸ್ 2026 ಎಟಿಪಿ ಮಾಸ್ಟರ್ಸ್ ಟೂರ್ನಿ ಎಲ್ಲಾ 6 ಎಟಿಪಿ ಮಾಸ್ಟರ್ಸ್ 1000 ಹಾರ್ಡ್‌ಕೋರ್ಟ್ ಪ್ರಶಸ್ತಿ ಗೆದ್ದ 3ನೇ ಟೆನಿಸಿಗ ಯಾನಿಕ್ ಸಿನ್ನರ್





ಕ್ಯಾಲಿಫೋರ್ನಿಯಾ: ಇಂಡಿಯನ್ ವೆಲ್ಸ್ ಎಟಿಪಿ ಮಾಸ್ಟರ್ಸ್ ಟೆನಿಸ್ ಪಂದ್ಯಾವಳಿಯಲ್ಲಿ ಇಟಲಿಯ ಯಾನಿಕ್ ಸಿನ್ನರ್ ಪುರುಷರ ಸಿಂಗಲ್ಸ್ ವಿಭಾಗದ ಹಾಗೂ ಬೆಲಾರೂಸ್‌ನ ಅರೀನಾ ಸೆಬಲೆಂಕಾ ಅವರು ಮಹಿಳೆಯರ ವಿಭಾಗದ ಚಾಂಪಿಯನ್ನರಾಗಿ ಹೊರಹೊಮ್ಮಿದ್ದಾರೆ.

ಭಾನುವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ಸಿನ್ನರ್ ತನ್ನ ಚೊಚ್ಚಲ ಇಂಡಿಯನ್ ವೆಲ್ಸ್ ಪ್ರಶಸ್ತಿಯನ್ನು ಗೆದ್ದರು. ಅವರು ಫೈನಲ್‌ನಲ್ಲಿ ಡೇನಿಲ್ ಮೆಡ್ವೆಡೆವ್ ಅವರನ್ನು 7-6(6), 7-6(4) ನೇರ ಸೆಟ್‌ಗಳ ಅಂತರದಿಂದ ಸೋಲಿಸಿ, ಕ್ಯಾಲಿಫೋರ್ನಿಯಾ ಮರುಭೂಮಿಯ ಸೂರ್ಯನಡಿ ಅದ್ಭುತ ಹಾರ್ಡ್‌ಕೋರ್ಟ್ ಪ್ರದರ್ಶನ ನೀಡಿದರು. ಇಟಲಿ ಆಟಗಾರ ಸಂಪೂರ್ಣ ಪಂದ್ಯದಲ್ಲಿ ಪ್ರಾಬಲ್ಯ ತೋರಿದರು. 28 ವಿನ್ನರ್‌ಗಳು

ಒಂದೂ ಸೆಟ್ ಸೋಲದೆ ಎಟಿಪಿ ಪ್ರಶಸ್ತಿ: 1990ರಿಂದ ಒಂದೂ ಸೆಟ್ ಕೂಡ ಕಳೆದುಕೊಳ್ಳದೇ ಸತತ ಎಟಿಪಿ ಮಾಸ್ಟರ್ಸ್ 1000 ಪ್ರಶಸ್ತಿಗಳನ್ನು ಗೆದ್ದ ಮೊದಲ ಆಟಗಾರ ಎಂಬ ದಾಖಲೆಯನ್ನೂ ನಿರ್ಮಿಸಿದರು. ಕಳೆದ ನವೆಂಬರ್‌ನಲ್ಲಿ ಪ್ಯಾರಿಸ್‌ನಲ್ಲಿ ಪಡೆದ ಪ್ರಶಸ್ತಿಯಿಂದ ಆರಂಭವಾದ ಅವರ ಗೆಲುವಿನ ಸರಣಿ ಈಗ 11 ಪಂದ್ಯಗಳಿಗೆ ಏರಿದೆ.

ಸೆಬಲೆಂಕಾಗೆ ವೃತ್ತಿಜೀವನದ 23ನೇ ಪ್ರಶಸ್ತಿ!: ಬೆಲಾರೂಸ್ ತಾರೆ ಅರೀನಾ ಸೆಬಲೆಂಕಾ ಭಾನುವಾರ ತಮ್ಮ ದೀರ್ಘಕಾಲದ ಸೋಲಿನ ಸರಪಣಿಯನ್ನು ಮುರಿದು, ಇದೇ ಮೊದಲ ಬಾರಿಗೆ ಇಂಡಿಯನ್ ವೆಲ್ಸ್‌ನಲ್ಲಿ ಪ್ರಶಸ್ತಿಗೆ ಮುತ್ತಿಟ್ಟಿದ್ದಲ್ಲದೆ ತಮ್ಮ ವೃತ್ತಿಜೀವನದ 23ನೇ ಪ್ರಶಸ್ತಿಯನ್ನು ಗೆದ್ದುಕೊಂಡಿದ್ದಾರೆ. ರೋಚಕ ಫೈನಲ್ ಪಂದ್ಯದಲ್ಲಿ ಕಜಕಿಸ್ತಾನದ ತಾರೆ ಎಲೆನಾ ರೀಬಕಿನ ಅವರನ್ನು 3-6, 6-3, 7-6(6) ಅಂತರದಿಂದ ಸೋಲಿಸಿ ಮೊದಲ ಬಾರಿಗೆ ಕ್ಯಾಲಿಫೋರ್ನಿಯಾದಲ್ಲಿ ಪ್ರಶಸ್ತಿಗೆ ಮುತ್ತಿಟ್ಟರು.

ಪದಬಂಧ

» ರಾಜಾ ಸಂಗಮೇಶ ಹಿರೇಮಠ

5926

1	■	■	2		3	■	■	4
5				■	6			
■	■	■		■		■	■	■
■	7			■	8		9	■
■		■	■	■	■	■		■
10				■	11			12
	■	■	■	■	■	■	■	
	■	13				14	■	
15			■	■	■	16		

ಎಡದಿಂದ ಬಲಕ್ಕೆ
2.ಗಡಿಯ ನಡುವೆ ಕಟ್ಟಿದ ವ್ಯಾಯಾಮ ಶಾಲೆ (3)
5.ಮಕ್ಕಳು ಮರಳಿನಿಂದ ಕಟ್ಟಿದ ಮನೆ (4)
6. ಗೋಡಂಬಿಯನ್ನು ಹೀಗೂ ಕರೆಯುತ್ತೇವೆ (4)
7. ಮಣ್ಣಿನ ಪಾತ್ರೆ ಮಾಡುವ ಕಾಯಕದವ (3)
8.ದೃಷ್ಟಿಯೂ ಹೌದು-ಕಾಣಿಕೆಯೂ ಹೌದು (3)
10.ಭೂಮಿ-ಆಕಾಶಕ್ಕೂ ನಡುವಿನ ಪ್ರದೇಶ (4)
11.ಸಂತನ ನಡುವೆ ಕುಗ್ಗಿದ್ದು ಇದೆ (4)
13. ಈತ ಹರಿಕಥೆ ಮಾಡುವವನು (5)
15. ಜೀರ್ಣಕ್ರಿಯೆಯ ಮುಖ್ಯ ಅಂಗ (3)
16. ತಾಳ್ಮೆಯಿಂದ ಸೈರಿಸಿಕೋ (3)

ಮೇಲಿನಿಂದ ಕೆಳಕ್ಕೆ
1.ಕೊಂಬೆಗಳಿಲ್ಲದ ಎತ್ತರವಾದ ಮರ (2)
2. ಗರದ ನಡುವೆ ಅಡಗಿದ ಕಠಿಣವಾದದ್ದು (4)
3.ಅಪಹಾಸ್ಯಕ್ಕೆ ಒಳಗಾದವನು ತಲೆಕೆಳಗಾಗಿದ್ದಾನೆ (4)
4. ಒಂದು ದೇಶದ ಆಡಳಿತಗಾರ (2)
7.ಬಲ ಕಡಿಮೆಯಾದದ್ದು-ಕುಗ್ಗಿದುದು (3)
9. ತಳಿರು ಇಲ್ಲಿ ತಲೆಕೆಳಗಾಗಿದೆ (3)
10. ಅಂಕದ ನಡುವೆ ಕುಜಗ್ರಹವಿದೆ (4)
12.ಅಕಸ್ಮಾತ್ ಪರಿಸ್ಥಿತಿಯಿಂದ ಮನ ಅಸ್ತವ್ಯಸ್ತವಾಗು (4)
13.ಹೀನವೂ ಹೌದು-ಎಳೆದುಹಾಕುವಿಕೆಯೂ ಹೌದು (2)
14.ಇದು ಹಣ್ಣಿನ ಸಾರ (2)

5925 ಉತ್ತರ

ಎಡದಿಂದ ಬಲಕ್ಕೆ:
2.ಅನುಕೂಲಿಗ
5.ಉಗ್ರ 6.ಧೇನು
7.ಕಲಹ 9.ಅವನಿ
11.ಕಾಯಿಸು 13.ಜನನಿ
15.ಲವ 16.ಮಾರಿ
17.ಕ್ರಮಪಡಿಸು

ಮೇಲಿನಿಂದ ಕೆಳಕ್ಕೆ :
1 .ಆಕರ್ಷಕ 2.ಅನುಗ್ರಹ
3.ಅನುರಾಗ
4.ಬಿರಿಯಾನಿ 8.ಲಡಾಯಿ
10.ವದನ 11.ಸುಚರಿತ
12.ಕಾಲಚಕ್ರ
13.ಜಮಾಯಿಸು
14.ನಿವೇದನೆ

ಇಶಾನ್ ಕಿಶನ್ ಸನ್‌ರೈಸರ್ಸ್ ನಾಯಕ?



ಟಿ20 ವಿಶ್ವಕಪ್ ಗೆಲುವಿನ ರೂವಾರಿ

ಐಸಿಸಿ ಪುರುಷರ ಟಿ20 ವಿಶ್ವಕಪ್ 2026ರಲ್ಲಿ ಇಶಾನ್ ಕಿಶನ್ ಭಾರತ ತಂಡಕ್ಕೆ ಮಹತ್ವದ ಪಾತ್ರ ವಹಿಸಿದರು. 9 ಇನ್ನಿಂಗ್ಸ್‌ಗಳಲ್ಲಿ 317 ರನ್ ಗಳಿಸಿದ ಕಿಶನ್, ಭಾರತದ ಎರಡನೇ ಅತಿ ಹೆಚ್ಚು ರನ್ ಗಳಿಸಿದ ಆಟಗಾರರಾಗಿದ್ದರು. ಅವರ ಸರಾಸರಿ 35.22 ಆಗಿದ್ದು, ಸ್ಟ್ರೈಕ್ ರೇಟ್ 193 ದಾಟಿತ್ತು. ಈ ಅಭಿಯಾನದಲ್ಲಿ 3 ಅರ್ಧಶತಕಗಳು ಸೇರಿದ್ದು, ಫೈನಲ್‌ನಲ್ಲೂ ಒಂದು ಅರ್ಧಶತಕ ಬಾರಿಸಿ ಭಾರತ ತಂಡಕ್ಕೆ ಪ್ರಶಸ್ತಿ ಗೆಲ್ಲಲು ನೆರವಾದರು.

ಹೈದರಾಬಾದ್: ಭಾರತ ತಂಡದ ಎಡಗೈ ಬ್ಯಾಟ್ಸ್‌ಮನ್ ಇಶಾನ್ ಕಿಶನ್ ಮುಂಬರುವ ಐಪಿಎಲ್ 2026 ಹಂಗಾಮಿನಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಮುನ್ನಡೆಸುವ ಸಾಧ್ಯತೆಯಿದೆ. ಆಸ್ಟ್ರೇಲಿಯಾದ ವೇಗದ ಬೌಲರ್ ಪ್ಯಾಟ್ ಕಮ್ಮಿನ್ಸ್ ಯಾವಾಗ ತಂಡದೊಂದಿಗೆ ಸೇರಿಕೊಳ್ಳುತ್ತಾರೆ ಎಂಬುದರ ಕುರಿತು ಇನ್ನೂ ಸ್ಪಷ್ಟತೆ ಇಲ್ಲದಿರುವ ಕಾರಣ, ಕಿಶನ್ ನಾಯಕರಾಗಲು ಪ್ರಮುಖ ಅಭ್ಯರ್ಥಿ ಎಂಬ ನಿರೀಕ್ಷೆಯಿದೆ. ಮೂಲಗಳ ಪ್ರಕಾರ, ಈ ವಿಷಯದ ಬಗ್ಗೆ ಸನ್‌ರೈಸರ್ಸ್ ಕ್ರಿಕೆಟ್ ನಿರ್ವಹಣಾ ಮಂಡಳಿ ಚರ್ಚೆ ನಡೆಸಿದ್ದು, ಕಮ್ಮಿನ್ಸ್ ಗೈರುಹಾಜರಿಯಲ್ಲಿ ನಾಯಕತ್ವ ವಹಿಸಲು ಕಿಶನ್ ಅವರನ್ನು ಅತ್ಯಂತ ಸೂಕ್ತ ಅಭ್ಯರ್ಥಿಯನ್ನಾಗಿ ಗುರುತಿಸಿದೆ.

ಈ ವೇಳೆ ಕಿಶನ್ ಅವರ ಪ್ರದರ್ಶನವೂ ಅತ್ಯುತ್ತಮ ಮಟ್ಟದಲ್ಲಿದೆ. 27 ವರ್ಷದ ಈ ಆಟಗಾರ ಇತ್ತೀಚಿನ ಟಿ20 ವಿಶ್ವಕಪ್‌ನಲ್ಲಿ ಅದ್ಭುತ ಪ್ರದರ್ಶನ ನೀಡಿ ದೇಶದ ಗಮನ ಸೆಳೆದಿದ್ದರು. ಆರಂಭದಲ್ಲಿ ಅಗ್ರ ಕ್ರಮಾಂಕದ ಬ್ಯಾಟ್ಸ್‌ಮನ್ ಆಗಿ ಹಾಗೂ ನಂತರ ಸಂಜು ಸ್ಯಾಮ್ಸನ್ ಪ್ಲೇಯಿಂಗ್ ಇಲೆವೆನ್‌ಗೆ ಮರಳಿದ ನಂತರ ಮೂರನೇ ಕ್ರಮಾಂಕದಲ್ಲಿ ಉತ್ತಮ ಆಟ ಪ್ರದರ್ಶಿಸಿದರು.

ಐಪಿಎಲ್‌ನಲ್ಲಿ ಕಿಶನ್ ಸ್ಫೋಟಕ ಪ್ರದರ್ಶನ: ಐಪಿಎಲ್‌ನಲ್ಲಿ ಕಿಶನ್ ಅತ್ಯಂತ ಸ್ಫೋಟಕ ವಿಕೆಟ್ ಕೀಪರ್-ಬ್ಯಾಟ್ಸ್‌ಮನ್‌ಗಳಲ್ಲಿ ಒಬ್ಬರಾಗಿ ತಮ್ಮ ಛಾಪು ಮೂಡಿಸಿದ್ದಾರೆ. ಸನ್‌ರೈಸರ್ಸ್ ಹೈದರಾಬಾದ್ ಸೇರಿ ಮೂರು ಫ್ರಾಂಚೈಸಿಗಳ ಪರ ಆಡಿರುವ ಅವರು ಟೂರ್ನಿಯ ಒಟ್ಟು 119 ಪಂದ್ಯಗಳ 112 ಇನ್ನಿಂಗ್ಸ್‌ಗಳಲ್ಲಿ 2,998 ರನ್ ಕಲೆಹಾಕಿದ್ದಾರೆ. ಅವರ ಸರಾಸರಿ 29.10 ಆಗಿದ್ದು, 137.64 ಸ್ಟ್ರೈಕ್ ರೇಟ್ ಅನ್ನು ಹೊಂದಿದ್ದಾರೆ.

ಅವರ ಖಾತೆಯಲ್ಲಿ 1 ಶತಕ, 17 ಅರ್ಧಶತಕಗಳು, 288 ಬೌಂಡರಿಗಳು ಹಾಗೂ 134 ಸಿಕ್ಸರ್‌ಗಳು ಸೇರಿವೆ. ಇದು ಅವರ ಆಕ್ರಮಣಕಾರಿ ಬ್ಯಾಟಿಂಗ್ ಶೈಲಿಯನ್ನು ಸ್ಪಷ್ಟಪಡಿಸುತ್ತದೆ. ವಿಕೆಟ್ ಹಿಂದೆ ಕೂಡ ಅವರು 59 ಕ್ಯಾಚ್‌ಗಳು ಮತ್ತು 5 ಸ್ಟಂಪಿಂಗ್‌ಗಳ ಮೂಲಕ ತಂಡಕ್ಕೆ ಕೊಡುಗೆ ನೀಡಿದ್ದಾರೆ.

2025ರ ಹರಾಜಿನಲ್ಲಿ 11.25 ಕೋಟಿಗೆ ಖರೀದಿ!: 2025ರ ಹಂಗಾಮಿನಲ್ಲಿ ಹರಾಜಿನಲ್ಲಿ ರೂ. 11.25 ಕೋಟಿಗೆ ಖರೀದಿಸಲ್ಪಟ್ಟ ನಂತರದ ಮೊದಲ ಸೀಸನ್‌ನಲ್ಲಿ ಅವರು 14 ಪಂದ್ಯಗಳಲ್ಲಿ 354 ರನ್ ಗಳಿಸಿದ್ದರು. ಆ ಸಂದರ್ಭದಲ್ಲಿ ಅವರ ಸ್ಟ್ರೈಕ್ ರೇಟ್ 152.58 ಆಗಿದ್ದು, ತಲಾ ಒಂದು ಶತಕ ಮತ್ತು ಅರ್ಧಶತಕವನ್ನು ಕೂಡ ದಾಖಲಿಸಿದ್ದರು.

ಆದಾಯ ಸ್ಥಿರತೆ, ಮಹಿಳಾ ಸಬಲೀಕರಣ, ಹವಾಮಾನ ಪ್ರತಿರೋಧಕ ಅಭಿವೃದ್ಧಿಯ ಮಾರ್ಗ | ವಿಕಸಿತ ಭಾರತ-2047 ಗುರಿಯತ್ತ ದಿಟ್ಟ ಹೆಜ್ಜೆ

ವಿಬಿ ಜಿ ರಾಮ್ ಜಿ ಸಮಗ್ರ, ಸುಸ್ಥಿರ ಗ್ರಾಮೀಣ ಅಭಿವೃದ್ಧಿಯ ದಾರಿದೀಪ

ವಿಕಸಿತ ಭಾರತ-ರೋಜಗಾರ್ ಮತ್ತು ಜೀವನೋಪಾಯ ಖಾತರಿ ಮಿಷನ್ (ಗ್ರಾಮೀಣ) ಇದು ಒಂದು ಪರಿಷ್ಕೃತ ಸಮಗ್ರ, ಸುಸ್ಥಿರ ಗ್ರಾಮೀಣ ಅಭಿವೃದ್ಧಿಯ ನೂತನ ಯೋಜನೆ. ಇದು ಇಂಗ್ಲೀಷ್‌ನಲ್ಲಿ ವಿಬಿ-ಜಿ ರಾಮ್-ಜಿ (VB-G RAM-G) ಎಂದು ಸಂಕ್ಷಿಪ್ತವಾಗಿ ಕರೆಯಲಾಗುತ್ತದೆ. ಇದು ಯಾರ ಒಬ್ಬ ವ್ಯಕ್ತಿಯ, ಊರಿನ ಅಥವಾ ಧರ್ಮ ಗ್ರಂಥದ ಹೆಸರೂ ಅಲ್ಲ, ಬಲ ಅಥವಾ ಎಡಪಂಕ್ತಿಯ ಸೈದ್ಧಾಂತಿಕ ಕೃತಿಯ ಹೆಸರೂ ಅಲ್ಲ. ಇದು ಒಬ್ಬ ವ್ಯಕ್ತಿಯ ಕೇವಲ ಉದ್ಯೋಗ ಸೃಷ್ಟಿಯ ಯೋಜನೆ ಅಲ್ಲ; ಇದು ಸಮಗ್ರ ಗ್ರಾಮೀಣ ಅಭಿವೃದ್ಧಿ ಜೊತೆಗೆ ಆದಾಯ ಸ್ಥಿರತೆ, ಮಹಿಳಾ ಸಬಲೀಕರಣ, ಹವಾಮಾನ ಪ್ರತಿರೋಧಕ ಅಭಿವೃದ್ಧಿಯ ಮಾರ್ಗವಾಗಿದ್ದು, ವಿಕಸಿತ ಭಾರತ-2047 ಗುರಿಯನ್ನು ಸಾಧಿಸಲು ಗ್ರಾಮೀಣ ಭಾರತವನ್ನು ಬಲಪಡಿಸುವ ಒಂದು ದಿಟ್ಟ ಹೆಜ್ಜೆಯಾಗಿದೆ. ಇದು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ 2005 (MGN-REGA)ರ ಬದಲಾಗಿ ದೇಶಾದ್ಯಂತ ಏ.1, 2026ರಿಂದ ಅನುಷ್ಠಾನಗೊಳಿಸಲು ಉದ್ದೇಶಿಸಿದೆ.



ವಿಬಿ-ಜಿ ರಾಮ್-ಜಿ ಯೋಜನೆಯ ವಿಶೇಷತೆಗಳು: ಇದು ಹಕ್ಕು-ಆಧಾರಿತ, ಬೇಡಿಕೆ-ಪ್ರಚೋದಿತ ಗ್ರಾಮೀಣ ಉದ್ಯೋಗ ಯೋಜನೆಯಿಂದ, ವಿಕಸಿತ ಭಾರತ ಗುರಿ ಸಾಧನೆಗೆ ಹೊಂದಿಕೊಳ್ಳುವ ಬಜೆಟ್ ಮಿತಿಯ ಪೂರೈಕೆ-ಆಧಾರಿತ ಯೋಜನೆಯಾಗಿದೆ. ಅಂದರೆ ಈ ಯೋಜನೆಯು ಗ್ರಾಮೀಣ ಉದ್ಯೋಗವನ್ನು ಕೇವಲ ಕೂಲಿ ಆಧಾರಿತ ಯೋಜನೆಯಾಗಿ ಅನುಷ್ಠಾನಗೊಳಿಸದೆ, ಉತ್ಪಾದಕ ಆಸ್ತಿ ನಿರ್ಮಾಣ, ಮಹಿಳಾ ಸಬಲೀಕರಣ, ಹವಾಮಾನ ಪ್ರತಿರೋಧಕ ಅಭಿವೃದ್ಧಿ ಮತ್ತು ಪಾರದರ್ಶಕ ಆಡಳಿತ ಹೊಂದಿದ ಸಮಗ್ರ, ಗ್ರಾಮೀಣ ಅಭಿವೃದ್ಧಿ ಚೌಕಟ್ಟಾಗಿ ರೂಪಿಸಲಾಗಿದೆ.

ಜೀವನೋಪಾಯ ಕಾಮಗಾರಿಗಳು: ಕೇವಲ ತಾತ್ಕಾಲಿಕ ಕೂಲಿ ಕೆಲಸ ಒದಗಿಸುವುದರ ಜೊತೆಗೆ ಉತ್ಪಾದಕ ಮತ್ತು ದೀರ್ಘಕಾಲಿಕ ಆದಾಯ ಸೃಷ್ಟಿಸುವ ಆಸ್ತಿಗಳ ನಿರ್ಮಾಣಕ್ಕೆ ಹೆಚ್ಚು ಒತ್ತು ನೀಡುವುದು. ನಾಲ್ಕು ಕ್ಷೇತ್ರಗಳಲ್ಲಿ ಶಾಶ್ವತ ಆಸ್ತಿಗಳ ನಿರ್ಮಾಣ ಮಾಡಲಾಗುತ್ತದೆ. ಅಂದರೆ ನೀರಿನ ಭದ್ರತೆ, ಗ್ರಾಮೀಣ ಮೂಲಸೌಕರ್ಯ, ಜೀವನೋಪಾಯ ಸಂಬಂಧಿತ ಮೂಲಸೌಕರ್ಯ ಮತ್ತು ತೀವ್ರ ಹವಾಮಾನ ಶಮನಗೊಳಿಸುವ ಕಾಮಗಾರಿಗಳು ಈ ಯೋಜನೆಯಡಿಯಲ್ಲಿ ಕೈಗೊಳ್ಳಲಾಗುವುದು. ಇದರಿಂದ ದೀರ್ಘಕಾಲಿಕ ಮತ್ತು ಉತ್ಪಾದಕ ಗ್ರಾಮೀಣ ಆಸ್ತಿಗಳು ಸೃಷ್ಟಿಯಾಗುತ್ತವೆ.

ನೀರಿನ ಭದ್ರತೆ: ನೀರಿನ ಕೊರತೆ ಗ್ರಾಮೀಣ ಭಾರತದ ಮುಖ್ಯ ಸಮಸ್ಯೆಯಾಗಿದೆ. ಹೀಗಾಗಿ ವಿಕಸಿತ ಭಾರತ ಗುರಿ ಸಾಧನೆಯ ಹಿನ್ನಲೆಯಲ್ಲಿ ನೀರಿನ ಭದ್ರತೆ ಒದಗಿಸುವ ಸಲುವಾಗಿ ಕೆರೆಗಳ ಮರುನಿರ್ಮಾಣ, ಚೆಕ್‌ಡ್ಯಾಂ, ಬಂಡೆಗಳು, ಮಳೆ ನೀರು ಸಂಗ್ರಹಣೆ, ಭೂಗರ್ಭ ಜಲ ಸಂರಕ್ಷಣೆ ಮುಂತಾದ ಕಾಮಗಾರಿಗಳಿಗೆ ಹೆಚ್ಚಿನ ಆದ್ಯತೆ ನೀಡಲು ಪ್ರಸ್ತಾವಿಸಲಾಗಿದೆ.

ಗ್ರಾಮೀಣ ಮೂಲಸೌಕರ್ಯ: ಗ್ರಾಮೀಣ ಭಾರತದ ಸಮಗ್ರ ಸುಸ್ಥಿರ ಅಭಿವೃದ್ಧಿಯಲ್ಲಿ ಮೂಲಸೌಕರ್ಯಗಳ ಪಾತ್ರ ಮಹತ್ವದ್ದು. ಇವುಗಳ ಗುಣಮಟ್ಟದ ಕೊರತೆಗಳಿಂದ ಅಭಿವೃದ್ಧಿ ಕುಂಠಿತಗೊಂಡಿದ್ದರಿಂದ, ಗ್ರಾಮೀಣ ರಸ್ತೆ, ಕಾಲುವೆಗಳು, ಸ್ಮಶಾನ ಭೂಮಿ ಅಭಿವೃದ್ಧಿ, ಸಾರ್ವಜನಿಕ ಕಟ್ಟಡ ಮುಂತಾದವುಗಳ ಅಭಿವೃದ್ಧಿಗಾಗಿ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗಿದೆ.

ಮಹಿಳಾ ಮತ್ತು ದುರ್ಬಲ ವರ್ಗಗಳ ಸಬಲೀಕರಣ: ಈ ಯೋಜನೆಯ ಪ್ರತಿ ಕಾಮಗಾರಿಗಳಲ್ಲಿ ಕನಿಷ್ಠ ಶೇ.33ರಷ್ಟು ಮಹಿಳಾ ಕಾರ್ಮಿಕರು ಪಾಲ್ಗೊಳ್ಳುವಿಕೆಗೆ ಕಡ್ಡಾಯಗೊಳಿಸಲಾಗಿದೆ. ಕೂಲಿ ಆಧಾರಿತ ಉದ್ಯೋಗ ಒದಗಿಸುವಲ್ಲಿ ಏಕಾಂಗ ಮಹಿಳೆಯರಿಗೆ ಹಾಗೂ ಮಹಿಳಾ ಮುಖ್ಯಸ್ಥ ಕುಟುಂಬಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ. 5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಐದು ಅಥವಾ ಹೆಚ್ಚು ಮಕ್ಕಳು ಕೆಲಸಕ್ಕೆ ಬರುವ ಮಹಿಳೆಯರೊಂದಿಗೆ ಇದ್ದಲ್ಲಿ, ಕಾರ್ಯಕ್ಷೇತ್ರದಲ್ಲಿ ಸೌಲಭ್ಯ ಒದಗಿಸುವುದು ಕಡ್ಡಾಯ.

ಪಾರದರ್ಶಕತೆ ಮತ್ತು ಜವಾಬ್ದಾರಿತ್ವ: ಬಯೋಮೆಟ್ರಿಕ್ ದೃಢೀಕರಣ ಮತ್ತು ಡಿಜಿಟಲ್ ಮೇಲ್ವಿಚಾರಣೆ ಮೂಲಕ ಅಕ್ರಮ ಕಾಮಗಾರಿಗಳ ಸೃಷ್ಟಿ, ಜಾಬ್ ಕಾರ್ಡ್‌ಗಳ ನೋಂದಣಿ, ವೇತನ ಪಾವತಿ ವಿಳಂಬ ಮುಂತಾದ ಸಮಸ್ಯೆಗಳನ್ನು ಇತ್ಯಾರ್ಥಗೊಳಿಸಲು ಸಾಧ್ಯ. ಕೃತಕ ಬುದ್ಧಿಮತ್ತೆ ಆಧಾರಿತ ತಂತ್ರಜ್ಞಾನದ ಮೂಲಕ ಈ ಯೋಜನೆಯ ಕಾಮಗಾರಿಗಳ ಸಾಮಾಜಿಕ ಲೆಕ್ಕಪತ್ರ ಮತ್ತು ದೂರು ನಿವಾರಣಾ ವ್ಯವಸ್ಥೆಯನ್ನು ಬಲಪಡಿಸಲಾಗುತ್ತದೆ.

ಸಮಗ್ರ ಯೋಜನೆ ಮತ್ತು ಸಂಯೋಜನೆ: ವಿಕಸಿತ ಗ್ರಾಮ ಪಂಚಾಯತ್ ಯೋಜನೆಗಳೊಂದಿಗೆ ಇದು ಸಮನ್ವಯಗೊಳಿಲಾಗುತ್ತದೆ. ವಿಕಸಿತ ಗ್ರಾಮ ಪಂಚಾಯತ್ ಯೋಜನೆಗಳು (Viksit Gram Panchayat Plans) ಹಾಗೂ ಇತರ ಯೋಜನೆಗಳ ಸಂಯೋಜನೆಯ ಮೂಲಕ ಕೂಲಿ ಆಧಾರಿತ ಉದ್ಯೋಗವನ್ನು ಆಸ್ತಿ ನಿರ್ಮಾಣ, ಮೂಲಸೌಕರ್ಯ ಕೊರತೆ ನಿವಾರಣೆ ಮತ್ತು ದೀರ್ಘಕಾಲೀನ ಜೀವನೋಪಾಯ ವೃದ್ಧಿಯ ಕಾಮಗಾರಿಗಳೊಂದಿಗೆ ಸಂಪರ್ಕಿಸುತ್ತದೆ.

ಕೇಂದ್ರ-ರಾಜ್ಯಗಳ ನಡುವೆ ನಿಧಿ ಹಂಚಿಕೆ: ವಿಬಿ ಜಿ ರಾಮ್ ಜಿ ಯೋಜನೆಯಡಿಯಲ್ಲಿ ವಸ್ತು ಮತ್ತು ಪರಿಣತ ಕಾರ್ಮಿಕರ ಮೇಲಿನ ವೆಚ್ಚ ಶೇ.60ರಷ್ಟು ಕೇಂದ್ರ ಸರ್ಕಾರ ಮತ್ತು ಶೇ. 40ರಷ್ಟು ರಾಜ್ಯ ಸರ್ಕಾರ ಭರಿಸಬೇಕಾಗುತ್ತದೆ. ವಿಬಿ ಜಿ ರಾಮ್ ಜಿ ಯೋಜನೆಯಲ್ಲಿ ಕೇಂದ್ರ ಸರ್ಕಾರದ ಪಾಲು ಕಡಿಮೆ ಮಾಡಿ ರಾಜ್ಯ ಸರ್ಕಾರದ ಪಾಲು ಶೇ.25ರಿಂದ ಶೇ.40ರಷ್ಟಕ್ಕೆ ಹೆಚ್ಚಿಸಲಾಗಿದೆ.

ಪ್ರಸ್ತುತ ಹಣಕಾಸಿನ ವರ್ಷದಲ್ಲಿ ಕೇಂದ್ರ ಸರ್ಕಾರವು ಮನರೇಗಾ ಯೋಜನೆಯಡಿಯಲ್ಲಿ 30,000 ಕೋಟಿರೂ. ಮತ್ತು ವಿಬಿ ಜಿ ರಾಮ್ ಜಿ ಯೋಜನೆಯಡಿಯಲ್ಲಿ 95,692 ಕೋಟಿ ರೂ.ಗಳನ್ನ ಕಾಯ್ದಿರಿಸಲಾಗಿದೆ. ಅಂದರೆ ಒಟ್ಟು 1,25,692 ಕೋಟಿ ರೂ.ಗಳನ್ನು ವೆಚ್ಚ ಮಾಡುವ ಉದ್ದೇಶವನ್ನು ಹೊಂದಿದೆ.

ರಾಜ್ಯ ಸರ್ಕಾರಗಳ ವಿರೋಧವೇಕೆ?: ದೇಶದ ಬಹುತೇಕ ರಾಜ್ಯಗಳು ವಿಬಿ ಜಿ ರಾಮ್ ಜಿ ಯೋಜನೆಗೆ ತಮ್ಮ ಸಹಮತವನ್ನು ವ್ಯಕ್ತಪಡಿಸಿದರೆ, ಕರ್ನಾಟಕ ರಾಜ್ಯ ಸೇರಿದಂತೆ ತೆಲಂಗಾಣ, ತಮಿಳುನಾಡು ಮತ್ತು ಪಂಜಾಬ್ ರಾಜ್ಯಗಳು ಇದರ ಅನುಷ್ಠಾನವನ್ನು ಏಕಾಏಕಿಯಾಗಿ ವಿರೋಧಿಸುತ್ತಿವುದು ವಿಷಾದನೀಯ. ಏಕೆಂದರೆ ಈ ಯೋಜನೆಯನ್ನು ಜಾರಿಗೆ ತಂದರೆ ರಾಜ್ಯ ಸರ್ಕಾರಗಳ ಮೇಲೆ ಆರ್ಥಿಕ ಭಾರ ಹೆಚ್ಚಾಗುವ ಸಾಧ್ಯತೆ ಇದೆ.

ಆದರೆ ಈ ಯೋಜನೆ ರೈತರ, ಬಡವರ, ಮಹಿಳೆಯರ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದೂಳಿದ ಜನರ, ಯುವಕರಮೇಲೆ ಅಥವಾಗ್ರಾಮೀಣ ಸುಸ್ಥಿರ ಅಭಿವೃದ್ಧಿಯ ಮೇಲೆ ಯಾವುದೇ ರೀತಿಯ ವ್ಯತಿರಿಕ್ತವಾದ ಪರಿಣಾಮ ಬೀರುವುದಿಲ್ಲ, ಇದು ಗ್ರಾಮೀಣ ಭಾರತದ ಆರ್ಥಿಕತೆಯನ್ನು ಇನ್ನಷ್ಟು ಬಲಪಡಿಸುವುದರ ಮೂಲಕ 2047ರೊಳಗೆ ವಿಕಸಿತ ಭಾರತ ಗುರಿ ಸಾಧಿಸಲು ಅಣಿಯಾಗುವಂತೆ ಪರಿಷ್ಕೃತಗೊಂಡು ಅನುಷ್ಠಾನಗೊಳ್ಳಲ್ಪಡುವ ಒಂದು ಯೋಜನೆ.

ಪ್ರೊ. ಆರ್.ಆರ್. ಬಿರಾದಾರ
ಕುಲಸಚಿವರು, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಲಬುರಗಿ, rrbiradar@kud.ac.in

ಈಗಾಗಲೇ ತನ್ನೆಲ್ಲ ಕೆಲಸಗಳನ್ನು ಮುಗಿಸಿಕೊಂಡು ಬರುವ ಏಪ್ರಿಲ್ ತಿಂಗಳಲ್ಲಿ ಬಿಡುಗಡೆಯಾಗಲು ಸಿದ್ದವಾಗಿರುವ ಟೆರರ್ ಚಿತ್ರದ ಬೊಂಬೆ ಬೊಂಬೆ ಎಂಬ ಸಾಹಿತ್ಯ ಇರುವ ಡಾನ್ಸ್ ನಂಬರ್ ಹಾಡಿನ ಲಿರಿಕಲ್ ವೀಡಿಯೋ ಸೋಮವಾರ ಸಂಜೆ ಬಿಡುಗಡೆಯಾಯಿತು, ಬೊಂಬೆ ಬೊಂಬೆ ಬಣ್ಣದ ಗೊಂಬೆ, ಬೊಂಬೆ ಬೊಂಬೆ ಚಿನ್ನದ ಗೊಂಬೆ ಎಂಬ ಡಾ.ವಿ.ನಾಗೇಂದ್ರ ಪ್ರಸಾದ್ ಅವರ ಸಾಹಿತ್ಯ ಇರುವ ಡಾನ್ಸ್ ನಂಬರ್ ಹಾಡಿಗೆ ಭಾನು ಅವರ ಕೊರಿಯಾಗ್ರಫಿಯಿದೆ,

ಟೆರರ್ ಬೊಂಬೆ ಬೊಂಬೆ ಹಾಡು ಹೊರಬಂತು!







ನಟ ಆದಿತ್ಯ ಈಗಾಗಲೇ ರೌಡಿ, ಲವರ್ ಬಾಯ್, ಆಕ್ಷನ್ ಹೀರೋ ಹೀಗೆ ಎಲ್ಲಾ ರೀತಿಯ ಪಾತ್ರಗಳನ್ನು ಮಾಡಿಕೊಂಡು ಬಂದಿದ್ದಾರೆ. ಈಗವರು ಒಬ್ಬ ಯಂಗ್ ಗ್ಯಾಂಗ್‌ಸ್ಟರ್ ಅವತಾರದಲ್ಲಿ ಪ್ರೇಕ್ಷಕರ ಮುಂದೆ ಬರಲು ಅಣಿಯಾಗಿದ್ದಾರೆ. ಆ ಚಿತ್ರದ ಹೆಸರು ಟೆರರ್. ಈಗಾಗಲೇ ತನ್ನೆಲ್ಲ ಕೆಲಸಗಳನ್ನು ಮುಗಿಸಿಕೊಂಡು ಏಪ್ರಿಲ್ ತಿಂಗಳಲ್ಲಿ ಬಿಡುಗಡೆಯಾಗಲು ಸಿದ್ದವಾಗಿರುವ ಈ ಚಿತ್ರದ ಡಾನ್ಸ್ ನಂಬರ್ ಹಾಡಿನ ಲಿರಿಕಲ್ ವೀಡಿಯೋ ಸೋಮವಾರ ಸಂಜೆ ಬಿಡುಗಡೆಯಾಯಿತು, ಬೊಂಬೆ ಬೊಂಬೆ ಬಣ್ಣದ ಗೊಂಬೆ, ಬೊಂಬೆ ಬೊಂಬೆ ಚಿನ್ನದ ಗೊಂಬೆ ಎಂಬ ಡಾ.ವಿ.ನಾಗೇಂದ್ರ ಪ್ರಸಾದ್ ಅವರ ಸಾಹಿತ್ಯ ಇರುವ ಡಾನ್ಸ್ ನಂಬರ್ ಹಾಡಿಗೆ ಭಾನು ಅವರ ಕೊರಿಯಾಗ್ರಫಿಯಿದೆ, ಕನ್ನಡ ಚಿತ್ರರಂಗದಲ್ಲಿ ನೂತನ ದಾಖಲೆ ಬರೆದ, ಸೂಪರ್ ಸ್ಟಾರ್ ಉಪೇಂದ್ರ ನಿರ್ದೇಶಿಸಿದ್ದ ಎ ಚಿತ್ರ ನಿರ್ಮಿಸಿದ ನಿರ್ಮಾಪಕ ಸಿಲ್ಕ್ ಮಂಜು ಅವರು ಉಪ್ಪಿ ಎಂಟರ್ ಟೈನರ್ಸ್ ಅಡಿ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ, ಕಳೆದ ವರ್ಷವಷ್ಟೇ ದಿಗಂತ್ ಅಭಿನಯದ ನಿಮ್ಮ ಖಾತೆಯಲ್ಲಿ ಹಣವಿಲ್ಲ ಎಂಬ ಚಿತ್ರವನ್ನು ನಿರ್ಮಿಸಿದ್ದ ಸಿಲ್ಕ್ ಮಂಜು ಅವರೀಗ ರಂಜನ್ ಶಿವರಾಮಗೌಡ ಅವರ ನಿರ್ದೇಶನದ ಹಾಗೂ ನಟ ಆದಿತ್ಯ ನಾಯಕರಾಗಿ ನಟಿಸುತ್ತಿರುವ ಟೆರರ್ ಚಿತ್ರವನ್ನು ನಿರ್ಮಿಸಿ ತೆರೆಗೆ ತರುತ್ತಿದ್ದಾರೆ. ಉಪ್ಪಿ ಎಂಟರ್‌ಟೈನರ್ ಅಡಿ ಈ ಚಿತ್ರ ನಿರ್ಮಾಣವಾಗುತ್ತಿದೆ,

ಚಿತ್ರದ ಕುರಿತಂತೆ ಮಾತನಾಡಿರುವ ನಿರ್ದೇಶಕ ರಂಜನ್ ಶಿವರಾಮಗೌಡ, ನನ್ನ ನಿರ್ದೇಶನದ ಪ್ರಥಮ ಚಿತ್ರ ಇದಾಗಿದ್ದ, ಹೊಸ ಮಾಫಿಯಾ ಸುತ್ತ ನಡೆಯುವ ವಿಭಿನ್ನವಾದ ಕಥಾಹಂದರವನ್ನು ಈ ಚಿತ್ರದ ಮೂಲಕ ಹೇಳಹೊರಟಿದ್ದೇನೆ. ಚಿತ್ರದಲ್ಲಿ ನಟ ಆದಿತ್ಯ ಅವರು ಒಬ್ಬ ಯಂಗ್ ಗ್ಯಾಂಗ್ ಸ್ಟರ್ ಆಗಿ ಕಾಣಿಸಿಕೊಂಡಿದ್ದಾರೆ. ಅವರ ಪಾತ್ರಕ್ಕೆ ಎರಡು ಶೇಡ್ ಇದೆ. ಆದಿತ್ಯ ಅವರಿಗೆ ಈ ಕಥೆ ಹೇಳಿದಾಗ ಅವರಿಗೂ ಇಷ್ಟವಾಗಿ ಪಾತ್ರ ಮಾಡಲು ಒಪ್ಪಿಕೊಂಡರು. ನಮ್ಮ ಚಿತ್ರದ ಹೆಚ್ಚಿನ ಭಾಗದ ಚಿತ್ರೀಕರಣವನ್ನು ಬೆಂಗಳೂರಿನಲ್ಲೇ ನಡೆಸಿದ್ದೇವೆ. ನಿರ್ಮಾಪಕರಾದ ಸಿಲ್ಕ್ ಮಂಜು ಅವರು ಕಥೆ ಕೇಳಿ ಇಷ್ಟಪಟ್ಟು ಚಿತ್ರ ನಿರ್ಮಿಸಿದ್ದಾರೆ ಎಂದು ನಿರ್ದೇಶಕ ರಂಜನ್ ಶಿವರಾಮಗೌಡ ಅವರು ಹೇಳಿದ್ದಾರೆ.

ಗೆಳೆಯ ನಟ ಧರ್ಮ ಅವರ ಮೂಲಕ ನನಗೆ ನಿರ್ದೇಶಕ ರಂಜನ್ ಅವರ ಪರಿಚಯವಾಯಿತು. ರಂಜನ್ ಅವರು ಹೇಳಿದ ಕಥೆ ಬಹಳ ಹಿಡಿಸಿತು. ಚಿತ್ರದಲ್ಲಿ ನನ್ನ ಪಾತ್ರ ಎರಡು ಶೇಡ್ ಗಳಲ್ಲಿರುತ್ತದೆ. ಬಹಳ ಸ್ಟೈಲಿಶ್ ಆಗಿರುವ ಪಾತ್ರವಿ. ಯಂಗ್ ಗ್ಯಾಂಗ್‌ಸ್ಟರ್ ಆಗಿ ನಾನಿಲ್ಲ ಕಾಣಿಸಿಕೊಳ್ಳುತ್ತಿದ್ದೇನೆ ಎಂದು ನಾಯಕನಟ ಆದಿತ್ಯ ಅವರು ಹೇಳಿದ್ದಾರೆ. ಚಿತ್ರದ ಹಾಡುಗಳಿಗೆ ಹರ್ಷವರ್ಧನ್‌ರಾಜ್ ಅವರು ಸಂಗೀತ ನಿರ್ದೇಶನ ಮಾಡಿದ್ದಾರೆ. ಅಲ್ಲದೆ ನವೀನ್ ಅಕ್ಷಿ ಅವರು ಕ್ಯಾಮೆರಾ ವರ್ಕ್ ನಿಭಾಯಿಸಿದ್ದಾರೆ. ಜತೆಗೆ ಕೆಜಿಎಫ್ ಖ್ಯಾತಿಯ ಶ್ರೀಕಾಂತ್ ಅವರ ಸಂಕಲನ ಈ ಚಿತ್ರಕ್ಕಿದೆ.

ಈ ಚಿತ್ರದಲ್ಲಿ ವಿನೀತ್‌ಕುಮಾರ್ ಅವರು ನಾಯಕನಾಗಿ ನಟಿಸುತ್ತಿದ್ದಾರೆ. ಈಗಾಗಲೇ ಹಲವಾರು ತುಳು ಸಿನಿಮಾಗಳಲ್ಲಿ ನಟಿಸುವ ಮೂಲಕ ಪ್ರೇಕ್ಷಕರ ಗಮನ ಸೆಳೆದಿರುವ ವಿನೀತ್ ಮ್ಯಾರೇಜ್ ಪಾರ್ಟಿ ಚಿತ್ರದ ಮೂಲಕ ನಾಯಕನಾಗಿ ಕನ್ನಡ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಲಿದ್ದಾರೆ. ಮೂಲತಃ ಕುಂದಾಪುರದವರೇ ಆಗಿರುವ ನಿರ್ದೇಶಕ ಚಯನ್ ಶೆಟ್ಟಿ ಅವರು ತಮ್ಮೂರಿನಲ್ಲಿ ನಡೆಯುವ ಮಜವಾದ ಕಥೆಯೊಂದನ್ನು ಮ್ಯಾರೇಜ್ ಸ್ಟೋರಿ ಸಿನಿಮಾದ ಮೂಲಕ ದೃಷ್ಯವಾಗಿಸುವ ಪ್ರಯತ್ನ ಮಾಡಿದ್ದಾರೆ.

ಕುಂದಾಪುರದಲ್ಲಿ ಮ್ಯಾರೇಜ್ ಪಾರ್ಟಿ



ಮೊದಲ ಹಂತದ ಚಿತ್ರೀಕರಣ ಮುಕ್ತಾಯ

ಯುವನಟ ರೂಪೇಶ್ ಶೆಟ್ಟಿ ಅವರು ನಾಯಕನಾಗಿ ನಟಿಸಿದ್ದ ಅಧಿಪತ್ರ ಚಿತ್ರದ ಮೂಲಕ ನಿರ್ದೇಶಕನಾಗಿ ಗಮನ ಸೆಳೆದಿದ್ದ ಪ್ರತಿಭೆ ಚಯಾನ್ ಶೆಟ್ಟಿ. ತಮ್ಮ ಚೊಚ್ಚಲ ಚಿತ್ರಕ್ಕೆ ಸಿಕ್ಕ ಸಕಾರಾತ್ಮಕ ಪ್ರತಿಕ್ರಿಯೆಗಳು ಅವರನ್ನು ಸದ್ಯದಲ್ಲೇ ಮತ್ತೊಂದು ಚಿತ್ರದಲ್ಲಿ ತೊಡಗಿಸಿಕೊಳ್ಳುವಂತೆ ಮಾಡಿದೆ. ಅಧಿಪತ್ರ ಚಿತ್ರದ ನಂತರ ಚಯಾನ್ ಶೆಟ್ಟಿ ಅವರು ಸಂಪೂರ್ಣ ಮನೋರಂಜನಾತ್ಮಕ ಕಥೆಯೊಂದಿಗೆ ಮತ್ತೆ ನಿರ್ದೇಶನಕ್ಕೆ ಮರಳಿದ್ದು, ತಮ್ಮ ಎರಡನೇ ಪ್ರಯತ್ನಕ್ಕೆ 'ಮ್ಯಾರೇಜ್ ಪಾರ್ಟಿ' ಎಂಬ ಟೈಟಲ್ ಕೂಡ ಇಟ್ಟಿದ್ದಾರೆ, ಈ ಚಿತ್ರದ ಕಥೆ ಚಿತ್ರಕಥೆ ಬರದು ಚಿತ್ರದ ನಿರ್ದೇಶನ ಸಾರಥ್ಯ ವಹಿಸಿಕೊಂಡಿದ್ದಾರೆ. ಇದೀಗ ಸದ್ದುಗದ್ದಲವಿಲ್ಲದೆ ಮ್ಯಾರೇಜ್ ಪಾರ್ಟಿ ಚಿತ್ರದ ಮೊದಲ ಹಂತದ ಚಿತ್ರೀಕರಣವನ್ನೂ ಸಹ ಮುಗಿಸಿದ್ದಾರೆ,

ಮ್ಯಾರೇಜ್ ಪಾರ್ಟಿ ಒಂದು ಹಾಸ್ಯಪ್ರಧಾನ ಕಥಾಹಂದರ ಳಗೊಂಡ ಸಿನಿಮಾ. ಒಂದು ಗಟ್ಟಿ ಕಥೆಯೊಂದಿಗೆ ಪ್ರತೀ ಹಂತದಲ್ಲಿಯೂ ಕಚಗುಳಿಯಿಡುವ ಕಾಮಿಡಿ ಸೀನ್‌ಗಳ ಮೂಲಕ ಈ ಚಿತ್ರವನ್ನು ಕಟ್ಟಿ ಕೊಡಲು ನಿರ್ದೇಶಕ ಚಯನ್ ಶೆಟ್ಟಿ ಅವರು ಮುಂದಾಗಿದ್ದಾರೆ. ಒಂದೂರಿನಲ್ಲಿ ಘಟಿಸುವ ವಿಶೇಷ ಕಥೆಯನ್ನು ಹೇಳಹೊರಟಿರುವ ಮ್ಯಾರೇಜ್ ಪಾರ್ಟಿ ಚಿತ್ರದ ಚಿತ್ರೀಕರಣ ದಕ್ಷಿಣ ಕನ್ನಡದ ಕುಂದಾಪುರದ ಹಲವಾರು ಲೊಕೇಷನ್‌ಗಳಲ್ಲಿ ನಡೆದಿದೆ. ಈಗಾಗಲೇ ಮೊದಲ ಹಂತದಲ್ಲಿ ಇಪ್ಪತ್ತು ದಿನಗಳ ಕಾಲ ಚಿತ್ರೀಕರಣ ನಡೆಸಿರುವ ಚಿತ್ರತಂಡ, ಇದಗ ಎರಡನೇ ಹಂತದ ಚಿತ್ರೀಕರಣದಲ್ಲಿ ತೊಡಗಿಸಿಕೊಂಡಿದೆ. ಈ ಚಿತ್ರದಲ್ಲಿ ವಿನೀತ್ ಕುಮಾರ್ ಅವರು ನಾಯಕನಾಗಿ ನಟಿಸುತ್ತಿದ್ದಾರೆ. ಈಗಾಗಲೇ ಹಲವಾರು ತುಳು ಸಿನಿಮಾಗಳಲ್ಲಿ ನಟಿಸುವ ಮೂಲಕ ಪ್ರೇಕ್ಷಕರ ಗಮನ ಸೆಳೆದಿರುವ ವಿನೀತ್ ಮ್ಯಾರೇಜ್ ಪಾರ್ಟಿ ಚಿತ್ರದ ಮೂಲಕ ನಾಯಕನಾಗಿ ಕನ್ನಡ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಲಿದ್ದಾರೆ. ಮೂಲತಃ ಕುಂದಾಪುರದವರೇ ಆಗಿರುವ ನಿರ್ದೇಶಕ ಚಯನ್ ಶೆಟ್ಟಿ ಅವರು ತಮ್ಮೂರಿನಲ್ಲಿ ನಡೆಯುವ ಮಜವಾದ ಕಥೆಯೊಂದನ್ನು ಮ್ಯಾರೇಜ್ ಸ್ಟೋರಿ ಸಿನಿಮಾದ ಮೂಲಕ ದೃಷ್ಯವಾಗಿಸುವ ಪ್ರಯತ್ನ ಮಾಡಿದ್ದಾರೆ.

ವರಾಹಿ ಫಿಲಂಸ್ ಬ್ಯಾನರ್ ಅಡಿಯಲ್ಲಿ ಸಂತೋಷ್. ವಿ ಅವರು ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ಸಂತೋಷ್ ಅವರ ಪಾಲಿಗಿದು ನಿರ್ಮಾಪಕರಾಗಿ ಮೊದಲ ಹೆಜ್ಜೆ. ಇನ್ನುಳಿದಂತೆ, ಶ್ರೀಕಾಂತ್ ಅವರ ಛಾಯಾಗ್ರಹಣ, ರಿತ್ವಿಕ್ ಮುರಳೀಧರನ ಅವರ ಸಂಗೀತ ಸಂಯೋಜನೆ, ಸು ಫ್ರಂ ಸೋ ಖ್ಯಾತಿಯ ನಿತಿನ್ ಶೆಟ್ಟಿ ಅವರ ಸಂಕಲನ, ಪ್ರಮೋದ್ ಮರವಂತೆ ಮತ್ತು ತ್ರಿಲೋಕ್ ಅವರುಗಳ ಸಾಹಿತ್ಯ, ಪ್ರಕಾಶ್ ತುಮಿನಾಡು, ದೀಪಕ್ ರೈ, ನವೀನ್ ಡಿ. ಪಡೀಲ್, ರಕ್ಷಿತಾ, ನಮಿತಾ ಕಿರಣ್, ರಾಮ್ದಾಸ್, ರಘು ಪಾಂಡೇಶ್ವರ, ಪುಷ್ಪರಾಜ್ ಬೋಳಾರ್ ಮುಂತಾದವರ ತಾರಾಗಣ ಈ ಚಿತ್ರಕ್ಕಿದ್ದು, ಕನ್ನಡ ಮತ್ತು ಮಲೆಯಾಳಂ ಭಾಷೆಗಳಲ್ಲಿ 'ಮ್ಯಾರೇಜ್ ಪಾರ್ಟಿ' ಚಲನಚಿತ್ರವು ಮೂಡಿ ಬರಲಿದೆ.



ಸಿಲಿಂಡರ್ ಸಮಸ್ಯೆಗೂ ನನಗೂ ಲಿಂಕ್‌ಇಲ್ಲ, ನಂಗ್ಯಾಕೆ ಈ ಟ್ರಬಲ್!

ಮತ್ತೆ ತಲೆಗೆ ಹುಳಬಿಟ್ಟ ಉಪ್ಪಿ



ಈ ಸಿಲಿಂಡರ್ ವಿಚಾರವನ್ನೇ ಇಟ್ಟುಕೊಂಡು ಉಪೇಂದ್ರ ಅವರೇದರೂ ಸಿನಿಮಾ ಮಾಡಲು ಮುಂದಾಗುತ್ತಿದ್ದಾರಾ ಎನ್ನುವುದು ಅವರ ಲಕ್ಷಾಂತರ ಅಭಿಮಾನಿಗಳನ್ನು ಕಾಡುತ್ತಿರುವ ಪ್ರಶ್ನೆಯಾಗಿದೆ. ಇದಲ್ಲದೇ ಉತ್ತಮ ಪ್ರಜಾಕೀಯ ಪಕ್ಷ ಹುಟ್ಟು ಹಾಕಿರುವ ಉಪೇಂದ್ರ ಅವರು ಮುಂಬರುವ ದಿನಗಳಲ್ಲಿ ಇದೇ ವಿಚಾರದ ಕುರಿತು ಜನರಿಗೆ ಅರಿವು ಮೂಡಿಸುವ ಪ್ರಯತ್ನ ಮಾಡುತ್ತಾರಾ? ಹೀಗೆ ನೂರಾರು ಆಲೋಚನೆಗಳಿಗೆ ಈ ಲಿಂಕ್ ಸಿಂಕ್ ಆಗುತ್ತಿದ್ದು, ಇದಕ್ಕೆ ಉತ್ತರ ಬೇಕೆಂದರೆ ಮುಂದಿನ ಲಿಂಕ್ ಬರುವವರೆಗೂ ಕಾಯಲೇಬೇಕು.

ನಟ ಉಪೇಂದ್ರ ಅವರು ಸದ್ಯ ದೇಶಾದ್ಯಂತ ಸುದ್ದಿಯಾಗಿರುವ ಗ್ಯಾಸ್ ಸಿಲಿಂಡರ್ ಸಮಸ್ಯೆ ಕುರಿತು ಆಗಾಗ ಪೋಸ್ಟ್ ಹಂಚಿಕೊಂಡು ಗಮನ ಸೆಳೆಯುತ್ತಿದ್ದಾರೆ. ಮೊನ್ನೆ ಹೊಸ ಲಿಂಕ್‌ವೊಂದನ್ನು ಬಿಡುಗಡೆ ಮಾಡುತ್ತೇನೆ ಎಂದಿದ್ದರು. ಅದಾದ ಬಳಿಕ ಮಾರ್ಚ್ 15ರಂದು ಸಿಲಿಂಡರ್ ಫೋಟೋ ಶೇರ್ ಮಾಡಿ, ಕಾದು ನೋಡಿ ಎಂದಿದ್ದರು. ಸದ್ಯ ಮಾ.16ರ ಸೋಮವಾರ ಮತ್ತೊಂದು ಪೋಸ್ಟ್ ಹಂಚಿಕೊಂಡಿರುವ ಉಪ್ಪಿ, ನನಗೂ ಲಿಂಕ್‌ಗೂ ಲಿಂಕೇ ಇಲ್ಲ ಎನ್ನುತ್ತಿದ್ದಾರೆ.

ಉಪೇಂದ್ರ ಅವರು ಕಳೆದ ಮೂರು ದಿನಗಳಿಂದ ಲಿಂಕ್ ಕುರಿತು ಬ್ಯಾಕ್ ಟು ಬ್ಯಾಕ್ ಪೋಸ್ಟ್‌ಗಳನ್ನು ಹಂಚಿಕೊಳ್ಳುತ್ತಲೇ ಇದ್ದಾರೆ. ಅಡುಗೆ ಅನಿಲದ ಸಿಲಿಂಡರ್ ಬಗ್ಗೆ ಅಣಕ ಮಾಡುವ ರೀತಿಯಲ್ಲಿ ಬರವಣಿಗೆಯ ಮೂಲಕ ಒಳಅರ್ಥಗಳಿರೋ ಸಾಲುಗಳನ್ನು ಬಳಸಿ ಸೋಶಿಯಲ್ ಮೀಡಿಯಾದಲ್ಲಿ ಹಾಕುತ್ತಿದ್ದಾರೆ. ನಾನು ಶೇರ್ ಮಾಡಿದ ಲಿಂಕ್‌ಗೂ ಸಿಲಿಂಡರ್ ಫೋಟೋಗೂ ನೀವು ತಿಳಿದುಕೊಂಡ ರೀತಿಗೂ ಸಂಬಂಧವಿಲ್ಲ ಎಂದಿದ್ದಾರೆ.

ಈ ಗ್ಯಾಸ್ ಸಿಲಿಂಡರ್ ಸಮಸ್ಯೆಗೂ ನನಗೂ ಲಿಂಕ್ ಇಲ್ಲ, ಅದಕ್ಕೆ ಲಿಂಕ್ ಅಲ್ಲೆಲ್ಲೋ ನಡೀತಿರೋ ಯುದ್ಧ. ಆದರೂ ನನಗ್ಯಾಕೆ ಗುರೂ ಈ ಗ್ಯಾಸ್ ಟ್ರಬಲ್ ?, ಹಾಗೆ ನಾನ್ ಮುಂದೆ ಹಾಕೋ ಲಿಂಕ್‌ಗೂ ನಿಮಗೂ ಲಿಂಕ್ ಇಲ್ಲ, ಆದ್ರೂ ಲಿಂಕ್ ಹಾಕ್ತೀನಿ, ಕ್ಲಿಕ್ ಮಾಡ್ಬೇಡಿ! ಕೇಳಲೂ ಬೇಡಿ, ನನಗ್ಯಾಕೆ ಈ ಟ್ರಬಲ್ ಎಂಬ ಅಡಿಬರಹ ಹಾಕಿ ತಾವೇ ಶೇರ್ ಮಾಡಿದ ಸಿಲಿಂಡರ್ ಫೋಟೋ ಹಂಚಿಕೊಂಡಿದ್ದಾರೆ.

ನಟ ಉಪೇಂದ್ರ ಅವರ ಮಾತುಗಳನ್ನ ಅರ್ಥ ಮಾಡಿಕೊಳ್ಳೋದು ಸ್ವಲ್ಪ ಕಷ್ಟವೇ, ಅವರು ಸ್ವಲ್ಪ ಹೆಚ್ಚೇ ಬುದ್ಧಿವಂತರಾಗಿರಬೇಕು. ಅಂತಹ ಸಾಲುಗಳನ್ನ ಹಾಕಿ ಓದುಗರು ತಲೆ ಕೆಡಿಸಿಕೊಳ್ಳುವಂತೆ ಮಾಡುತ್ತಾರೆ. ಈ ಪೋಸ್ಟ್ ಹಿಂದೆ ಕೂಡ ಸಿಲಿಂಡರ್ ವಿಚಾರವೇ ಅಡಗಿದ್ದರೂ, ವ್ಯವಸ್ಥೆಯನ್ನ ಅಣಕ ಮಾಡುವಂತೆ ಪೋಸ್ಟ್ ಮಾಡಿದ್ದಾರೆ. ಮತ್ತೆ ಅದಕ್ಕೂ ನನಗೂ ಸಂಬಂಧವಿಲ್ಲ ಎಂದು ಬುಂದ್ಧಿವಂತಿಕೆ ಮೆರೆದಿದ್ದಾರೆ. ಮುಂಬರುವ ದಿನಗಳಲ್ಲಿ ಮತ್ತೊಂದು ಲಿಂಕ್ ಶೇರ್ ಮಾಡುತ್ತೇನೆ. ನೀವು ಓಪನ್ ಮಾಡ್ಬೇಡಿ ಎಂದು ಕೌತುಕ ಮೂಡಿಸಿದ್ದಾರೆ. ಆ ಲಿಂಕ್ ನಿಜಕ್ಕೂ ಸಿನಿಮಾಗೆ ಸಂಬಂಧ ಪಟ್ಟಿದ್ದಾ? ಇಲ್ಲಿ ಇರಾನ್-ಇಸ್ರೇಲ್-ಅಮೆರಿಕ ನಡುವಿನ ಯುದ್ಧದಿಂದ ಆಗಿರುವ ಅಡುಗೆ ಅನಿಲ ಬಿಕ್ಕಟ್ಟಿನ ಕುರಿತು ಅಣುಕಿಸುವ ಉಪ್ಪಿ ಸ್ಟೈಲ್ ಪೋಸ್ಟ್ ಆಗಿರುತ್ತಾ? ಎಂದು ಕಾದು ನೋಡಬೇಕು.

ಈ ಸಿಲಿಂಡರ್ ವಿಚಾರವನ್ನೇ ಇಟ್ಟುಕೊಂಡು ಸಿನಿಮಾ ಮಾಡಲು ಮುಂದಾಗುತ್ತಿದ್ದಾರಾ ನಟ ಉಪೇಂದ್ರ ಎನ್ನುವುದು ಅವರ ಲಕ್ಷಾಂತರ ಅಭಿಮಾನಿಗಳನ್ನು ಕಾಡುತ್ತಿರುವ ಪ್ರಶ್ನೆಯಾಗಿದೆ. ಇದಲ್ಲದೇ ಉತ್ತಮ ಪ್ರಜಾಕೀಯ ಪಕ್ಷ ಹುಟ್ಟು ಹಾಕಿರುವ ಉಪೇಂದ್ರ ಅವರು ಮುಂಬರುವ ದಿನಗಳಲ್ಲಿ ಇದೇ ವಿಚಾರದ ಕುರಿತು ಜನರಿಗೆ ಅರಿವು ಮೂಡಿಸುವ ಪ್ರಯತ್ನ ಮಾಡುತ್ತಾರಾ? ಹೀಗೆ ನೂರಾರು ಆಲೋಚನೆಗಳಿಗೆ ಈ ಲಿಂಕ್ ಸಿಂಕ್ ಆಗುತ್ತಿದ್ದು, ಇದಕ್ಕೆ ಉತ್ತರ ಬೇಕೆಂದರೆ ಮುಂದಿನ ಲಿಂಕ್ ಬರುವವರೆಗೂ ಕಾಯಲೇಬೇಕು.

ಯಶ್ ಡಿಪ್ರೆಶನ್‌ನಲ್ಲಿದ್ದಾರೆ.. ವಿವಾದ ಹುಟ್ಟಿಸಿದ ಜ್ಯೋತಿಷಿ ಹೇಳಿಕೆ



ಯಶ್ ಅಂತ ಒಬ್ಬ ಹೀರೋ ಇದ್ದಾರೆ, ಅವರ ಪರಿಸ್ಥಿತಿ ತುಂಬಾ ಭಯಂಕರವಾಗಿದೆ. ಅವರು ಕನ್ನಡ ಹೀರೋ ಆಗಿರೋದ್ರಿಂದ ಧೈರ್ಯವಾಗಿ ಮಾತಾಡ್ತಿದ್ದೇನೆ. ತೆಲುಗಿನವರಾಗಿದ್ರೆ, ಮಾತಾಡ್ತಿರಲಿಲ್ಲ. ಅವರ ಕಂಡೀಷನ್ ಏನು ಗೊತ್ತಾ? ಅವರು ಸದ್ಯ ಡಿಪ್ರೆಶನ್‌ನಲ್ಲಿದ್ದಾರೆ. ಯಾಕಂದ್ರೆ, ಅವರು ಮಾಡಿರುವ ಎರಡೂ ಸಿನಿಮಾಗಳು ಎಲ್ಲೋ ಇದೆ ಎಂದು ಜ್ಯೋತಿಷಿ ವೇಣುಸ್ವಾಮಿ ಅವರು ರಾಕಿಂಗ್‌ಸ್ಟಾರ್ ಯಶ್ ಅವರ ಬಗ್ಗೆ ನೀಡಿದ್ದ ಹೇಳಿಕೆ ಇದೀಗ ವಿವಾದಕ್ಕೆ ಕಾರಣವಾಗಿದೆ.

ರಾಕಿಂಗ್‌ಸ್ಟಾರ್ ಯಶ್ ಅವರ ಬಗ್ಗೆ ತೆಲುಗು ಜ್ಯೋತಿಷಿ ವೇಣುಸ್ವಾಮಿ ಅವರು ನೀಡಿರುವ ಹೇಳಿಕೆಯೊಂದು ಈಗ ಸೋಶಿಯಲ್ ಮೀಡಿಯಾದಲ್ಲಿ ಭಾರಿ ಚರ್ಚೆಗೆ ಕಾರಣವಾಗಿದೆ. ಸದಾ ಒಂದಿಲ್ಲೊಂದು ವಿವಾದಾತ್ಮಕ ಭವಿಷ್ಯದ ಹೇಳಿಕೆಗಳ ಮೂಲಕ ಸುದ್ದಿಯಲ್ಲಿರುವ ಜ್ಯೋತಿಷಿ ವೇಣುಸ್ವಾಮಿ ಅವರೀಗ ನಟ ಯಶ್ ಅವರ ಮಾನಸಿಕ ಸ್ಥಿತಿಯ ಬಗ್ಗೆ ಮಾತನಾಡಿರುವ ವಿಡಿಯೋ ಯಶ್ ಫ್ಯಾನ್ಸ್ ಕೆಂಗಣ್ಣಿಗೆ ಗುರಿಯಾಗಿದೆ.

ಅಂದಹಾಗೆ, ವೈರಲ್ ಆಗಿರುವ ಈ ವಿಡಿಯೋ ಒಂದೆರಡು ತಿಂಗಳ ಹಿಂದಿನದ್ದು. ಈಗ ವೀಡಿಯೋ ವೈರಲ್ ಆಗುತ್ತಿದೆ. ವೈರಲ್ ವೀಡಿಯೋದಲ್ಲಿ, ಯಶ್ ಅಂತ ಒಬ್ಬ ಹೀರೋ ಇದ್ದಾರೆ. ಅವರ ಪರಿಸ್ಥಿತಿ ತುಂಬಾ ಭಯಂಕರವಾಗಿದೆ. ಆತ ಕನ್ನಡದ ಹೀರೋ ಆಗಿರೋದ್ರಿಂದ ಧೈರ್ಯವಾಗಿ ಮಾತಾಡ್ತಿದ್ದೇನೆ. ತೆಲುಗಿನವರಾಗಿದ್ದರೆ, ಮಾತಾಡ್ತಿರಲಿಲ್ಲ. ಅವರ ಕಂಡಿಷನ್ ಏನ್ ಗೊತ್ತಾ? ಅವರು ಡಿಪ್ರೆಶನ್‌ನಲ್ಲಿದ್ದಾರೆ. ಯಾಕೆಂದರೆ, ಅವರು ಮಾಡಿರುವ ಎರಡೂ ಸಿನಿಮಾಗಳು ಬೇರೆ ರೇಂಜಿಗೆ ಇದೆ. ಅಂತಹದ್ದೇ ಯಶಸನ್ನ ಮರುಕಳಿಸಲು ಸಾಧ್ಯವಾಗದೆ ಅವರು ಆತಂಕದಲ್ಲಿದ್ದಾರೆ. ಸೆಲೆಬ್ರಿಟಿ ಸ್ಟೇಟಸ್‌ನ ಹ್ಯಾಂಡಲ್ ಮಾಡೋದು ಕೂಡ ತುಂಬಾ ಕಷ್ಟ ಎಂದವರು ಹೇಳಿಕೊಂಡಿದ್ದರು.

ಯಶ್ ಅವರ ಬಗ್ಗೆ ಇಂಥ ಹೇಳಿಕೆ ನೀಡಿದ್ದಕ್ಕೆ ಅವರ ಅಭಿಮಾನಿಗಳು ವೇಣುಸ್ವಾಮಿಯ ಮೇಲೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಯಶ್ ತಮ್ಮ ಕಠಿಣ ಪರಿಶ್ರಮದಿಂದ ಅದೆಷ್ಟೋ ಜನರಿಗೆ ಸ್ಫೂರ್ತಿಯಾಗಿದ್ದಾರೆ. ಅಂಥ ವ್ಯಕ್ತಿಯ ಬಗ್ಗೆ ಯಾವುದೇ ವೈಜ್ಞಾನಿಕ ಆಧಾರವಿಲ್ಲದೇ ಖಿನ್ನತೆಯಂತಹ ಗಂಭೀರ ಪದಗಳನ್ನ ಬಳಸುವುದು ಸರಿಯಲ್ಲ ಎನ್ನುವುದು ಅವರ ಅಭಿಮಾನಿಗಳ ವಾದ. ಮತ್ತೆ ಕೆಲವರು ಜ್ಯೋತಿಷ್ಯದ ಹೆಸರಿನಲ್ಲಿ ಪ್ರಚಾರ ಪಡೆಯಲು ವೇಣುಸ್ವಾಮಿ ಇಂಥ ಹಾದಿ ಹಿಡಿದಿದ್ದಾರೆ ಎಂದು ಟೀಕಿಸುತ್ತಿದ್ದಾರೆ.

ಅಂದಹಾಗೆ, ವೇಣುಸ್ವಾಮಿ ಅವರಿಗೆ ಈ ವಿವಾದಗಳು ಹೊಸದೇನಲ್ಲ. ಈ ಹಿಂದೆ ಸಮಂತಾ ಮತ್ತು ನಾಗಚೈತನ್ಯ ಅವರ ಡಿವೋರ್ಸ್ ಬಗ್ಗೆ ಅವರು ಹೇಳಿದ್ದ ಭವಿಷ್ಯ ನಿಜವಾಗಿತ್ತು, ಅದಾದ ನಂತರ ಅವರು ಹೆಚ್ಚು ಸುದ್ದಿಯಾದರು. ಅಂದಿನಿಂದ ಟಾಲಿವುಡ್ ಮತ್ತು ಸ್ಯಾಂಡಲ್‌ವುಡ್ ನಟ-ನಟಿಯರ ವೈಯಕ್ತಿಕ ಜೀವನದ ಬಗ್ಗೆ ನಕಾರಾತ್ಮಕ ಭವಿಷ್ಯ ನುಡಿಯುವುದನ್ನೇ ಅವರು ಅಭ್ಯಾಸ ಮಾಡಿಕೊಂಡಿದ್ದಾರೆ ಎಂಬ ಆರೋಪ ಕೂಡ ಅವರ ಮೇಲಿದೆ.

ಯಶ್ ಅವರು ತಮ್ಮ ಮುಂದಿನ ಸಿನಿಮಾ ಟಾಕ್ಸಿಕ್ ಚಿತ್ರದ ಕೊನೇ ಹಂತದ ಕೆಲಸಗಳಲ್ಲಿ ಬ್ಯುಸಿಯಾಗಿದ್ದಾರೆ. ಮಲಯಾಳಂನ ಗೀತು ಮೋಹನ್‌ದಾಸ್ ಅವರ ನಿರ್ದೇಶನದ ಟಾಕ್ಸಿಕ್ ಚಿತ್ರದ ರಿಲೀಸ್‌ಗಾಗಿ ಸಿದ್ದತೆ ಮಾಡಿಕೊಳ್ಳುತ್ತಿದ್ದಾರೆ. ಇದಲ್ಲದೆ ರಾಮಾಯಣ ಚಿತ್ರದಲ್ಲಿ ರಾವಣನ ಪಾತ್ರವನ್ನ ಕೂಡ ಯಶ್ ಅವರು ನಿರ್ವಹಿಸುತ್ತಿದ್ದುಮ ಅದರ ಸಿದ್ದತೆಯೂ ಸಹ ನಡೆಯುತ್ತಿದೆ,

ಚಂದನವನ ಫಿಲಂ ಕ್ರಿಟಿಕ್ಸ್ ಟ್ರೋಫಿ ಬಿಡುಗಡೆ



ಚಂದನವನ ಫಿಲಂ ಕ್ರಿಟಿಕ್ಸ್ ಅಕಾಡೆಮಿಯು ಪ್ರತಿ ವರ್ಷದಂತೆ ಈ ವರ್ಷವೂ ಪ್ರಶಸ್ತಿ ಸಮಾರಂಭ ಆಯೋಜಿಸಿದೆ, ಇದು 7ನೇ ವರ್ಷದ ಪ್ರಶಸ್ತಿ ಸಮಾರಂಭ ಕಾರ್ಯಕ್ರಮವಾಗಿದ್ದು, ಸಮಾರಂಭದ ಟ್ರೋಫಿ ಅನಾವರಣ ಮತ್ತು ನಾಮ ನಿರ್ದೇಶಿತರ ಹೆಸರುಗಳನ್ನು ಘೋಷಿಸುವ ಕಾರ್ಯಕ್ರಮ ಕಳೆದ ಭಾನುವಾರ ನಡೆಯಿತು, ವೇದಿಕೆಯಲ್ಲಿ ಹಿರಿಯ ನಿರ್ದೇಶಕರಾದ ನಾಗತಿಹಳ್ಳಿ ಚಂದ್ರಶೇಖರ್, ಕೆ.ಎಂ.ಚೈತನ್ಯ, ನಟಿ ಪೂಜಾಗಾಂಧಿ ಹಾಗೂ ನಟ ಶ್ರೀನಗರ ಕಿಟ್ಟಿ ಹಾಗೂ ಇತರ ಚಿತ್ರರಂಗದ ಗಣ್ಯರುಗಳು ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ಕನ್ನಡ ಚಿತ್ರರಂಗದ ಹಿರಿಯ ಪ್ರಚಾರ ಕರ್ತರಾದ ವಿಜಯ್‌ಕುಮಾರ್ ಅವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು.

ಸಿನಿಮಾ ವಿಮರ್ಶಕರು ಕೊಡುವ ಪ್ರಶಸ್ತಿಗಳಿಗೆ ಒಂದು ತೂಕ ಇರಲಿದೆ. ಹಾಗಾಗಿ ಅದೊಂದು ದೊಡ್ಡ ಗೌರವ ಎಂದು ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಅವರು ಹೇಳಿದರೆ, ಚಂದನವನ ಫಿಲ್ಮ್ ಕ್ರಿಟಿಕ್ಸ್ ಅಕಾಡೆಮಿಯ ಪ್ರಶಸ್ತಿ ಕುರಿತಂತೆ ಮೆಚ್ಚುಗೆಯ ಮಾತುಗಳನ್ನು ನಟ ಶ್ರೀನಗರ ಕಿಟ್ಟಿ ಅವರು ಆಡಿದರು, ಏಳು ವರ್ಷಗಳಿಂದ ನಿರಂತರವಾಗಿ ನಡೆದುಕೊಂಡು ಬಂದಿರುವ ಚಂದನವನ ಫಿಲ್ಮ್ ಕ್ರಿಟಿಕ್ಸ್ ಅಕಾಡೆಮಿಯು ಮಾದರಿ ಕೆಲಸ ಮಾಡುತ್ತಿದೆ ಎಂಬುದನ್ನು ಪ್ರಶಸ್ತಿಗಳ ಆಯ್ಕೆಯೇ ತಿಳಿಸುತ್ತದೆ ಎಂದು ನಟಿ ಪೂಜಾಗಾಂಧಿ ಅವರು ಹೇಳಿದರು, ಈ ವರ್ಷ ಅತೀಹೆಚ್ಚು ನಾಮ ನಿರ್ದೇಶನಗೊಂಡ ಚಿತ್ರವಾಗಿ ಕಾಂತಾರ ಚಾಪ್ಟರ್-1 ಹೊರಹೊಮ್ಮಿದೆ.

ಪ್ರಮುಖ ಪ್ರಶಸ್ತಿಗಳಿಗೆ ನಾಮ ನಿರ್ದೇಶಿತರ ಪಟ್ಟಿ ಹೀಗಿದೆ; ಅತ್ಯುತ್ತಮ ಸಂಗೀತರ ಪಟ್ಟಿಯಲ್ಲಿ ಅಜನೀಶ್ ಲೋಕನಾಥ್ (ಕಾಂತಾರ: ಚಾಪ್ಟರ್ 1), ಚರಣ್‌ರಾಜ್ (ಎಕ್ಕ), ಅರ್ಜುನ್ ಜನ್ಯ (ಬ್ರಾಟ್), ಸುಮೇಧ್ ಕೆ.(ಸು ಫ್ರಮ್ ಸೋ) ಹಾಗೂ ಡಿ.ಇಮ್ಮಾನ್ (ಏಳುಮಲೆ) ಇದ್ದಾರೆ.

ಅತ್ಯುತ್ತಮ ನಟಿಯರ ಪಟಿಯಲ್ಲಿ ರುಕ್ಮಿಣಿ ವಸಂತ್ (ಕಾಂತಾರ: ಚಾಪ್ಟರ್ 1), ಅಂಜಲಿ ಅನೀಶ್(ಮನದ ಕಡಲು), ಸೋನಲ್ ಮೊಂತೆರೋ (ಮಾದೇವ), ರೇಷ್ಮಾ ಎಲ್.(ಲವ್ ಯು ಮುದ್ದು) ಹಾಗೂ ನಟಿ ಆಶಿಕಾ ರಂಗನಾಥ್ (ಗತವೈಭವ) ಇದ್ದಾರೆ, ಉಳಿದಂತೆ ಅತ್ಯುತ್ತಮ ನಟರ ಪಟ್ಟಿಯಲ್ಲಿ ವಿನೋದ್ ಪ್ರಭಾಕರ್ (ಮಾದೇವ), ಡಾರ್ಲಿಂಗ್ ಕೃಷ್ಣ (ಬ್ರಾಟ್), ರಿಷಬ್ ಶೆಟ್ಟಿ (ಕಾಂತಾರ: ಚಾಪ್ಟರ್ 1), ದರ್ಶನ್ (ದ ಡೆವಿಲ್) ಹಾಗೂ ಸುದೀಪ್ (ಮಾರ್ಕ್)ಇದ್ದಾರೆ,

ಅತ್ಯುತ್ತಮ ನಿರ್ದೇಶಕರ ಪಟ್ಟಿಯಲ್ಲಿ ರಿಷಬ್ ಶೆಟ್ಟಿ (ಕಾಂತಾರ: ಚಾಪ್ಟರ್ 1), ಪುನೀತ್ ರಂಗಸ್ವಾಮಿ (ಏಳುಮಲೆ), ಜೆ.ಪಿ. ತುಮಿನಾಡ್ (ಸು ಫ್ರಮ್ ಸೋ), ಭೀಮರಾವ್ (ಹೆಬ್ಬುಲಿ ಕಟ್) ಹಾಗೂ ಸುಮಂತ್ ಭಟ್ (ಮಿಥ್ಯ) ಇದ್ದಾರೆ, ಉಳಿದಂತೆ ಅತ್ಯುತ್ತಮ ಚಲನಚಿತ್ರಗಳ ಪಟ್ಟಿಯಲ್ಲಿ ಏಳುಮಲೆ, ಮಿಥ್ಯ, ಕಾಂತಾರ: ಚಾಪ್ಟರ್ 1, ಹೆಬ್ಬುಲಿ ಕಟ್ ಹಾಗೂ ಮಾದೇವ ಈ ನಾಲ್ಕು ಚಲನಚಿತ್ರಗಳಿವೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post Old Madras Road, K R Puram, Bangalore 560 049 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26

ಮನವಿ...

ಕರ್ನಾಟಕ ಸಾವಿತ್ರಿಬಾಯಿ ಫುಲೆ ಶಿಕ್ಷಕಿಯರ ಸಂಘ ಸರಗೂರು ತಾಲೂಕು ಘಟಕದಿಂದ ತಹಸೀಲ್ದಾರ್ ಮೋಹನಕುಮಾರಿ ಹಾಗೂ ಬಿಎಇಒ ರಾಜುರವರಿಗೆ ವಿನಾಯಿತಿಗಾಗಿ ಮನವಿ ಸಲ್ಲಿಸಲಾಯಿತು. ಸಂಘದ ತಾಲೂಕು ಘಟಕದ ಅಧ್ಯಕ್ಷೆ ರೇಖಾ ಎಸ್.ಸಿ., ಪ್ರಧಾನ ಕಾರ್ಯದರ್ಶಿ ಜ್ಯೋತಿ ಎಚ್.ಬಿ., ಕೋಶಾಧ್ಯಕ್ಷೆ ಸುಕನ್ಯಾ, ಗೌರವ ಅಧ್ಯಕ್ಷೆ ಲತಾಮಣಿ ಇದ್ದರು.



ನಾಳೆಯಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆ | ೨
ಅನ್ನದಾತರ ಜೀವನಕ್ಕೆ ಹೈನುಗಾರಿಕೆ ವರದಾನ | ೩
ನಿಗದಿತ ಸಮಯದಲ್ಲಿ ಮಾತ್ರ ಮದ್ಯ ಮಾರಾಟ | ೪

ಕಿರುಸುದ್ದಿ

ಪರೀಕ್ಷಾ ಕೇಂದ್ರಗಳಿಗೆ ಅಪರ ಡಿಸಿ ಭೇಟಿ, ಪರಿಶೀಲನೆ

ಮೈಸೂರು: ನಗರದ ಮರಿಮಲ್ಲಪ್ಪ ಪ್ರೌಢಶಾಲೆ, ಕಾಲೇಜಿನಲ್ಲಿ ನಡೆಯುತ್ತಿರುವ ದ್ವಿತೀಯ ಪಿ.ಯು.ಸಿ. ಪರೀಕ್ಷೆಯ ಪರೀಕ್ಷಾ ಕೇಂದ್ರಕ್ಕೆ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಅವರು ಸೋಮವಾರ ಭೇಟಿ ನೀಡಿ ವಿಧ್ಯಾರ್ಥಿಗಳಿಗೆ ಕಲ್ಪಿಸಿರುವ ಅವಶ್ಯಕ ಸೌಲಭ್ಯಗಳ ಬಗ್ಗೆ ಪರಿಶೀಲಿಸಿದರು. ಬಳಿಕ ಸ್ಥಳದಲ್ಲಿದ್ದ ಪ್ರಾಂಶುಪಾಲರಿಗೆ ಅಗತ್ಯ ಮಾರ್ಗದರ್ಶನ ನೀಡಿದರು. ಜಿಲ್ಲೆಯಲ್ಲಿ ಎಲ್ಲಾ ಕಡೆಯು ದ್ವಿತೀಯ ಪಿಯುಸಿ ಪರೀಕ್ಷೆಗಳು ಸುಸೂತ್ರವಾಗಿ ನಡೆಯುತ್ತಿರುವುದಾಗಿ ಖಾತ್ರಿ ಪಡಿಸಿಕೊಳ್ಳಲಾಯಿತು. ಇಂದು ರಾಜ್ಯಾದ್ಯಂತ ಸಮಾಜಶಾಸ್ತ್ರ, ಗಣಕಶಾಸ್ತ್ರ ಜೀವಶಾಸ್ತ್ರ ವಿಷಯಗಳ ಪರೀಕ್ಷೆ ನಡೆಸಲಾಗಿದೆ. ಪ್ರಾಂಶುಪಾಲರು, ಪರೀಕ್ಷಾ ವೀಕ್ಷಕರು ಹಾಜರಿದ್ದರು.

ಬೈಕ್‌ಗಳ ಮುಖಾಮುಖಿ: ಸವಾರ ಸಾವು

ಮೈಸೂರು: ಎರಡು ಬೈಕುಗಳ ನಡುವೆ ಮುಖಾಮುಖಿ ಡಿಕ್ಕಿಯಾಗಿ ಬೈಕ್ ಸವಾರನೊಬ್ಬ ಸಾವಿಗೀಡಾಗಿರುವ ಘಟನೆ ಜಿಲ್ಲೆಯ ಎಚ್.ಡಿ.ಕೋಟೆ ತಾಲೂಕಿನ ಹೈರಿಗೆ ಗ್ರಾಮದ ಬಳಿ ನಡೆದಿದೆ. ತಾಲ್ಲೂಕಿನ ಹೈರಿಗೆ ಗ್ರಾಮದ ಮುಖಂಡ ವರಸಿಂಗೇಗೌಡ (70) ಸಾವಿಗೀಡಾದವರು. ಇವರು ಹೈರಿಗೆಯ ತಮ್ಮ ಮನೆಯಿಂದ ಬೈಕ್ ಮೂಲಕ ಮಾದಾಪುರ ಗ್ರಾಮಕ್ಕೆ ಹೋಗುತ್ತಿದ್ದಾಗ, ಹೈರಿಗೆ ಗ್ರಾಮದ ನಿವಾಸಿಗಳಾದ ವೇಣು ದಂಪತಿ ತಮ್ಮ ಬೈಕಿನಲ್ಲಿ ಮಾದಾಪುರದಿಂದ ಹೈರಿಗೆ ಗ್ರಾಮಕ್ಕೆ ಬರುತ್ತಿದ್ದಾಗ ಪೆಟ್ರೋಲ್ ಬಂಕ್ ಬಳಿ ಎರಡು ಬೈಕ್‌ಗಳ ನಡುವೆ ಡಿಕ್ಕಿ ಸಂಭವಿಸಿದೆ. ಘಟನೆಯಲ್ಲಿ ವರಸಿಂಗೇಗೌಡರ ತಲೆ ಮತ್ತು ಕಾಲಿಗೆ ತೀವ್ರ ಪೆಟ್ಟಾಗಿದ್ದು, ಅವರನ್ನು ಕೂಡಲೇ ಗ್ರಾಮಸ್ಥರು, ಸಂಬಂಧಿಕರು ಮೈಸೂರಿನ ಆಸ್ಪತ್ರೆಗೆ ಕರೆದೊಯ್ಯುತ್ತಿದ್ದಂತೆ ಮಾರ್ಗಮಧ್ಯೆ ಸಾವನ್ನಪ್ಪಿದ್ದಾರೆ. ಘಟನೆ ಸಂಬಂಧ ಎಚ್.ಡಿ.ಕೋಟೆ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಸ್‌ನಲ್ಲಿ ಮಹಿಳೆಯರ ಚಿನ್ನಾಭರಣ ಕಳವು

ಮೈಸೂರು: ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ ಇಬ್ಬರು ಮಹಿಳೆಯರ ವ್ಯಾನಿಟಿ ಬ್ಯಾಗ್ ನಲ್ಲಿದ್ದ ಚಿನ್ನಾಭರಣಗಳನ್ನು ಖದೀಮರು ಕಳವು ಮಾಡಿರುವ ಘಟನೆ ಮೈಸೂರಿನಲ್ಲಿ ನಡೆದಿದೆ. ಕೆ.ಎನ್.ಪುರದ ನಿವಾಸಿ ಮಾನಸ ಎಂಬವರು ಮೈಸೂರಿನ ಅಕ್ಷಯ ಭಂಡಾರ್ ಬಸ್ ನಿಲ್ದಾಣದಿಂದ ನಗರ ಬಸ್ ನಿಲ್ದಾಣಕ್ಕೆ ತೆರಳುವ ಸಲು ವಾಗಿ ನಗರ ಸಾರಿಗೆ ಬಸ್ ಹತ್ತಿದ್ದಾರೆ. ಈ ವೇಳೆ ಬಸ್‌ನಲ್ಲಿ ಹೆಚ್ಚು ಜನಸಂದಣಿ ಇದ್ದು, ಈ ಸಮಯವನ್ನು ಉಪ ಯೋಗಿಸಿಕೊಂಡ ಖದೀಮರು ಅವರ ವ್ಯಾನಿಟಿ ಬ್ಯಾಗ್‌ನಲ್ಲಿದ್ದ ಸುಮಾರು 1.32 ಲಕ್ಷ ರೂ. ಮೌಲ್ಯದ ಚಿನ್ನಾಭರಣವಿದ್ದ ಪರ್ಸ್ ಅನ್ನು ಎಗರಿಸಿಕೊಂಡು ಹೋಗಿದ್ದಾರೆ. ಈ ಸಂಬಂಧ ದೇವರಾಜ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಎರಡನೇ ಪ್ರಕರಣದಲ್ಲಿ ಹೆಬ್ಬಾಳು ನಿವಾಸಿ ಮಹದೇವಮ್ಮ ಎಂಬವರು ಬೆಂಗಳೂರಿನಲ್ಲಿ 'ಸಮಾರಂಭವನ್ನು ಮುಗಿಸಿ ಕೊಂಡು ಮೈಸೂರಿಗೆ ಮನೆಗೆ ತೆರಳಲು ನಗರ ಸಾರಿಗೆ ಬಸ್ ನಿಲ್ದಾಣದಿಂದ ಹೆಬ್ಬಾಳ್‌ಗೆ ತೆರಳುವ ಬಸ್ ಹತ್ತಿದ್ದಾರೆ. ಈ ವೇಳೆ ಬಸ್‌ನಲ್ಲಿ ಹೆಚ್ಚು ಜನಸಚಿದಣಿ ಇದ್ದರಿಂದ ಖದೀಮರು, ಅವರ ವ್ಯಾನಿಟಿ ಬ್ಯಾಗ್‌ನಲ್ಲಿದ್ದ ಸುಮಾರು 2 ಲಕ್ಷ ರೂ. ಮೌಲ್ಯದ 22 ಗ್ರಾಂ ಚಿನ್ನಾಭರಣಗಳಿದ್ದ ಪರ್ಸ್ ಅನ್ನು ಕಳುವು ಮಾಡಿಕೊಂಡು ಹೋಗಿದ್ದಾರೆ ಈ ಕುರಿತು ಲಷ್ಕರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಮಸ್ಯೆಗೆ ಸ್ಪಂದಿಸಿದರೆ ಇಲಾಖೆ ಮೇಲೆ ಹೆಚ್ಚಲಿದೆ ವಿಶ್ವಾಸ

ಮೈಸೂರು: ಸಾರ್ವಜನಿಕರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸಿ, ಅವರ ತೊಂದರೆಗಳನ್ನು ನಿವಾರಿಸುವುದರಿಂದ ಸರ್ಕಾರಿ ಇಲಾಖೆಗಳ ಮೇಲೆ ಜನರಲ್ಲಿ ನಂಬಿಕೆ ಮತ್ತು ವಿಶ್ವಾಸ ಹೆಚ್ಚುತ್ತದೆ ಎಂದು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ(ಸೆಸ್ಕ್) ವ್ಯವಸ್ಥಾಪಕ ನಿರ್ದೇಶಕ ಕೆ.ಎಂ. ಮುನಿಗೋಪಾಲ್ ರಾಜು ಹೇಳಿದರು. ಮೈಸೂರಿನ ರಾಜಾಜಿನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಸೋಮವಾರ ಬಡಾವಣೆಯಲ್ಲಿ ಆಯೋಜಿಸಿದ್ದ ಸನ್ಮಾನ ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ಜನರ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ನಿಗಮವೂ ಸದಾ ಕಾರ್ಯಪ್ರವೃತ್ತವಾಗಿದೆ ಎಂದರು.

ಸುತ್ತೂರು ಸಿಂಹಾಸನ ಪೀಠದ ಶ್ರೀ ಶಿವರಾತ್ರಿ ದೇಶೀ ಕೇಂದ್ರ ಸ್ವಾಮೀಜಿ ಪ್ರತಿಪಾದನೆ

ಮಿತವ್ಯಯಿಗಳಲ್ಲಿ ದೈವೀಕತೆ

ತಿ.ನರಸೀಪುರ: ಲೌಕಿಕ ಜಗತ್ತಿನಲ್ಲಿ ಅಪರಿಮಿತ ಬಯಕೆಗಳ ಈಡೇರಿಕೆಗೆ ವಿಪುಲ ಸೌಲಭ್ಯಗಳಿದ್ದರೂ ಲೋಭಕ್ಕೆ ಒಳಗಾಗದೆ ತನ್ನ ಅನಿವಾರ್ಯತೆ ತಕ್ಕಂತೆ ವಸ್ತುಗಳನ್ನು ಮಿತ ಬಳಕೆ ಮಾಡುವ ವ್ಯಕ್ತಿಗಳಲ್ಲೂ ದೈವೀಕತೆಯನ್ನು ಕಾಣಬಹುದು ಎಂದು ಸುತ್ತೂರು ಸಿಂಹಾಸನ ಪೀಠದ ಶ್ರೀ ಶಿವರಾತ್ರಿ ದೇಶೀ ಕೇಂದ್ರ ಸ್ವಾಮೀಜಿ ಪ್ರತಿಪಾದಿಸಿದರು.

ತಾಲೂಕಿನ ಹೊಸೂರು ಹುಂಡಿ (ಮಾರನಹಳ್ಳಿ) ಜೋಡಿ ಬಸವೇಶ್ವರ ದೇಗುಲದ ಲೋಕಾರ್ಪಣೆ ಕಾರ್ಯಕ್ರದಲ್ಲಿ ಭಾಗವಹಿಸಿ ಆಶೀರ್ವಚನ ನೀಡಿದರು. ಮನುಷ್ಯ ತನ್ನ ಆತ್ಮ ಸಂತೋಷ, ಮೋಕ್ಷ ಸಾಧನೆ, ತನ್ನ ಜಂಜಾಟಗಳಿಂದ ಮುಕ್ತಿ ಪಡೆ ಯಲು ದೇವರನ್ನು ಹಲವು ಮಾರ್ಗಗಳಲ್ಲಿ ಆರಾಧನೆ ಮಾಡುತ್ತಿದ್ದ ಎಂಬುದಕ್ಕೆ ಈಜಿಪ್ಟ್, ಹರಪ್ಪ-ಮಹೆಂಜದಾರೋ, ಮೆಸೋಪೆಟೊಮಿಯ ನಾಗರಿಕತೆಗಳಲ್ಲಿ ಸಾಕ್ಷ್ಯಗಳು ಉಪಲಬ್ಧವಾಗಿವೆ. ಮನುಷ್ಯ ಪಂಚಭೂತಗಳಲ್ಲಿ ದೇವರನ್ನು ಕಂಡು ಪೂಜಿಸುತ್ತಿದ್ದನು. ಹಾಗಾಗಿ ದೇವರು ಸಕಲ ಜಲಚರ ವಸ್ತುಗಳಲ್ಲೂ ಲೀನವಾಗಿದ್ದಾನೆ ಎಂದರು.

ಜಗತ್ತಿನಲ್ಲಿ ಮನುಷ್ಯ ಮಹಾಲೋಭಿ. ಅವನಿಗೆ ಅಪರಿಮಿತ ಬಯಕೆಗಳು; ಕಂಡಿದ್ದೆಲ್ಲ ತನ್ನದು, ತಮ್ಮವರದು ಎಂಬ ದುರಾಸೆ. ಆದರೆ ದುರಾಸೆ, ದುರಾಭಿಮಾನ ಇರುವ ಜನಗಳ ನಡುವೆ ಎಲ್ಲ ಸೌಕರ್ಯಗಳು ಇದ್ದರೂ ಪರರ ಹಿತದ ಬಗ್ಗೆ ಆಲೋಚನೆ ಮಾಡುವ ಸಾತ್ವಿಕ ಗುಣವುಳ್ಳ ಜನರ ದೈವ ಸ್ವರೂಪವನ್ನು ಕಾಣಬಹುದು ಎಂದರು.

ಮನುಷ್ಯನಲ್ಲಿರುವ ಪ್ರಾಣ, ಉಸಿರು, ವಾಯು ಎಲ್ಲ ರೂಪವೂ ದೇವರೇ ಆಗಿರುತ್ತಾನೆ. ಅದು ಮನುಷ್ಯನಿಂದ ಹೊರಬಂದ ಮೇಲೆ ಅದನ್ನು ಬೇರೆ ಹೆಸರಲ್ಲಿ ಕರೆಯುತ್ತಾರೆ. ಹಾಗಾಗಿ ಸಕಲ ವಸ್ತುಗಳಲ್ಲಿರುವ ದೇವರ ನೆನೆದು ಸರ್ವರಿಗೂ ಒಳಿತನ್ನು ಬಯಸುವುದಾದರೆ ನಮಗೂ ಒಳಿತಾಗುತ್ತದೆ. ಮನುಷ್ಯ ಚಂಚಲ ಸ್ವಭಾವ ಹೊಂದಿದವನು. ಅವನ ಮನಸ್ಸು ಪ್ರತಿಕ್ಷಣ ಸಂದರ್ಭಕ್ಕನುಗುಣವಾಗಿ ಬದಲಾಗುತ್ತ ಹೋಗುತ್ತದೆ. ಇದರಿಂದ ಹೆಚ್ಚು ಜನರು ನಿರೀಕ್ಷಿತ ಪ್ರತಿಫಲ ಪಡೆಯಲಾಗುವುದಿಲ್ಲ, ಹಾಗಾಗಿ ಮನುಷ್ಯ ತನ್ನ ಚಂಚಲ ಮನಸ್ಥಿತಿಗೆ ಕಡಿವಾಣ ಹಾಕಿ. ಭಕ್ತಿ ಮಾರ್ಗದಲ್ಲಿ ಸಾಗಿದರೆ ಮೋಕ್ಷ ದೊರಕುತ್ತದೆ ಎಂದರು.



ಮಠಗಳಿಂದ ಸಮಾಜಮುಖಿ ಕಾರ್ಯ

ಈ ಭಾಗದ ಮಠ ಮಾನ್ಯಗಳು ಶಿಕ್ಷಣ, ದಾಸೋಹ, ಬಡ ಕುಟುಂಬಗಳಿಗೆ ಆರ್ಥಿಕ ಸಹಾಯ, ಆರೋಗ್ಯಕ್ಕಾಗಿ ಆರ್ಥಿಕ ಸಹಾಯ ಸೇರಿದಂತೆ ಹಲವು ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿವೆ. ಮಠಗಳ ಸತ್ಕಾರ್ಯಕ್ಕೆ ದಾನಿಗಳು ಬೆನ್ನೆಲುಬಾಗಿ ನಿಂತಿದ್ದಾರೆ ಎಂದು ವಾಟಾಳು ಸೂರ್ಯ ಸಿಂಹಾಸನ ಮಠದ ಶ್ರೀ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಮಠಗಳ ಕಾರ್ಯವನ್ನು ಶ್ಲಾಘಿಸಿದರು.

> **ಆಧುನಿಕತೆ ಎಷ್ಟೇ ಮುಂದುವರೆದರೂ ಹಲವು ಕ್ಲಿಷ್ಟಕರ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯಲು ಸಾಧ್ಯವಾಗಿಲ್ಲ. ಆಕಾಶದಲ್ಲಿರುವ ನಕ್ಷತ್ರಗಳ ಎಣಿಸಲು ಸಾಧ್ಯವಾಗಿಲ್ಲ. ದೈವ ಶಕ್ತಿ ಮುಂದೆ ವೈಜ್ಞಾನಿಕ ಶಕ್ತಿ ಗೌಣ.**
> ■ **ಶ್ರೀ ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ,** ಸುತ್ತೂರು ಶ್ರೀ ಮಠ

ವಾಟಾಳು ಸೂರ್ಯ ಸಿಂಹಾಸನ ಮಠದ ಶ್ರೀ ಮುಡುಕನಪುರ ಮಠದ ಶ್ರೀ ಷಡಕ್ಷರಿ ದೇಶಿ ಕೇಂದ್ರ ಸ್ವಾಮೀಜಿಮಾತನಾಡಿ, ಮನದೊಳಗಿನ ಅಜ್ಞಾನವನ್ನು ಕಳೆಯದೆ ಜನರಿಗೆ ಮುಕ್ತಿ ದೊರೆಯದು.ಮನೆ ಮತ್ತು ಮನದ ಕತ್ತಲು ಕಳೆಯಲು ಪರಿಶುದ್ಧ ಮನಸ್ಸು, ಸನ್ಮಾರ್ಗ ಜತೆಗೆ ಜನರು ಮೌಢ್ಯತೆ, ಕಂದಾಚಾರದಿಂದ ದೂರವಿರಬೇಕು ಎಂದರು.

ಸಕಲ ಜೀವ ರಾಶಿಗಳಲ್ಲೂ ದೇವರು ಅಡಕಗೊಂಡಿದ್ದು, ಭಕ್ತರು ಸನ್ಮಾರ್ಗದಲ್ಲಿ ನಡೆಯುವ ಬೇಕು ಎಂದರು. ಸಂದರ್ಭದಲ್ಲಿ ದೇವನೂರು ಗುರು ಮಲ್ಲೇಶ್ವರ ಮಠದ ಶ್ರೀ ಮಹಾಂತ ಸ್ವಾಮೀಜಿ, ಕನಕಪುರ ದೇಗುಲ ಮಠದ ಚನ್ನಬಸವ ಸ್ವಾಮೀಜಿ, ಸಾಲೂರು ಬೃಹನ್ಮಠದ ಡಾ.ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ, ಮಲ್ಲನ ಮೂಲೆ ಮಠದ ಇಮ್ಮಡಿ ಸಿದ್ದಲಿಂಗ ಸ್ವಾಮೀಜಿ, ಮಾಡ್ರಹಳ್ಳಿ ಮಠದ ಶಾಂತ ಮಲ್ಲಿಕಾರ್ಜುನಸ್ವಾಮೀಜಿ, ಹಲವಾರ ಮಠದ ಷಡಕ್ಷರ ದೇಶಿ ಕೇಂದ್ರ ಸ್ವಾಮೀಜಿ, ಎಂ.ಎಲ್.ಹುಂಡಿ ವಿರಕ್ತ ಮಠದ ಗೌರಿ ಶಂಕರ ಸ್ವಾಮೀಜಿ, ಅಖಿಲ ಭಾರತ ವೀರಶೈವ ಮಹಾಸಭಾದ ತಾಲೂಕು ಅಧ್ಯಕ್ಷ ಎಸ್.ಎಂ.ಆರ್.ಪ್ರಕಾಶ್, ತೊಂಟೇಶ್, ಮೂಗೂರು ಕುಮಾರಸ್ವಾಮಿ,ದೇಗುಲ ಆಡಳಿತ ಮಂಡಳಿ ಅಧ್ಯಕ್ಷ ಗೌಡರ ಮಹದೇವಪ್ಪ,ಉಪಾಧ್ಯಕ್ಷ ಪ್ರಮೋದ್ ,ಖಜಾಂಚಿ ಮಹದೇವಪ್ಪ, ಕಾರ್ಯದರ್ಶಿ ಮಂಜುನಾಥ್, ರವಿ ಹೊಸೂರುಹುಂಡಿ ,ರವಿ ಯರಗನಹಳ್ಳಿ,ಚಂದ್ರಶೇಖರ್,ಗುರುಸ್ವಾಮಿ,ಗೌಡರ ಮಾದಪ್ಪ,ಗೌಡರ ಗುರುಸ್ವಾಮಿ, ಕರೋಹಟ್ಟಿ ರಾಜಶೇಖರ್, ಯೋಗೇಶ್, ಶಿವು,ಆಲಗೂಡು ಪ್ಯಾಕ್ಸ್ ಅಧ್ಯಕ್ಷ ನಟರಾಜು, ಸಿದ್ದಲಿಂಗಸ್ವಾಮಿ,ಸೀಹಳ್ಳಿ ಗುರುಮೂರ್ತಿ,ಕುರುಬೂರು ಅಶೋಕ, ಕೆಬ್ಬೆಹುಂಡಿ ಸೋಮಶೇಖರಪ್ಪ,ವಕೀಲ ಪರಮೇಶ್, ಹಲವಾರ ಪರಮೇಶ್ ಪಟೇಲ್, ಆಡಿಟರ್ ಮಹದೇವಸ್ವಾಮಿ,ಹಲವು ಮಠದ ಸ್ವಾಮೀಜಿಗಳು,ಗ್ರಾಮಸ್ಥರು ಹಾಜರಿದ್ದರು.

ಮಾ.25ಕ್ಕೆ ಬೆಂಗಳೂರಿನಲ್ಲಿ ಬಲಗೈ ಬೃಹತ್ ಪ್ರತಿಭಟನೆ



ಮೈಸೂರು: ನ್ಯಾಯಮೂರ್ತಿ ನಾಗಮೋಹನ್ ದಾಸ್ ಆಯೋಗದ ವರದಿಯು ಸುಪ್ರೀಂಕೋರ್ಟ್ ಆದೇಶಕ್ಕೆ ವಿರುದ್ಧವಾಗಿದ್ದು, ಹಾಗಾಗಿ ವರದಿಯನ್ನು ರಾಜ್ಯ ಸರ್ಕಾರ ಸಂಪೂರ್ಣವಾಗಿ ತಿರಸ್ಕರಿಸಬೇಕೆಂದು ಆಗ್ರಹಿಸಿ ಹಾಗೂ ಒಳ ಮೀಸಲಾತಿ ಅನುಷ್ಠಾನದಲ್ಲಿ ಬಲಗೈ ಸಮುದಾಯಕ್ಕೆ ಆಗಿರುವ ಅನ್ಯಾಯದ ವಿರುದ್ಧ ಜನಜಾಗೃತಿ ಮೂಡಿಸಲು ಮಾ.25ರಂದು ಬೆಂಗಳೂರಿನಲ್ಲಿ ಬೃಹತ್ ಸಮಾವೇಶವನ್ನು ಹಮ್ಮಿಕೊಂಡಿರುವುದಾಗಿ ಉರಿಲಿಂಗ ಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ತಿಳಿಸಿದ್ದಾರೆ.

ಸೋಮವಾರ ನಗರದ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಂಗಳೂರಿನ ಸಮಾವೇಶಕ್ಕೆ ಪೂರಕವಾಗಿ ಮಾರ್ಚ್ 23ರಂದು ಮೈಸೂರು ನಗರದಲ್ಲಿ ಬಲ್ಲಾಳ ವೃತ್ತದಿಂದ ಹೊಸ ಜಿಲ್ಲಾಧಿಕಾರಿ ಕಚೇರಿವರೆಗೂ ಬೃಹತ್ ಅರಿವು ಜಾಥಾವನ್ನು ಆಯೋಜಿಸಲಾಗಿದೆ. ಆಮೂಲಕ ಬಲಗೈ ಸಮುದಾಯದ ಅಸ್ಮತೆ ಮತ್ತು ಅಸ್ತಿತ್ವವನ್ನು ಜಾಗೃತಿಗೊಳಿಸಲಾಗುವುದು ಎಂದು ಹೇಳಿದರು.

ಸುಪ್ರೀಂಕೋರ್ಟ್ ಆದೇಶದನ್ವಯ ಸಮಾನ ಜಾತಿಗಳನ್ನು ಒಂದುಗೂಡಿಸಬೇಕಾಗಿದ್ದ ನ್ಯಾಯಮೂರ್ತಿ ನಾಗಮೋಹನ ದಾಸ್, ಸಮಾನ ಜಾತಿಗಳನ್ನೇ ಒಡೆದು, ಸುಪ್ರೀಂಕೋರ್ಟ್ ಆದೇಶವನ್ನು ಉಲ್ಲಂಘಿಸಿದ್ದಾರೆ. ಇನ್ನು ರಾಜ್ಯ ಸರಕಾರಕ್ಕೆ ಶೇ.56ರಷ್ಟು ಮೀಸಲಾತಿ ಜಾರಿ ಮಾಡಲು ಅವಕಾಶವೇ ಇಲ್ಲ, ಇದು ಕೇಂದ್ರದ ಕ್ಯಾಬಿನೆಟ್‌ನಲ್ಲಿ ತೀರ್ಮಾನವಾಗಬೇಕು. ಆ ನಂತರ ಸಂವಿಧಾನದ 9ನೇ ಷೆಡ್ಯೂಲ್‌ಗೆ ಸೇರಿಸಬೇಕು ಎಂದರು.

ಬಲಗೈ ಸಚಿವರು ರಾಜೀನಾಮೆ ನೀಡಲಿ

ಅವೈಜ್ಞಾನಿಕವಾಗಿರುವ ಒಳಮೀಸಲಾತಿಯನ್ನು ಜಾರಿಗೆ ತಂದು, ಬಲಗೈ ಸಮುದಾಯಕ್ಕೆ ಅನ್ಯಾಯವಾದರೆ, ಆ ಸಮುದಾಯದ ಸಚಿವರು ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ಬಲಗೈ ಸಮುದಾಯದಿಂದಲೇ ರಾಜಕೀಯ ಅಧಿಕಾರಕ್ಕೆ ಬಂದ ಸಿಎಂ ಸಿದ್ದರಾಮಯ್ಯ ಆ ಸಮುದಾಯಕ್ಕೆ ಅನ್ಯಾಯ ಮಾಡಬಾರದು. ಒಂದು ವೇಳೆ ಅನ್ಯಾಯವಾದರೆ, ಮುಂದಿನ ದಿನಗಳಲ್ಲಿ ಈ ಸಮುದಾಯ ತಮಗೆ ತಕ್ಕಪಾಠ ಕಲಿಸಲಿದೆಂದು ಎಚ್ಚರಿಸಿದರು.

ಮಾರ್ಚ್ 25ರಂದು ಬೆಂಗಳೂರಿನಲ್ಲಿ ನಡೆಯಲಿರುವ ಬಲಗೈ ಜಾಗೃತಿ ಸಮಾವೇಶದಲ್ಲಿ ಬೀದರ್‌ನಿಂದ ಚಾಮರಾಜನಗರದ ವರೆಗೆ ಎಲ್ಲ ಬಲಗೈ ಸಮುದಾಯಗಳ ಮುಖಂಡರು ಸ್ವಯಂ ಪ್ರೇರಿತರಾಗಿ ಆಗಮಿಸಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಸಂವಿಧಾನ ಸಂರಕ್ಷಣಾ ಸಮಿತಿಯ ರಾಜ್ಯಾಧ್ಯಕ್ಷ ಎನ್.ಭಾಸ್ಕರ್, ವಕೀಲ ತಿಮ್ಮಯ್ಯ, ಪತ್ರಕರ್ತ ಸೋಮಯ್ಯ ಮಲೆಯೂರು ಹಾಜರಿದ್ದರು.

ಮಕ್ಕಳ ಶಿಕ್ಷಣದತ್ತ ಗಮನಹರಿಸಿ



ತಿ.ನರಸೀಪುರ: ಪೌರ ಕಾರ್ಮಿಕರು ತಮ್ಮ ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸುವ ಕಡೆ ಹೆಚ್ಚು ಗಮನ ಹರಿಸಬೇಕು ಎಂದು ಪುರಸಭೆ ಮುಖ್ಯಾಧಿಕಾರಿ ಸಿ. ಶ್ರೀನಿವಾಸ್ ಸಲಹೆ ನೀಡಿದರು. ಪಟ್ಟಣದ ಪುರಸಭೆ ಕಚೇರಿಯಲ್ಲಿ ವಿಶ್ವ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಂವಿಧಾನದಡಿ ಎಲ್ಲಕ್ಷೇತ್ರದಲ್ಲೂ ಮಹಿಳೆಯರಿಗೆ ಶೇ.33% ಮೀಸಲಾತಿ ಇದ್ದು, ಎಲ್ಲ ವರ್ಗದ ಮಹಿಳೆಯರು ಮೀಸಲಾತಿಯನ್ನು ಸದ್ಬಳಕೆ ಮಾಡಿಕೊಂಡು ಶೈಕ್ಷಣಿಕ, ರಾಜಕೀಯ, ಆರ್ಥಿಕ ಮತ್ತು ಔದ್ಯೋಗಿಕವಾಗಿ ಉನ್ನತಮಟ್ಟಕ್ಕೇರಬೇಕು ಎಂದು ಅವರು ಸಲಹೆ ನೀಡಿದರು.

ಕಂದಾಯ ಅಧಿಕಾರಿ ಕೆ.ಸಿ.ತ್ರಿವೇಣಿ ಮಾತನಾಡಿ, ಮಹಿಳೆ ಎಲ್ಲ ಕ್ಷೇತ್ರದಲ್ಲೂ ತನ್ನ ಛಾಪು ಮೂಡಿಸಿದ್ದು, ಮಹಿಳೆ ಮತ್ತು ಸಮಾಜದ ಒಂದು ನಾಣ್ಯದ ಎರಡು ಮುಖ. ಆಧುನಿಕ ಕಾಲ ಘಟ್ಟದಲ್ಲಿ ಮಹಿಳೆ ಪೈಲೇಟ್ ಚಾಲಕಿಯಾಗಿಯೂ ಪೌರ ಕಾರ್ಮಿಕರಾಗಿಯೂ ಕಾರ್ಯ ನಿರ್ವಹಿಸುತ್ತಿದ್ದಾರೆ. ಹಾಗಾಗಿ ಮಹಿಳೆ ಸಂಸಾರ, ಕಚೇರಿ ಮತ್ತು ಎಲ್ಲ ರಂಗಗಳನ್ನು ನಿರ್ವಹಿಸುವ ಸಾಮರ್ಥ್ಯ ಹೊಂದಿದ್ದಾಳೆ ಎಂದರು. ಮಹಿಳಾ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಕ್ರೀಡಾಕೂಟದ ವಿಜೇತರಿಗೆ ಪ್ರಶಸ್ತಿ ಪತ್ರಗಳನ್ನು ನೀಡಿ ಗೌರವಿಸಿ ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಕಚೇರಿ ವ್ಯವಸ್ಥಾಪಕ ಎಂ.ಮಹೇಂದ್ರ, ಲೆಕ್ಕಿಗ ವಿನಯ್ , ಸಮುದಾಯ ಸಂಘಟನಾ ಅಧಿಕಾರಿ ನಳಿನಿ, ಹಿರಿಯ ಆರೋಗ್ಯ ನಿರೀಕ್ಷಕ ಚಂಪಾಶ್ರೀ, ಪ್ರಥಮ ದರ್ಜೆ ಸಹಾಯಕ ಜಯಲಕ್ಷ್ಮಮ್ಮ, ಜೂನಿಯರ್ ಪ್ರೋಗ್ರಾಮರ್ ಹರೀಶ್,ಮಾಜಿ ಅಧ್ಯಕ್ಷ ಸೋಮು,ಮಾಜಿ ಸಾಮಾಜಿಕ ಸ್ಥಾಯಿ ಸಮಿತಿ ಅಧ್ಯಕ್ಷ ತುಂಬಲ ಪ್ರಕಾಶ್ ಸೇರಿದಂತೆ ಪೌರ ಕಾರ್ಮಿಕರು ಹಾಜರಿದ್ದರು.

ಟಾಂಗಾ ನಿಲ್ದಾಣ ನಿರ್ಮಾಣಕ್ಕೆ ಸಾರ್ವಜನಿಕರ ವಿರೋಧ

ಮೈಸೂರು: ಕೇಂದ್ರ ಸರ್ಕಾರದಪ್ರವಾಸೋದ್ಯಮ ಸಚಿವಾಲಯ ಜಾರಿಗೆ ತಂದಿರುವ 'ಸ್ವದೇಶ ದರ್ಶನ 2.0' ಯೋಜನೆಯಡಿ ಮೈಸೂರಿನಲ್ಲಿ ಹೆರಿಟೇಜ್ ಎಕ್ಸ್‌ಪೀರಿಯನ್ಸ್ ಝೋನ್ ಅಭಿವೃದ್ಧಿ ಮಾಡುವ ಪ್ರಸ್ತಾವನೆ ಇದೀಗ ವಿವಾದಕ್ಕೆ ಕಾರಣವಾಗಿದೆ.

ಯೋಜನೆ ನೆಪದಲ್ಲಿ ವಿಶ್ವವಿಖ್ಯಾತ ಅಂಬಾವಿಲಾಸ ಅರಮನೆ ಮುಂಭಾಗದ ಪಾದಚಾರಿ ಮಾರ್ಗದಲ್ಲೇ ಟಾಂಗಾ ಸ್ಟ್ಯಾಂಡ್ ನಿರ್ಮಿಸಲು ಮುಂದಾಗಿರುವ ಕ್ರಮಕ್ಕೆ ಮೈಸೂರಿನ ನಾಗರಿಕರು ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ. ಸ್ವದೇಶ ದರ್ಶನ 2.0 ಯೋಜನೆ ದೇಶದ ಪ್ರಮುಖ ಪ್ರವಾಸಿ ತಾಣಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿ, ಪ್ರವಾಸಿಗರಿಗೆ ಉತ್ತಮ ಅನುಭವ ಒದಗಿಸುವುದು ಹಾಗೂ ಸ್ಥಳೀಯ ಪರಂಪರೆಯ ಸಂಸ್ಕೃತಿಯನ್ನು ಉತ್ತೇಜಿಸುವ ಉದ್ದೇಶದಿಂದ ಕೇಂದ್ರ ಸರ್ಕಾರ ಆರಂಭಿಸಿದ ಯೋಜನೆಯಾಗಿದೆ. ಈ ಯೋಜನೆಯಡಿ ಮೈಸೂರಿನ ಕೆಲವು ಪ್ರಮುಖ ಪ್ರದೇಶಗಳಲ್ಲಿ ಹೆರಿಟೇಜ್ ಎಕ್ಸ್‌ಪೀರಿಯನ್ಸ್ ಝೋನ್ ಅಭಿವೃದ್ಧಿಪಡಿಸುವ ಪ್ರಸ್ತಾವನೆ ರೂಪಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಅರಮನೆಯ ವರಾಹ ಗೇಟ್ ಟಾಂಗಾ ಸ್ಟ್ಯಾಂಡ್, ಬಲರಾಮ ಗೇಟ್ ಟಾಂಗಾ ಸ್ಟ್ಯಾಂಡ್, ಮೈಸೂರು ಮೃಗಾಲಯ ಪ್ರವೇಶದ್ವಾರ ಟಾಂಗಾ ಸ್ಟ್ಯಾಂಡ್, ಕುಕ್ಕರಹಳ್ಳಿ ಕೆರೆ ಸ್ಟೇಬಲ್, ನಜರಾಬಾದ್ ಸ್ಟೇಬಲ್, ಕುಕ್ಕರಹಳ್ಳಿ ಕೆರೆ ಸರ್ಕ್ಯೂಟ್, ಶಾ ಪಸಂದ್ ಮಹಾರಾಜ ಸರ್ಕ್ಯೂಟ್ ಹಾಗೂ ಮಹಾರಾಜ ಸರ್ಕ್ಯೂಟ್ ಪ್ರದೇಶಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ನಗರ ಪಾಲಿಕೆ 'ನೋ ಆಬ್ಜೆಕ್ಷನ್ ಸರ್ಟಿಫಿಕೆಟ್' (ಎನ್ಒಸಿ) ನೀಡಿದೆ. ಆದರೆ ಅರಮನೆ ಮುಂಭಾಗದ ಪಾದಚಾರಿ ಮಾರ್ಗದಲ್ಲೇ ಟಾಂಗಾ ನಿಲ್ದಾಣ ಸ್ಥಾಪಿಸುವ ಯೋಚನೆಗೆ ಸಾರ್ವಜನಿಕರಿಂದ ತೀವ್ರ ಆಕ್ರೋಶ ವ್ಯಕ್ತವಾಗಿದೆ. ಪಾದಚಾರಿಗಳಿಗೆ ನಿರ್ಮಿಸಲಾದ ಮಾರ್ಗವನ್ನು ಯೋಜನೆ ಹೆಸರಿನಲ್ಲಿ ಒತ್ತುವರಿ ಮಾಡುವುದು ಅವೈಜ್ಞಾನಿಕ ಕ್ರಮ ಎಂದು ನಾಗರಿಕರು ಟೀಕಿಸಿದ್ದಾರೆ.

ಸಂಚಾರ ವ್ಯವಸ್ಥೆ, ಪಾದಚಾರಿಗಳ ಸುರಕ್ಷತೆ ಹಾಗೂ ಪ್ರವಾಸಿಗರ ಸಂಚಾರದ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇರುವುದರಿಂದ ನಗರ ಪಾಲಿಕೆ ಈ ನಿರ್ಧಾರವನ್ನು ಮರುಪರಿಶೀಲಿಸಬೇಕು ಎಂದು ಮೈಸೂರಿನ ಸಾರ್ವಜನಿಕರು ಒತ್ತಾಯಿಸಿದ್ದಾರೆ. ಹಲವರು ಇದನ್ನು ನಗರ ಪಾಲಿಕೆಯ ಬೇಜವಾಬ್ದಾರಿ ಕ್ರಮ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ರೇಣುಕಾಚಾರ್ಯರ ಆದರ್ಶ ಮೈಗೂಡಿಸಿಕೊಳ್ಳಿ

ಪಿರಿಯಾಪಟ್ಟಣ: ರೇಣುಕಾಚಾರ್ಯರವರ ಆದರ್ಶಗಳನ್ನು ಎಲ್ಲರೂ ತಮ್ಮ ಜೀವನದಲ್ಲಿ ಮೈಗೂಡಿಸಿಕೊಳ್ಳಬೇಕು ಎಂದು ಶ್ರೀರಾಮ ಪ್ರೌಢ ಶಾಲೆ ಮುಖ್ಯ ಶಿಕ್ಷಕ ಕಿಶೋರ್ ಆರಾಧ್ಯ ತಿಳಿಸಿದರು

ಪಟ್ಟಣದ ತಾಲೂಕು ಆಡಳಿತ ಭವನದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಆಯೋಜಿಸಿದ್ದ ರೇಣುಕಾಚಾರ್ಯರವರ ಜಯಂತಿಯಲ್ಲಿ ಭಾಗವಹಿಸಿ ಮಾತನಾಡಿದ ಅವರು ವೀರಶೈವ ಪಂಚ ಆಚಾರ್ಯರಲ್ಲಿ ರೇಣುಕಾಚಾರ್ಯರವರು ಮೊದಲಿಗರಾಗಿದ್ದರು. ಲಿಂಗಾಯಿತ ಧರ್ಮದ ಮೂಲ ಸಿದ್ದಂತಗಳನ್ನು ಪ್ರತಿಪಾದಿಸಲು ವೀರಶೈವ ಹಾಗೂ ಶೈವ ಪರಂಪರೆಗಳನ್ನು ಬಳಪಡಿಸಲು ತಮ್ಮ ಜೀವನವನ್ನೇ ಮೂಡುಪಾಗಿಟ್ಟಿದ್ದರು ಸಾಮಾನ್ಯ ಜನರಿಗೆ ಲಿಂಗಾಯಿತ ಧರ್ಮದ ಸಾರವನ್ನು ತಿಳಿಸುವ ಕೆಲಸಮಾಡಿದ್ದಾರೆ ಅವರು ತೋರಿಸಿದ ದಾರಿಯಲ್ಲಿ ನಾವೆಲ್ಲರೂ ಸಾಗಬೇಕು



ಇತ್ತೀಚಿನ ದಿನಗಳಲ್ಲಿ ಜಾತಿ ಜಾತಿಗಳ ನಡುವೆ ವೈಮನಸ್ಸು ಹೆಚ್ಚುತ್ತದೆ ವೀರಶೈವರು ಹಾಗೂ ಲಿಂಗಾಯಿತರು ಶಿವನ ಆರಾದಕರು ನಾವೆಲ್ಲರೂ ಒಂದೇ ಎನ್ನುವ ಮನೋಭಾವನೆಯನ್ನು ಹೊಂದಬೇಕು ಎಂದು ಹೇಳಿದರು

ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಹೊಸಳ್ಳಿ ಕೃಷ್ಣೇಗೌಡ ಮಾತನಾಡಿ, ಪಂಚ ಪೀಠಗಳನ್ನು ಸ್ಥಾಪಿಸಿ ಸಮಾಜದ ಬೆಳವಣಿಗೆಗೆ ಸಹಕರಿಸಿದ್ದಾರೆ. ಸಮಾಜದ ಒಳಿತಿಗಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟಿದ್ದಾರೆ ಇಂತಹ ವ್ಯಕ್ತಿಗಳು ಕೇವಲ ಒಂದು ಸಮುದಾಯಕ್ಕೆ ಮಾತ್ರ ಸೀಮಿತರಾಗಾದೆ ವಿಶ್ವಮಾನವರಾಗಿದ್ದಾರೆ ಎಂದು ತಿಳಿಸಿದರು.

ಶಿರಸ್ತೇದಾರ್ ಶಕೀಲಾಬಾನು, ಪುರಸಭೆ ಮುಖ್ಯಾಧಿಕಾರಿ ಮಧು, ಕೃಷಿ ಇಲಾಖೆ ಸಹಾಯಕ ನಿರ್ದೇಶಕಿ ಕುಸುಮ, ಮಾಜಿ ಪುರಸಭಾ ಅಧ್ಯಕ್ಷ ಪ್ರಕಾಶ್ ಸಿಂಗ್ ಇತರರು ಇದ್ದರು.

ಗ್ರಾಹಕ ಪಂಚಾಯತ್ ರಾಜ್ಯ ಶಿಕ್ಷಣ ಸಂಚಾಲಕ ಡಾ.ರವಿಶಂಕರ್ ಹೇಳಿಕೆ

ಗ್ರಾಹಕರಿಗೆ ಹಕ್ಕುಗಳ ಬಗ್ಗೆ ಅರಿವು ಅಗತ್ಯ

ಮೈಸೂರು: ಸಮಾಜದ ಪ್ರತಿಯೊಬ್ಬರು ಕಡ್ಡಾಯವಾಗಿ ಗ್ರಾಹಕರ ಹಕ್ಕುಗಳನ್ನು ತಿಳಿದುಕೊಂಡರೆ ವಂಚನೆಗೆ ಒಳಗಾಗದೆ ಜಾಗೃತ ವಾಗಿರಬಹುದು ಎಂದು ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ರಾಜ್ಯ ಶಿಕ್ಷಣ ಸಂಚಾಲಕ ಡಾ.ರವಿಶಂಕರ್ ಹೇಳಿದರು

ಸೋಮವಾರ ನಗರದ ಚಾಮುಂಡಿಪುರಂ ವೃತ್ತದಲ್ಲಿ ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ವತಿಯಿಂದ ವಿಶ್ವ ಗ್ರಾಹಕರ ದಿನಾಚರಣೆ ಅಂಗವಾಗಿ ಏರ್ಪಡಿ ಸಿದ್ದ ಗ್ರಾಹಕರ ಹಕ್ಕುಗಳ ಬಗ್ಗೆ ಜಾಗೃತಿ ಕಾರ್ಯಕ್ರಮದಲ್ಲಿ, ಗ್ರಾಹಕರಿಗೆ ಗ್ರಾಹಕರ ಹಕ್ಕುಗಳ ಜಾಗೃತಿಯ ಕರಪತ್ರ ನೀಡಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಗ್ರಾಹಕರಿಗೆ ಮಾರಾಟವಾಗುವ ಪ್ರತಿ ವಸ್ತು, ಸರಕು ಮತ್ತು ಸೇವೆಗಳ ಮೌಲ್ಯ, ವೆಚ್ಚ ಹಾಗೂ ಗುಣಮಟ್ಟದ ಬಗ್ಗೆ ಸಂಪೂರ್ಣ ಮಾಹಿತಿ ಗ್ರಾಹಕರಿಗೆ ಸಿಗಬೇಕು. ಗ್ರಾಹಕರ ಹಕ್ಕುಗಳನ್ನು ತಿಳಿಸುವ ಉದ್ದೇಶದಿಂದ ಗ್ರಾಹಕ ದಿನಾಚರಣೆ ಮಾಡಲಾಗುತ್ತಿದೆ ಎಂದರು.

ಸಾಮಾಜಿಕ ಸಮಸ್ಯೆಗಳ ವಿರುದ್ಧ ಹೋರಾಡಲು ಸಾರ್ವಜನಿಕರಿಗೆ ಜಾಗೃತಿ ಮೂಡಿಸುವುದರ ಜತೆಗೆ, ಸಂವಿಧಾನ ನೀಡಿರುವ ಹಕ್ಕುಗಳ ಬಗ್ಗೆಯೂ ತಿಳಿಸಬೇಕು. ಸರ್ಕಾರ ಗ್ರಾಹಕ ಸಂರಕ್ಷಣಾ ಕಾಯ್ದೆಯಡಿ ಜಾರಿಗೆ ತಂದು ಗ್ರಾಹಕರಿಗೆ ನ್ಯಾಯ ಪಡೆಯಲು ಅವಕಾಶ ಮಾಡಿಕೊಟ್ಟಿದೆ ಎಂದರು.



> **2019ರ ಕಾಯ್ದೆ ಪ್ರಕಾರ ಗ್ರಾಹಕರು ದೂರುಗಳನ್ನು ಆನ್‌ಲೈನ್ ಮುಖಾಂತರವೂ ನೀಡಬಹುದು ದೂರಿನನ್ವಯ ಪ್ರಕರಣ ದಾಖಲಿಸಿಂಡು ಸೂಕ್ತ ನ್ಯಾಯ ಒದಗಿಸುವ ಅಧಿಕಾರವನ್ನು ಆಯೋಗ ಹೊಂದಿದೆ.**
> ■ **ಶ್ರೀಕಂಠೇಶ್, ಜಿಲ್ಲಾ ಕಾರ್ಯದರ್ಶಿ, ಅಖಿಲ ಭಾರತೀಯ ಗ್ರಾಹಕ ಪಂಚಾಯತ್**

ಜಿಲ್ಲಾ ಕಾರ್ಯದರ್ಶಿ ಶ್ರೀಕಂಠೇಶ್ ಮಾತನಾಡಿ, 1962ರಲ್ಲಿ ಅಮೇರಿಕಾದ ಅಧ್ಯಕ್ಷ ಜಾನ್ ಎಫ್.ಕೆನಡಿ ಗ್ರಾಹಕರ ಹಕ್ಕುಗಳ ಕಾಯ್ದೆಯನ್ನು ಜಾರಿಗೆ ತಂದರು. ಅಂದಿನಿಂದ ಮಾ.15ರಂದು ವಿಶ್ವ ಗ್ರಾಹಕರ ಹಕ್ಕುಗಳ ದಿನಾಚರಣೆ ಆಚರಿಸಲಾಗುತ್ತಿದೆ ಎಂದರು.

ನಗರಪಾಲಿಕೆಯ ಮಾಜಿ ಸದಸ್ಯ ಜಗದೀಶ್, ಅಪೂರ್ವ ಸುರೇಶ್, ಅರಿವು ಸಂಸ್ಥೆಯ ಅಧ್ಯಕ್ಷ ಶ್ರೀಕಾಂತ ಕಶ್ಯಪ್, ಆನಂದ,ದೂರ ರಾಜಣ್ಣ, ಶಿವಲಿಂಗ ಸ್ವಾಮಿ, ಜತ್ತಿ ಪ್ರಸಾದ್, ಆದರ್ಶ್, ಆದರ್ಶ್, ಧರ್ಮೇಂದ್ರ, ಜಯರಾಮ್ ಇದ್ದರು.

ಸಿಲಿಕಾನ್ ಸಿಟಿ ಶಾಲೆಯಲ್ಲಿ ಗ್ರಂಥಾಲಯ ಉದ್ಘಾಟನೆ

ಓದಿನ ಜತೆಗೆ ಕ್ರೀಡೆಗೂ ಪ್ರಾಶಸ್ತ್ಯ ನೀಡಿ

ಮೈಸೂರು: ವಿದ್ಯಾರ್ಥಿಗಳು ಓದುವುದರ ಜೊತೆಗೆ ಕ್ರೀಡಾ ಚಟುವಟಿಕೆಗಳಲ್ಲಿ ಸಕ್ರೀಯವಾಗಿ ಭಾಗವಹಿಸಿ ಸ್ಪರ್ಧೆಗಳಲ್ಲಿ ವಿಜೇತರಾಗುವ ಮೂಲಕ ರಾಜ್ಯಕ್ಕೇ, ದೇಶಕ್ಕೆ ಕೀರ್ತಿತರಬೇಕೆಂದು ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಮಾಜಿ ಸದಸ್ಯ ಡಾ.ಈ.ಸಿ.ನಿಂಗರಾಜ್ ಗೌಡ ತಿಳಿಸಿದರು.

ಮೈಸೂರಿನ ಲಲಿತಾದ್ರಿಪುರದಲ್ಲಿರುವ ಸಿಲಿಕಾನ್ ಸಿಟಿ ಇಂಟರ್ ನ್ಯಾಷನಲ್ ಸ್ಕೂಲ್‌ನಲ್ಲಿ ಬ್ಯಾಸ್ಕೆಟ್ ಬಾಲ್‌ಕೋರ್ಟ್ ಮತ್ತು ಗಂಥಾಲಯವನ್ನೂ ಉದ್ಘಾಟಿಸಿ ಮಾತನಾಡಿದ ಅವರು, ಬ್ಯಾಸ್ಕೆಟ್ ಬಾಲ್ ಒಂದು ಜನಪ್ರಿಯ ಕ್ರೀಡೆಯಾಗಿದೆ.

ಬ್ಯಾಸ್ಕೆಟ್ ಬಾಲ್‌ನ್ನು 1891ರಲ್ಲಿ ಜೇಮ್ಸ್ ನಾಯಿಸ್ಮಿತ್ ಎಂಬ ಶಿಕ್ಷಕರು ಅಮೇರಿಕಾದಲ್ಲಿ ಕಂಡುಹಿಡಿದರು, ಮೈಕಾಲ್‌ಜೋರ್ಡಾನ್ ಅವರಂತಹ ಪ್ರಸಿದ್ಧ ಆಟಗಾರರು ಇದ್ದಾರೆ ಎಂದು ವಿವರಿಸಿದರು. ಗ್ರಂಥಾಲಯ ಎಂದರೆ ಪುಸ್ತಕಗಳು, ಪತ್ರಿಕೆಗಳು, ಮ್ಯಾಗಜೀನ್‌ಗಳು ಹಾಗೂ ಜ್ಞಾನಕ್ಕೆ ಸಂಬಂಧಿಸಿದ ವಿವಿಧ ಮಾಹಿತಿಗಳನ್ನು ಸಂಗ್ರಹಿಸಿ ಜನರಿಗೆ ಓದಲು ಮತ್ತು ಅಧ್ಯಯನ ಮಾಡಲು ನೀಡುವ ಸ್ಥಳವಾಗಿದೆ. ಗ್ರಂಥಾಲಯವೆಂದರೆ ಪುಸ್ತಕಗಳ ಮನೆ ಅಥವಾ ಪುಸ್ತಕಗಳ ಭಂಡಾರ ಎಂದು ಹೇಳಬಹುದಾಗಿದೆ.ಪುಸ್ತಕಗಳ ಸಂಗ್ರಹ ಮಾಡಿದ ಪಾಂಡವಪುರದ ಅಂಕೇಗೌಡರಿಗೆ ಕೇಂದ್ರ ಸರ್ಕಾರ ''ಪದ್ಮಶ್ರೀ'' ಪ್ರಶಸ್ತಿ ನೀಡಿರುವುದನ್ನೂ ಸ್ಮರಿಸಿದರು.



ಗ್ರಂಥಾಲಯದ ಮುಖ್ಯಉದ್ದೇಶ ವಿದ್ಯಾರ್ಥಿಗಳಲ್ಲಿ ಅಧ್ಯಾಪಕರಲ್ಲಿ, ಜನಸಾಮಾನ್ಯರಲ್ಲಿ ಓದುವ ಅಭ್ಯಾಸ ಬೆಳೆಸುವುದು. ವಿದ್ಯಾರ್ಥಿಗಳಿಗೆ ಅಧ್ಯಯನಕ್ಕೆ ಸಹಾಯ ಮಾಡುವುದು. ಸಮಾಜದಲ್ಲಿ ಜ್ಞಾನ ಮತ್ತು ಸಂಸ್ಕೃತಿ ಹೆಚ್ಚಿಸುತ್ತದೆ. ವಿದ್ಯಾರ್ಥಿಗಳ ಮನಸ್ಸಿನ ಬೆಳವಣಿಗೆಗೆ ಸಹಾಯ ಮಾಡುತ್ತದೆ. ಸಮಾಜವನ್ನು ಶಿಕ್ಷಣದ ಕಡೆಗೆ ಮುನ್ನಡೆಸುತ್ತದೆ ಎಂದರು. ಕಾರ್ಯಕ್ರಮದಲ್ಲಿ ಸಿಲಿಕಾನ್ ಸಿಟಿ ಇಂಟರ್ ನ್ಯಾಷನಲ್ ಸಂಸ್ಥೆಯ ಕಾರ್ಯದರ್ಶಿ ಎಲ್. ರವಿ, ಮೈಸೂರು ಮಹಾನಗರಪಾಲಿಕೆಯ ಉಪ ಆಯುಕ್ತ ಜಿ.ಎಸ್.ಸೋಮಶೇಖರ್, ಸಂಸ್ಥೆ ನಿರ್ದೇಶಕ ಡಾ.ಸುಮಲಿನಿ ಬಿ.ಸ್ವಾಮಿ, ಪ್ರಾಂಶುಪಾಲರಾದ ಡಾ.ದೀಪ್ತಿ ಚತುರ್ವೇದಿ, ಎಂ.ಮೋಹನ್, ಚಂದ್ರಣ್ಣ, ಹರೀಶ್ ಮೋಗಣ್ಣ, ಕೆ.ಎನ್.ಸಂತೋಷ್, ಅಧ್ಯಾಪಕಿಯರು ಮತ್ತು ವಿದ್ಯಾರ್ಥಿಗಳು ಹಾಜರಿದ್ದರು.

ಕಿರುಸುದ್ದಿ

ರಂಜಾನ್ ಹಬ್ಬದ ಹಿನ್ನೆಲೆ: ಧರ್ಮಗುರುಗಳಿಗೆ ಸನ್ಮಾನ

ಚಾಮರಾಜನಗರ: ರಂಜಾನ್ ಹಬ್ಬದ ಹಿನ್ನೆಲೆ ನಗರದ ಮೌಲಾನಾ ಆಜಾದ್ ಕಮ್ಯೂನಿಟಿಹಾಲ್ ಸಭಾಂಗಣದಲ್ಲಿ ನಡೆದ ಸರಳ ಸಮಾರಂಭದಲ್ಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರು ವಿವಿಧ ಮಸೀದಿಗಳ ಧರ್ಮ ಗುರುಗಳನ್ನುಸನ್ಮಾನಿಸಿ ಅಭಿನಂದಿಸಿ, ಸಿಹಿ ಹಂಚಿದರು. ಇದೇ ವೇಳೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರು ಮಾತನಾಡಿ, ದೇಶದ್ಯಾಂತ ರಂಜಾನ್ ಹಬ್ಬವನ್ನು ಮುಸ್ಲಿಮರು ಸಡಗರ ಸಂಭ್ರಮದಿಂದ ಆಚರಿಸಲಾಗುತ್ತಿದ್ದು, ಎಲ್ಲರಿಗೂ ಒಳಿತನ್ನು ಬಯಸುವುದು ಸರ್ವಧರ್ಮದ ಆಶಯವಾಗಿದೆ. ರಂಜಾನ್ ಹಬ್ಬವನ್ನು ಮುಸ್ಲಿಂಮರು ಸಂಭ್ರಮದಿಂದ ಆಚರಿಸಿ ಎಂದರು. ಈ ಸಂದರ್ಭದಲ್ಲಿ ಚುಡಾ ಅಧ್ಯಕ್ಷ ಮಹಮದ್ ಅಸ್ಗರ್, ಮಾಜಿ ಅಧ್ಯಕ್ಷರಾದ ಸಯ್ಯದ್ ರಫಿ, ಸುಹೇಲ್ ಅಲಿಖಾನ್, ಮುಖಂಡರಾದ ಆಯುಬ್ ಖಾನ್, ನಯಾಜ್ ಪಾಷಾ,ಇ ಬ್ರಾನ್ಅಹಮದ್, ಅಪ್ಸರ್ ಅಹಮದ್, ಪರ್ವೇಜ್ ಸೈಯದ್ ಇರ್ಷದ್, ನಗರಸಭಾ ನಾಮನಿರ್ದೇಶಕ ಸ್ವಾಮಿ ರಾಜು ಇತರರು ಹಾಜರಿದ್ದರು.

ಮಾಜಿ ಶಾಸಕ ನಿರಂಜನ್ ಕುಮಾರ್‌ಗೆ ಸನ್ಮಾನ



ಗುಂಡ್ಲುಪೇಟೆ: ತಾಲೂಕಿನ ಶೀಲವಂತಪುರ ಗ್ರಾಮದಲ್ಲಿ ಮಾಜಿ ಶಾಸಕರಾದ ಸಿ.ಎಸ್.ನಿರಂಜನ್ ಕುಮಾರ್ ರವರಿಗೆ ಶೀಲವಂತಪುರ ಗ್ರಾಮಸ್ಥರು ಕೃತಜ್ಞತೆ ಸಲ್ಲಿಸಿ ಸನ್ಮಾನಿಸಿದರು. ಮಾಜಿ ಶಾಸಕ ಸಿ.ಎಸ್.ನಿರಂಜನ್ ಕುಮಾರ್‌ರವರು ಅಧಿಕಾರದಲ್ಲಿ ಇದ್ದ ಸಂದರ್ಭದಲ್ಲಿ ಶೀಲವಂತಪುರ ಗ್ರಾಮದ ಬಹುತೇಕ ಡಾಂಬರು ರಸ್ತೆ ಮತ್ತು ಚರಂಡಿ ನಿರ್ಮಾಣಕ್ಕೆ ಅನುದಾನ ನೀಡಿ ಅಭಿವೃದ್ಧಿ ಪಡಿಸಿದ್ದಾರೆ ಎಂಬ ಕಾರಣಕ್ಕೆ ಗ್ರಾಮಸ್ಥರು ಗ್ರಾಮದ ತುಂಬಾ ಮೆರವಣಿಗೆ ಮಾಡಿ ಇಂದು ಸಂಭ್ರಮಾಚರಣೆ ಮಾಡಿ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾ ಉಪಾಧ್ಯಕ್ಷರಾದ ಮಲ್ಲೇಶ್, ಕನ್ನೇಗಾಲ ಸ್ವಾಮಿ, ಬಿಜೆಪಿ ಮುಖಂಡರಾದ ಜಿಡಿಎಲ್ ಸುರೇಶ್, ಕಮರಹಳ್ಳಿ ರವಿ, ಕೊಡಸೋಗೆ ರಾಜು, ನವೀನ್ ಮೌರ್ಯ, ಪ್ರಧಾನ ಕಾರ್ಯದರ್ಶಿ ಮಹೇಂದ್ರ, ಶಿವಪುರ ಗೀತಾ, ಮಂಗಳಮ್ಮ, ಸರಸ್ವತಮ್ಮ ಗ್ರಾಮದ ಮುಖಂಡರುಗಳಾದ ತಮ್ಮಣ್ಣ, ಶಶಿ, ಶೇಖರ್ ಹಾಗೂ ಪಕ್ಷದ ಮುಖಂಡರು, ಕಾರ್ಯಕರ್ತರು ಮತ್ತಿತರರಿದ್ದರು.

ವಿದ್ಯುತ್ ಸಮಸ್ಯೆ ಪರಿಹಾರಕ್ಕೆ ರೈತ ಸಂಘ ಒತ್ತಾಯ

ಕೊಳ್ಳೇಗಾಲ: ಕರ್ನಾಟಕ ರಾಜ್ಯ ರೈತ ಸಂಘ ತಾಲೂಕು ಸಮಿತಿಯ ವತಿಯಿಂದ ತಾಲೂಕಿನಲ್ಲಿ ರೈತರು ಅನುಭವಿಸುತ್ತಿರುವ ವಿದ್ಯುತ್ ಸಮಸ್ಯೆ ಬಗ್ಗೆ ಪ್ರತಿಭಟನೆ ನಡೆಸಿದರು. ಪಟ್ಟಣದ ಸೆಸ್ಕ್ ಕಚೇರಿ ಮುಂದೆ ರೈತರು ಕುಳಿತು ಧಿಕ್ಕಾರ ಕೂಗುವ ಮೂಲಕ ಪ್ರತಿಭಟನೆ ನಡೆಸಿದರು. ಬೇಸಿಗೆಯಲ್ಲಿ ಹಗಲು ಹೊತ್ತಿನಲ್ಲಿ ಕೃಷಿ ಪಂಪ್ ಸೆಟ್ ಗಳಿಗೆ 7 ಗಂಟೆ ನಿರಂತರ 3 ಫೇಸ್ ವಿದ್ಯುತ್ ನೀಡಬೇಕು. ಸೇರಿದಂತೆ ಇನ್ನಿತರೆ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸಿದರು. ಸ್ಥಳಕ್ಕೆ ಸೆಸ್ಕ್ ಇಇ ತಬಸ್ಸುಮ್ ಅಪ್ಸಾ, ಎಇಇ ರಾಜು ಆಗಮಿಸಿ, ರೈತರ ಸಮಸ್ಯೆ ಅಹವಾಲು ಸ್ವೀಕರಿಸಿ ಒಂದು ವಾರದೊಳಗೆ ಸಮಸ್ಯೆ ಬಗೆಹರಿಸುವುದಾಗಿ ತಿಳಿಸಿದರು. ಸಮಸ್ಯೆ ಬಗೆಹರಿಸದಿದ್ದರೇ ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿ ರೈತರು ಪ್ರತಿಭಟನೆಯನ್ನು ಕೈಬಿಟ್ಟು ತೆರಳಿದರು. ರೈತ ಸಂಘದ ಅಧ್ಯಕ್ಷ ಶಿವಮಲ್ಲು, ಜಿಲ್ಲಾ ಖಾಯಂ ಸದಸ್ಯರು ರವಿನಾಯ್ಡು, ರಾಮಣ್ಣ ಸತ್ತೇಗಾಲ, ಜಿಲ್ಲಾ ಉಪಾಧ್ಯಕ್ಷ ಗೌಡೇಗೌಡ, ನಿಕೋಲಸ್, ಚಾರ್ಲಿ, ಮಸಣಶೆಟ್ಟಿ, ಶಿವರಾಜು ಸರಗೂರು, ದೊಡ್ಡಯ್ಯ, ರಾಜಣ್ಣ, ಮಲ್ಲಪ್ಪ, ತಾಂಡವ ಮೂರ್ತಿ, ಮದುವನ ಅರಸ್, ವೆಂಕಟೇಶ್, ಮಹೇಶ್, ಮಾದೇವಶೆಟ್ಟಿ, ಸಿದ್ದಪ್ಪಸ್ವಾಮಿ, ಜಯಣ್ಣ ಹಾಗೂ ಇತರರು ಇದ್ದರು.

ನಾಳೆ ಜಿಲ್ಲಾ ಅಭಿವೃದ್ಧಿ ಸಮನ್ವಯ ಸಮಿತಿ ಸಭೆ

ಚಾಮರಾಜನಗರ: ಜಿಲ್ಲಾ ಮಟ್ಟದ ಜಿಲ್ಲಾ ಅಭಿವೃದ್ಧಿ ಸಮನ್ವಯ ಹಾಗೂ ಉಸ್ತುವಾರಿ ಸಮಿತಿ ಪರಿಶೀಲನಾ ಸಭೆಯು ಲೋಕಸಭಾ ಸದಸ್ಯ ಸುನೀಲ್ ಬೋಸ್ ಅವರ ಅಧ್ಯಕ್ಷತೆಯಲ್ಲಿ ಮಾರ್ಚ್ 18 ರಂದು ಮಧ್ಯಾಹ್ನ 1.30 ಗಂಟೆಗೆ ನಗರದ ಜಿಲ್ಲಾ ಪಂಚಾಯತ್ ನೂತನ ಸಭಾಂಗಣದಲ್ಲಿ ನಿಗದಿಪಡಿಸಲಾಗಿದೆ ಎಂದು ಜಿಲ್ಲಾ ಪಂಚಾಯತ್ ಪ್ರಕಟಣೆ ತಿಳಿಸಿದೆ.

ಮಾ. 18 ರಂದು ವಿಕಲಚೇತನರು, ಹಿರಿಯ ನಾಗರಿಕ ಫಲಾನುಭವಿಗಳಿಗೆ ಉಚಿತ ಸಾಧನ ಸಲಕರಣೆ ವಿತರಣಾ ಕಾರ್ಯಕ್ರಮ ನಡೆಯಲಿದೆ.



ಚಾಮರಾಜನಗರದಲ್ಲಿ ರಂಜಾನ್ ಹಬ್ಬದ ಹಿನ್ನೆಲೆ ನಗರದ ಮೌಲಾನಾ ಆಜಾದ್ ಕಮ್ಯೂನಿಟಿ ಹಾಲ್‌ನಲ್ಲಿ ನಡೆದ ಸರಳ ಸಮಾರಂಭದಲ್ಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರು ವಿವಿಧ ಮಸೀದಿಗಳ ಗುರುಗಳನ್ನು ಸನ್ಮಾನಿಸಿ ಅಭಿನಂದಿಸಿ, ಸಿಹಿ ಹಂಚಿದರು.

ಹುಂಡಿ ಎಣಿಕೆ: 20.57ಲಕ್ಷ ರೂ. ಸಂಗ್ರಹ

ಕೊಳ್ಳೇಗಾಲ: ಇಲ್ಲಿನ ಶಿವನಸಮುದ್ರ ಸಮೂಹ ದೇವಾಲಯಗಳ ಹುಂಡಿಗಳ ಎಣಿಕೆ ಕಾರ್ಯ ಜರುಗಿದ್ದು, ಒಟ್ಟು 20,57,570 ಲಕ್ಷ ರೂ, ಅರ್ಧ ಗ್ರಾಮ್ ಚಿನ್ನದ ಪದಾರ್ಥಗಳು ಹಾಗೂ 6 ಗ್ರಾಮ್ ಬೆಳ್ಳಿ ಪದಾರ್ಥಗಳು ಸಂಗ್ರಹವಾಗಿದೆ. ತಾಲೂಕಿನ ಶ್ರೀ ಮಧ್ಯರಂಗನಾಥಸ್ವಾಮಿ ದೇವಸ್ಥಾನ, ಶ್ರೀ ಆದಿಶಕ್ತಿ ಮಾರಮ್ಮ ದೇವಸ್ಥಾನ, ಶ್ರೀ ಪ್ರಸನ್ನ ಮೀನಾಕ್ಷಿ ಸೋಮೇಶ್ವರ ದೇವಸ್ಥಾನಗಳ 11 ಹುಂಡಿಗಳ ಏಣಿಕೆ ಕಾರ್ಯ ಉಪವಿಭಾಗಾಧಿಕಾರಿ ದಿನೇಶ್ ಕುಮಾರ್ ಮೀನಾ ಆದೇಶದ ಮೇರೆಗೆ, ತಹಶಿಲ್ದಾರ್ ಬಸವರಾಜು ನೇತೃತ್ವದಲ್ಲಿ ಸೋಮವಾರ ನಡೆಯಿತು. ಕಳೆದ ನಾಲ್ಕು ತಿಂಗಳ ಅವಧಿಯಲ್ಲಿ ನಡೆದ ಏಣಿಕೆ ಕಾರ್ಯ ನಡೆದಿದ್ದು, ವಿಡಿಯೋ ಚಿತ್ರೀಕರಣ ಮಾಡಲಾಯಿತು. ಏಣಿಕೆಯಲ್ಲಿ ಸಂಗ್ರಹವಾದ ಹಣವನ್ನು ಕೊಳ್ಳೇಗಾಲದ ಕೋಟೆಕ್ ಬ್ಯಾಂಕ್ ನಲ್ಲಿ ಜಮಾ ಮಾಡಲಾಗಿದೆ.ಹುಂಡಿ ಎಣಿಕೆಯಲ್ಲಿ ಉಪ ತಹಶಿಲ್ದಾರ್ ವಿಜಯಕುಮಾರ್, ಮುಜರಾಯಿ ಇಲಾಖೆ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್, ರಾಜಸ್ವ ನಿರೀಕ್ಷಕ ನಿರಂಜನ್, ರಂಗಸ್ವಾಮಿ, ಗ್ರಾಮ ಆಡಳಿತ ಅಧಿಕಾರಿಗಳಾದ ರಾಜೇಶ್ ಮರಾಠ, ಪ್ರದೀಪ್, ಸತೀಶ್, ಮಮತ, ಜ್ಯೋತಿ, ಸವಿತಾ, ಕುಮಾರ, ಪ್ರಸಾದ್, ಅನಿಲ್, ವಿಷ್ಣು ಮತ್ತು ಕಸಬಾ ಹೋಬಳಿ ಪಾಳ್ಯ ಹೋಬಳಿ ಗ್ರಾಮ ಸಹಾಯಕರುರು, ಕೋಟೆಕ್ ಬ್ಯಾಂಕ್ ಸಿಬ್ಬಂದಿಗಳು ಗಂಗಾಧರ್ ಹಾಗೂ ದೇವಾಲಯದ ಅರ್ಚಕರು ಮಾಧವನ್, ಚಿಕ್ಕರಾವಳಯ್ಯ, ನಾಗರಾಜು ದೀಕ್ಷಿತ್ ಇದ್ದರು. ಏಣಿಕೆಯಲ್ಲಿ ಗ್ರಾಮಾಂತರ ಪೊಲೀಸ್ ಠಾಣೆಯ ಕಾನ್ಸಟೇಬಲ್ ಗಳಾದ ದುಂಡಪ್ಪ ಪೂಜೇರಿ, ಮಹದೇವಸ್ವಾಮಿ ಸೂಕ್ತ ಬಂದೋಬಸ್ತ್ ಒದಗಿಸಿದ್ದರು.



ಕೊಳ್ಳೇಗಾಲದ ಶಿವನಸಮುದ್ರ ಸಮೂಹ ದೇವಾಲಯಗಳ ಹುಂಡಿಗಳ ಎಣಿಕೆ ಕಾರ್ಯ ಸೋಮವಾರ ಜರುಗಿತು.

ಪರೀಕ್ಷೆ ಎದುರಿಸಲಿರುವ 12,128 ವಿದ್ಯಾರ್ಥಿಗಳು: ಜಿಲ್ಲಾಧಿಕಾರಿ

ನಾಳೆಯಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆ

ಚಾಮರಾಜನಗರ: ಎಸ್.ಎಸ್.ಎಲ್.ಸಿ ಪರೀಕ್ಷೆಯು ಇದೇ ಮಾರ್ಚ್ 18ರಿಂದ ಏಪ್ರಿಲ್ 2ರವರೆಗೆ ನಡೆಯಲಿದ್ದು, ಪಾರದರ್ಶಕ ಪರೀಕ್ಷಾ ಪ್ರಕ್ರಿಯೆಗೆ ಸಕಲ ಸಿದ್ದತೆ ಕೈಗೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಶ್ರೀರೂಪ ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿಂದು ಪತ್ರಿಕಾಗೋಷ್ಠಿಯಲ್ಲಿ ವಿವರ ನೀಡಿದ ಜಿಲ್ಲಾಧಿಕಾರಿಯವರು ಜಿಲ್ಲೆಯಲ್ಲಿ 6170 ಬಾಲಕರು, 5958 ಬಾಲಕಿಯರು ಸೇರಿದಂತೆ ಒಟ್ಟು 12128 ವಿದ್ಯಾರ್ಥಿಗಳು ಪರೀಕ್ಷೆ ಬರೆಯುತ್ತಿದ್ದಾರೆ. ಶಾಲಾ ವಿದ್ಯಾರ್ಥಿಗಳು 11249, ಖಾಸಗಿ ಅಭ್ಯರ್ಥಿಗಳು 288, ಪುನರಾವರ್ತಿತ ವಿದ್ಯಾರ್ಥಿಗಳು 566, ಪುನರಾವರ್ತಿತ ಖಾಸಗಿ ಅಭ್ಯರ್ಥಿಗಳು 25 ಮಂದಿ ಪರೀಕ್ಷೆಗೆ ಹಾಜರಾಗಲಿದ್ದಾರೆ. ಅಲ್ಲದೆ ವಿಶೇಷ ಅಗತ್ಯವುಳ್ಳ 68 ಬಾಲಕರು, 31 ಬಾಲಕಿಯರು ಸಹ ಪರೀಕ್ಷೆ ಬರೆಯಲಿದ್ದಾರೆ ಎಂದರು.

ಚಾಮರಾಜನಗರ ತಾಲೂಕಿನಲ್ಲಿ 15, ಗುಂಡ್ಲುಪೇಟೆ 10, ಹನೂರು 9, ಕೊಳ್ಳೇಗಾಲ 9, ಯಳಂದೂರು 4 ಸೇರಿದಂತೆ 47 ಪರೀಕ್ಷಾ ಕೇಂದ್ರಗಳನ್ನು ತೆರೆಯಲಾಗಿದೆ. ಎಲ್ಲ ಪರೀಕ್ಷಾ ಕೇಂದ್ರಗಳಲ್ಲಿ ಮೂಲ ಸೌಕರ್ಯಗಳು ಮತ್ತು ವೆಬ್ ಕಾಸ್ಟಿಂಗ್ ಗೆ ಪೂರ್ವ ಸಿದ್ದತೆ ಕೈಗೊಂಡಿದ್ದು, ಜಿಲ್ಲಾ ಪಂಚಾಯತ್ ಕಚೇರಿಯಲ್ಲಿ ವೆಬ್ ಕಾಸ್ಟ್ ಸಂಬಂಧ ಜಿಲ್ಲಾ ನಿಯಂತ್ರಣ ಕೊಠಡಿ ಸ್ಥಾಪಿಸಲಾಗಿದೆ ಎಂದು ಜಿಲ್ಲಾಧಿಕಾರಿಯವರು ತಿಳಿಸಿದರು.

ಪ್ರಶ್ನೆ ಪತ್ರಿಕೆಗಳನ್ನು ಪ್ರತಿದಿನ ವೇಳಾ ಪಟ್ಟಿಯಂತೆ 19 ನಿಗದಿತ ಮಾರ್ಗದಲ್ಲಿ ಪರೀಕ್ಷಾ ಕೇಂದ್ರಗಳಿಗೆ ಪೊಲೀಸ್ ಬೆಂಗಾವಲಿನಲ್ಲಿ ಸರಬರಾಜು ಮಾಡಲಾಗುತ್ತದೆ. ಪರೀಕ್ಷಾ ದಿನಗಳಂದು ಪರೀಕ್ಷಾ ಕೇಂದ್ರಗಳ ಸುತ್ತ 200 ಮೀ. ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಪರೀಕ್ಷಾ ಕೇಂದ್ರಗಳ ಆಸುಪಾಸಿನ ಜೆರಾಕ್ಸ್ ಮತ್ತು ಸೈಬರ್ ಸೆಂಟರ್ ಗಳನ್ನು ಮುಚ್ಚಿಸಲು ಆದೇಶಿಸಲಾಗಿದೆ. ಪರೀಕ್ಷಾ ಕೇಂದ್ರಗಳ ಪ್ರದೇಶಗಳ ವ್ಯಾಪ್ತಿಯಲ್ಲಿ ನಿರಂತರ ವಿದ್ಯುತ್ ಸರಬರಾಜಿಗೆ ಸೆಸ್ಕ್ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಅವರು ಮಾತನಾಡಿ ಎಸ್.ಎಸ್.ಎಲ್.ಸಿ ಪೂರ್ವಭಾವಿ ಪರೀಕ್ಷೆ ಫಲಿತಾಂಶದ ಮೊದಲ ಐದು ಅಗ್ರ ಸ್ಥಾನಗಳಲ್ಲಿ ಜಿಲ್ಲೆಯ ವಿದ್ಯಾರ್ಥಿಗಳು ಇದ್ದಾರೆ. ಹೀಗಾಗಿ ಈ ಬಾರಿ ಮುಖ್ಯ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶದ ನಿರೀಕ್ಷೆಯಲ್ಲಿದ್ದೇವೆ. ಹಾಡಿ ಗಿರಿಜನ ಪ್ರದೇಶಗಳ ವಿದ್ಯಾರ್ಥಿಗಳು ಪರೀಕ್ಷೆಗೆ ಸಜ್ಜಾಗಲು ವಿಶೇಷ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದರು.

ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರಾದ ಚಂದ್ರಪಾಟಿಲ್, ಶಿಕ್ಷಣಾಧಿಕಾರಿ ಮಲ್ಲಿಕಾರ್ಜುನ್ ಪತ್ರಿಕಾಗೋಷ್ಠಿಯಲ್ಲಿ ಹಾಜರಿದ್ದರು.



ಪರೀಕ್ಷಾ ಕೇಂದ್ರಗಳಿಗೆ ಬಂದೋಬಸ್ತ್

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಮುತ್ತುರಾಜು ಮಾತನಾಡಿ, ಜಿಲ್ಲೆಯಲ್ಲಿರುವ 47 ಪರೀಕ್ಷಾ ಕೇಂದ್ರಗಳಿಗು ಸೂಕ್ತ ಬಂದೋಬಸ್ತ್ ಮಾಡಲಾಗಿದೆ. ಗೌಪ್ಯ ಸಾಮಗ್ರಿಗಳ ವಿತರಣಾ ಮಾರ್ಗಗಳಲ್ಲಿ ಪೊಲೀಸರನ್ನು ನಿಯೋಜಿಸಲಾಗುತ್ತಿದೆ. ಪರೀಕ್ಷಾ ಸಂದರ್ಭದಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಹರಡಬಹುದಾದ ಸುಳ್ಳು ಸುದ್ದಿ ವದಂತಿಗಳಿಗೆ ಕಿವಿಗೊಡಬಾರದು. ಸಾಮಾಜಿಕ ಜಾಲತಾಣಗಳ ಮೇಲೆ ವಿಶೇಷವಾಗಿ ನಿಗಾ ಇಡಲಾಗುತ್ತದೆ. ವದಂತಿ ಸುಳ್ಳು ಸುದ್ದಿ ಹಬ್ಬಿಸುವವರ ವಿರುದ್ದ ನಿರ್ದಾಕ್ಷಿಣ್ಯವಾಗಿ ಕಾನೂನು ಕ್ರಮ ಜರುಗಿಸಲಾಗುತ್ತದೆ ಎಂದು ತಿಳಿಸಿದರು.

ಮೂರು ದಿನ ಅಂಬೇಡ್ಕರ್ ಜಯಂತಿ ಆಚರಣೆ



ಹನೂರು: ಏಪ್ರಿಲ್ 12,13 ಹಾಗೂ 14 ರಂದು ಅಂಬೇಡ್ಕರ್ ಜಯಂತಿ ಪ್ರಯುಕ್ತ ಪಟ್ಟಣದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗುತ್ತದೆ ಎಂದು ಅನ್ನಪೂರ್ಣೇಶ್ವರಿ ಕಣ್ಣಿನ ಆಸ್ಪತ್ರೆಯ ವ್ಯವಸ್ಥಾಪಕ ಮಹೇಂದ್ರ, ತಿಳಿಸಿದರು.

ಪಟ್ಟಣದ ಅಂಬೇಡ್ಕರ್ ಸಮುದಾಯ ಭವನದಲ್ಲಿ ಕರೆಯಲಾಗಿದ್ದ ಅಂಬೇಡ್ಕರ್ ಜಯಂತಿ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು.

ಸಭೆಯಲ್ಲಿ ದಲಿತ (ಬಲಗೈ) ಸಮುದಾಯದ ಯಜಮಾನರುಗಳು ಮುಖಂಡರುಗಳು ಹಾಗೂ ಯುವಕರು ಸೇರಿದಂತೆ ಮಹಿಳೆಯರು ಭಾಗವಹಿಸಿದ್ದಿದು ವಿಶೇಷವಾಗಿತ್ತು.

ಅಂಬೇಡ್ಕರ್ ಜಯಂತಿಯ ದಿನವನ್ನು ಹನೂರು ಅಂಬೇಡ್ಕರ್ ಹಬ್ಬ ಎಂದು ಆಚರಿಸಲು ಒಕ್ಕೊರಲಿನಿಂದ ತೀರ್ಮಾನಿಸಲಾಯಿತು, ಇದೇ ವೇಳೆ ಮಾತನಾಡಿದ ಗೌತಮ್ ವಿದ್ಯಾಸಂಸ್ಥೆಯ ಕಾರ್ಯದರ್ಶಿ ರವೀಂದ್ರ ಅನೇಕ ವರ್ಷಗಳಿಂದ ಆಚರಿಸಲಾಗುತ್ತಿದ್ದ ಅಸಮಾನತೆಯ ಬೆಟ್ಟಳ್ಳಿ ಮಾರಿ ಹಬ್ಬವನ್ನು ತಿರಸ್ಕರಿಸಿರುವುದು ಬಹಳ ಒಳ್ಳೆಯ ನಿರ್ಧಾರ, ಮುಂದಿನ ದಿನಗಳಲ್ಲಿ ಇದೇ ರೀತಿ ಕ್ರಮವನ್ನು ಅನುಸರಿಸಿದರೆ ಆರ್ಥಿಕವಾಗಿ ಪ್ರಬಲರಾಗಬಹುದು ಎಂದರು.

ಈ ಹಬ್ಬ ಆಚರಿಸುವುದರಿಂದ ಸಮುದಾಯದ ಹಿರಿಯರು ಬಹಳಷ್ಟು ಹಣ, ಆಸ್ತಿ, ಅಷ್ಟೇ ಯಾಕೆ ಜಮೀನುಗಳನ್ನು ಮಾರಿಕೊಂಡು ಬೀದಿಗೆ ಬಿದ್ದಿದ್ದರು, ಜೊತೆಗೆ ಅಸಮಾನತೆಯ ಅವಮಾನಗಳು ಕೂಡ ಇದ್ದವು ಇದನ್ನೆಲ್ಲ ತಿರಸ್ಕರಿಸಿ ಒಳ್ಳೆಯ ನಿರ್ಧಾರ ಕೈಗೊಂಡಿದ್ದೀರಿ ಎಂದು ಸಮಾಧಾನ ವ್ಯಕ್ತಪಡಿಸಿದರು. ಬಾಬಾ ಸಾಹೇಬ್ ಅಂಬೇಡ್ಕರ್ ಜಯಂತಿಯನ್ನು ಹನೂರು ಅಂಬೇಡ್ಕರ್ ಹಬ್ಬ ಎಂದು ನಾಮಕರಣ ಮಾಡಿರುವುದು ಸ್ವಾಗತರ್ಹ ಎಂದು ಸಾಹಿತಿ ಹನೂರು ಚೆನ್ನಪ್ಪ ಹೇಳಿದರು.

ನೀರಾವರಿಗೆ ₹350 ಕೋಟಿ ಪ್ರಸ್ತಾವನೆ

ಯಳಂದೂರು: ಕೊಳ್ಳೇಗಾಲ ಕ್ಷೇತ್ರಕ್ಕೆ ಒಳ ಪಡುವ ಸುವರ್ಣವತಿ ಹೊಳೆ ಹಾಗೂ ಕೆರೆಗಳ ಅಭಿವೃದ್ಧಿ ಪಡಿಸಲು ಸರ್ಕಾರಕ್ಕೆ 350 ಕೋಟಿ ರೂಗಳನ್ನು ಪ್ರಸ್ಥಾವನೆ ಸಲ್ಲಿಸಿದ್ದೇನೆ ಎಂದು ಶಾಸಕ ಎ.ಆರ್.ಕೃಷ್ಣಮೂರ್ತಿ ತಿಳಿಸಿದರು.

ಅವರು ತಾಲೂಕಿನ ಮದ್ದೂರು ಗ್ರಾಮದಲ್ಲಿ ಸುವರ್ಣವತಿ ನದಿಗೆ ಸೇತುವೆ ನಿರ್ಮಾಣದ ಭೂಮಿ ಪೂಜೆ ನೆರವೇರಿಸಿ ನಂತರ ಮಾತಾನಾಡಿ ಈಗಾಗಲೆ ಕಣ್ಣೇಗಾಲ ಪೀಕಪ್ ಮುಖಾಂತರ ಸುವರ್ಣವತಿ ನದಿ ವಿಸ್ತರಿಸಿ ಅಭಿವೃದ್ಧಿ ಪಡಿಸಲು 70 ಕೋಟಿ ಹಣ ಬಿಡುಗಡೆಹಾಗಿದ್ದು ಕಾಮಗಾರಿ ಪ್ರಾರಂಭವಾಗಿದೆ, ಕ್ಷೇತ್ರದಲ್ಲಿ ಪಥಮ ಹಂತದಲ್ಲಿ ಆರು ಕೆರೆಗಳಾದ ಯರಿಯೂರು, ಮದ್ದೂರು ಅಗರ, ಹೊನ್ನೂರು, ಕೆಸ್ತೂರು, ತೇರಂಬಳ್ಳಿ ಕರೆಗಳ ಅಭಿವೃದ್ಧಿ ಪಡಿಸಲಾಗುವದು ನಂತರ ದಿವಾನ್ ಪೂರ್ಣಯ್ಯನವರು ನಿರ್ಮಿಸಿದ ಉಳಿದ ಕೆರಗಳ ಅಭಿವೃದ್ಧಿ ಪಡಿಸಲು ಕ್ರಮವಹಿಸಲಾಗುವುದು ಎಂದು ತಿಳಿಸಿದರು.

ನಾನು ಚುನಾವಣಾ ರಾಜಕಾರಣದಲ್ಲಿ ಒಂದು ಓಟಿನಿಂದ ಸೋತು 19 ವರ್ಗಗಳ ಕಾಲ ರಾಜಕೀಯ ವನವಾಸವನ್ನು ಕೊಳ್ಳೇಗಾಲ ಕ್ಷೇತ್ರದ ಜನತೆ ಗಮನಿಸಿ ನನ್ನನ್ನು 2023ರ ಚುನಾವಣೆಯಲ್ಲಿ ಒಂದು ಲಕ್ಷಕ್ಕಿಂತ ಹೆಚ್ಚು ಮತಕೊಟ್ಟು ಗೆಲ್ಲಿಸಿದ್ದಾರೆ ಹಾಗಾಗಿ ನಾನು ನಿಮ್ಮ ಜನಸೇವಕ ಎಂದರು.

ಮುದ್ರಣ ಮಾಧ್ಯಮದಲ್ಲಿ ಶವ ಸಂಸ್ಕಾರ ಮಾಡಲು ನದಿ ನೀರಿನೊಳಗೆ ಹರಸಾಹಸ ಪಟ್ಟು ಶವ ಹೊತ್ತೊಯ್ಯುತ್ತಿರುವ ಸುದ್ದಿಯನ್ನು ನೋಡಿ ನಮ್ಮ ಸರ್ಕಾರದಿಂದ ಈ ಸೇತುವೆ ನಿರ್ಮಾಣಕ್ಕೆ ನಾಲ್ಕು ಕೋಟಿ ವ್ಯಚ್ಚದಲ್ಲಿ ಸೇತುವೆ ಕಾಮಗಾರಿಯುಪ್ರಾರಂಭವಾಗುತ್ತಿದೆಎಂದರು. ಸುಮಾರು 70 ಕೋಟಿ ವ್ಯಚ್ಚದಲ್ಲಿ ಕೆರೆಗಳ ನೀರು ತುಂಬಿಸುವ ಯೋಜನೆಗಳಿಗೆ ಸದ್ಯದಲ್ಲೆ ಭೂಮಿ ಪೂಜೆ ನೆರವೇರಿಸಲಾಗುವುದು. ಸುಮಾರು 13 ಕೆರೆಗಳಿಗೆ ಗೌಡಹಳ್ಳಿ ಮತ್ತು ಕೃಷ್ಣಯ್ಯನಕಟ್ಟೆಗೆ ಏತ ನೀರಾವರಿ ಹಾಗೂ ಕೆರೆ ತುಂಬಿಸುವ ಯೋಜನೆಗಳಿಗೆ ಈಗಾಗಲೇ ನಾನು ಮನವಿ ಸಲ್ಲಿಸಿದ್ದೇನೆ ಎಂದರು ಮದ್ದೂರು ಗ್ರಾಮಕ್ಕೆ ಸಿಸಿ ರಸ್ತೆ, ಉಪ್ಪಾರಭವನಗಳಿಗೆ ಈಗಾಗಲೇ ನಾನು ಅನುದಾನ ಹಾಕಿದ್ದೇನೆ. ಯಳಂದೂರಿಗೆ ಅಗ್ನಿ ಶಾಮಕ ಠಾಣೆ, ಸಂತೇಮರಳ್ಳಿಗೆ ಎಳನೀರು ಮಾರುಕಟ್ಟೆ, ಮಂಜೂರು ಮಾಡಿಸಲಾಗಿದೆ ಎಂದರು. ನಮ್ಮ ಕ್ಷೇತ್ರಕ್ಕೆ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ನವರು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಂತ್ರಿಗಳಾದ ಜಿ ಪರಮೇಶ್ವರ್ ಮಧುಬಂಗಾರಪ್ಪ, ಸತೀಶ್ ಜಾರಕಿಹೋಳಿ, ಪ್ರಿಯಾಂಕ ಖರ್ಗೆ, ಕೆ ವೆಂಕಟೇಶ್, ಬೋಸರಾಜ್ ಹೆಚ್.ಕೆ ಪಾಟೀಲ್, ರಾಮಲಿಂಗರೆಡ್ಡಿ ಇವರಿಗಳು ನನ್ನ ಮನವಿಗಳಿಗೆ ಸ್ಪಂದಿಸಿ ನನಗೆ ಅನುದಾನಗಳನ್ನು ನೀಡಿದ್ದಾರೆ ಕ್ಷೇತ್ರದಲ್ಲಿ ಈಗಾಗಲೆ ಹಲವಾರು ಅಭಿವೃದ್ಧಿ ಕಾಮಗಾರಿಗಳು ಪ್ರಗತಿಯಲ್ಲಿವೆ. ಹಾಗಾಗಿ ಎಲ್ಲರಿಗೂ ನಾನು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ ಎಂದರು.



ಮೀಸಲಾತಿಗೆ ಒತ್ತಾಯಿಸಿ ಬೃಹತ್ ಪ್ರತಿಭಟನೆ

ಹನೂರು: ಪರಿಶಿಷ್ಟ ಜಾತಿ ಒಳ ಮೀಸಲಾತಿ ಹಂಚಿಕೆ ವಿಚಾರವಾಗಿ ದಲಿತ ಬಲಗೈ ಸಮುದಾಯಕ್ಕೆ ಅನ್ಯಾಯವಾಗುತ್ತಿದ್ದೂ, ರೋಸ್ಟರ್ ಪದ್ಧತಿಯಲ್ಲಿ ಬದಲಾವಣೆ ಮಾಡಿ ಎಲ್ಲರಿಗೂ ಸಮಾನವಾಗಿ ಮೀಸಲಾತಿ ಹಂಚಿಕೆ ಮಾಡಬೇಕೆಂದು ಒತ್ತಾಯಿಸಿ ಹನೂರು ಪಟ್ಟಣದಲ್ಲಿ ಬೃಹತ್ ಪ್ರತಿಭಟನೆ ನಡೆಯಿತು.

ಪಟ್ಟಣದಲ್ಲಿರುವ ಮಹದೇಶ್ವರ ಕ್ರೀಡಾಂಗಣದಿಂದ ದಲಿತ ಬಲಗೈ ಹೊಲಯ ಸಮುದಾಯದ ಹನೂರು, ಕೊಳ್ಳೇಗಾಲ ತಾಲೂಕು ವ್ಯಾಪ್ತಿಯ ವಿವಿಧ ಗ್ರಾಮದ ಮುಖಂಡರುಗಳು ಮಹಿಳೆಯರು ಯುವಕರು ಸರ್ಕಾರದ ವಿರುದ್ಧ ದಿಕ್ಕಾರ ಕೂಗುತ್ತ ಪಟ್ಟಣದ ಮುಖ್ಯ ರಸ್ತೆಯಲ್ಲಿ ಸಾಗಿ ತಹಸೀಲ್ದಾರ್ ಕಚೇರಿಯ ತನಕ ಪ್ರತಿಭಟನಾ ಚಳುವಳಿ ನಡೆಸಿ ಒಳಮೀಸಲಾತಿ ಹಂಚಿಕೆಯಲ್ಲಿ ಬಲಗೈ ಸಮುದಾಯಕ್ಕೆ ಹಾಗುತ್ತಿರುವ ಅನ್ಯಾಯವನ್ನು ಸರಿಪಡಿಸುವಂತೆ ರಾಜ್ಯ ಸರ್ಕಾರಕ್ಕೆ ಒತ್ತಾಯಿಸಿ ತಹಸೀಲ್ದಾರ್ ಚೈತ್ರ ಅವರಿಗೆ ಮನವಿ ನೀಡಲಾಯಿತು. ನಾವು ಒಳ ಮೀಸಲಾತಿ ವಿರೋಧಿಗಳಲ್ಲ, ರೋಸ್ಟರ್ ಬಿಂದುವಿನಲ್ಲಿ ಆಗಿರುವ ಪ್ರಮಾದವನ್ನು ಸರಿ ಪಡಿಸಬೇಕು, ಹೊಲಯ ಮತ್ತು ಮಾದಿಗ ಸಮುದಾಯದ ಜನರನ್ನು ಒಡೆದು ಆಳುವ ನೀತಿಯನ್ನು ಸಿದ್ದರಾಮಯ್ಯ ಸರ್ಕಾರ ಮಾಡುತ್ತಿದೆ,

ಸೋದರಸಮಾಜದಲ್ಲಿಇರುವಕಿಡಿಗೇಡಿಗಳಾದ ಭಾಸ್ಕರ್ ಪ್ರಸಾದ್ ಮತ್ತು ಅರುಣ್ ಕುಮಾರ್ ಅವರು ನಮ್ಮ ಎರಡು ಸಮುದಾಯದ ಒಗ್ಗಟ್ಟನ್ನು ಮುರಿದು ಶೋಷಣೆಗೆ ಒಳಪಡಿಸುತ್ತಿದ್ದಾರೆ.

ಭಾಸ್ಕರ್ ಪ್ರಸಾದ್ ಹೊಲಯ ಸಮುದಾಯದ ನಾಯಕರ ವಿರುದ್ಧ ತೊಡೆ ತಟ್ಟಿ ನಾವು ಸೋಲಿಸ್ತೀವಿ, ಪಾಠ ಕಲಿಸ್ತೀವಿ, ಅಂತಿದ್ದಾನೆ 2028 ರಲ್ಲಿ ನಾವು ಏನು ಅಂತ ತೋರುಸುತ್ತೇವೆ ಎಂದರು.

ಪ್ರತಿಭಟನೆಯಲ್ಲಿ ಹನೂರು ಪಟ್ಟಣದ ಯಜಮಾನರು, ಪಟ್ಟಣ ಪಂಚಾಯಿತಿ ಮಾಜಿ ಸದಸ್ಯರುಗಳಾದ ಸಂಪತ್ ಕುಮಾರ್, ಬಸವರಾಜು, ಮಹೇಶ್, ಮುಖಂಡರಾದ ಮಹೇಂದ್ರ, ಕಿರಣ್, ರವೀಂದ್ರ, ಪುಟ್ಟರಾಜು, ಕೃಷ್ಣ,ಸೇರಿದಂತೆ ಕೊಳ್ಳೇಗಾಲ ತಾಲೂಕಿನ ಕಾಮಗೆರೆ ಸಿಂಗಾನಲ್ಲೂರು, ದೊಡ್ಡಿಂದುವಾಡಿ, ಮತ್ತಿಪುರ, ತೆಳ್ಳನೂರು, ಹನೂರು ತಾಲೂಕಿನ ಮಣಗಳ್ಳಿ, ಬಂಡಳ್ಳಿ, ಅಜ್ಜೀಪುರ, ಮಾರ್ಟಳ್ಳಿ, ಲೊಕ್ಕನಹಳ್ಳಿ,ಚಿಕ್ಕಮಾಲಾಪುರ, ಪಿ. ಜಿ ಪಾಳ್ಯ, ರಾಮಾಪುರ ವ್ಯಾಪ್ತಿಯ ವಿವಿಧ ಗ್ರಾಮಗಳು ಹಾಗೂ ಮುಖಂಡರುಗಳು ಭಾಗವಹಿಸಿದ್ದರು.



ಅಹೋರಾತ್ರಿ ಪ್ರತಿಭಟನೆಗೆ ಮಡಿವಾಳ ಸಂಘ ಬೆಂಬಲ

ಕೊಳ್ಳೇಗಾಲ: ಮಡಿವಾಳ ಜನಾಂಗವನ್ನು ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸುವಂತೆ ಒತ್ತಾಯಿಸಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆಯುತ್ತಿರುವ ಅಹೋರಾತ್ರಿ ಪ್ರತಿಭಟನೆಗೆ ಬೆಂಬಲ ಸೂಚಿಸಿ ಕೊಳ್ಳೇಗಾಲ ತಾಲೂಕಿನ ಮಡಿವಾಳ ಸಂಘದ ಪದಾಧಿಕಾರಿಗಳು ಮತ್ತು ಸದಸ್ಯರು ಬೆಂಗಳೂರಿನತ್ತ ಪ್ರಯಾಣ ಬೆಳೆಸಿದರು.

ಕೊಳ್ಳೇಗಾಲ ಪಟ್ಟಣದಲ್ಲಿರುವ ಡಾ. ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದ ಬಳಿಕ ಘೋಷಣೆಗಳನ್ನು ಕೂಗಿ ತಮ್ಮ ಬೇಡಿಕೆಗೆ ಬೆಂಬಲ ವ್ಯಕ್ತಪಡಿಸಿದರು.



ನಂತರ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆಯುತ್ತಿರುವ ಅಹೋರಾತ್ರಿ ಪ್ರತಿಭಟನೆಯಲ್ಲಿ ಭಾಗವಹಿಸಲು ಬಸ್ ಮೂಲಕ ತೆರಳಿದರು.

ಮಡಿವಾಳ ಜನಾಂಗವನ್ನು ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸಬೇಕೆಂಬ ಬೇಡಿಕೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಸಮುದಾಯದ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಅಭಿವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಂಘದ ಮುಖಂಡರು ಆಗ್ರಹಿಸಿದರು. ಅಲ್ಲದೆ ಹಲವು ವರ್ಷಗಳಿಂದ ಮುಂದುವರಿದಿರುವ ಈ ಬೇಡಿಕೆಗೆ ಶೀಘ್ರದಲ್ಲೇ ನ್ಯಾಯ ದೊರಕಿಸಿಕೊಡಬೇಕೆಂದು ಸರ್ಕಾರವನ್ನು ಒತ್ತಾಯಿಸಿದರು. ತಾಲೂಕು ಮಡಿವಾಳ ಸಂಘದ ಅಧ್ಯಕ್ಷ ಕೆ.ಗೋವಿಂದಯ್ಯ, ಕಾರ್ಯದರ್ಶಿ ಪ್ರಭುಸ್ವಾಮಿ, ಯಜಮಾನರು ಮಾರಶೆಟ್ಟಿ ಸೇರಿದಂತೆ ತಾಲ್ಲೂಕಿನ ವಿವಿಧ ಗ್ರಾಮಗಳ ಮುಖಂಡರು ಬೆಂಗಳೂರಿಗೆ ತೆರಳಿದರು.

ಫ್ಲೋರೈಡ್‌ಯುಕ್ತ ನೀರಿನಿಂದ ಜನರ ಆರೋಗ್ಯಕ್ಕೆ ಹಾನಿ: ಎಂಎಲ್‌ಸಿ ಶಿವಕುಮಾರ್

ಶುದ್ಧ ಕುಡಿವ ನೀರು ಒದಗಿಸಲು ಕ್ರಮ: ಸಚಿವ

ವಿಧಾನ ಪರಿಷತ್: ಫ್ಲೋರೇಡ್‌ಯುಕ್ತ ನೀರಿನಿಂದ ಜನರ ಆರೋಗ್ಯದ ಮೇಲೆ ಉಂಟಾಗಿರುವ ಗ್ರಾಮಗಳಿಗೆ ಟ್ಯಾಂಕರ್ ಗಳ ಮೂಲಕ ಶುದ್ಧಕುಡಿಯುವ ನೀರು ಒದಗಿಸಲಾಗುವುದು. ಆರೋಗ್ಯ ಇಲಾಖೆ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆಗಳಿಂದ ಜಂಟಿಯಾಗಿ ಆಯಾ ಗ್ರಾಮಗಳಲ್ಲಿ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳುವ ಜತೆಗೆ ಗ್ರಾಮದ ಬೋರ್‌ವೆಲ್ ನೀರಿನಲ್ಲಿರುವ ಫ್ಲೋರೈಡ್ ಸೇರಿದಂತೆ ಕೆಮಿಕಲ್ ಪ್ರಮಾಣವನ್ನು ಪರೀಕ್ಷಿಸಿ ಗ್ರಾ.ಪಂ. ಕಚೇರಿಗಳಲ್ಲಿ ಸಾರ್ವಜನಿಕರ ಮಾಹಿತಿಗಾಗಿ ಪ್ರದರ್ಶಿಸಲು ಕ್ರಮ ಜರುಗಿಸುವುದಾಗಿ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು. ವಿಧಾನ ಪರಿಷತ್ ನಲ್ಲಿ ನಿಯಮ 330 ರ ಅಡಿ ಕಾಂಗ್ರೆಸ್ ಶಾಸಕ ಶಿವಕುಮಾರ್ ಕೆ. ಅವರು ಚಾಮರಾಜನಗರ ಜಿಲ್ಲೆಯ ಹನೂರು ತಾಲೂಕಿನ ರಾಮಾಪುರ ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ನದಿ ನೀರಿನ ಮೂಲಗಳಿಲ್ಲದೇ ಜನರು ಬೋರ್‌ವೆಲ್‌ಗಳನ್ನು ಅವಲಂಬಿಸಿದ್ದಾರೆ. ಈ ನೀರಿನ ಕುಡಿಯಲು ಯೋಗ್ಯವಿಲ್ಲ. ಕಿಡ್ನಿ ವೈಫಲ್ಯದಿಂದ ಹತ್ತಾರು ಜನರು ಮೃತಪಟ್ಟಿದ್ದು, ಈಗಾಗಲೇ 16 ಮಂದಿ ಪ್ರತಿನಿತ್ಯ ಡೈಯಾಲಿಸಿಸ್‌ಗೆ ಒಳಗಾಗುತ್ತಿದ್ದಾರೆ. ಯುವಕರು, ಮಕ್ಕಳ ಹಲ್ಲುಗಳು ಬಿದ್ದು ಹೋಗಿದೆ. ಸಮಸ್ಯಾತ್ಮಕ ಗ್ರಾಮಗಳಿಗೆ ಕಾವೇರಿ ನದಿ ನೀರನ್ನು ಒದಗಿಸುವ ಜತೆಗೆ ಜನರಿಗೆ ಆರೋಗ್ಯದ ಸಮಸ್ಯೆಗೆ ತಕ್ಷಣ ಸರ್ಕಾರ ನೆರವಾಗಬೇಕು ಎಂದು ಆಗ್ರಹಿಸಿದರು.



ಸಚಿವ ಪ್ರಿಯಾಂಕ್ ಖರ್ಗೆ ಪ್ರತಿಕ್ರಿಯಿಸಿ, ಹನೂರು ಹಾಗೂ ಸುತ್ತಮುತ್ತಲಿನ ಭಾಗದಲ್ಲಿ ಕಳೆದ ವರ್ಷ ಮಳೆ ಪ್ರಮಾಣ ಶೇ.25 ರಷ್ಟು ಕುಸಿದಿದೆ. 25.4 ಅಡಿಗಳಷ್ಟು ಅಂತರ್ಜಲ ಮಟ್ಟ ಇಳಿಕೆಯಾಗಿದೆ. ಪರಿಣಾಮ ಕೊಳವೆ ಬಾವಿಗಳ ನೀರು ಫ್ಲೋರೈಡ್‌ಯುಕ್ತವಾಗುತ್ತಿದೆ. ಈ ಭಾಗದ ಎಲ್ಲ ಕೊಳವೆ ಬಾವಿಗಳ ನೀರನ್ನು ಪರೀಕ್ಷಿಸಲಾಗಿದೆ. ಕುಡಿಯಲು ಯೋಗ್ಯವಿರುವ ಖಾಸಗಿ ಕೊಳವೆ ಬಾವಿಗಳ ನೀರನ್ನು 10 ಹಳ್ಳಿಗಳಿಗೆ ಟ್ಯಾಂಕರ್ ಮೂಲಕ ಸರಬರಾಜು ಮಾಡಲಾಗುತ್ತಿದೆ. ಸದ್ಯದ ಪರಿಸ್ಥಿತಿಯನ್ನು ನಿಭಾಯಿಸಲು ಜಿ.ಪಂ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅವರಿಂದ 8 ಕೋಟಿ ರೂ. ಮೊತ್ತಕ್ಕೆ ಪ್ರಸ್ತಾವನೆ ಸ್ವೀಕರಿಸಲಾಗಿದೆ ಎಂದರು.

ಆದಷ್ಟು ಬೇಗ ಆರೋಗ್ಯ ಇಲಾಖೆ ಸಹಯೋಗದಲ್ಲಿ ಗ್ರಾಮಗಳಲ್ಲಿ ಆರೋಗ್ಯ ತಪಾಸಣಾ ಶಿಬಿರ ನಡೆಸಲಾಗುವುದು. ನೀರಿನ ಪರೀಕ್ಷಾ ವರದಿಯನ್ನು ಗ್ರಾ.ಪಂ. ಕಚೇರಿಯಲ್ಲಿ ಪ್ರದರ್ಶಿಸಲಾಗವುದು. ಜೆಜೆಎಂ ಯೋಜನೆಯ ಅಡಿ ಕಾವೇರಿ ನದಿ ನೀರು ಒದಗಿಸಲು ಉದ್ದೇಶಿಸಿದ್ದು, ಕೊಳವೆ ಮಾರ್ಗ ನಿರ್ಮಾಣಕ್ಕೆ ಅರಣ್ಯ ಪ್ರದೇಶ ಅಡ್ಡಿಯಾಗಿದೆ. ಅರಣ್ಯ ಇಲಾಖೆಯಿಂದ ಅನುಮತಿ ದೊರೆಯುತ್ತಿದಂತೆ ಕಾಮಗಾರಿ ಆರಂಭಿಸಲಾಗುವುದು ಎಂದು ಭರವಸೆ ನೀಡಿದರು. ಈ ಮೊದಲು ಮಾತನಾಡಿದ ಸದಸ್ಯ ಡಾ.ಧನಂಜಯ ಸರ್ಜಿ, ವಿರೋಧ ಪಕ್ಷ ಮುಖ್ಯಸಚೇತಕ ಎನ್.ರವಿಕುಮಾರ್ ಮಾತನಾಡಿ, ರಾಜ್ಯದ ಕೋಲಾರ, ಚಿಕ್ಕಬ್ಬಾಪುರ, ಚಿತ್ರದುರ್ಗ, ಬಳ್ಳಾರಿ, ರಾಯಚೂರು, ಕೊಪ್ಪಳ, ಯಾದಗಿರಿ, ಕಲಬುರಗಿ, ಬೀದರ್ ಜಿಲ್ಲೆಯಲ್ಲೂ ಇದೇ ಸಮಸ್ಯೆಯಿದೆ ಎಂದು ಗಮನ ಸೆಳೆದರು.

ಅದಕ್ಕೆ ಪ್ರತಿಕ್ರಿಯಿಸಿದ ಸಚಿವ ಪ್ರಿಯಾಂಕ್ ಖರ್ಗೆ, ಕಲ್ಯಾಣ ಕರ್ನಾಟಕದಲ್ಲೂ ಇದೇ ಸಮಸ್ಯೆಯಿರುವುದರಿಂದ ಪ್ರಾಯೋಗಿಕವಾಗಿ ಕಲಬುರಗಿಯಲ್ಲಿ ವಿವಿಧ ಇಲಾಖೆಗಳನ್ನು ಒಳಗೊಂಡು ಟಾಸ್ಕ್‌ಫೋರ್ಸ್ ಅನ್ನು ರಚಿಸಲಾಗಿದೆ. ಅದರ ಫಲಿತಾಂಶವನ್ನು ಆಧರಿಸಿ ರಾಜ್ಯಾದ್ಯಂತ ವಿಸ್ತರಿಸಲಾಗುವುದು ಎಂದು ತಿಳಿಸಿದರು.

ರೈತರಿಂದ ಪ್ರತಿಭಟನೆ

ಕೆ.ಆರ್.ನಗರ: ಕೆ.ಆರ್.ನಗರ ಮತ್ತು ಸಾಲಿಗ್ರಾಮ ಅವಳಿ ತಾಲೂಕಿನ ಆಡಳಿತ ವ್ಯವಸ್ಥೆ ಸಂಪೂರ್ಣವಾಗಿ ಕುಸಿದಿದೆ, ಇದರಿಂದಾಗಿ ರೈತರು ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ಬಂದಿದೆ ಎಂದು ತಾಲೂಕು ಯುವ ರೈತ ವೇದಿಕೆಯ ಅಧ್ಯಕ್ಷ ಅರ್ಜುನಹಳ್ಳಿ ರಾಮ್ ಪ್ರಸಾದ್ ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದ ತಾಲೂಕು ಆಡಳಿತ ಸೌಧದ ಎದುರು ನಾಲ್ವಡಿ ಕೃಷ್ಣರಾಜ ಒಡೆಯರ್ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿರುವ ಪೋಟೋ ಇಟ್ಟುಕೊಂಡು ಛಾಪೆ ಹಾಸಿ ಕೊಂಡು, ಬೈಡ್‌ಸೀಟ್ ಹೊದಿಸಿ ಕೊಂಡು ನಿದ್ದೆಮಾಡುವ ಮೂಲಕ ವಿನೂತನವಾಗಿ ಪ್ರತಿಭಟಿಸಿದ ರಾಮಪ್ರಸಾದ್ ನಿದ್ದೆಯಲ್ಲಿರುವ ಸರ್ಕಾರವನ್ನು ಎಚ್ಚರಿಸಲು ಈ ಪ್ರತಿಭಟನೆ ಮಾಡುತ್ತಿರುವುದಾಗಿ ತಿಳಿಸಿದರು.

ಈ ವೇಳೆ ಮಾತನಾಡಿದ ಅರ್ಜುನಹಳ್ಳಿ ರಾಮ್ ಪ್ರಸಾದ್, ಸರ್ಕಾರ ರೈತರಿಂದ ಭತ್ತ ಖರೀದಿ ಮಾಡಲಾಗಿದ್ದು ಬೆಂಬಲ ಬೆಲೆಯ ಹಣವನ್ನು ಈವರೆವಿಗೂ ರೈತರ ಖಾತೆಗೆ ಜಮಾ ಮಾಡಿಲ್ಲ, ರಾಗಿ ಖರೀದಿಯಲ್ಲಿ 1ಕ್ವಿಂಟಾಲ್‌ಗೆ 5 ಕೆ.ಜಿ. ಕಳೆಯುವ ಮೂಲಕ ರೈತರಿಗೆ ಅನ್ಯಾಯ ಮಾಡುತ್ತಿದ್ದಾರೆ ಎಂದು ದೂರಿದರು.

ಕಿರುಸುದ್ದಿ

ವಾಣಿಜ್ಯ ಪರೀಕ್ಷೆ: ಶೇ.90 ಫಲಿತಾಂಶ

ಪಾಂಡವಪುರ: ಪಟ್ಟಣದ ವಿವೇಕಾನಂದ ವಾಣಿಜ್ಯ ವಿದ್ಯಾ ಸಂಸ್ಥೆ ಜ.2026ರಲ್ಲಿ ನಡೆಸಿದ ವಾಣಿಜ್ಯ ಪರೀಕ್ಷೆ ಫಲಿತಾಂಶದಲ್ಲಿ ಶೇ.90ರಷ್ಟು ವಿದ್ಯಾರ್ಥಿಗಳು ತೇರ್ಗಡೆ ಹೊಂದುವ ಮೂಲಕ ಶಾಲೆಗೆ ಕೀರ್ತಿ ತಂದುಕೊಟ್ಟಿದ್ದಾರೆ.

ಎಸ್.ಭಾಂಧವ್ಯ ಜೂನಿಯರ್ ಇಂಗ್ಲೀಷ್ ಮತ್ತು ಕನ್ನಡ ಟೈಪಿಂಗ್‌ನಲ್ಲಿ ಶೇ.96.5 ಮತ್ತು ಶೇ.91, ಎಂ.ಕಾವ್ಯ ಸೀನಿಯರ್ ಕನ್ನಡ ಮತ್ತು ಇಂಗ್ಲೀಷ್ ಟೈಪಿಂಗ್‌ನಲ್ಲಿ ಶೇ. 95.5 ಮತ್ತು ಶೇ.90.5, ಸಿ.ಆರ್.ಅಪೂರ್ವ ಸೀನಿಯರ್ ಕನ್ನಡ ಮತ್ತು ಇಂಗ್ಲೀಷ್ ಟೈಪಿಂಗ್‌ನಲ್ಲಿ ಶೇ.93.5 ಮತ್ತು 90, ಎಚ್.ಹರ್ಷಿತಾ ಜೂನಿಯರ್‌ಇಂಗ್ಲೀಷ್ ಮತ್ತು ಕನ್ನಡ ಟೈಪಿಂಗ್‌ನಲ್ಲಿ ಶೇ.93 ಮತ್ತು ಶೇ.92, ಎಸ್.ಲಕ್ಷ್ಮೀ ಸೀನಿಯರ್ ಕನ್ನಡ, ಇಂಗ್ಲೀಷ್ ಟೈಪಿಂಗ್‌ನಲ್ಲಿ ಶೇ.92 ಮತ್ತು ಶೇ.89, ಪಿ.ಎಂ.ಲಿಖಿತ್ ಜೂನಿಯರ್ ಇಂಗ್ಲೀಷ್ ಟೈಪಿಂಗ್ ಶೇ.91, ಎಸ್.ದ್ರಾಕ್ಷಾಯಿಣಿ ಜೂನಿಯರ್ ಇಂಗ್ಲೀಷ್ ಮತ್ತು ಕನ್ನಡ ಟೈಪಿಂಗ್‌ನಲ್ಲಿ ಶೇ.88.5 ಮತ್ತು 86, ಎಸ್.ಕೆ. ಶ್ರೀರಾಮ ಸೀನಿಯರ್ ಕನ್ನಡ ಟೈಪಿಂಗ್ ಶೇ.87.5, ಕೆ. ಸಹನಾ ಜೂನಿಯರ್ ಕನ್ನಡ ಮತ್ತು ಇಂಗ್ಲೀಷ್ ಟೈಪಿಂಗ್‌ನಲ್ಲಿ ಶೇ.86.5 ಮತ್ತು 84.5, ಎಸ್.ಚಂದನಾ ಜೂನಿಯರ್ ಕನ್ನಡ ಟೈಪಿಂಗ್‌ನಲ್ಲಿ ಶೇ. 84 ಪಡೆದಿದ್ದಾರೆ. ಪರೀಕ್ಷೆ ಎದುರಿಸಿದ ಒಟ್ಟು 20 ವಿದ್ಯಾರ್ಥಿಗಳ ಪೈಕಿ 17 ವಿದ್ಯಾರ್ಥೀಗಳು ಉತ್ತೀರ್ಣರಾಗಿದಾರೆ ಎಂದು ಸಂಸ್ಥೆಯ ಪ್ರಾಂಶುಪಾಲೆ ಎಂ.ಎಲ್.ಜಯಶ್ರೀ 'ಹೊಸದಿಗಂತ'ಕ್ಕೆ ತಿಳಿಸಿದ್ದಾರೆ.

ಅದಾಲತ್: 1416 ಪ್ರಕರಣ ಇತ್ಯರ್ಥ



ಶ್ರೀರಂಗಪಟ್ಟಣ: ತಾಲೂಕು ಕಾನೂನು ಸೇವಾ ಪ್ರಾಧಿಕಾರದಡಿಯಲ್ಲಿ ನಡೆದ ಲೋಕ ಅದಾಲತ್‌ನಲ್ಲಿ ತಾಲೂಖಿನ ಗೌರವಾನ್ವಿತ 5 ನ್ಯಾಯಾಲಯಗಳಲ್ಲಿ ಒಟ್ಟಾರೆ 1629 ಪ್ರಕರಣಗಳನ್ನು ಕೈಗೆತ್ತುಕೊಳ್ಳಲಾಗಿತ್ತು. ಒಟ್ಟಾರೆ 1416 ಪ್ರಕರಣಗಳನ್ನು ಇತ್ಯಾರ್ಥ ಪಡಿಸಲಾಯಿತು. ಇದರಲ್ಲಿ 482 ಪ್ರಕರಣಗಳು ಗೌರವನ್ವಿತ 5 ನ್ಯಾಯಾಲಯಗಲ್ಲಿ ಬಾಕಿ ಇದ್ದ ಪ್ರಕರಣಗಳಾಗಿದ್ದು ಉಳಿದ 934 ಪ್ರಕರಣಗಳು ವ್ಯಾಜ್ಯ ಪೂರ್ವ ಪ್ರಕರಣಗಳು ಮುಕ್ತಾಯಗೊಂಡಿವೆ.

ಜನಸಂಪರ್ಕ ಸಭೆ ಇಂದು

ಪಾಂಡವಪುರ: ಪಾಂಡವಪುರ ಸೆಸ್ಕ್ ಉಪ ವಿಭಾಗದಲ್ಲಿ ಮಾ.17ರಂದು ಬೆಳಗ್ಗೆ 11ಕ್ಕೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್, ಪಾಂಡವಪುರ ಅವರ ಅಧ್ಯಕ್ಷತೆಯಲ್ಲಿ ಜನಸಂಪರ್ಕ ಸಭೆಯನ್ನು ಆಯೋಜಿಸಲಾಗಿದ್ದು, ಸಾರ್ವಜನಿಕರು, ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ತಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದೆಂದು ಸೆಸ್ಕ್ ಎಇಇ ರವಿಕುಮಾರ್ ಪ್ರಕಟಣೆಯಲ್ಲಿ ಕೋರಿದ್ದಾರೆ.

ಮಾರಕಾಸ್ತ್ರ ತೋರಿಸಿ ಚಿನ್ನ ದರೋಡೆ

ಮಂಡ್ಯ: ಮನೆಯ ಆವರಣದಲ್ಲಿ ಕೆಲಸ ಮಾಡುತ್ತಿದ್ದಾಗ ದಾಳಿ ಮಾಡಿದ ದುಷ್ಕರ್ಮಿಗಳು ಚಿನ್ನಾಭರಣ ದೋಚಿ ಪರಾರಿಯಾಗಿರುವ ಘಟನೆ ಸಮೀಪದ ಮಳವಳ್ಳಿ ತಾಲೂಕಿನ ಜೂಗನಹಳ್ಳಿ ವ್ಯಾಪ್ತಿಯ ತೋಟದ ಮನೆಯಲ್ಲಿ ನಡೆದಿದೆ.

ಬೆಂಗಳೂರಿನ ಜೆ.ಪಿ.ನಗರ ನಿವಾಸಿ ಯಶೋಧಮ್ಮ ಮಾಲೀಕತ್ವದ ತೋಟದ ಮನೆಯಲ್ಲಿ ಜಮೀನು ಕೆಲಸ ಮಾಡಿಕೊಂಡಿದ್ದ ಚಂದ್ರು ಮತ್ತು ಕವಿತ ಅವರ ಮೇಲೆ ಮಾ.15ರಂದು ಭಾನುವಾರ ರಾತ್ರಿ 9ರ ಸಮಯದಲ್ಲಿ ಏಕಾಏಕಿ ದಾಳಿ ಮಾಡಿದ ಇಬ್ಬರು ದುಷ್ಕರ್ಮಿಗಳು ಮಾರಾಕಾಸ್ತ್ರಗಳನ್ನು ತೋರಿಸಿ ಬಲ ಕಿವಿಯಲ್ಲಿ ಧರಿಸಿದ್ದ 3 ಗ್ರಾಂ ತೂಕದ ಚಿನ್ನದ ಅಭರಣವನ್ನು ಕಿತ್ತುಕೊಂಡು ಪರಾರಿಯಾಗಿದ್ದಾರೆ. ಈ ಸಂಬಂಧ ಹಲಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರೈಲಿಗೆ ಸಿಲುಕಿ ಅಪರಿಚಿತ ವ್ಯಕ್ತಿ ಸಾವು

ಮಂಡ್ಯ: ಅಪರಿಚಿತ ವ್ಯಕ್ತಿಯೋರ್ವ ರೈಲಿಗೆ ಸಿಕ್ಕಿ ಮೃತಪಟ್ಟಿರುವ ಘಟನೆ ತಾಲೂಕಿನ ಯಲಿಯೂರು-ಬ್ಯಾಡರಹಳ್ಳಿ ರೈಲು ನಿಲ್ದಾಣಗಳ ನಡುವೆ ನಡೆದಿದೆ. ಸುಮರು 30 ವರ್ಷ ವಯಸ್ಸಿನ ಅಪರಿಚಿತ ವ್ಯಕ್ತಿ ಯಾವುದೋ ಚಲಿಸುತ್ತಿದ್ದ ರೈಲು ಗಾಡಿಗೆ ಸಿಲುಕಿ ಮೃತಪಟ್ಟಿದ್ದು, ಸುಮಾರು ಐದೂವರೆ ಅಡಿ ಎತ್ತರ, ಸಾಧಾರಣ ಶರೀರ, ದಪ್ಪನೆ ಮೂಗು, ತಲೆಯಲ್ಲಿ 1 ಇಂಚು ಕಪ್ಪು ಕೂದಲು, ಮೀಸೆ ಬಿಟ್ಟಿರುವುದಿಲ್ಲ. ಮೃತನ ಎಡಗೈ ಹಸ್ತದ ಮೇಲೆ ಟ್ಯಾಟೋ ಮಾರ್ಕ್ ಮತ್ತು ತೋಳಿನ ಮೇಲೆ ಇಂಗ್ಲೀಷ್ ಅಕ್ಷರದಲ್ಲಿ ಬರೆದಿರುವ ಟ್ಯಾಟೋ ಮಾರ್ಕ್ ಇದೆ. ಕಪ್ಪು ಬಣ್ಣದ ಟೀಶರ್ಟ್,. ಕ್ರೀಂ ಬಣ್ಣದ ಪ್ಯಾಂಟ್, ಸಿಮೆಂಟ್ ಬಣ್ಣದ ಒಳಉಡುಪು ಧರಿಸಿದ್ದಾನೆ. ಈತನ ವಾರಸುದಾದರು ಇದ್ದಲ್ಲಿ ರೈಲ್ವೆ ಪೊಲೀಸರು ದೂ. 0821 2516579, ಮೊ : 9480802122 ಸಂಖ್ಯೆಯನ್ನು ಸಂಪರ್ಕಿಸುವಂತೆ ಕೋರಲಾಗಿದೆ.



ಪಾಂಡವಪುರತಾಲೂಕಿನ ಹಾಗನಹಳ್ಳಿ ನಿಂಗಜಮ್ಮ ಅವರಿಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ ಟ್ರಸ್ಟ್ ವತಿಯಿಂದ ವಾತ್ಸಲ್ಯ ಮನೆ ಹಸ್ತಾಂತರ ಕಾರ್ಯಕ್ರಮ ನಡೆಯಿತು.

ವಾತ್ಸಲ್ಯ ಮನೆ ಹಸ್ತಾಂತರ

ಪಾಂಡವಪುರ: ತಾಲೂಕಿನ ಹಾಗನಹಳ್ಳಿ ನಿಂಗಜಮ್ಮ ಅವರಿಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್ ವತಿಯಿಂದ ವಾತ್ಸಲ್ಯ ಮನೆ ಹಸ್ತಾಂತರ ಕಾರ್ಯಕ್ರಮ ನಡೆಯಿತು.

ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜಿಲ್ಲಾ ನಿರ್ದೇಶಕಿ ಮಮತಾರಾವ್ ಅವರು ನಿಂಗಜಮ್ಮ ಅವರಿಗೆ ವಾತ್ಸಲ್ಯ ಮನೆ ಹಸ್ತಾಂತರ ಮಾಡಿದರು. ಶ್ರೀಕ್ಷೇತ್ರ ಧರ್ಮಸ್ಥಳ ಯೋಜನೆ ವತಿಯಿಂದ ಸಾವಿರಕ್ಕೆ ಹೆಚ್ಚು ವಾತ್ಸಲ್ಯ ಮನೆ ಹಸ್ತಾಂತರ ಮಾಡಲಾಗಿದ್ದು, ಇವರಿಗೆ ಕಂಬಳಿ ಹೊದಿಕೆ, ಪಾತ್ರೆ, ಪಗಡ ಹಾಗೂ ಸುಂದರ ಜೀವನ ನಡೆಸಲು ಸಂಸ್ಥೆ ವತಿಯಿಂದ 1ಸಾವಿರ ರೂ. ಮಾಶಾಸನ ಸೇರಿದಂತೆ ಸರ್ಕಾರದಿಂದ ಸಿಗುವ ಮಾಶಾಸನ ಕೂಡ ದೊರಕಲಿದೆ ಎಂದರು.

ಈ ವೇಳೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ ಟ್ರಸ್ಟ್‌ನ ತಾಲೂಕು ಯೋಜನಾಧಿಕಾರಿ ಯಶವಂತ್, ಜೆವಿಕೆ ಸಮನ್ವಯಾಧಿಕಾರಿ ತೇಜಸ್ವಿನಿ, ಜನಜಾಗೃತಿ ವೇದಿಕೆ ಸದಸ್ಯರಾದ ಎಚ್.ಆರ್.ಧನ್ಯಕುಮಾರ್, ಬಿ.ಜಿ.ಪ್ರಭಾಕರ್, ಶಾಂತಲಾ ರಾಮಕೃಷ್ಣ, ಮೈಕ್ ಮಹದೇವು, ಅಮ್ಮನ ಆಸರೆ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಪ್ರಭುಸ್ವಾಮಿ, ಹಾಗನಹಳ್ಳಿ ಗೋಪಾಲ್, ಶಿವಕುಮಾರ್, ನಂಜಪ್ಪ, ಕೆಂಪಣ್ಣ, ವೀರಶೈವ ಲಿಂಗಾಯಿತ ಮಹಾಸಭಾ ಪ್ರಧಾನ ಕಾರ್ಯದರ್ಶಿ ಜಗದೀಶ್, ಪ್ರಭುಸ್ವಾಮಿ, ರಾಗಿಮುದ್ದನಹಳ್ಳಿ ನಾಗೇಶ್, ಒಕ್ಕೂಟದ ಅಧ್ಯಕ್ಷೆ ವೀಣಾ ಸೇರಿದಂತೆ ಇತರರಿದ್ದರು.



ಮದ್ದೂರು ತಾಲೂಕಿನ ಗೊರವನಹಳ್ಳಿ ಗ್ರಾಮವನ್ನು ನಗರಸಭೆಗೆ ಸೇರ್ಪಡೆಗೊಳಿಸಿರುವುದನ್ನು ವಿರೋಧಿಸಿ ತೆಂಡೆ ಯಜಮಾನರುಗಳ ನೇತೃತ್ವದಲ್ಲಿ ಗ್ರಾಮಸ್ಥರ ಸಭೆ ಜರುಗಿತು.

ಸ್ವ ಉದ್ಯೋಗದ ಬಗ್ಗೆ ಮಾಹಿತಿ: ಜಿಲ್ಲಾಧಿಕಾರಿ ಡಾ. ಕುಮಾರ ಅಭಿಮತ

ಯುವಜನರಿಗೆ ಉಚಿತ ತರಬೇತಿ

ಮಂಡ್ಯ: ಯುವಕ-ಯುವತಿಯರಿಗೆ ಆಸಕ್ತಿಯ ಕ್ಷೇತ್ರದಲ್ಲಿ ಉದ್ಯೋಗ ಮಾಡಲು ಉಚಿತ ಕೌಶಲ ತರಬೇತಿ ಹಾಗೂ ಸ್ವ-ಉದ್ಯೋಗದ ಬಗ್ಗೆ ಮಾರ್ಗದರ್ಶನ ನೀಡಲು ಅಗತ್ಯ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಡಾ. ಕುಮಾರ ಅವರು ತಿಳಿಸಿದರು.



ನಗರದ ಜಿಲ್ಲಾಕಾರಿಗಳ ಕಚೇರಿಯಲ್ಲಿ ಜಿಲ್ಲಾ ಕೌಶಲ ಸಮಿತಿ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕೌಶಲ ಅಭಿವೃದ್ಧಿ ತರಬೇತಿಗಳು ಇಂದಿನ ಯುವಜನತೆಗೆ ಅಗತ್ಯವಾಗಿದ್ದು, ಪ್ರಸಕ್ತ ಕೈಗಾರಿಕೆ ಹಾಗೂ ಉದ್ಯೋಗ ಮಾರುಕಟ್ಟೆಗೆ ಅವಶ್ಯಕವಾಗಿರುವ ತರಬೇತಿಗಳನ್ನು ನೀಡಲು ಕ್ರಮವಹಿಸುವಂತೆ ಹಾಗೂ ಕೈಗಾರಿಕೆಗಳ ಸಹಯೋಗದೊಂದಿಗೆ ತರಬೇತಿ ಯೋಜನೆಗಳನ್ನು ರೂಪಿಸುವಂತೆ ತಿಳಿಸಿದರು.

ಸ್ವನಿ ಯೋಜನೆಯಡಿ ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆಯನ್ನು ಕೈಗೊಂಡು ಕೇಂದ್ರ ಸರ್ಕಾರದ 8 ಸಾಮಾಜಿಕ ಮತ್ತು ಆರ್ಥಿಕ ಭದ್ರತೆ ಯೋಜನೆಗಳ ಸಂಪರ್ಕ ಕಲ್ಪಿಸಬೇಕು ಹಾಗೂ ಸದರಿ ಯೋಜನೆಯಡಿ ಬೀದಿ ಬದಿ ವ್ಯಾಪಾರಿಗಳಿಗೆ ಡಿಜಿಟಲ್ ಸಾಕ್ಷರತೆಯ ಬಗ್ಗೆ ಅರಿವು ಮೂಡಿಸಬೇಕು ಎಂದು ತಿಳಿಸಿದರು.

ಪ್ರಸ್ತುತ ಹೆಚ್ಚು ಮಾರಾಟವಾಗುತ್ತಿರುವ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತ ಕೃತಿಗಳ ಪುಸ್ತಕ, ಆಸಕ್ತಿದಾಯಕ ಬರಹಗಳಿಗೆ ಆದ್ಯತೆ ನೀಡಿ. ಓದುಗರಿಗೆ ಆಕರ್ಷಕವಾದ ಮತ್ತು ಸುಸಜ್ಜಿತವಾದ ಅಧ್ಯಯನ ಕೊಠಡಿಗಳು, ಕುಡಿಯುವ ನೀರು ಮತ್ತು ಶೌಚಾಲಯ ಸೌಲಭ್ಯ ಕಲ್ಪಿಸಿ ಎಂದು ಹೇಳಿದರು.

ಸಭೆಯಲ್ಲಿ ಮುಖ್ಯ ಗ್ರಂಥಾಲಯ ಅಧಿಕಾರಿ ನಾರಾಯಣಮೂರ್ತಿ, ಸಮಿತಿಯ ಸದಸ್ಯರು, ಸಾಹಿತಿಗಳಾದ ತೈಲೂರು ವೆಂಕಟಕೃಷ್ಣ, ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ನಾಗನಂದ, ಡಿಎಚ್‌ಒ ಡಾ.ಕೆ.ಮೋಹನ್ ಹಾಗೂ ಜಿಲ್ಲಾಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.

ಓದುಗರ ಬೇಡಿಕೆ ಮೇಲೆ ಪುಸ್ತಕ ಖರೀದಿ ಮಾಡಿ

ಓದುಗರ ಆಸಕ್ತಿ ಮತ್ತು ಬೇಡಿಕೆಗೆ ಅನುಗುಣವಾಗಿ ಪುಸ್ತಕಗಳನ್ನು ಆಯ್ಕೆ ಮಾಡುವುದು ಒಂದು ಉತ್ತಮ ನಿರ್ಧಾರ. ಗ್ರಂಥಾಲಯದಲ್ಲಿ ಈ ರೀತಿಯ ಪುಸ್ತಕ ಖರೀದಿ ಮಾಡಿ ಸಂಗ್ರಹವನ್ನು ಉತ್ತಮಪಡಿಸಿ ಎಂದು ಜಿಲ್ಲಾಧಿಕಾರಿ ಡಾ. ಕುಮಾರ ಅಧಿಕಾರಿಗಳಿಗೆ ಸಲಹೆ ನೀಡಿದರು. ಜಿಲ್ಲಾಕಾರಿಗಳ ಕಚೇರಿಯಲ್ಲಿ ಜಿಲ್ಲಾ ಗ್ರಂಥಾಲಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, 587 ಪುಸ್ತಕ ಖರೀದಿ ಮಾಡಲು ಸಮಿತಿಯಿಂದ ತಿರ್ಮಾನ ಮಾಡಲಾಗಿದ್ದು, ಉತ್ತಮ ಅಭಿರುಚಿವುಳ್ಳ ಪುಸ್ತಕ ಖರೀದಿ ಮಾಡಿ. ಗ್ರಂಥಾಲಯದಲ್ಲಿ ಓದುಗರ ನೋಂದಣಿಯನ್ನು ಹೆಚ್ಚಿಸಿ ಎಂದರು.

> ಯುವನಿ, ಯುವನಿ ಪ್ಲಸ್ ಯೋಜನೆಯಡಿ ತಾಂತ್ರಿಕ ಹಾಗೂ ಕೈಗಾರಿಕಾ ಕೌಶಲವನ್ನು ಯುವಕರಿಗೆ ಕಲಿಸಿ ಅವರಿಗೆ ಉದ್ಯೋಗಾವಕಾಶ ಕಲ್ಪಿಸಬೇಕು. ಜಿಲ್ಲೆಯ ಯುವಕರಿಗೆ ಉದ್ಯೋಗ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ಬೇರೆ ಬೇರೆ ಸಂಸ್ಥೆಗಳಿಂದ ಸ್ಪೋಕನ್ ಇಂಗ್ಲಿಷ್ ತರಬೇತಿ ಮತ್ತು ವಿಶಿಷ್ಟಚೇತನರಿಗೆ ವಿಶೇಷ ತರಬೇತಿ ಕಾರ್ಯಕ್ರಮ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ.
>
> ■ **ಡಾ. ಕುಮಾರ,** ಜಿಲ್ಲಾಧಿಕಾರಿ

ಅನ್ನದಾತರ ಜೀವನಕ್ಕೆ ಹೈನುಗಾರಿಕೆ ವರದಾನ

ಮಂಡ್ಯ: ರೈತರ ಜೀವನ ಸುಧಾರಣೆಗೆ ಹೈನುಗಾರಿಕೆಯೇ ವರದಾನವಾಗಿದೆ.ಈ ಉದ್ಯಮ ದಿಂದಲೇ ರೈತರು ನೆಮ್ಮದಿ ಜೀವನ ನಡೆಸುತ್ತಿದ್ದಾರೆ ಎಂದು ಚೆಸ್ಕಾಂ ಅಧ್ಯಕ್ಷಹಾಗೂ ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದ ಶಾಸಕ ಎ.ಬಿ.ರಮೇಶ ಬಂಡಿಸಿದ್ದೇಗೌಡ ತಿಳಿಸಿದರು.

ತಾಲೂಕಿನ ಕಾರಸವಾಡಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಪಶು ಆಹಾರ ಕೊಠಡಿ ಹಾಗೂ ಸಭಾಂಗಣದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ಡೈರಿಯಲ್ಲಿ ಸಣ್ಣಪುಟ್ಟ ವ್ಯತ್ಯಾಸವಿಲ್ಲದ ರೀತಿ ಆಡಳಿತ ನಡೆಸಿ ಹಾಲಿನ ಡೇರಿ ನಿಮ್ಮ ಮನೆಯ ಆಸ್ತಿ,ಡೈರಿಗಳಿಂದ ಅನೇಕ ಅನುಕೂಲಗಳಿವೆ ಎಂದು ತಿಳಿಸಿದರು.

ಗ್ರಾಮೀಣ ಪ್ರದೇಶದ ಮಹಿಳೆಯರು ಎನ್‌ಆರ್‌ಎಲ್‌ಎಂ ಮೂಲಕ ಹಸು ಸಾಕಾಣಿಕೆ ಅಥವಾ ಉಪ ಉತ್ಪನ್ನಗಳನ್ನು ತಯಾರು ಮಾಡಲು ಅನೇಕ ರೀತಿಯ ಸಾಲ ಸೌಲಭ್ಯಗಳಿವೆ ಇವುಗಳನ್ನು ಬಳಸಿ ಕೊಳ್ಳುವಂತೆ ತಿಳಿಸಿದರು. ನಾನು ಸಹ ಅರಕೆರೆಯಲ್ಲಿ ಹಸು ಸಾಕಿ ಡೈರಿಗೆ ಹಾಲು ಹಾಕಿ ವ್ಯವಸಾಯ ಮಾಡುತ್ತಿದ್ದೆ. ಜನರ ಆರ್ಶೈಕೆಯಿಂದ ಶಾಸಕನಾಗಿದ್ದೇನೆ. ಜನರ ಪ್ರೀತಿ, ವಿಶ್ವಾಸ ಇದೇ ರೀತಿ ಇರಲಿ ಡೈರಿಯಲ್ಲಿ ಸಿಗುವ ಅನುಕೂಲಗಳನ್ನು ಗ್ರಾಮಸ್ಥರು ಬಳಸಿಕೊಳ್ಳಿ ಎಂದು ತಿಳಿಸಿದರು.

ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಕೆ.ಎನ್.ರಾಜೇಶ್ ಸಮಾರಂಭದ ಅಧ್ಯಕ್ಷತೆ ವಹಿಸಿದರು. ಮನಮುಲ್ ಅಧ್ಯಕ್ಷ ಯು.ಸಿ.ಶಿವಕುಮಾರ್, ನಿರ್ದೇಶಕರಾದ ಎಂ.ಎಸ್. ರಘುನಂದನ್, ಬಿ.ಆರ್. ರಾಮಚಂದ್ರ, ವಿಸ್ತರಣಾಧಿಕಾರಿ ರುಮಾನ,ಉಪಾಧ್ಯಕ್ಷೆ ಕೆ.ಎಂ.ಭಾಗ್ಯ, ನಿರ್ದೇಶಕರಾದ ಕೆ.ಬಿ.ನಾಗರಾಜು ಭಾಗವಹಿಸಿದ್ದರು.




> ಮಂಡ್ಯಕ್ಕೆ ಸಮೀಪದ ಹತ್ತಿರದಲ್ಲಿರುವ ಕಾರಸವಾಡಿ ಗ್ರಾಮದ ಡೇರಿಯಲ್ಲಿ ಪ್ರತಿದಿನ ಒಂದು ಸಾವಿರ ಲೀಟರ್ ಹಾಲು ಶೇಖರಣೆಯಾಗುತ್ತಿದೆ. ಇದನ್ನು ಇನ್ನೂ ಹೆಚ್ಚಳ ಮಾಡುವ ಜೊತೆಗೆ ಹೆಚ್ಚು ಸೇಲ್ಸ್ ಮಾಡಿ.ಗ್ರಾಮದವರು ಡೈರಿಯಲ್ಲೇ ಬಂದು ಹಾಲು ತೆಗೆದುಕೊಳ್ಳಬೇಕು ಆ ರೀತಿ ವ್ಯವಸ್ಥೆ ಮಾಡಿ ಒಂದು ರೂಪಾಯಿ ಕಡಿಮೆ ಕೊಟ್ಟರು ನಿಮಗೆ ನಷ್ಟ ಆಗಲ್ಲ.
>
> ■ **ಎ.ಬಿ.ರಮೇಶ ಬಂಡಿಸಿದ್ದೇಗೌಡ,** ಶಾಸಕ

ಚೌಡೇಶ್ವರಿ ದೇವಿ ಜಾತ್ರೋತ್ಸವ

ಪಾಂಡವಪುರ: ತಾಲೂಕಿನ ಹೊಸ ಕನ್ನಂಬಾಡಿ ಗ್ರಾಮದಲ್ಲಿ ಶನಿವಾರ, ಭಾನುವಾರ ಮತ್ತು ಸೋಮವಾರ ಮೂರು ದಿನಗಳವರೆಗೆ ಶ್ರೀ ಹಿರಿದೇವಮ್ಮ ಮತ್ತು ಶ್ರೀ ಚೌಡೇಶ್ವರಿ ದೇವಿಯ ಜಾತ್ರಾ ಮಹೋತ್ಸವ ಬಹಳ ವಿಜೃಂಭಣೆಯಿಂದ ನಡೆಯಿತು.

ಗ್ರಾಮದಲ್ಲಿ 15 ದಿನಗಳಿಂದ ಬಹಳ ನಿಷ್ಠೆ, ಭಕ್ತಿ ಭಾವದಿಂದ ಈ ಹಬ್ಬವನ್ನು ಪ್ರತಿ ವರ್ಷ ಆಚರಣೆ ಮಾಡಿಕೊಂಡು ಬಂದಿದ್ದಾರೆ. ಹಿರಿದೇವಮ್ಮ ಮತ್ತು ಚೌಡೇಶ್ವರಿ ದೇವಿಯ ಹಬ್ಬ 15 ದಿನಗಳು ಇರುವಂತೆಯೇ ಗ್ರಾಮದಲ್ಲಿ ಬಹಳ ನಿಷ್ಠೆಯಿಂದ ಪ್ರತಿ ಮನೆಗಳಲ್ಲಿ ಒಗ್ಗರಣೆ ಹಾಕುವಂತಿಲ್ಲ. ಹಾಗೆಯೇ ಮಾಂಸಾಹಾರಿ ಮಾಡುವಂತಿಲ್ಲ. ಅಷ್ಟೇ ಭಕ್ತಿಯಿಂದ ಆಚರಿಸಿಕೊಂಡು ಬಂದಿದ್ದಾರೆ. ಹಿರಿದೇವಮ್ಮ ಮತ್ತು ಚೌಡೇಶ್ವರಿ ದೇವಿಯ ಮೂರ್ತಿಗಳನ್ನು ಕಾವೇರಿ ನದಿಯ ತೀರದ ಹತ್ತಿರ ತೆಗೆದುಕೊಂಡು ಹೋಗಿ ಮೂರ್ತಿಗಳನ್ನು ನೀರಿನಲ್ಲಿ ಸ್ನಾನ ಮಾಡಿಸಿ ನಂತರ ಹೂವಿನಿಂದ ಅಲಂಕಾರಗೊಳಿಸಿ ಪಲ್ಲಕ್ಕಿ ಮೇಲೆ ಇಟ್ಟು ಮುತ್ತೈದೆಯರು ಸೇರಿದಂತೆ ಸಾವಿರಾರು ಭಕ್ತರು ಪಲ್ಲಕ್ಕಿಯಲ್ಲಿ ಹಿರಿದೇವಮ್ಮ ಮತ್ತು ಚೌಡೇಶ್ವರಿ ದೇವಿಯನ್ನು ಮೆರವಣಿಗೆ ಮೂಲಕ ತಂದರು. ನಂತರ ದೇವಸ್ಥಾನದಲ್ಲಿ ಹಿರಿದೇವಮ್ಮ ಮತ್ತು ಚೌಡೇಶ್ವರಿದೇವಿ ಮೂರ್ತಿಗಳನ್ನು ಇಟ್ಟು ಸಾವಿರಾರು ಭಕ್ತರು ಪೂಜೆ ಸಲ್ಲಿಸಿದರು. ಹರಕೆ ಹೊತ್ತಿರುವ ಭಕ್ತರು ಬಾಯಿಬೀಗ ಹಾಕಿಕೊಂಡು ದೇವಿಗೆ ಪೂಜೆ ಸಲ್ಲಿಸಿ ತಮ್ಮ ಹರಕೆ ತೀರಿಸಿದರು. ಸಾವಿರಾರು ಭಕ್ತರು ಭಕ್ತಿ ನಿಷ್ಠೆಯಿಂದ ಈ ಹಬ್ಬವನ್ನು ಆಚರಿಸಿ ಗ್ರಾಮ ದೇವತೆಗೆ ಪ್ರೀತಿಗೆ ಪಾತ್ರರಾದರು.



ಹಿರಿದೇವಮ್ಮ ಮತ್ತು ಚೌಡೇಶ್ವರಿ ದೇವಿಯ ಜಾತ್ರಾ ಮಹೋತ್ಸವದಲ್ಲಿ ಬಲಿ ಬೀಳುವ ದೃಶ್ಯಾವಳಿಯನ್ನು ವೀಕ್ಷಿಸಿದ ತಹಸೀಲ್ದಾರ್ ಬಸವರಡ್ಡೆಪ್ಪ ರೋಣದ.

ವಿದ್ಯುತ್ ಕಡಿತದಿಂದ ಒಣಗಿದ ಬೆಳೆ: ಆರೋಪ

ಕೃಷ್ಣರಾಜಪೇಟೆ: ಚೆಸ್ಕಾಂ ವಿದ್ಯುತ್ ಇಲಾಖೆಯಲ್ಲಿ ಅಧಿಕೃತ ನಂಬರ್ ಮಾಡಿಸಿಕೊಂಡು ವಿದ್ಯುತ್ ಸಂಪರ್ಕ ಪಡೆದುಕೊಂಡಿರುವ ವಿದ್ಯುತ್ ಲೈನ್ ಅನ್ನು ನಾಲ್ವರ ಗುಂಪೊಂದು ರಾತ್ರಿಯ ವೇಳೆ ಪದೇ ಪದೇ ವಿದ್ಯುತ್ ಸಂಪರ್ಕ ಕಡಿತಗೊಳಿಸುತ್ತಿರುವ ಕಾರಣ ರೈತನ ಬೆಳೆ ಒಣಗಿ ಹೋಗುವ ಸ್ಥಿತಿಗೆ ತಲುಪಿದ್ದು ಕಿಡಿಗೇಡಿತನ ಮಾಡುತ್ತಿರುವ ನಾಲ್ಕು ಮಂದಿಯ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು ಎಂದು ಚಿಕ್ಕಳಲೆ ಗ್ರಾಮದ ನೊಂದ ರೈತ ತಮ್ಮಯ್ಯಶೆಟ್ಟಿ ಪೊಲೀಸ್ ಅಧಿಕಾರಿಗಳು ಹಾಗೂ ತಾಲೂಕು ತಹಸೀಲ್ದಾರ್ ಅವರಲ್ಲಿ ಮನವಿ ಮಾಡಿಕೊಂಡಿದ್ದಾರೆ.



ಚಿಕ್ಕಳಲೆ ಗ್ರಾಮದ ಜಯಣ್ಣ ಬಿನ್ ಲೇಟ್ ಪಾಪೇಗೌಡ, ಯೋಗಾಚಾರಿ ಬಿನ್ ಗಿರಿಯಾಚಾರಿ, ಮಂಜು ಬಿನ್ ಮಲ್ಲೇಶ್‌ಗೌಡ, ಮಲ್ಲ ಬಿನ್ ಮಂಜಮ್ಮ ಎಂಬುವವರೇ ತಮ್ಮಯ್ಯಶೆಟ್ಟಿ ಅವರ ಕೊಳವೆಬಾವಿ ಆಶ್ರಿತ ನೀರಾವರಿ ಯೋಜನೆಗೆ ಪಡೆದುಕೊಂಡಿರುವ ವಿದ್ಯುತ್ ಸಂಪರ್ಕವನ್ನು ಪದೇ ಪದೇ ವಿದ್ಯುತ್ ಸಂಪರ್ಕ ಕಡಿತಗೊಳಿಸುವ ಮೂಲಕ ಪುಂಡಾಟಿಕೆ ಮೆರೆಯುತ್ತಿದ್ದಾರೆ. ಈ ಬಗ್ಗೆ ಹಲವು ಗ್ರಾಮಸ್ಥರಿಗೂ ತಿಳಿಸಿ ತಿಳುವಳಿಕೆ ಹೇಳಿಸಿದರೂ ಸಹ ಜಯಣ್ಣ, ಯೋಗಾಚಾರಿ, ಮಂಜು, ಹಾಗೂ ಮಲ್ಲ ಎಂಬುವರು ಪದೇ ಪದೇ ನಮ್ಮ ಕೊಳವೆ ಬಾವಿಯ ವಿದ್ಯುತ್ ಸಂಪರ್ಕವನ್ನು ಕಂಬಕ್ಕೆ ಹತ್ತಿ ಕಂಬದಲ್ಲೆ ಮೇನ್ಸ್ ತಂತಿಗಳನ್ನು ಕಟ್ ಮಾಡಿ ನಮ್ಮ ಕೊಳವೆಬಾವಿಯ ಮೋಟಾರ್ ಚಾಲನೆಯಾಗದಂತೆ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸುವ ಮೂಲಕ ತೀವ್ರ ತೊಂದರೆ ನೀಡುತ್ತಿದ್ದಾರೆ ಹಾಗಾಗಿ ನಾಲ್ಕೂ ಮಂದಿಯ ವಿರುದ್ಧ ಕೂಡಲೇ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಚೆಸ್ಕಾಂ ಅಧಿಕಾರಿಗಳಿಗೆ, ಕಿಕ್ಕೇರಿ ಪೋಲೀಸರಿಗೆ ಹಾಗೂ ತಾಲೂಕು ತಹಸೀಲ್ದಾರ್ ಅವರಿಗೆ ಮಾಧ್ಯಮಗಳ ನೊಂದ ರೈತ ತಮ್ಮಯ್ಯಶೆಟ್ಟಿ ಮೂಲಕ ಮನವಿ ಮಾಡಿಕೊಂಡಿದ್ದಾರೆ.

ಪ್ರತಿಭಟನಾನಿರತರ ಮೇಲೆ ದೌರ್ಜನ್ಯ: ಖಂಡನೆ

ಮದ್ದೂರು: ತಾಲೂಕಿನ ಗೊರವನಹಳ್ಳಿ ಗ್ರಾಮವನ್ನು ನಗರಸಭೆಗೆ ಸೇರ್ಪಡೆಗೊಳಿಸಿರುವುದನ್ನು ವಿರೋಧಿಸಿ ಸ್ಥಳೀಯ ಗ್ರಾಮಸ್ಥರು ನಡೆಸುತ್ತಿರುವ ಅನಿರ್ದಿಷ್ಟಾವಧಿ, ಅಹೋರಾತ್ರಿ ಧರಣಿಯನ್ನು ಶಾಂತಿಯುತವಾಗಿ ನಡೆಸುತ್ತಿದ್ದ ವೇಳೆ ಪೊಲೀಸರು ಏಕಾಏಕಿ ಪ್ರವೇಶ ಮಾಡಿ ಪ್ರತಿಭಟನೆ ನಿರತರ ಮೇಲೆ ದೌರ್ಜನ್ಯ ನಡೆಸಿರುವುದನ್ನು ಸ್ಥಳೀಯ ಮುಖಂಡರು ಪಕ್ಷಾತೀತವಾಗಿ ಖಂಡಿಸಿದರು.

ತಾಲೂಕಿನ ಗೊರವನಹಳ್ಳಿ ಗ್ರಾಮದ ಅರಳಿ ಕಟ್ಟೆ ಬಳಿ ಆಯೋಜಿಸಿದ್ದ 12 ಮಂದಿ ವಿವಿಧ ತೆಂಡೆ ಯಜಮಾನರುಗಳ ನೇತೃತ್ವದಲ್ಲಿ ನಡೆದ ಸಭೆ ವೇಳೆ ಪೋಲೀಸರ ಕ್ರಮವನ್ನು ಖಂಡಿಸಿದರು. ಮಹಿಳೆಯರ ಮೇಲೆ ನಡೆದ ಪೋಲೀಸ್ ದೌರ್ಜನ್ಯವನ್ನು ಖಂಡಿಸಿದರಲ್ಲದೆ ಕೂಡಲೇ ದೌರ್ಜನ್ಯವೆಸಗಿರುವ ಅಧಿಕಾರಿಗಳನ್ನು ಅಮಾನತ್ತು ಗೊಳಿಸುವಂತೆ ಆಗ್ರಹಿಸಿದರಲ್ಲದೆ ಇಂತಹ ಪ್ರಕರಣಗಳು ಮತ್ತೆ ಮರುಕಳಿಸಿದ್ದಲ್ಲಿ ತಕ್ಕ ಪಾಠ ಕಲಿಸಬೇಕಾಗುತ್ತದೆಂದು ಎಚ್ಚರಿಕೆ ನೀಡಿದರು.

ತಮಗೆ ನಗರಸಭೆ ಬೇಡ ಪಂಚಾಯಿತಿಯಾಗಿ ಉಳಿಯಬೇಕೆಂಬ ನಿಟ್ಟಿನಲ್ಲಿ ಕಳೆದ 68 ದಿನಗಳಿಂದಲೂ ಗ್ರಾ.ಪಂ. ಕಚೇರಿ ಬಳಿ ಶಾಂತಿಯುತ ಪ್ರತಿಭಟನೆ ಕೈಗೊಂಡಿದ್ದ ಮಹಿಳೆಯರು ಮತ್ತು ಪುರಷರ ಮೇಲೆ ಪೋಲೀಸರು ಏಕಾಏಕಿ ಪ್ರವೇಶ ಮಾಡಿ ದಾಳಿ ನಡೆಸಿ ಕಡತಗಳನ್ನು ಸಾಗಿಸಿರುವ ಕ್ರಮ ಸರಿಯಲ್ಲವೆಂದರು.

ಗ್ರಾಮಸಭೆ ಮತ್ತು ಚುನಾಯಿತ ಪ್ರತಿನಿಧಿಗಳ ಗಮನಕ್ಕೆ ತರದೆ ಈ ಹಿಂದೆ ಕರ್ತವ್ಯ ನಿರ್ವಹಿಸಿದ ಪಿ.ಡಿ.ಓ ರವರ ದುರುದ್ದೇಶದಿಂದಾಗಿ ಗ್ರಾಮವನ್ನು ನಗರಸಭೆಗೆ ಸೇರ್ಪಡೆಗೊಳಿಸಿದು ಇದರಿಂದಾಗಿ ಇಷ್ಟೆಲ್ಲಾ ಅದ್ವಾನಗಳಿಗೆ ಕಾರಣವಾಗಿದ್ದು ಮತ್ತು ಯಾವುದೇ ಅಜೆಂಡಾವನ್ನು ಆಡಳಿತ ಮಂಡಳಿಯ ಗಮನಕ್ಕೆ ತರದೆ ಉದ್ದೇಶಪೂರ್ವಕವಾಗಿ ಅಜೆಂಡಾದಲ್ಲಿ ಅಧಿಕಾರಿಗಳು ಸೇರಿಸಿಕೊಂಡಿದ್ದಾರೆಂದು ಆರೋಪಿಸಿದರು.

ಶಾಸಕರ ಬಳಿಗೆ ನಿಯೋಗ: ಗೊರವನಹಳ್ಳಿ ಗ್ರಾಮವನ್ನು ಮದ್ದೂರು ನಗರಸಭೆ ಸೇರ್ಪಡೆಯಿಂದ ಕೈಬಿಡುವ ಕುರಿತಾಗಿ 12 ಮಂದಿ ವಿವಿಧ ತೆಂಡೆಗಳ ಯಜಮಾನರುಗಳು ಅತಿ ಶೀಘ್ರದಲ್ಲಿಯೇ ನಿಯೋಗ ತೆರಳಿ ಶಾಸಕರನ್ನು ಭೇಟಿ ಮಾಡಿ ನಗರಸಭೆಯಿಂದ ತಮ್ಮ ಗ್ರಾಮವನ್ನು ಕೈಬಿಡುವಂತೆ ಮನವಿ ಮಾಡುವುದಾಗಿ ಮುಖಂಡ ರವಿ ತಿಳಿಸಿದರು. ತೆಂಡೆ ಯಜಮಾನರುಗಳಾದ ರವಿ, ಶಿವರಾಮು, ಕೃಷ್ಣಪ್ಪ, ಸುರೇಶ್, ಬೋರಯ್ಯ, ಕಾಳೇಗೌಡ, ಜಿ.ಬಿ.ಲಿಂಗಯ್ಯ, ಪುಟ್ಟಸ್ವಾಮಿ, ಬೋರೇಗೌಡ, ಮುಖಂಡರಾದ ಶಿವಪ್ಪ, ಗೊರವನಹಳ್ಳಿ ಪ್ರಸನ್ನ, ಸಂತೋಷ್, ಚಿಕ್ಕಣ್ಣ, ಮಹೇಶ್, ಶ್ರೀಲತಾ, ಮಲ್ಲೇಶ್, ಮಂಗಳಮ್ಮ, ಲಕ್ಷ್ಮಿ ಇತರರಿದ್ದರು.

27 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣ | 6 ತಿಂಗಳ ಹಿಂದೆ ನಿರ್ಮಿಸಿದ್ದ ಪಾರ್ಕ್

ಉಪಯೋಗಕ್ಕೆ ಬಾರದ ಸರ್.ಎಂ.ವಿ.ಉದ್ಯಾನವನ

ಮದ್ದೂರು: ತಾಲೂಕಿನ ಹೆಮ್ಮನಹಳ್ಳಿ ಗ್ರಾ.ಪಂ. ವ್ಯಾಪ್ತಿಯ ಹುಳಗನಹಳ್ಳಿ ಗ್ರಾಮದಲ್ಲಿ ಅಮೃತ ಸರೋವರ ಯೋಜನೆಯಡಿ ನಿರ್ಮಿಸಿರುವ ರಾಮನಕಟ್ಟೆ ಹಾಗೂ ಸರ್.ಎಂ.ವಿ ಉದ್ಯಾನವನ ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಉಪಯೋಗಕ್ಕೆ ಬಾರದಂತಿದೆ.

ತಾಲೂಕಿನ ಹುಳಗನಹಳ್ಳಿ ಗ್ರಾಮದಲ್ಲಿ ಸುಮಾರು 27 ಲಕ್ಷ ರೂ. ವೆಚ್ಚದಲ್ಲಿ ಕಳೆದ 6 ತಿಂಗಳ ಹಿಂದೆ ನಿರ್ಮಿಸಿದ್ದ ರಾಮನಕಟ್ಟೆ ಉದ್ಯಾನವನದಲ್ಲಿ ಗಿಡಗಂಟೆಗಳು ಬೆಳೆದು ನಿಂತು ಉಪಯೋಗಕ್ಕೆ ಬಾರದಂತಿರುವ ಜತೆಗೆ ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಅಲಂಕಾರಿಕ ಗಿಡಗಳು ಒಣಗುವ ಹಂತ ತಲುಪಿದ್ದರೂ ಸಂಬಂಧಿಸಿದ ಅಧಿಕಾರಿಗಳು ಅಗತ್ಯ ಕ್ರಮ ವಹಿಸದಿರುವ ಬಗ್ಗೆ ಸ್ಥಳೀಯರು ಕಿಡಿಕಾರಿದ್ದಾರೆ.

ಹೆಮ್ಮನಹಳ್ಳಿ ಗ್ರಾ.ಪಂ. ವತಿಯಿಂದ ನಿರ್ಮಿಸಿರುವ ರಾಮನಕಟ್ಟೆ, ಸರ್.ಎಂ.ವಿ ಉದ್ಯಾನವನಕ್ಕೆ ಗಾಂಧಿ ಗ್ರಾಮ ಪುರಸ್ಕಾರ, ರಾಷ್ಟ್ರಪ್ರಶಸ್ತಿ, ರಾಜ್ಯಪ್ರಶಸ್ತಿಗಳು ಲಭಿಸಿದ್ದು ಜತೆಗೆ ಕೇಂದ್ರ ಮತ್ತು ರಾಜ್ಯ ತಂಡಗಳ ಅಧ್ಯಯನ ಪ್ರವಾಸ ಕೈಗೊಂಡು ವೀಕ್ಷಣೆ ಮಾಡುವ ಜತೆಗೆ ತಮ್ಮ ರಾಜ್ಯ ಮತ್ತು ಇತರೆ ಜಿಲ್ಲೆಗಳಲ್ಲಿ ನಿರ್ಮಿಸಲು ಮಾದರಿಯಾಗಿರುವ ರಾಮನಕಟ್ಟೆ ಉದ್ಯಾನವನ ಹಾಳುಕೊಂಪೆಯಾಗಿ ಮಾರ್ಪಟ್ಟಿದೆ.



ರಾಮನಕಟ್ಟೆ ಮತ್ತು ಉದ್ಯಾನವನವನ್ನು ನಿರ್ವಹಣೆ ಮಾಡುವಂತೆ ಪ್ರಭಾರ ಪಿಡಿಒ ಪಿ.ಜಗದೀಶ್ ಅವರಿಗೆ ಸ್ಥಳೀಯ ಗ್ರಾಮಸ್ಥರು ಮನವಿ ಸಲ್ಲಿಸಿದ್ದರೂ ಯಾವುದೇ ಕ್ರಮಕ್ಕೆ ಮುಂದಾಗದೆ ನಿರ್ಲಕ್ಷಧೋರಣೆ ಅನುಸರಿಸಿದ್ದು ಜತೆಗೆ ಬೇಸಿಗೆ ಸಮೀಪಿಸಿರುವುದರಿಂದ ಉದ್ಯಾನವನದಲ್ಲಿರುವ ಅಲಂಕಾರಿಕ ಗಿಡಗಳು ಒಣಗಿ ತಮ್ಮ ಸೌಂದರ್ಯವನ್ನೇ ಕಳೆದುಕೊಳ್ಳುವಂತಾಗಿದ್ದು ಆಳೆತ್ತರದ ಗಿಡಗಂಟೆಗಳು ಬೆಳೆದು ನಿಂತಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರ ಉಪಯೋಗದಿಂದ ದೂರು ಉಳಿಯುವಂತಾಗಿದೆ.

ಪತ್ರಿಕೆಯೊಂದಿಗೆ ಮಾತನಾಡಿದ ಗ್ರಾ.ಪಂ. ಮಾಜಿ ಅಧ್ಯಕ್ಷ ಎಚ್.ಕೆ.ನಂದೀಶ್‌ಗೌಡ ತಮ್ಮ ಗ್ರಾಮದಲ್ಲಿ ನಿರ್ಮಿಸಿರುವ ರಾಮನಕಟ್ಟೆ ಮತ್ತು ಸರ್.ಎಂ.ವಿ ಉದ್ಯಾನವನಕ್ಕೆ ರಾಷ್ಟ್ರ, ರಾಜ್ಯ ಇನ್ನಿತರ ಪ್ರಶಸ್ತಿಗಳು ಲಭಿಸುವ ಜತೆಗೆ ಕೇಂದ್ರ ಮತ್ತು ರಾಜ್ಯದ ತಜ್ಞರ ತಂಡ ಅಧ್ಯಯನ ಪ್ರವಾಸ ಕೈಗೊಂಡು ಯೋಜನೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದು ಆದರೆ ಸ್ಥಳೀಯ ಅಧಿಕಾರಿಗಳ ನಿರ್ಲಕ್ಷ ಮತ್ತು ನಿರ್ವಹಣೆ ಕೊರತೆಯಿಂದಾಗಿ ಉಪಯೋಗಕ್ಕೆ ಬಾರದಂತಿದ್ದು ಕೂಡಲೇ ಸಂಬಂಧಿಸಿದ ಅಧಿಕಾರಿಗಳು ಅಗತ್ಯ ಕ್ರಮ ವಹಿಸಬೇಕೆಂದು ಒತ್ತಾಯಿಸಿದ್ದಾರೆ.

ಮಿಷನ್ ಏಡ್ಸ್ ಸುರಕ್ಷಾ ಅಭಿಯಾನ ಕುರಿತು ಅರಿವು ಕಾರ್ಯಕ್ರಮ

ಎಚ್‌ಐವಿ ಅಪಾಯ ಅರಿಯಲು ಕ್ಯುಆರ್‌ಕೋಡ್

ಶ್ರೀರಂಗಪಟ್ಟಣ: ಕ್ಯೂ ಆರ್ ಕೋಡ್ ಮೂಲಕ ಎಲ್ಲರೂ ತಮ್ಮ ದೇಹದ ಎಚ್‌ಐವಿ ಅಪಾಯದ ಸ್ಥಿತಿಯನ್ನು ತಿಳಿದುಕೊಳ್ಳುವುದು ಅವಶ್ಯಕವಾಗಿದೆ ಎಂದು ಸಾರ್ವಜನಿಕ ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ ಡಾ ಸಿ.ಎಂ.ಶ್ರೀಧರ್ ಹೇಳಿದರು.

ಶ್ರೀರಂಗಪಟ್ಟಣದ ಸರ್ಕಾರಿ ಐಟಿಐ ಕಾಲೇಜಿನಲ್ಲಿ ತಾಲೂಕು ಆರೋಗ್ಯ ಅಧಿಕಾರಿಗಳ ಕಚೇರಿ ಹಾಗೂ ಸಾರ್ವಜನಿಕ ಆಸ್ಪತ್ರೆ ಜಂಟಿಯಾಗಿ ಆಯೋಜಿಸಿದ್ದ ಮಿಷನ್ ಏಡ್ಸ್ ಸುರಕ್ಷಾ ಅಭಿಯಾನ 2026 ಕುರಿತು ಅರಿವು ಮೂಡಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ರಿಸ್ಕ್ ಅಸೆಸ್ಮೆಂಟ್ ಟೂಲ್‌ನ ಕ್ಯು ಆರ್ ಕೋಡ್ ಮೂಲಕ ತಮ್ಮ ದೇಹದ ಅಪಾಯದ ಮಟ್ಟವನ್ನು ತಿಳಿದುಕೊಂಡು ಅವಶ್ಯಕತೆ ಇದ್ದಲ್ಲಿ, ಉಚಿತವಾಗಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಸಮಗ್ರ ಆಪ್ತ ಸಮಾಲೋಚನೆ ಮತ್ತು ಪರೀಕ್ಷಾ ಕೇಂದ್ರದಲ್ಲಿ ಒಪ್ಪಿಗೆಯನ್ನು ನೀಡಿ ಎಚ್‌ಐವಿ ಪರೀಕ್ಷೆಯನ್ನು ಮಾಡಿಸಿಕೊಳ್ಳಬೇಕು, ಎಚ್‌ಐವಿ ಪರೀಕ್ಷೆಯಲ್ಲಿ ವೈರಸ್ ಇರುವುದು ದೃಢಪಟ್ಟರೆ ಸದರಿ ವಿಷಯವನ್ನು ಗೌಪ್ಯವಾಗಿ ಇಡಲಾಗುವುದು ನಂತರ ಅಗತ್ಯ ಚಿಕಿತ್ಸೆ ನೀಡಿ ಸಲಹೆಗಳನ್ನು ನೀಡಲಾಗುವುದು ಎಂದು ತಿಳಿಸಿದರು. ಆಪ್ತ ಸಮಾಲೋಚಕಿ ಮಿಲನ ಎ.ಆರ್.ಮಾತನಾಡಿ, ಎಚ್‌ಐವಿ ಬಗ್ಗೆ ತಿಳಿಸಿ ವಿದ್ಯಾರ್ಥಿಗಳು ಈ ಹದಿಹರೆಯದ ವಯಸ್ಸಿನಲ್ಲಿ ಲೈಂಗಿಕತೆ ಕುರಿತು ಸಂಯಮತೆಯಿಂದ ಜೀವನ ನಡೆಸುವಂತೆ ಕರೆ ನೀಡಿದರು.



ಕಾರ್ಯಕ್ರಮ ಸದುಪಯೋಗವಾಗಲಿ

ಕಾಲೇಜಿನ ಕಿರಿಯ ತರಬೇತಿ ಅಧಿಕಾರಿ ಕೆ.ಎಂ.ಇಂದಿರಾ ಮಾತನಾಡಿ, ಬಹಳ ಉತ್ತಮವಾದಂತಹ ಕಾರ್ಯಕ್ರಮಗಳ ಪ್ರಯೋಜನವನ್ನು ಎಲ್ಲಾ ವಿದ್ಯಾರ್ಥಿಗಳು ಪಡೆದುಕೊಳ್ಳಬೇಕು, ಕಾಲೇಜಿನ ಆವರಣದಲ್ಲಿ ಹಾಕಿರುವ ಕ್ಯೂಆರ್ ಕೋಡನ್ನು ಸ್ಕ್ಯಾನ್ ಮಾಡಿ ಅದರಲ್ಲಿನ ನಿರ್ದಿಷ್ಟ ಪ್ರಶ್ನೆಗಳಿಗೆ ಉತ್ತರವನ್ನು ನೀಡಿ ತಮ್ಮ ತಮ್ಮ ಅಪಾಯದ ಮಟ್ಟವನ್ನು ಅರಿತು ಅಗತ್ಯವಿದ್ದಲ್ಲಿ ಸಾರ್ವಜನಿಕ ಆಸ್ಪತ್ರೆಗೆ ತೆರಳಿ ಉಚಿತವಾಗಿ ಎಚ್‌ಐವಿ ಪರೀಕ್ಷೆ ಮಾಡಿಸಿಕೊಂಡು ತಮ್ಮ ದೇಹದ ಹೆಚ್‌ಐವಿ ಪರಿಸ್ಥಿತಿಯನ್ನು ತಿಳಿದುಕೊಳ್ಳಬೇಕೆಂದು ಕಿವಿಮಾತು ಹೇಳಿದರು.

ಕಿರುಸುದ್ದಿ

ತಾತನವರ ಅಭಿವೃದ್ಧಿಯ ದಾರಿಯಲ್ಲೇ ಸಾಗುವೆ: ಶ್ರೇಯಸ್ ಪಟೇಲ್

ಹಾಸನ: ಸಂಸದ ಶ್ರೇಯಸ್ ಪಟೇಲ್ ಅವರು ನವದೆಹಲಿ ಸಂಸತ್ ಭವನದಲ್ಲಿರುವ ಗ್ರಂಥಾಲಯಕ್ಕೆ ಭೇಟಿ ನೀಡಿ ಸಂಸದರಾಗಿ ಸೇವೆ ಸಲ್ಲಿಸಿರುವ ಗಣ್ಯರ ಕುರಿತು ದಾಖಲಾಗಿರುವ ಮಾಹಿತಿಗಳನ್ನು ಅವಲೋಕಿಸಿದರು.



13ನೇ ಲೋಕಸಭೆ ಚುನಾವಣೆಯಲ್ಲಿ ಹಾಸನ ಲೋಕಸಭಾ ಕ್ಷೇತ್ರದಿಂದ ಗೆಲುವು ಸಾಧಿಸಿ ಸಂಸತ್ ಪ್ರವೇಶಿಸಿದ್ದ ಸಂಸದರ ತಾತ ದಿ. ಪುಟ್ಟಸ್ವಾಮಿಗೌಡ ಅವರ ಕುರಿತು ಸಂಗ್ರಹವಾಗಿರುವ ಮಾಹಿತಿಯನ್ನು ಓದಿದರು. ಹೊಳೆನರಸೀಪುರದಂತಹ ಸಣ್ಣ ಪಟ್ಟಣದಿಂದ ರಾಜಕೀಯ ಪಯಣ ಆರಂಭಿಸಿದ ಪುಟ್ಟಸ್ವಾಮಿಗೌಡ ಅವರು ಜನಸೇವೆಯ ಮೂಲಕ ದೊಡ್ಡ ಗುರುತು ಮೂಡಿಸಿದ್ದಾರೆ. 1978 ರಿಂದ 1984ರ ವರೆಗೆ ಶಾಸಕರಾಗಿ ಸೇವೆ ಸಲ್ಲಿಸಿ ಬಳಿಕ ವಿವಿಧ ಸಮಿತಿಗಳ ಸದಸ್ಯರಾಗಿ ಕಾರ್ಯನಿರ್ವಹಿಸಿದರು. 1999ರಲ್ಲಿ ಹಾಸನ ಕ್ಷೇತ್ರದಿಂದ ಸಂಸದರಾಗಿಯೂ ಆಯ್ಕೆಯಾಗಿ ಜಿಲ್ಲೆಯನ್ನು ಸಂಸತ್ತಿನಲ್ಲಿ ಪ್ರತಿನಿಧಿಸಿದರು. ಅದರ ಜೊತೆಗೆ 1989 ರಿಂದ 1993ರವರೆಗೆ ಕರ್ನಾಟಕ ರಾಜ್ಯದಲ್ಲಿ ಲೋಕೋಪಯೋಗಿ ಸಚಿವರಾಗಿ ಸೇವೆ ಸಲ್ಲಿಸಿ ಅಭಿವೃದ್ಧಿ ಕಾರ್ಯಗಳಿಗೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ.ಈ ಕುರಿತು ಮಾತನಾಡಿರುವ ಸಂಸದ ಶ್ರೇಯಸ್ ಪಟೇಲ್ ಅವರು, ಜನರ ಶ್ರೇಯೋಭಿವೃದ್ಧಿಯೇ ಅವರ ರಾಜಕೀಯದ ಗುರಿಯಾಗಿತ್ತು. ತಾತನವರು ತೋರಿದ ಸೇವಾ ಮನೋಭಾವ ಹಾಗೂ ಅಭಿವೃದ್ಧಿಯ ದಾರಿಯೇ ನನಗೆ ಪ್ರೇರಣೆ. ಅವರು ಹಾಕಿಕೊಟ್ಟ ಆ ಮಾರ್ಗದಲ್ಲಿ ಸಾಗುತ್ತೇನೆ ಎಂದಿದ್ದಾರೆ.

ಮುಖ್ಯಶಿಕ್ಷಕ ಕೋಟೆಕಾರ್ ನಿಧನ

ಕೊಣನೂರು: ಸಮೀಪದ ಸಿದ್ದಾಪುರ ಗೇಟ್ ಸರ್ಕಾರಿ ಪ್ರೌಢಶಾಲೆಯ ಮುಖ್ಯ ಶಿಕ್ಷಕ ನಾಗರಾಜ ಕೋಟೆಕಾರ್ (49) ಮೃತಪಟ್ಟಿದ್ದಾರೆ. ಕೊಣನೂರಿನ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದಲ್ಲಿ ವಾಸವಿದ್ದ ನಾಗರಾಜ ಕೋಟೆಕಾರ್ ಶನಿವಾರ ಶಾಲೆಯಿಂದ ಬಂದಿದ್ದು ನಂತರ ಯಾರಿಗೂ ಸಿಕ್ಕಿರುವುದಿಲ್ಲ.



ಸೋಮವಾರ ಬೆಳಿಗ್ಗೆ ಶಾಲೆಗೆ ಮುಖ್ಯ ಶಿಕ್ಷಕರು ಬಾರದ ಹಿನ್ನೆಲೆ ಶಿಕ್ಷಕರು ಮತ್ತು ಸಿಬ್ಬಂದಿ ಫೋನ್ ಕರೆಮಾಡಿದಾಗ ಸ್ವೀಕರಿಸಿದ್ದರಿಂದ ಅವರು ವಾಸವಿದ್ದ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದಲ್ಲಿ ಯದ ಕೋಣೆಯಲ್ಲಿ ನೋಡಿದಾಗ ಮಂಚ ದಿಂದ ಕೆಳಗೆ ಬಿದ್ದ ಸ್ಥಿತಿಯಲ್ಲಿ ಮೃತಪಟ್ಟಿರುವುದು ಗೊತ್ತಾಗಿದೆ. ಕುಂದಾಪುರ ಸಮೀಪದ ಕೋಟೇಕಾರು ಗ್ರಾಮದ ನಾಗರಾಜ ಕೋಟೆಕಾರ್ ಆ ಕಟ್ಟಡದಲ್ಲಿ ಇದ್ದು ಬಿದ್ದಿರುವ ಸ್ಥಿತಿಯಲ್ಲಿ ದೇಹವಿದ್ದು, ರಕ್ತಸ್ರಾವವಾಗಿರುವುದು ಅನುಮಾನಕ್ಕೆ ಎಡೆಮಾಡಿಕೊಟ್ಟಿರುವುದರಿಂದ ಮೃತ ದೇಹವನ್ನು ಮರಣೊತ್ತರ ಪರೀಕ್ಷೆಗಾಗಿ ಹಾಸನದ ಆಸ್ಪತ್ರೆಗೆ ರವಾನಿಸಲಾಯಿತು. ಮೃತ ಪಟ್ಟಿರುವ ಸಮಯ ಮತ್ತು ದಿನ ದೃಢಪಟ್ಟಿಲ್ಲ. ಮೃತರಿಗೆ ತಾಯಿ, ಇಬ್ಬರು ಅಣ್ಣಂದಿರು ಮತ್ತು ಅಕ್ಕ ಇದ್ದಾರೆ. ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದಲ್ಲಿನ ಎಲ್ಲಾ ಆಧ್ಯಾತ್ಮಿಕ ಕಾರ್ಯಕ್ರಮಗಳಲ್ಲೂ ಮಂಚೂಣಿಯಲ್ಲಿದ್ದು ಮನೆ ಮಾತಾಗಿದ್ದರು ನಾಗರಾಜ ಕೋಟೆಕಾರ್, ಅನೇಕ ವರ್ಷಗಳಿಂದ ಸಮೀಪದ ಹಂಡ್ರಂಗಿ ಪ್ರೌಢಶಾಲೆಯಲ್ಲಿ ಸಹ ಶಿಕ್ಷಕನಾಗಿ ಮತ್ತು ಮರ್ನಾಲ್ಕು ವರ್ಷಗಳಿಂದ ಸಿದ್ದಾಪುರ ಗೇಟ್ ಶಾಲೆಯ ಮುಖ್ಯ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದರು.

ಕರ್ತವ್ಯಲೋಪ : ಕಿರಿಯ ಆರೋಗ್ಯ ನಿರೀಕ್ಷಕ ಅಮಾನತು

ಹಾಸನ: ಕರ್ತವ್ಯ ಲೋಪ ಆರೋಪ ಹಿನ್ನೆಲೆಯಲ್ಲಿ ಹಾಸನ ಮಹಾನಗರ ಪಾಲಿಕೆ ಕಿರಿಯ ಆರೋಗ್ಯ ನಿರೀಕ್ಷಕ ಆದಿಶ್ ಕುಮಾರ್ ಅವರನ್ನು ಸೇವೆ ಯಿಂದ ಅಮಾನತುಗೊಳಿಸಲಾಗಿದೆ. ಈ ಸಂಬಂಧ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಬರೆದಿದ್ದ ಪತ್ರದ ಹಿನ್ನೆಲೆಯಲ್ಲಿ ರಾಜ್ಯ ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕರು ಅಮಾನತು ಮಾಡಿ ಆದೇಶ ಹೊರಡಿಸಿದ್ದಾರೆ. ಪಾಲಿಕೆ ಆರೋಗ್ಯ ನಿರೀಕ್ಷಕರಾದ ಎಸ್.ಎನ್.ಪ್ರಸಾದ್ ಮತ್ತು ಕಿರಿಯ ಆರೋಗ್ಯ ನಿರೀಕ್ಷಕ, ಮೂಲತಃ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ನಿಯೋಜನೆಗೊಂಡಿರುವ ಆದೀಶ್ ಕುಮಾರ್ ಇವರು ಸರ್ಕಾರಿ ವಾಹನ ಉಪಯೋಗಿಸಿಕೊಂಡು ಪಾನಮತ್ತರಾಗಿ ಸಾರ್ವಜನಿಕ ಪ್ರದೇಶದಲ್ಲಿರುವ ವಿಡಿಯೋಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ್ದವು. ಇದನ್ನು ಆಧರಿಸಿ ಪ್ರಸಾದ್ ಹಾಗೂ ಆದೀಶ್ ಅವರನ್ನು ಆಯುಕ್ತ ಬಿಡುಗಡೆ ಮಾಡಿರುವುದರಿಂದ ಇವರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳುವ ಬಗ್ಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿತ್ತು.



ಬೇಲೂರು ಕೋಟೆ ಶ್ರೀ ಶೃಂಗೇರಿ ಶಾರದಾ ಶಂಕರ ಮಠದಲ್ಲಿ ಗಾಯತ್ರಿ ಭಜನಾ ಮಂಡಲಿಯಿಂದ ತ್ಯಾಗರಾಜರ ಜಯಂತಿ ಹಾಗೂ ಪುರಂದರದಾಸರ ಆರಾಧನೆ ಹಾಗೂ ಕೀರ್ತನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ತ್ಯಾಗರಾಜರಿಗೆ ಶ್ರೀರಾಮನ ದರ್ಶನ

ಬೇಲೂರು: ಪಟ್ಟಣದ ಕೋಟೆ ಶ್ರೀ ಶೃಂಗೇರಿ ಶಾರದಾ ಶಂಕರ ಮಠದಲ್ಲಿ ಗಾಯತ್ರಿ ಭಜನಾ ಮಂಡಳಿಯಿಂದ ತ್ಯಾಗರಾಜರ ಜಯಂತಿ ಹಾಗೂ ಪುರಂದರದಾಸರ ಆರಾಧನೆ ಹಾಗೂ ಕೀರ್ತನ ಕಾರ್ಯಕ್ರಮವನ್ನು ಹಮ್ಮಿ ಕೊಳ್ಳಲಾಗಿತ್ತು.

ಈ ಸಂದರ್ಭ ಗಾಯತ್ರಿ ಭಜನಾ ಮಂಡಳಿ ಅಧ್ಯಕ್ಷೆ ಶಾರದಮ್ಮ ಮಾತನಾಡಿ, ಶ್ರೀ ರಾಮನ ಅನುಗ್ರಹಕ್ಕೆ ತ್ಯಾಗರಾಜರು ಪಾತ್ರರಾಗಿದ್ದರು. ತ್ಯಾಗರಾಜರು ಶ್ರೀರಾಮನನ್ನುದರ್ಶಿಸಿ ತನ್ನನ್ನು ತಾನು ಸಮರ್ಪಣೆ ಮತ್ತು ತ್ಯಾಗವನ್ನು ಮಾಡಿ ಕೊಂಡ ಪರಿಣಾಮ ತ್ಯಾಗ ರಾಜರಿಗೆ ಶ್ರೀ ರಾಮನ ದರ್ಶನವಾಯಿತು. ಶ್ರೀಕೃಷ್ಣನ ಅನುಗ್ರಹಕ್ಕೆ ಪಾತ್ರರಾದ ದಾಸ ಶ್ರೇಷ್ಠ ಪುರಂದರ ದಾಸರು, ಸಂಗೀ ತಕ್ಕೆ ತಮ್ಮನ್ನು ತಾವು ಸಂಪೂರ್ಣ ಸಮರ್ಪಣೆ ಮಾಡಿಕೊಂಡು ಸಂಗೀತದ ಪಿತಾಮಹ ಎಂದು ಬಿರು ದಾಂಕಿತರಾದರು. ಈ ಆರಾಧನೆ ಅವರಿಗೆ ಸಲ್ಲಿಸುವ ಕೃತಜ್ಞತೆ ಅಲ್ಲ, ಇದು ವೇದೋಪಾಸನೆ, ಸಂಸ್ಕಾರ-ಸಂಸ್ಕೃತಿಯ ಉಪಾಸನೆ ಆಗಿದ್ದು ನಮ್ಮ ಭಾರತದ ಭವ್ಯ ಪರಂಪರೆ ಯಲ್ಲಿ ಸಾಂಸ್ಕೃತಿಕ ವ್ಯವ ಸ್ಥೆಯಲ್ಲಿ ತೊಡಗಿಸಿಕೊಂ ಡಿದೆ ಎಂದು ಹೇಳಿದರು.

ಭಜನಾ ಮಂಡಳಿಯ ವಿನುತ, ರತ್ನಮಾಲ ಮಾತನಾಡಿ ಪುರಂದರ ದಾಸರು ಭಕ್ತಿ ಚಳುವಳಿಯ ಗಾಯ ಕರಾಗಿ ಮತ್ತು ಸಂಗೀತ ವಿದ್ವಾಂಸರಾಗಿ ದಾಸ ಸಾಹಿತ್ಯ ರಚನೆಗೆ ಹೆಸರು ವಾಸಿಯಾಗಿದ್ದಾರೆ ಎಂದರು. ಶ್ರೀ ಗಾಯತ್ರಿ ಭಜನಾ ಮಂಡಳಿಯ ಸದಸ್ಯರು ತ್ಯಾಗರಾಜರ ಹಾಗೂ ಪುರಂದರದಾಸರ ಕೀರ್ತನೆಗಳನ್ನು ಹಾಡಿದರು. ಶ್ರೀವಿದ್ಯಾ ಮತ್ತು ಹೇಮಾ, ರಘೋತ್ತಮ ಅವರ ಖಂಜರ ದೊಂದಿಗೆ ತ್ಯಾಗರಾಜರ ಪಂಚರತ್ನ ಕೃತಿಯನ್ನು ಪ್ರಸ್ತುತ ಪಡಿಸಿದರು.



ಅರಸೀಕೆರೆ ನಗರದ ದಿ ರೈಲ್ವೆ ಕೋ ಆಪರೇಟಿವ್ ಬ್ಯಾಂಕ್ ನಿ. ಅರಸೀಕೆರೆ ಶಾಖೆ ವತಿಯಿಂದ ಮಂಡ್ಯ ಜಿಲ್ಲೆಯಲ್ಲಿ ತೆರೆದಿರುವ ಮಾಹಿತಿ ಕೇಂದ್ರವನ್ನು ಕೇಂದ್ರ ಭಾರೀ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಉದ್ಘಾಟಿಸಿದರು.

ಉಸ್ತುವಾರಿ ಸಮಿತಿ ಸಭೆಯಲ್ಲಿ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಸೂಚನೆ ಕೆ.ಎಸ್.ಲತಾ ಕುಮಾರಿ ಸೂಚನೆ

ನಿಗದಿತ ಸಮಯದಲ್ಲಿ ಮಾತ್ರ ಮದ್ಯ ಮಾರಾಟ

ಹಾಸನ: ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಜನರು ವಾಸಿಸುವ ಸ್ಥಳ ಸೇರಿದಂತೆ ಜಿಲ್ಲೆಯ ಎಲ್ಲಾ ಮದ್ಯದ ಅಂಗಡಿಗಳು ನಿಗದಿತ ಸಮಯದಲ್ಲಿ ಮಾತ್ರ ಮದ್ಯ ಮಾರಾಟ ಮಾಡಬೇಕು, ಮತ್ತು ಅಕ್ರಮವಾಗಿ ಮದ್ಯ ಮಾರಾಟ ಮಾಡಿದ ಪ್ರಕರಣಗಳು ಕಂಡು ಬಂದರೆ ಪರವಾನಿಗೆ ರದ್ದುಪಡಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಕೆ.ಎಸ್.ಲತಾ ಕುಮಾರಿ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೋಮವಾರ ಅನುಸೂಚಿತ ಜಾತಿ/ಅನುಸೂಚಿತ ಪಂಗಡಗಳ (ದೌರ್ಜನ್ಯ ನಿಯಂತ್ರಣ) ನಿಯಮಗಳ ಜಿಲ್ಲಾ ಮಟ್ಟದ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸಭೆ ನಡೆಸಿ ಮಾತನಾಡಿದರು. 18 ವರ್ಷದೊಳಗಿನ ಮಕ್ಕಳನ್ನು ಮದ್ಯ ಖರೀದಿಗೆ ಬಳಸಿಕೊಳ್ಳುವುದರಿಂದ ಮಕ್ಕಳ ಮೇಲೆ ಪರಿಣಾಮ ಬೀರಬಹುದು ಮದ್ಯಕ್ಕೆ ಬಲಿಯಾಗಿ ಶಿಕ್ಷಣ, ಅಪರಾಧಕ್ಕೆ ಬಲಿಯಾಗುವ ಸಾಧ್ಯತೆಗಳಿವೆ ಆದ್ದರಿಂದ ಎಲ್ಲಾ ಮದ್ಯದ ಅಂಗಡಿಗಳಿಗೂ ಕಡ್ಡಾಯವಾಗಿ ಸೂಚನೆ ನೀಡಬೇಕು ಎಂದರು.

ಸಮಿತಿ ಸದಸ್ಯರಾದ ಸಂದೇಶ್, ಮರಿ ಜೋಸೆಫ್, ಮಲ್ಲೇಶ್ ಅಂಬುಗ ಅವರು ಮಾತನಾಡಿ ,ಜಿಲ್ಲೆಯಲ್ಲಿ ಹಲವು ಮದ್ಯದ ಅಂಗಡಿಗಳಲ್ಲಿ ಬೆಳಗ್ಗೆ 7.30 ಗಂಟೆ ಯಿಂದಲೇ ಮಾರಾಟ ಪ್ರಾರಂಭ ಮಾಡುತ್ತಾರೆ ಎಂದು ಆರೋಪಿಸಿದರು ಜಿಲ್ಲಾಧಿಕಾರಿಯವರು ತನಿಖಾ ತಂಡವನ್ನು ನೇಮಿಸಿ, ಪರಿಶೀಲಿಸಿ ವರದಿ ಸಲ್ಲಿಸಬೇಕು ಹಾಗೂ ಅಂತಹ ಮದ್ಯ ಅಂಗಡಿಗಳಿಗೆ ದಂಡ ವಿಧಿಸುವಂತೆ ಅಬಕಾರಿ ಇಲಾಖೆ ಅಧಿಕಾರಿ ಗಳಿಗೆ ಸೂಚಿಸಿದರು.

ಹಾಸನ ತಾಲೂಕಿನ ಕಡವರಹಳ್ಳಿ ಗ್ರಾಮದ ಜೀತ ವಿಮುಕ್ತಿರಿಗೆ ಭೂಮಿ ನೀಡುವ ಕುರಿತು ಕೂಡಲೇ ಸ್ಥಳ ಪರಿಶೀಲಿಸಿ ಸರ್ವೇ



ಕಾರ್ಯ ಮುಕ್ತಾಯಗೊಳಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ತಹಶೀಲ್ದಾರ್ ಅವರಿಗೆ ಸೂಚಿಸಿದರು.

ಸಕಲೇಶಪುರ ಕಾಡು ವ್ಯಾಪ್ತಿಯಲ್ಲಿ ವಾಸವಿರುವ ಪರಿಶಿಷ್ಟ ಪಂಗಡದ ಹಕ್ಕಿಪಿಕ್ಕಿ ಹಲಸರು,ಮಲೇರು, ಮಲೇರು ಜನಾಂಗದವರಿಗೆ ರಸ್ತೆ ಇನ್ನಿತರ ಸೌಲಭ್ಯಗಳು ಪರಿಶೀಲಿಸಿ ವರದಿ ಸಲ್ಲಿಸಬೇಕು ಹಾಗೂ ಸೌಲಭ್ಯ ಒದಗಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ತಿಳಿಸಿದರು. ಹಕ್ಕಿಪಿಕ್ಕಿ ಸಮುದಾಯಕ್ಕೆ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ನಿವೇಶನ ಹಂಚಿಕೆಗೆ 8 ಎಕರೆ ಜಾಗಕ್ಕೆ ಮೊದಲು ತಂತಿಬೇಲಿ ಆಗಬೇಕು, ಸಮಾಜ ಕಲ್ಯಾಣ ಇಲಾಖೆಯ ಆಸ್ತಿಯನ್ನು ಎಂದು ನಾಮಫಲಕಾಕುಂತ ಸೂಚಿಸಿದರು.

ಹೇಮಾವತಿಜಲಾಶಯದಹಿನ್ನೀರಿನಲ್ಲಿಮುಳುಗಡೆಯಾಗಿರುವ ಸಂತ್ರಸ್ತರ ಪುನರ್ ವಸತಿ ಕಾಲೋನಿಗೆ ಭೇಟಿ ನೀಡಿ ಪರಿಶೀಲನೆ ಕಂದಾಯ ಗ್ರಾಮಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಸಮಿತಿಯ ಸದಸ್ಯರಾದ ಶಿವಮ್ಮ, ಬೈರೇಶ್ ಶಿವಪ್ಪ ನಾಯಕ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿಧಿ, ಜಿಲ್ಲಾ ಪಂಚಾಯಿತಿಯ ಉಪ ಕಾರ್ಯದರ್ಶಿ ಕೃಷ್ಣಮೂರ್ತಿ, ಜಂಟಿ ಕೃಷಿ ನಿರ್ದೇಶಕರಾದ ರಮೇಶ್, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರಾದ ಧೂದ್ ಫೀರ್ ಹಾಗೂ ಮತ್ತಿತರ ಜಿಲ್ಲಾ ಮಟ್ಟದ ಅಧಿಕಾರಿಗಳಿದ್ದರು.

ಗಿಡಮೂಲಿಕೆ ಬೆಳೆಯಲು 3 ಎಕರೆ ಜಮೀನು

ಸಕಲೇಶಪುರ ತಾಲೂಕಿನ ಹುಲ್ಲಹಳ್ಳಿ ಗ್ರಾಮದ ಸರ್ವೇ ನಂಬರ್ 16 ರಲ್ಲಿನ ಗೋಮಾಳದ 3 ಎಕರೆ ಜಮೀನನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಸಮಾಜ ಕಲ್ಯಾಣ ಇಲಾಖೆಗೆ ಮಂಜೂರು ಮಾಡಿ ಪರಿಶಿಷ್ಟ ವರ್ಗಗಳ ಬುಡಕಟ್ಟು ಸಮುದಾಯ ಹಲಸರು ಟ್ರಸ್ಟ್‌ಗೆ ಗಿಡಮೂಲಿಕೆಗಳು ಬೆಳೆಯಲು ನೀಡಲು ಕ್ರಮ ವಹಿಸಲು ಜಿಲ್ಲಾಧಿಕಾರಿ ಕೆ.ಎಸ್. ಲತಾ ಕುಮಾರಿ ಸೂಚಿಸಿದರು.

ಬೋರ್‌ವೆಲ್‌ಗೆ ವಿದ್ಯುತ್ ಸಂಪರ್ಕಕ್ಕೆ ಸೂಚನೆ

ಡಾ. ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ವತಿಯಿಂದ ಗಂಗಾ ಕಲ್ಯಾಣ ಯೋಜನೆ ಅಡಿ ಬೋರ್ ವೆಲ್‌ಗಳನ್ನು ಕೊರೆದಿದ್ದು, ಚೆಸ್ಕಾಂ ಇಲಾಖೆಯಿಂದ ವಿದ್ಯುತ್ ಸಂಪರ್ಕ ಕಲ್ಪಿಸಿರುವುದಿಲ್ಲ ಎಂದು ಸಮಿತಿಯ ಸದಸ್ಯರು ಸಭೆ ಗಮನಕ್ಕೆ ತಂದರು ಅದಕ್ಕೆ ಪ್ರತಿಕ್ರಿಸಿದ ಜಿಲ್ಲಾಧಿಕಾರಿಗಳು ಕೂಡಲೇ ಸಂಪರ್ಕ ಕಲ್ಪಿಸಬೇಕು ಇಲ್ಲದಿದ್ದಲ್ಲಿ ಕಾಯ್ದೆ ಅಡಿಯಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದರು.

ಶಿಕ್ಷಣದಿಂದ ಮಾತ್ರ ಬದಲಾವಣೆ ಸಾಧ್ಯ: ಜಯಕುಮಾರ್



ಕೊಣನೂರು: ಶಿಕ್ಷಣವನ್ನು ಹೆಚ್ಚುಗೊಳಿಸಿದಷ್ಟು ಎಲ್ಲಾ ಕ್ಷೇತ್ರಗಳಲ್ಲಿ ಸುಧಾರಣೆ ಕಾಣಲು ಸಾಧ್ಯವಾಗುತ್ತದೆ. ಅದ್ದರಿಂದ ಶಿಕ್ಷಣದತ್ತ ವಿದ್ಯಾರ್ಥಿಗಳು ಹೆಚ್ಚು ಗಮನ ಹರಿಸಬೇಕು ಎಂದು ಪತ್ರಕರ್ತರಾದ ಜಯಕುಮಾರ್ ತಿಳಿಸಿದರು.

2025-26 ನೇ ಸಾಲಿನ 10 ನೇ ತರಗತಿಯ ವಿದ್ಯಾರ್ಥಿಗಳಿಗೆ ಹಿಂದುಳಿದ ವರ್ಗಗಳ ಇಲಾಖೆಯ ವಿದ್ಯಾರ್ಥಿನಿಲಯದಲ್ಲಿ ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಮಾತನಾಡುತ್ತಾ, ಶಿಕ್ಷಣದಿಂದ ಸಾಮಾಜಿಕ,ಅರ್ಥಿಕ ಶೈಕ್ಷಣಿಕ ಬೆಳವಣಿಗೆಗಾಗಿ ಉತ್ತಮ ಭವಿಷ್ಯ ರೂಪಿಸಿಕೊಳ್ಳುವಲ್ಲಿ ಶಿಕ್ಷಣ ಹೆಚ್ಚು ಪರಿಣಾಮಕಾರಿ ಅದ್ದರಿಂದ ವಿದ್ಯಾರ್ಥಿಗಳು ಶಿಕ್ಷಣದತ್ತ ಹೆಚ್ಚು ಗಮನ ಹರಿಸಿ ಉತ್ತಮ ಅಂಕಗಳಿಸಿ ಸಮಾಜದ ಸತ್ಪ್ರಜೆಗಳಾಗ ಬೆಕೆಂದು ತಿಳಿಸಿದರು.

ಇದೇ ವಳೇ ನಿಲಯದ ಗಣಿತ ಬೋದನಾ ಶಿಕ್ಷಕರಾದ ರವಿಕುಮಾರ್ ಮತನಾಡಿ ಪರೀಕ್ಷೇ ಎದುರಿಸುವ ಬಗ್ಗೆ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ನಿಲಯ ಪಾಲಕರಾದ ಉಮೇಶ್ ಮಾತನಾಡಿ, ನಿಲಯದಲ್ಲಿ ವಿದ್ಯಾರ್ಥಿಗಳಿಗೆ ಅದಷ್ಟು ಸೌಲಭ್ಯಗಳನ್ನು ನೀಡಿದ್ದು ನಿಲಯಕ್ಕೆ ಪೋಷಕರಿಗೆ ಕೀರ್ತಿ ತರಬೇಕು ಎಂದು ತಿಳಿಸಿದರು.

ಇದೇ ವೇಳೆ ವಿಜ್ಞಾನ ಶಿಕ್ಷಕರಾದ ಭ್ರಮಾರಂಭ ಸಿಬ್ಬಂದಿಗಳಾದ ಸಂಗೀತ,ಅರುಣ , ಪ್ರದೀಪ್ ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

ರೈಲ್ವೆ ಕೋ ಆಪರೇಟಿವ್ ಬ್ಯಾಂಕ್ ಮಾಹಿತಿ ಕೇಂದ ಉದ್ಘಾಟನೆ

ಅರಸೀಕೆರೆ: ನಗರದ ದಿ ರೈಲ್ವೆ ಕೋ ಆಪರೇಟಿವ್ ಬ್ಯಾಂಕ್ ನಿ. ಅರಸೀಕೆರೆ ಶಾಖೆ ವತಿಯಿಂದ ಮಂಡ್ಯ ಜಿಲ್ಲೆಯಲ್ಲಿ ತೆರೆದಿರುವ ಮಾಹಿತಿ ಕೇಂದ್ರವನ್ನು ಕೇಂದ್ರ, ಕೇಂದ್ರ ಭಾರೀ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಕಳೆದ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ದಿ ರೈಲ್ವೆ ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷರಾದ ಸಹಕಾರ ರತ್ನ ಡಾ.ಎಂ.ಬಿ. ಮಂಜೇಗೌಡ, ಉಪಾಧ್ಯಕ್ಷರಾದ ಡಾ.ಎಸ್. ಆನಂದ್, ಆಡಳಿತ ಮಂಡಳಿಯ ಎಲ್ಲಾ ನಿರ್ದೇಶಕರು, ಬ್ಯಾಂಕಿನ ಸದಸ್ಯರು, ಶೇವಣಿದಾರರು, ಮುಖ್ಯ ಕಾರ್ಯನಿರ್ವಹಣಾಧಿಕಾರಿ ನಾರಾಯಣ್ ಎಸ್. ಜೆ, ಜನರಲ್ ಮ್ಯಾನೇಜರ್‌ಗಳಾದ ಲಕ್ಷ್ಮೀ ಪ್ರಸಾದ್ ಮತ್ತು ಸತ್ಯನಾರಾಯಣ ಹಾಗೂ ಬ್ಯಾಂಕಿನ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಗೃಹ ಬಳಕೆ ಸಿಲಿಂಡರ್ ವಾಣಿಜ್ಯಕ್ಕೆ ಬಳಕೆ: ಅಧಿಕಾರಿಗಳಿಂದ ದಾಳಿ

ಹಾಸನ: ಇರಾನ್-ಇಸ್ರೇಲ್ ನಡುವೆ ಮುಂದುವರಿದ ಯುದ್ಧದಿಂದ ಹೋಟೆಲ್‌ಗಳು ಹಾಗೂ ಬೇಕರಿಗಳು ವಾಣಿಜ್ಯ ಬಳಕೆ ಸಿಲಿಂಡರ್‌ಗಳ ಬದಲು ಗೃಹ ಬಳಕೆ ಸಿಲಿಂಡರ್ ಬಳಕೆ ಮಾಡುತ್ತಿದ್ದು, ಈ ವೇಳೆ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಅಧಿಕಾರಿಗಳು ದಾಳಿ ನಡೆಸಿದ್ದಾರೆ.

ಆಹಾರ ನಿರೀಕ್ಷಕಿ ಶುಭಶ್ರೀ ಅರಸೀಕೆರೆ ಪಟ್ಟಣದಶ್ರೀಲಕ್ಷ್ಮೀವೆಂಕಟೇಶ್ವರಕೇಕ್‌ಪ್ಯಾಲೇಸ್ ಮೇಲೆ ದಾಳಿ ನಡೆಸಿ ಗೃಹ ಬಳಕೆಯ ಎರಡು ತುಂಬಿದ, ಒಂದು ಖಾಲಿ ಸಿಲಿಂಡರ್ ಹಾಗೂ ರೆಗ್ಯೂಲೇಟರ್ ವಶಮಾಡಿಕೊಂಡಿದ್ದಾರೆ. ಅರಸೀಕೆರೆ ನಗರ ಪೊಲೀಸ್ ಠಾಣೆಯಲ್ಲಿ ಸೋಮಶೇಖರ್ (35) ಎಂಬುವವರ ವಿರುದ್ಧ ಪ್ರಕರಣ ದಾಖಲು ಮಾಡಲಾಗಿದೆ.

ಹಾಸನ ನಗರದಲ್ಲೂ ಆಹಾರ ಮತ್ತು ನಾಗರೀಕಸರಬರಾಜುಇಲಾಖೆಆಹಾರನಿರೀಕ್ಷಕ ಜಗನ್ನಾಥ್ ನೇತೃತ್ವದಲ್ಲಿ ಅಧಿಕಾರಿಗಳು ಗಜಾನನ ಹಾಗೂ ಅಲ್ ಅಮೀನ್ ಹೋಟೆಲ್‌ಗಳ ಮೇಲೆ ದಾಳಿ ನಡೆಸಿದ್ದಾರೆ. ಎರಡು ಗೃಹಬಳಕೆಯ ಸಿಲಿಂಡರ್‌ಗಳನ್ನು ವಶಕ್ಕೆ ಪಡೆದ ಅಧಿಕಾರಿಗಳು ಕ್ರಮ ಕೈಗೊಂಡಿದ್ದಾರೆ.



ಕ್ಷೇತ್ರ ಶಿಕ್ಷಣಾಧಿಕಾರಿ ಜಿ.ಎನ್. ಸೋಮಲಿಂಗೇಗೌಡ ಹೇಳಿಕೆ

ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ತಾಲೂಕು ಆಡಳಿತ ಸನ್ನದ್ಧ

ಹೊಳೆನರಸೀಪುರ: ಮಾರ್ಚ್/ಏಪ್ರಿಲ್-2026ರ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳನ್ನು ಸುಸೂತ್ರವಾಗಿ ಮತ್ತು ಪಾರದರ್ಶಕವಾಗಿ ನಡೆಸಲು ಹೊಳೆ ನರಸೀಪುರ ತಾಲ್ಲೂಕು ಶಿಕ್ಷಣ ಇಲಾಖೆ ಎಲ್ಲಾ ಪೂರ್ವ ಸಿದ್ಧತೆಗಳನ್ನು ಪೂರ್ಣಗೊಳಿಸಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಜಿ.ಎನ್. ಸೋಮಲಿಂಗೇಗೌಡ ಅವರು ತಿಳಿಸಿದರು.

ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯಲ್ಲಿ ಮಾಧ್ಯಮ ಮಿತ್ರರೊಂದಿಗೆ ಮಾತನಾಡಿದ ಅವರು, ಪರೀಕ್ಷಾ ಕೇಂದ್ರಗಳ ವಿವರ ಹಾಗೂ ಕೈಗೊಳ್ಳಲಾಗಿರುವ ಭದ್ರತಾ ಕ್ರಮಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಹಂಚಿಕೊಂಡರು.

ಈ ಬಾರಿ ತಾಲ್ಲೂಕಿನ ಒಟ್ಟು 2213 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದಾರೆ.

ಬಾಲಕರು: 1096,**ಬಾಲಕಿಯರು:** 1117, **ಶಾಲಾ ವಿದ್ಯಾರ್ಥಿಗಳು:** 2080,**ಪುನರಾವರ್ತಿತ ಅಭ್ಯಾರ್ಥಿಗಳು:** 87, **ಖಾಸಗಿ ಅಭ್ಯಾರ್ಥಿಗಳು:** 46, 09 **ಪರೀಕ್ಷಾ ಕೇಂದ್ರಗಳು ಮತ್ತು**



ಪ್ರಶ್ನೆಪತ್ರಿಕೆಗಳ ರಕ್ಷಣೆ

ಕರ್ನಾಟಕ ಪರೀಕ್ಷಾ ಮಂಡಳಿಯಿಂದ ಈಗಾಗಲೇ ಪ್ರಶ್ನೆಪತ್ರಿಕೆಗಳು ಸರಬರಾಜಾಗಿದ್ದು, ಅವುಗಳನ್ನು ತಾಲ್ಲೂಕು ಉಪಖಜಾನೆಯ ಭದ್ರತಾ ಕೊಠಡಿಯಲ್ಲಿ ಸುರಕ್ಷಿತವಾಗಿ ಇರಿಸಲಾಗಿದೆ. ಉತ್ತರ ಪತ್ರಿಕೆ ಹಾಗೂ ಇತರೆ ಗೌಪ್ಯ ಸಾಮಗ್ರಿಗಳನ್ನು ಈಗಾಗಲೇ ಕೇಂದ್ರಗಳಿಗೆ ವಿತರಿಸಲಾಗಿದೆ.

ಮೂಲಸೌಕರ್ಯ: ತಾಲ್ಲೂಕಿನಾದ್ಯಂತ ಒಟ್ಟು 09 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದ್ದು, ಪ್ರತಿ ಕೇಂದ್ರದಲ್ಲಿ ಕುಡಿಯುವ ನೀರು, ಶೌಚಾಲಯ ಹಾಗೂ ಸುಸಜ್ಜಿತ ಆಸನದ ವ್ಯವಸ್ಥೆ ಮಾಡಲಾಗಿದೆ. ಪ್ರತಿಯೊಂದು ಪರೀಕ್ಷಾ ಕೇಂದ್ರವೂ ಸಿ.ಸಿ.ಟಿ.ವಿ ಕ್ಯಾಮೆರಾ ಕಣ್ಗಾವಲಿನಲ್ಲಿರಲಿದ್ದು, ಪಾರದರ್ಶಕತೆಗೆ ಹೆಚ್ಚಿನ ಒತ್ತು ನೀಡಲಾಗಿದೆ.

ಭದ್ರತೆ: ಪರೀಕ್ಷಾ ಕೇಂದ್ರಗಳ ಸುತ್ತಮುತ್ತ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲು ಮನವಿ ಮಾಡಲಾಗಿದೆ.

ಆರೋಗ್ಯ: ತುರ್ತು ಚಿಕಿತ್ಸೆಗಾಗಿ ಪ್ರತಿ ಕೇಂದ್ರದಲ್ಲಿ ಫಾರ್ಮಸಿಸ್ಟ್, ಆಶಾ ಕಾರ್ಯಕರ್ತೆಯರು ಅಥವಾ ಆರೋಗ್ಯ ಸಹಾಯಕರು ಲಭ್ಯವಿರುವಂತೆ ಆರೋಗ್ಯ ಇಲಾಖೆಗೆ ಕೋರಲಾಗಿದೆ.

ನಿಗಾ: ಪ್ರತಿ ದಿನ ಪರೀಕ್ಷಾ ಕೇಂದ್ರಕ್ಕೆ ಒಬ್ಬರು ಸ್ಥಾನಿಕ ಜಾಗೃತದಳ ಹಾಗೂ ಮೊಬೈಲ್ ಸ್ವಾಧೀನಾಧಿಕಾರಿಗಳನ್ನು ನೇಮಿಸಲಾಗಿದೆ.

ಪರೀಕ್ಷಾ ಅಕ್ರಮ ತಡೆಯಲು ಹಾಗೂ ವ್ಯವಸ್ಥಿತವಾಗಿ ಪರೀಕ್ಷೆ ನಡೆಸಲು ಈಗಾಗಲೇ ತಹಸಿಲ್ದಾರ್‌ರವರ ಅಧ್ಯಕ್ಷತೆಯಲ್ಲಿ ತಾಲ್ಲೂಕು ಮಟ್ಟದ ಅಧಿಕಾರಿಗಳ ಸಭೆ ನಡೆಸಲಾಗಿದೆ.

ದತ್ತು ಪ್ರಕ್ರಿಯೆ ಕುರಿತು ಅರಿವು ಕಾರ್ಯಕ್ರಮ ಡಿಸಿ ಕೆ.ಎಸ್.ಲತಾಕುಮಾರಿ ಹೇಳಿಕೆ

ಕಾನೂನುಬಾಹಿರ ದತ್ತು ಪ್ರಕ್ರಿಯೆ ಸಾಮಾಜಿಕ ಪಿಡುಗು

ಹಾಸನ: ಕಾನೂನು ಬಾಹಿರ ಮತ್ತು ಪ್ರಕ್ರಿಯೆ ಒಂದು ಸಮಾಜಿಕ ಪುಡುಗಾಗಿದೆ. ಮಗುವನ್ನು ದತ್ತು ಪಡೆಯಬೇಕು ಎಂದರೇ ಕಾನೂನುನಾತ್ಮಕವಾಗಿ ನಿಯ ಮನುಸಾರವಾಗಿ ಪಡೆಯಬೇಕು ಎಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ತಿಳಿಸಿದರು.

ನಗರದ ಹಾಸನಾಂಭ ಕಲಾಕ್ಷೇತ್ರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಪೊಲೀಸ್ ಇಲಾಖೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ವತಿಯಿಂದ ಸೋಮವಾರ ನಡೆದ ದತ್ತು ಪ್ರಕ್ರಿಯೆ ಕುರಿತು ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಮಗುವಿನ ಜೀವನ ಪರಿಪೂರ್ಣ ಹೊಂದಲು ಕುಟುಂ ಬದ ಪಾತ್ರ ತುಂಬಾ ಮುಖ್ಯ, ಗರ್ಭದಲ್ಲಿ ಮಗುವನ್ನು ಬೆಳೆಸುವುದು ಕಷ್ಟವಲ್ಲ ಹೊರಗಿನ ಜಗತ್ತಿನಲ್ಲಿ ಮಗು ವನ್ನು ಬೆಳೆಸುವ ಪೋಷಕರ ಜವಾಬ್ದಾರಿ ತುಂಬಾ ಕಷ್ಟಕರವಾಗಿದೆ. ಪೋಷಕರಲ್ಲಿ ಸಾಮಾಜಿಕ ಪರಿವರ್ತನೆ ದಿನದಿಂದ ದಿನಕ್ಕೆ ಹೆಚ್ಚುಗುತ್ತಿದ್ದು, ಮಕ್ಕಳು ಇಲ್ಲದೆ ಇರುವ ಕುಟುಂಬಗಳನ್ನು ಸಮಾಜ ಸಮಾಜಿಕವಾಗಿ ಕೀಳಾಗಿ ನೋಡುವಂತಹ ಪರಿಸ್ಥಿತಿ ಎದುರಾಗಿದೆ ಎಂದರು.

ದತ್ತು ಮಕ್ಕಳನ್ನು ಪಡೆಯುವುದಕ್ಕೆ ಕೇಂದ್ರ ಸರ್ಕಾರದಲ್ಲಿ ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರ ಎಂಬ ಒಂದು ಸಂಸ್ಥೆಯನ್ನು ರಚನೆ ಮಾಡಲಾಗಿದೆ. ಮಗುವನ್ನು ದತ್ತು ಪಡೆಯಬೇಕು ಎಂದರೇ ಕಾನೂನುನಾ ತ್ಮಕವಾಗಿ ನಿಯಮನುಸಾರ ನೋಂದಣಿ



ಮಾಡಬೇಕು, ನೋಂದಣಿ ಮಾಡಿದೆ 3-4 ವರ್?ದ ನಂತರ ಮಗುವನ್ನು ದತ್ತು ಪಡೆಯಬಹುದಾಗಿದೆ, ಮಕ್ಕಳ ರಕ್ಷಣೆ ನಮ್ಮೆಲ್ಲರ ಹೊಣೆಯಾಗಿರುತ್ತದೆ ಎಂದು ತಿಳಿಸಿದರು. ಮಕ್ಕಳ ಸಂಖ್ಯೆ ಕಡಿಮೆ ಆದರೆ ದತ್ತು ಪಡೆಯುವವರ ಸಂಖ್ಯೆ ಹೆಚ್ಚಾಗಿ ಪರಿವರ್ತನೆ ಹೊಂದುತ್ತಿದೆ. ತಾಯಿ ಆಗುವುದು ಎಂದರೆ 9 ತಿಂಗಳು ಗರ್ಭದಲ್ಲಿ ಬೆಳೆಸುವು ದಲ್ಲ, ಮಗುವಿಗೆ ಸುರಕ್ಷತಾ ಪ್ರಭುದ್ಧ ಜೀವನ ಕೊಡುವುದು, ಅಂತಹ ಕುಟುಂಬಕ್ಕೆ ಸಹಾಯಕವಾಗಿ ನಿಲ್ಲುವಂತಹ ವ್ಯವಸ್ಥೆಯೇ ದತ್ತು ಪ್ರಕ್ರಿಯೆ ಯಷ್ಟೋ ಕುಟುಂಬಗಳಿಗೆ ಬೆಳಕು ನೀಡುವಂತಹ ವ್ಯವಸ್ಥೆ ಆಗಿದೆ ಎಂದರು. ಜಿಲ್ಲಾ ಉಪಪೊಲೀಸ್ ವರಿಷ್ಠಾಧಿಕಾರಿಗಳದ ಶ್ರೀನಿಧಿ ಕಾರ್ಯ ಕ್ರಮವನ್ನು ಉದ್ದೇಶೀಸಿ ದತ್ತು ಮಕ್ಕಳನ್ನು ಪಡೆಯುವುದಕ್ಕೆ ಭಾವನಾತ್ಮಕ ಆಲೋಚನೆಗಳು ಮುಖ್ಯ ವಾಗಿವಲ್ಲ ಕಾನೂನು ಮುಖಾಂತರ ನಿಯಮಗಳನ್ನು ಪಾಲಿಸಬೇಕಾಗುತ್ತದೆ ಎಂದು ಅವರು ಮಕ್ಕಳು ಎಂದರೆ ಪ್ರತಿಯೊಬ್ಬರಿಗೂ ಇಷ್ಟ ಆದರೆ ಪ್ರೀತಿ, ಮಮತೆಯ ಜೊತೆಗೆ ಕಾನೂನು ನಿಯಮ ಪಾಲಿಸುವುದು ಮುಖ್ಯ ಎಂದರು.

ಕಾನೂನು ಸಹ ತುಂಬಾ ಮುಂದುವರೆದಿದೆ ಮಾಡುವಂತಹ ಪ್ರತಿಯೊಂದು ಕೆಲಸಗಳಲ್ಲಿಯೂ ಕಾನೂನಿನ ನ ನಿಯಮಗಳು ಇರುತ್ತವೆ ಆದರೆ ಅದನ್ನು ಗಮನ ಹರಿಸಬೇಕದದ್ದು ನಮ್ಮೆಲ್ಲರ ಜವಾಬ್ದಾರಿ ಆಗಿರುತ್ತದೆ ಎಂದರು. ಈ ವೇಳೆ ಕಾನೂನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಧಾರಾಣಿಕುಮಾರ್ ಎಂ.ಆರ್, ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿ ದಿಲೀಪ್ ಕೆ. ಜಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿ ಅನಿಲ್, ಜಿ.ಪಂ ಸಹಾಯಕ ಕಾರ್ಯದರ್ಶಿ ಸುನಿತ ಹಾಗೂ ಇತರರಿದ್ದರು.

ಗೌರವಾನ್ವಿತ ಪ್ರಧಾನ ಹಿರಿಯ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಹುಣಸೂರು.
ಅಸಲು ದಾವಾ ಸಂಖ್ಯೆ: 95/2025.
ಅರ್ಜಿದಾರರು : ಶ್ರೀಮತಿ ಲಕ್ಷ್ಮೀ ಮತ್ತು ಇತರರು.
ವಿರುದ್ಧ
ಎದುರುದಾರರು : ದೊಡ್ಡನಾಯಕ ಮತ್ತು ಇತರರು.
ಎದುರುದಾರರು 3 : ರತ್ನಮ್ಮ ಕೋಂ ಲೇಟ್ ಗುಜ್ಜಾನಾಯಕ ವಯಸ್ಸು 32 ವರ್ಷ, ವಾಸ : ನಾಯಕರ ಬೀದಿ, ಬಿಳಿಕೆರೆ ಗ್ರಾಮ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ.
ಸಾರ್ವಜನಿಕ ಪತ್ರಿಕಾ ಪ್ರಕಟಣೆ
ಈ ಮೂಲಕ ಮಾನ್ಯ ಘನ ನ್ಯಾಯಾಲಯದ ಆದೇಶದ ಮೇರೆಗೆ ಸಾರ್ವಜನಿಕವಾಗಿ ತಿಳಿಯಪಡಿಸುವುದೇನೆಂದರೆ, 3ನೇ ಪ್ರತಿವಾದಿ ರತ್ನಮ್ಮ ಕೋಂ ಗುಜ್ಜನಾಯಕ ರವರಿಗೆ ನ್ಯಾಯಾಲಯದಿಂದ ಅನೇಕ ಬಾರಿ ಸಮನ್ಸ್ ಮತ್ತು ಆರ್‌ಪಿಡಿ ಮೂಲಕ ನ್ಯಾಯಾಲಯದ ಸಮನ್ಸ್ ಅನ್ನು ನೀಡಿದ್ದರೂ ಸಹ ಸದರಿ ಅವರು ಉದ್ದೇಶ ಪೂರ್ವಕವಾಗಿ ತಳ್ಳಿಹಾಕಿರುತ್ತಾರೆ. ಆದುದ್ದರಿಂದ ನ್ಯಾಯಾಲಯದ ಸಮನ್ಸ್ ಅನ್ನು 3ನೇ ಪ್ರತಿವಾದಿಗೆ ಸಾರ್ವಜನಿಕ ಪತ್ರಿಕೆ ಪ್ರಕಟಣೆ ಮೂಲಕ ಅಂದರೆ ಹೊಸದಿಗಂತ ದಿನಪತ್ರಿಕೆ ಮೂಲಕ ನೀಡಲಾಗಿದೆ. ಸದರಿ ದಾವೆಯು ದಿನಾಂಕ: 18.04.2026 ರಂದು ನಿಗದಿಯಾಗಿರುತ್ತದೆ. ಆದುದ್ದರಿಂದ ಮೇಲ್ಕಂಡ ದಿನಾಂಕ ದಂದು ಬೆಳಿಗ್ಗೆ 11 ಗಂಟೆಗೆ ಮೇಲ್ಕಂಡ ನ್ಯಾಯಾಲಯದಲ್ಲಿ ಖುದ್ದಾಗಿ ಅಥವಾ ನಿಮ್ಮ ವಕೀಲರ ಮೂಲಕವಾಗಲಿ ಹಾಜರಾಗಿ ತಕರಾರು ಸಲ್ಲಿಸಬಹುದು. ಇಲ್ಲವಾದಲ್ಲಿ ಯಾವ ತಕರಾರು ಇಲ್ಲವೆಂದು ಪರಿಗಣಿಸಿ ಅರ್ಜಿಯನ್ನು ಘನ ನ್ಯಾಯಾಲಯವು ತೀರ್ಮಾನಿಸುತ್ತದೆ.
ನ್ಯಾಯಾಲಯದ ಅಪ್ಪಣೆಗಾಗಿ
ಶಿರಸ್ತೇದಾರರು, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಹುಣಸೂರು.
ಅರ್ಜಿದಾರರ ಪರ ವಕೀಲರು : ರುಕ್ಮಿಣಿ, ವಕೀಲರು.

ಗೌರವಾನ್ವಿತಾ 1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ಘನ ನ್ಯಾಯಾಲಯ ಅರಕಲಗೂಡು.
ಸಿ.ಮಿಸ್ ಸಂ:250/2025
ಅರ್ಜಿದಾರರು: ಮೋಕ್ಷ ಕೋಂ ಪಾಂಡುರಂಗ, ಸುಮಾರು 42 ವರ್ಷ,ವಾಸ : ಹನ್ಯಾಳು ಗ್ರಾಮ,ರಾಮನಾಥಪುರ ಹೋಬಳಿ,ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ.
:ವಿರುದ್ಧ :
ರೆಸ್ಪಾಂಡೆಂಟರು:: ತಹಸೀಲ್ದಾರರವರು, ಜನನ ಮತ್ತು ಮರಣ ನೊಂದಣಾಧಿಕಾರಿ ತಾಲ್ಲೂಕು ಕಚೇರಿ, ಅರಕಲಗೂಡು.
ಪತ್ರಿಕಾ ಪ್ರಕಟಣೆ
ಅರ್ಜಿದಾರರು ಹಾಸನ ಜಿಲ್ಲೆ, ಅರಕಲಗೂಡು ತಾಲ್ಲೂಕು, ರಾಮನಾಥಪುರ ಹೋಬಳಿ, ಹನ್ಯಾಳು ಗ್ರಾಮದಲ್ಲಿ ವಾಸವಾಗಿರುವ, ಅರ್ಜಿದಾರರ ಯಾಜಮಾನರಾದ ಪಾಂಡುರಂಗ ಬಿನ್ ನಾಗರಾಜು ರವರು ದಿನಾಂಕ:11/02/2015 ರಲ್ಲಿ ಅರ್ಜಿದಾರರ ಗ್ರಾಮವಾದ ಅರಕಲಗೂಡು ತಾಲ್ಲೂಕು, ರಾಮನಾಥಪುರ ಹೋಬಳಿ, ಹನ್ಯಾಳು ಗ್ರಾಮದಲ್ಲಿ ಮೃತರಾಗಿರುತ್ತಾರೆಂದು ಮೃತರ ಮರಣ ದೃಢೀಕರಣ ಪತ್ರ ಕೋರಿ ಅರಕಲಗೂಡು 1ನೇ ಹೆಚ್ಚುವರಿ ನ್ಯಾಯಾಲಯ ಜೆ.ಎಂ.ಎಫ್.ಸಿ.ರವರ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಯಾಜಮಾನರಾದ ಪಾಂಡುರಂಗ ಬಿನ್ ನಾಗರಾಜು ರವರು ದಿನಾಂಕ:11/02/2015 ರ ಮರಣದ ಬಗ್ಗೆ ಯಾವುದಾದರು ಆಕ್ಷೇಪಣೆ ಇದ್ದಲ್ಲಿ ಕಾರಣಗಳನ್ನು ತೋರಿಸಲು ದಿನಾಂಕ: 27.04.2026 ರಂದು ಬೆಳಿಗ್ಗೆ 11-00 ಗಂಟೆಗೆ ಆಸಕ್ತಿ ಇದ್ದರವರು ಖುದ್ದಾಗಿ ಅಗಲೀ ಅಥವಾ ವಕೀಲರ ಮೂಲಕ ಹಾಜರಾಗಬಹುದು, ತಪ್ಪಿದಲ್ಲಿ ಈ ಅರ್ಜಿಯನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು ಎಂದು ಈ ಮೂಲಕ ತಿಳಿಸಲಾಗಿದೆ.
ದಿನಾಂಕ : 12.03.2026ರಂದು ಇದನ್ನು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ನೀಡಲಾಗಿದೆ.
ನ್ಯಾಯಾಲಯದ ಅಪ್ಪಣೆಯ ಮೇರೆಗೆ
ಶಿರಸ್ತೇದಾರರು, ಗೌರವಾನ್ವಿತ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಅರಕಲಗೂಡು
ಅರ್ಜಿದಾರರ ಪರ ವಕೀಲರು
ಹೆಚ್.ಎನ್.ಅರುಣ್ ಕುಮಾರ್ ವಕೀಲರು.
ಸ್ಥಳ: ಅರಕಲಗೂಡು, ದಿನಾಂಕ: 12/03/2020

ಗೌರವಾನ್ವಿತಾ 1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ಘನ ನ್ಯಾಯಾಲಯ ಅರಕಲಗೂಡು.
ಸಿ.ಮಿಸ್ ಸಂ:255/2025
ಅರ್ಜಿದಾರರುಗಳು : ಯಶೋಧ ಕೋಂ ಕಾಳೇಗೌಡ, ಸುಮಾರು 60 ವರ್ಷ, 2) ಸರಸ್ವತಿ ಕೋಂ ರಾಜೇಗೌಡ,ಸುಮಾರು 57 ವರ್ಷ, 3) ರಾದೇ ಕೋಂ ಸುರೇಶ, ಸುಮಾರು 55 ವರ್ಷ 4) ಜ್ಯೋತಿ ಕೋಂ ಕೃಷ್ಣೇಗೌಡ, ಸುಮಾರು 50 ವರ್ಷ, 5) ಕೌಸಲ್ಯ ಕೋಂ ಜಯಣ್ಣ, ಸುಮಾರು 45 ವರ್ಷ ವಾಸ : ಹೊಡೆನೂರು ಗ್ರಾಮ,ಕೊಣನೂರು ಹೋಬಳಿ, ಅರಕಲಗೂಡು ತಾಲ್ಲೂರು, ಹಾಸನ ಜಿಲ್ಲೆ :: ವಿರುದ್ಧ ::
ರೆಸ್ಪಾಂಡೆಂಟರು: ತಹಸೀಲ್ದಾರರವರು, ಜನನ ಮತ್ತು ಮರಣ ನೊಂದಣಾಧಿಕಾರಿ ತಾಲ್ಲೂಕು ಕಛೇರಿ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ
ಪತ್ರಿಕಾ ಪ್ರಕಟಣೆ
ಅರ್ಜಿದಾರರು ಹೊಡೆನೂರು ಗ್ರಾಮ, ಕೊಣನೂರು ಹೋಬಳಿ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ ಅಲ್ಲಿ ವಾಸವಾಗಿರುವ ಅರ್ಜಿದಾರರುಗಳ ತಾಯಿಯಾದ ರಾಜಮ್ಮ ಕೋಂ ಲೇಟ್ ಸ್ವಾಮಿಗೌಡ, ಹೆಚ್.ವೈ.ರವರು ದಿನಾಂಕ:26/12/1998 ರಲ್ಲಿ ಅರ್ಜಿದಾರರುಗಳ ಗ್ರಾಮವಾದ ಅರಕಲಗೂಡು ತಾಲ್ಲೂಕು, ಕೊಣನೂರು ಹೊಬಳಿ, ಹೊಡೆನೂರು ಗ್ರಾಮದಲ್ಲಿ ಮೃತರಾಗಿರುತ್ತಾರೆಂದು ಮೃತರ ಮರಣ ದೃಢೀಕರಣ ಪತ್ರ ಕೋರಿ ಅರಕಲಗೂಡು 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.ರವರ 1ನೇ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ರಾಜಮ್ಮ ಕೋಂ ಲೇಟ್ ಸ್ವಾಮಿಗೌಡ.ಹೆಚ್.ವೈ. ರವರು ದಿನಾಂಕ:26/12/1998 ರ ಮರಣದ ಬಗ್ಗೆ ಸದರಿ ರಾಜಮ್ಮರವರ ವಾರಸುದಾರರು ಯಾರಾದರು ಇದ್ದಲ್ಲಿ ಏನಾದರು ಆಕ್ಷೇಪಣೆ ಇದ್ದಲ್ಲಿ ಕಾರಣಗಳನ್ನು ತೋರಿಸಲು ದಿನಾಂಕ: 19.05.2026 ರಂದು ಬೆಳಗ್ಗೆ 11-00 ಗಂಟೆಗೆ ಆಸಕ್ತಿ ಇದ್ದರವರು ಖುದ್ದಾಗಿ ಆಗಲೀ ಅಥವಾ ವಕೀಲರ ಮೂಲಕ ಹಾಜರಾಗಬಹುದು, ತಪ್ಪಿದಲ್ಲಿ ಈ ಅರ್ಜಿಯನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು ಎಂದು ಈ ಮೂಲಕ ತಿಳಿಸಲಾಗಿದೆ. ದಿನಾಂಕ 12.03.2026ರಂದು ಇದನ್ನು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ನೀಡಲಾಗಿದೆ.
ನ್ಯಾಯಾಲಯದ ಅಪ್ಪಣೆಯ ಮೇರೆಗೆ
ಶಿರಸ್ತೇದಾರರು, ಗೌರವಾನ್ವಿತಾ 1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ಅರಕಲಗೂಡು
ಅರ್ಜಿದಾರರ ಪರ ವಕೀಲರು.
ಹೆಚ್.ಎನ್.ಅರುಣ್ ಕುಮಾರ್, ವಕೀಲರು,
ಸ್ಥಳ:ಅರಕಲಗೂಡು, ದಿನಾಂಕ: 19/03/2028

ಗರಿಷ್ಠ 32° ಕನಿಷ್ಠ 19°
ಹೊಸ ದಿಗಂತ
ಮಂಗಳವಾರ 17 ಮಾರ್ಚ್ 2026

ತುಮಕೂರು



ಪ್ರಗತಿ ಪರಿಶೀಲನಾ ಸಭೆ ಚಿಕ್ಕನಾಯಕನಹಳ್ಳಿ ಪಟ್ಟಣದ ಆಡಳಿತ ಸೌಧದಲ್ಲಿ ಸೋಮವಾರ ನಡೆದ ಸಭೆಯಲ್ಲಿ ಶಾಸಕ ಸಿ.ಬಿ.ಸುರೇಶ್ ಬಾಬು ಹೇಮಾವತಿ ನಾಲಾ ಕಾಮಗಾರಿ ಪ್ರಗತಿಯ ಬಗ್ಗೆ ಪರಿಶೀಲನಾ ಸಭೆ ನಡೆಸಿದರು.

ಗೃಹಲಕ್ಷ್ಮಿ ಯೋಜನೆ ಸದ್ಬಳಕೆಯಾಗಲಿ | ೨
ಮಕ್ಕಳಲ್ಲಿ ಸಕಾರಾತ್ಮಕ ಭಾವನೆ ಇರಲಿ | ೩
ಮಹಿಳೆಯರ ಪ್ರತಿಭೆಗೆ ವೇದಿಕೆ: ಡಿಸಿ | ೪

ಕಿರುಸುದ್ದಿ

ಅಂಗನವಾಡಿ ಹುದ್ದೆ: ಆಕ್ಷೇಪಣೆ ಸಲ್ಲಿಸಲು ಅವಕಾಶ

ತುಮಕೂರು: ಜಿಲ್ಲೆಯಲ್ಲಿ ವಿವಿಧ ಕಾರಣಗಳಿಂದ ಖಾಲಿ ಇದ್ದ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಹುದ್ದೆಗಳ ಭರ್ತಿ ಸಂಬಂಧ ತಾತ್ಕಾಲಿಕವಾಗಿ ಆಯ್ಕೆಯಾಗಿರುವ ಅಭ್ಯರ್ಥಿಗಳ ಕುರಿತು ಆಕ್ಷೇಪಣೆ ಸಲ್ಲಿಸಲು ಮಾರ್ಚ್ 23ರವರೆಗೆ ಕಾಲಾವಕಾಶ ನೀಡಲಾಗಿದೆ. ಮಧುಗಿರಿ ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿ ಖಾಲಿಯಿದ್ದ 12 ಅಂಗನವಾಡಿ ಕಾರ್ಯಕರ್ತೆ ಹಾಗೂ 79 ಸಹಾಯಕಿಯರ ಹುದ್ದೆ, ತುಮಕೂರು ನಗರ ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿ ಖಾಲಿಯಿದ್ದ 4 ಅಂಗನವಾಡಿ ಕಾರ್ಯಕರ್ತೆ ಹಾಗೂ 12 ಸಹಾಯಕಿಯರ ಹುದ್ದೆ, ಕೊರಟಗೆರೆ ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿ ಖಾಲಿಯಿದ್ದ 12 ಅಂಗನವಾಡಿ ಕಾರ್ಯಕರ್ತೆ ಹಾಗೂ 89 ಸಹಾಯಕಿಯರ ಹುದ್ದೆ, ತುಮಕೂರು ಗ್ರಾಮಾಂತರ ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿ ಖಾಲಿಯಿದ್ದ 12 ಅಂಗನವಾಡಿ ಕಾರ್ಯಕರ್ತೆ ಹಾಗೂ 109 ಸಹಾಯಕಿಯರ ಹುದ್ದೆಗಳ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಲಾಗಿದೆ. ಸಾರ್ವಜನಿಕರ ಮಾಹಿತಿಗಾಗಿ ಆಯ್ಕೆ ಪಟ್ಟಿಯನ್ನು ಸಂಬಂಧಪಟ್ಟ ಅಂಗನವಾಡಿ ಕೇಂದ್ರ, ಗ್ರಾಮ ಪಂಚಾಯತಿ, ಶಾಲೆ, ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಶಿಶು ಅಭಿವೃದ್ಧಿ ಯೋಜನಾ ಕಚೇರಿಯ ನಾಮಫಲಕದಲ್ಲಿ ಪ್ರಕಟಿಸಲಾಗಿದ್ದು, ಆಕ್ಷೇಪಣೆಯನ್ನು ಆಯಾ ತಾಲ್ಲೂಕು ಶಿಶು ಅಭಿವೃದ್ಧಿ ಯೋಜನಾ ಕಚೇರಿಗೆ ಮಾರ್ಚ್ 23ರ ಸಂಜೆ 5.30 ಗಂಟೆಯೊಳಗಾಗಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಮಧುಗಿರಿ ತಾಲ್ಲೂಕು ಶಿಶು ಅಭಿವೃದ್ಧಿ ಯೋಜನಾ ಕಚೇರಿ ದೂ.ವಾ.ಸಂ. 08137-282452, ತುಮಕೂರು ನಗರ 0816-2955399, ಕೊರಟಗೆರೆ 08138-232315 ಹಾಗೂ ತುಮಕೂರು ಗ್ರಾಮಾಂತರ 0816-2955713ನ್ನು ಸಂಪರ್ಕಿಸಬೇಕೆಂದು ಪ್ರಕಟಣೆ ತಿಳಿಸಿದೆ.

ತರಬೇತಿಗೆ ಅರ್ಜಿ

ತುಮಕೂರು: ರುಡ್‌ಸೆಟ್ ಸಂಸ್ಥೆ ವತಿಯಿಂದ ಏಪ್ರಿಲ್ 2 ರಿಂದ ಕಂಪ್ಯೂಟರ್ ಡಿಟಿಪಿ ಕುರಿತು 45 ದಿನಗಳ ಉಚಿತ ತರಬೇತಿ ನೀಡಲು ಉದ್ದೇಶಿಸಿದ್ದು, ತರಬೇತಿ ಪಡೆಯಲಿಚ್ಛಿಸುವ ಆಸಕ್ತ ಗ್ರಾಮೀಣ ನಿರುದ್ಯೋಗಿ ಯುವಕ/ಯುವತಿಯರಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು 18 ರಿಂದ 50 ವರ್ಷ ವಯೋಮಾನದವರಾಗಿದ್ದು, ಕನ್ನಡ ಭಾ? ಓದಲು ಮತ್ತು ಬರೆಯಲು ಬಲ್ಲವರಾಗಿರಬೇಕು. ಗ್ರಾಮೀಣ ಭಾಗದ ಬಿಪಿಎಲ್ ಕಾರ್ಡ್ ಹಾಗೂ ಆಧಾರ್ ಕಾರ್ಡ್ ಹೊಂದಿರಬೇಕು. ತರಬೇತಿಯು ವಸತಿಯುತವಾಗಿದ್ದು, ತರಬೇತಿ ಅವಧಿಯಲ್ಲಿ ಉಚಿತ ಊಟದ ವ್ಯವಸ್ಥೆ ಕಲ್ಪಿಸಲಾಗುವುದು. ತರಬೇತಿ ಪೂರ್ಣಗೊಂಡ ನಂತರ ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯದಿಂದ ಪ್ರಮಾಣಪತ್ರವನ್ನು ವಿತರಿಸಲಾಗುವುದು. ಆಸಕ್ತರು ಹೆಚ್ಚಿನ ಮಾಹಿತಿಗಾಗಿ ರುಡ್‌ಸೆಟ್ ಸಂಸ್ಥೆ, ಅರಿಶಿನಕುಂಟೆ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಅಥವಾ ಮೊಬೈಲ್ ಸಂಖ್ಯೆ 9380162042, 9481506564, 9481778047ನ್ನು ಸಂಪರ್ಕಿಸಬಹುದಾಗಿದೆ ಎಂದು ರುಡ್‌ಸೆಟ್ ಸಂಸ್ಥೆ ಬೆಂಗಳೂರು ಶಾಖೆಯ ನಿರ್ದೇಶಕ ರವಿಕುಮಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಆರಂಭ

ತುಮಕೂರು: ಜಿಲ್ಲೆಯಲ್ಲಿ 2025-26ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆ-1 ಮಾರ್ಚ್ 18 ರಿಂದ ಏಪ್ರಿಲ್ 2ರವರೆಗೆ ನಡೆಯಲಿದ್ದು, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ವತಿಯಿಂದ ವೇಳಾಪಟ್ಟಿ ಪ್ರಕಟವಾಗಿದೆ ಎಂದು ತುಮಕೂರು ತಾಲ್ಲೂಕು ಶಾಲಾ ಶಿಕ್ಷಣ ಇಲಾಖೆ ಕ್ಷೇತ್ರ ಶಿಕ್ಷಣಾಧಿಕಾರಿ ಹನುಮಂತಪ್ಪ ತಿಳಿಸಿದ್ದಾರೆ. ಪ್ರಕಟಿತ ವೇಳಾಪಟ್ಟಿಯನ್ವಯ ಮಾರ್ಚ್ 18ರಂದು ಪ್ರಥಮ ಭಾಷೆಯಾದ ಕನ್ನಡ/ತೆಲುಗು/ಹಿಂದಿ/ಮರಾಠಿ/ ತಮಿಳು/ ಉರ್ದು/ ಇಂಗ್ಲೀಷ್/ಇಂಗ್ಲೀಷ್(ಓಎಇಖಖಿ)/ ಸಂಸ್ಕೃತ, ಮಾರ್ಚ್ 23ರಂದು ವಿಜ್ಞಾನ, ರಾಜ್ಯಶಾಸ್ತ್ರ, ಹಿಂದೂಸ್ಥಾನಿ ಸಂಗೀತ, ಕರ್ನಾಟಕ ಸಂಗೀತ; ಮಾ.25ರಂದು ದ್ವಿತೀಯ ಭಾಷೆ ಇಂಗ್ಲೀಷ್/ ಕನ್ನಡ ಮಾ.28ರಂದು ಗಣಿತ, ಸಮಾಜ ಶಾಸ್ತ್ರ; ಮಾರ್ಚ್ 30ರಂದು ತೃತೀಯ ಭಾಷೆಯಾದ ಹಿಂದಿ(ಓಎಇಖಖಿ), ಹಿಂದಿ/ಕನ್ನಡ/ ಇಂಗ್ಲೀಷ್/ ಅರೇಬಿಕ್/ ಉರ್ದು/ ಸಂಸ್ಕೃತ/ ಕೊಂಕಣಿ/ತುಳು/ ಮರಾಠಿ ಹಾಗೂ ಓಖಕಿಈ ವಿಷಯಗಳಾದ ಮಾಹಿತಿ ತಂತ್ರಜ್ಞಾನ/ ರೀಟೇಲ್/ ಆಟೋಮೊಬೈಲ್/ಬ್ಯೂಟಿ ಅಂಡ್ ವೆಲ್‌ನೆಸ್/ಅಪರೆಲ್ ಮೇಡ್ ಅಪ್ಸ್ ಮತ್ತು ಹೋಂ ಫರ್ನಿಷಿಂಗ್/ ಎಲೆಕ್ಟ್ರಾನಿಕ್ಸ್ ಮತ್ತು ಹಾರ್ಡ್‌ವೇರ್ ನಡೆಯಲಿದೆ.

ರಾಜೀವ್‌ಗಾಂಧಿ ಒಳಾಂಗಣ ಕ್ರೀಡಾಂಗಣ ಸಚಿವರಿಂದ ಲೋಕಾರ್ಪಣೆ

ಟೀಕೆಗೆ ಅಭಿವೃದ್ಧಿ ಉತ್ತರ



ಕೊರಟಗೆರೆ: ಗ್ಯಾರಂಟಿ ಯೋಜನೆಗೆ ಮಾತ್ರ ದುಡ್ಡು ಕೊಡ್ತಾರೇ, ಅಭಿವೃದ್ಧಿ ಕಾಮಗಾರಿಗಳಿಗೆ ಅನುಧಾನ ನೀಡುತ್ತಿಲ್ಲ ಎಂಬುದು ವಿರೋಧ ಪಕ್ಷದ ಆರೋಪ. ಟೀಕೆ ಟಿಪ್ಪಣಿಗಳು ಸರ್ವೆ ಸಾಮಾನ್ಯ, ಅದಕ್ಕೆ ನನ್ನ ಅಭಿವೃದ್ಧಿ ಕಾಮಗಾರಿಗಳೇ ಉತ್ತರ ಎಂದು ಗೃಹಸಚಿವ ಡಾ.ಜಿ. ಪರಮೇಶ್ವರ ಟಾಂಗ್ ನೀಡಿದರು.

ಕೊರಟಗೆರೆ ಪಟ್ಟಣ ಮತ್ತು ತಾಲೂಕಿನಲ್ಲಿ ಯುವ ಸಬಲೀಕರಣ ಕ್ರೀಡಾ ಇಲಾಖೆಯಿಂದ ಭಾನುವಾರ ಏರ್ಪಡಿಸಲಾಗಿದ್ದ 14 ಕೋಟಿ ವೆಚ್ಚದ ವಿವಿಧ ಕಾಮಗಾರಿಗಳಿಗೆ ಗುದ್ದಲಿಪೂಜೆ ನೆರವೇರಿಸಿ ಮಾತನಾಡಿದರು. ನಮ್ಮ ದೇಶ ಸೇರಿ ಎಲ್ಲಾ ರಾಜ್ಯಗಳು ಇದನ್ನೇ ಮಾಡುತ್ತವೆ ಇದರ ಮಾಹಿತಿ ವಿರೋಧ ಪಕ್ಷಗಳಿಗೆ ಸರಿಯಾಗಿ ಇಲ್ಲ ಎಂದು ಹೇಳಿದರು. ಕೇಂದ್ರ ಸರಕಾರ 53 ಲಕ್ಷ ಕೋಟಿ ಬಜೆಟ್ ಮಂಡಿಸಿದೆ. ಅದರಲ್ಲಿ 14 ಲಕ್ಷ ಕೋಟಿ ಸಾಲ ಮಾಡಿದೆ. ನಮ್ಮ ರಾಜ್ಯ ಸರಕಾರ 4ಲಕ್ಷ 48 ಸಾವಿರ ಬಜೇಟ್ ಮಂಡಿಸಿದೆ. ಬಜೆಟ್ ಗಾತ್ರದಲ್ಲಿ ಶೇ.25ರಷ್ಟು ಒಳಗೆ ಸಾಲ ಮಾಡಲು ನಮ್ಮ ಸರಕಾರಕ್ಕೂ ಅವಕಾಶವಿದೆ. ನಮ್ಮ ರಾಜ್ಯದ ಸಿಎಂ ನನ್ನ ಕ್ಷೇತ್ರದ ಅಭಿವೃದ್ಧಿಗೆ 50 ಕೋಟಿ ಅನುದಾನ ನೀಡಿದ್ದಾರೆ. ಗ್ರಾಮೀಣ ರಸ್ತೆ ಮತ್ತು ಮೂಲ ಸೌಲಭ್ಯ ಅಭಿವೃದ್ಧಿಗೆ ವಿಶೇಷ ಆದ್ಯತೆ ನೀಡಲಾಗಿದೆ. ಗ್ಯಾರಂಟಿ ಯೋಜನೆಯ ಜೊತೆಯಲ್ಲಿ ಕೊರಟಗೆರೆ ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸಗಳು ಆಗುತ್ತಿವೆ. ಶಂಕುಸ್ಥಾಪನೆ ಆದ ಕಾಮಗಾರಿಗಳನ್ನು ಗುತ್ತಿಗೆದಾರರು ತ್ವರಿತವಾಗಿ ಮುಗಿಸಿ ಅಭಿವೃದ್ಧಿಗೆ ಸಹಕಾರ ನೀಡಬೇಕಿದೆ ಎಂದರು. ಬೆಂಗಳೂರು ಕ್ರೀಡಾ ಇಲಾಖೆ ಆಯುಕ್ತ ಚೇತನ್ ಮಾತನಾಡಿ ಯುವ ಸಬಲೀಕರಣ ಕ್ರೀಡಾ ಇಲಾಖೆ ಯಿಂದ ಗೃಹಸಚಿವ ಡಾ.ಜಿ.ಪರಮೇಶ್ವರ ಕನಸಿನ ಕೂಸು ಒಳಾಂಗಣ ಮತ್ತು ಹೊರಾಂಗಣ ಕ್ರೀಡಾಂಗಣಕ್ಕೆ 7 ಕೋಟಿ ಕೊರಟಗೆರೆಗೆ ಬಂದಿದೆ. ಗ್ರಾಮೀಣ ಭಾಗದ ಕ್ರೀಡಾಪಟುಗಳು ಕ್ರೀಡಾಂಗಣದ ಅನುಕೂಲ ಪಡೆದು ರಾಜ್ಯ, ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟಕ್ಕೆ ಬೆಳೆಯ ಬೇಕಿದೆ ಎಂದರು.

ಜಿಲ್ಲಾಧಿಕಾರಿ ಶುಭಕಲ್ಯಾಣ್, ಜಿಪಂ ಸಿಇಒ ಅಶ್ವಿಜ, ಎಸ್ಪಿ ಅಶೋಕ್, ಮಧುಗಿರಿ ಎಸಿ ಗೋಟೂರು ಶಿವಪ್ಪ, ತಹಸೀಲ್ದಾರ್ ಮಂಜುನಾಥ, ತಾಪಂ ಇಒ ಅಪೂರ್ವ, ಎಇಇ ಕೆಆರ್‌ಐಡಿಎಲ್ ನಾಗಯ್ಯ, ಎಇಇ ಸಿಂಧು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಶ್ವತ್ಥನಾರಾಯಣ್ ಇದ್ದರು.

> ಕರ್ನಾಟಕ ರಾಜ್ಯದ ಅನೇಕ ಕ್ಷೇತ್ರಗಳ ಅಭಿವೃದ್ಧಿಯಲ್ಲಿ ತುಮಕೂರು ಜಿಲ್ಲೆ ಪ್ರಥಮ ಸ್ಥಾನದಲ್ಲಿದೆ. ಯುವಕರು ಕ್ರೀಡೆಗಳಲ್ಲಿ ಹೆಚ್ಚು ತೊಡಗಿಸಿಕೊಂಡರೆ ಡ್ರಗ್ಸ್ ಮತ್ತು ಇತರೆ ವ್ಯಸನಗಳಿಂದ ದೂರ ಉಳಿಯುತ್ತಾರೆ. ಇದು ಬಲಿಷ್ಟ ಭಾರತ ನಿರ್ಮಾಣಕ್ಕೆ ನಾಂದಿಯಾಗುತ್ತದೆ.
> ■ ಡಾ.ಜಿ.ಪರಮೇಶ್ವರ, ಗೃಹಸಚಿವ

14 ಕೋಟಿ ಕಾಮಗಾರಿಗೆ ಚಾಲನೆ

4ಕೋಟಿ 23ಲಕ್ಷದ ರಾಜೀವ್ ಗಾಂಧಿ ಒಳಾಂಗಣ ಕ್ರೀಡಾಂಗಣ ಮತ್ತು 21ಲಕ್ಷದ ವನಧನ ವಿಕಾಸಕೇಂದ್ರ ಉದ್ಘಾಟನೆ, 3ಕೋಟಿಯ ಹೊರಂಗಣ ಗ್ಯಾಲರಿ, 1ಕೋಟಿ 50ಲಕ್ಷದ ತಾಲೂಕು ಆಡಳಿತ ಕಚೇರಿ ರಸ್ತೆ, 2ಕೋಟಿಯ ತಾಪಂ ನೂತನ ಕಟ್ಟಡ, 60ಲಕ್ಷ ಬಯಲು ಆಂಜನೇಯ ರಸ್ತೆ, 1ಕೋಟಿಯ ಸೋಂಪುರ ರಸ್ತೆಗೆ ಶಂಕುಸ್ಥಾಪನೆ ಸೇರಿ ವಿವಿಧ ಕಾಮಗಾರಿಗಳಿಗೆ ಗೃಹಸಚಿವ ಡಾ.ಜಿ.ಪರಮೇಶ್ವರ ನೇರವೇರಿಸಿದರು.

ಏಪ್ರಿಲ್‌ನಲ್ಲಿ ಕಬಡ್ಡಿ, ಕ್ರಿಕೆಟ್

ಕೊರಟಗೆರೆ ಪಟ್ಟಣದ ಪದವಿ ಪೂರ್ವ ಕಾಲೇಜು ಮೈದಾನದಲ್ಲಿ ಯುವ ಸ್ನೇಹಿತರಿಂದ ಜಿಲ್ಲಾಮಟ್ಟದ ಕಬ್ಬಡಿ ಮತ್ತು ಕ್ರಿಕೇಟ್ ಪಂದ್ಯಾವಳಿಗೆ ಅನುಮತಿ ನೀಡಿದ್ದೇನೆ. ಏಪ್ರಿಲ್ ಮಾಹೆಯೇ ಕ್ರೀಡಾಪಟುಗಳಿಗೆ ಕ್ರೀಡಾಸ್ಪೂರ್ತಿ ತುಂಬಿ ಯುವಕರಿಗೆ ಉತ್ತೇಜನ ನೀಡಲಿ ಎಂದು ಗೃಹಸಚಿವ ಡಾ.ಜಿ.ಪರಮೇಶ್ವರ ಶುಭಹಾರೈಸಿದರು.

ಮದ್ಯ ಅಕ್ರಮ ಮಾರಾಟದಿಂದ ಸಂಸಾರಗಳು ನಾಶ: ದೂರು

ತುಮಕೂರು: ನಮ್ಮ ಊರಿನಲ್ಲಿ ದಿನ ದಿಂದ ದಿನಕ್ಕೆ ಕುಡಿತದ ಹಾವಳಿ ಹೆಚ್ಚುತ್ತಿದೆ. ಅಕ್ರಮ ಮದ್ಯ ಮಾರಾಟದಿಂದ ಇಲ್ಲಿನ ಯುವಕರು, ಅಮಾಯಕರೆಲ್ಲ ಮದ್ಯದ ಚಟಕ್ಕೆ ಬೀಳುವಂತಾಗಿದ್ದು ಹಗಲು ರಾತ್ರಿಯೆನ್ನದೆ ಮದ್ಯದ ವ್ಯಸನಕ್ಕೆ ಒಳಗಾಗುತ್ತಿದ್ದಾರೆ. ಇದರಿಂದಾಗಿ ನಮ್ಮೂರು ನೆಮ್ಮದಿಯೇ ಹಾಳಾಗಿದೆ ಎಂದು ತುರುವೇಕೆರೆ ತಾಲೂಕು ನಾಗೇಗೌಡನ ಪಾಳ್ಯದ ಮಹಿಳೆಯರು ತಮ್ಮ ಅಸಮಾಧಾನ ತೋಡಿಕೊಂಡರು.

ನಾಗೇಗೌಡನ ಪಾಳ್ಯದಿಂದ ತುಮಕೂರು ಜಿಲ್ಲಾಧಿಕಾರಿಗಳ ಕಚೇರಿಗೆ ಆಗಮಿಸಿ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದ ಮಹಿಳೆಯರು ಮತ್ತು ಗ್ರಾಮಸ್ಥರು, ಕಳೆದ ನಾಲ್ಕೈದು ತಿಂಗಳಿನಿಂದಲೂ ಸಂಬಂಧಪಟ್ಟ ಇಲಾಖೆಗಳಿಗೆ ನಮ್ಮ ಊರಿನ ಪರಿಸ್ಥಿತಿಯ ಮನವರಿಕೆ ಮಾಡಿಕೊಟ್ಟಿದ್ದೇವೆ. ಊರಿನಲ್ಲಿ ಅಕ್ರಮ ಮದ್ಯ ಸರಬರಾಜು ನಡೆಯುತ್ತಿದ್ದರೂ ಅದಕ್ಕೆ ಕಡಿವಾಣ ಹಾಕುತ್ತಿಲ್ಲ. ಕುಡಿದು ಬಂದು ಹೆಂಡತಿ ಮಕ್ಕಳನ್ನು ಹೊಡೆಯುವುದು, ಸಂಸಾರಕ್ಕೆ ಬೇಕಾದ ಅಗತ್ಯ ಸೌಲಭ್ಯ ಒದಗಿಸದೆ ನಿರ್ಲಕ್ಷಿಸಿದ್ದು ಇದರಿಂದಾಗಿ ಸಂಸಾರಗಳು ಬೀದಿಗೆ ಬರುವಂತಾಗಿದೆ. ಮನೆಗಳಲ್ಲಿ ನೆಮ್ಮದಿ ಇಲ್ಲವಾಗಿದೆ. ಈ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಗ್ರಾಮಕ್ಕೆ ಬಂದು ಅಕ್ರಮ ಮದ್ಯ ಸರಬರಾಜನ್ನು ನಿಲ್ಲಿಸಿ ಸಂಸಾರಗಳನ್ನು ಉಳಿಸಬೇಕು ಎಂದು ಮಹಿಳೆಯರು ಜಿಲ್ಲಾಡಳಿತವನ್ನು ಒತ್ತಾಯಿಸಿದರು.

ಸೂಕ್ತ ಕ್ರಮ ಜರುಗಿಸಬೇಕು. ಇಲ್ಲವಾದಲ್ಲಿ ಇನ್ನೊಂದು ವಾರ ಕಳೆದು ಮತ್ತೆ ಬೃಹತ್ ಸಂಖ್ಯೆಯಲ್ಲಿ ಜಿಲ್ಲಾಧಿಕಾರಿಗಳ ಕಚವೇರಿಗೆ ಆಗಮಿಸಿ ಮುತ್ತಿಗೆ ಹಾಕಲಾಗುವುದು ಎಂದು ಎಚ್ಚರಿಸಿದರು. ಪ್ರತಿಭಟನೆಯಲ್ಲಿ ಶಿವಮ್ಮ, ಲಕ್ಷ್ಮಿ, ಗಂಗಮ್ಮ, ಜಯಮ್ಮ, ಚಿಕ್ಕಮಣಿ, ಶಿಲ್ಪ, ಪ್ರೇಮ, ಭಾರತಿ, ನಾಗರತ್ನ, ಕಮಲಮ್ಮ, ರತ್ನಮ್ಮ, ಚಂದ್ರಮ್ಮ, ದೊಡ್ಡಮ್ಮಯ್ಯ, ಪ್ರೀತಿ, ರೇಣುಕಮ್ಮ ಮೊದಲಾದವರು ಭಾಗವಹಿಸಿದ್ದರು



ದೇವಸ್ಥಾನಗಳ ಅಭಿವೃದ್ಧಿಗೆ ಕೈಜೋಡಿಸಿ: ರಾಜೇಂದ್ರ

ಮಧುಗಿರಿ: ಕೃಷ್ಣದೇವಸ್ಥಾನ ನಿರ್ಮಿಸುವುದರ ಜತೆಗೆ ಎರಡು ದೇವಸ್ಥಾನಗಳ ಅಭಿವೃದ್ಧಿಗೆ ಕೈ ಜೋಡಿಸಬೇಕೆಂದು ರಾಜೇಂದ್ರ ರಾಜಣ್ಣ ತಿಳಿಸಿದ್ದಾರೆ. ಪಟ್ಟಣದ ವಿಪ್ರ ಸೇವಾ ಟ್ರಸ್ಟ್ ಕಟ್ಟಡದಲ್ಲಿ ಪೇಜಾವರ ಮಠ ಕೃಷ್ಣ ಮಂದಿರ ಸ್ಥಳದ ಈ ಸ್ವತ್ತು ಖಾತಾ ವನ್ನು ತಾಲೂಕು ಬ್ರಾಹ್ಮಣ ಸಭಾ ಪದಾಧಿಕಾರಿಗಳಿಗೆ ಹಸ್ತಾಂತರಿಸಿ ಮಾತನಾಡಿದರು. ಪಟ್ಟಣದ ಹೃದಯ ಭಾಗದಲ್ಲಿರುವ ಶ್ರೀ ಮಲ್ಲೇಶ್ವರ ಸ್ವಾಮಿ ಹಾಗೂ ಶ್ರೀ ವೆಂಕಟರಮಣ ಸ್ವಾಮಿ ದೇವಸ್ಥಾನಗಳನ್ನು ಕೃಷ್ಣದೇವಸ್ಥಾನ ನಿರ್ಮಿಸುವಾಗ ಅಭಿವೃದ್ಧಿಪಡಿಸುವಂತೆ ತಿಳಿಸಿದರು.

ಶಾಸಕ ಕೆ.ಎನ್.ರಾಜಣ್ಣನವರು ತಮ್ಮ ಅಧಿಕಾರ ಅವಧಿಯಲ್ಲಿ ವಿಪ್ರ ಸಮುದಾಯಕ್ಕೂ ರಾಜಕೀಯ ಅಧಿಕಾರ ನೀಡಿದ್ದಾರೆ. ಕ್ಷೇತ್ರದ ಎಲ್ಲಾ ಸಮುದಾಯಗಳ ಸರ್ವತೋಮುಖ ಅಭಿವೃದ್ಧಿಗೆ ಶಾಸಕರು ಅನುದಾನವನ್ನು ನೀಡುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಇಡೀ ಜಿಲ್ಲೆಯ ಜನತೆ ಮಧುಗಿರಿಯತ್ತ ನೋಡುವಂತೆ ಅಭಿವೃದ್ಧಿಪಡಿಸಲಾಗುತ್ತಿದೆ ಎಂದರು. ಪಟ್ಟಣದಲ್ಲಿರುವ ಶಂಕರ ಮಠಕ್ಕೆ ನೀರಿನ ವ್ಯವಸ್ಥೆ ಕಲ್ಪಿಸಿಕೊಡಲು ಅಧಿಕಾರಿಗಳಿಗೆ ಸೂಚಿಸುವುದಾಗಿ ತಿಳಿಸಿದರು. ಬ್ರಾಹ್ಮಣ ಸಮುದಾಯದ ಬಹಳ ವರ್ಷಗಳ ಬೇಡಿಕೆ ಈ ದಿನ ಈಡೇರಿದ್ದು, ನಿಮ್ಮಿಂದ ಸಮಾಜಕ್ಕೆ ಅನುಕೂಲವಾಗಲಿ ಎಂದರು.

ತಾಲೂಕು ಬ್ರಾಹ್ಮಣ ಸಭಾಧ್ಯಕ್ಷ ಪಿ. ದತ್ತಾತ್ರೇಯ ಮಾತನಾಡಿ, ತಾಲೂಕು ಬ್ರಾಹ್ಮಣ ಸಭಾ ಕಾರ್ಯ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ಸಮುದಾಯ ಭವನ ನಿರ್ಮಿಸಲು 2 ಎಕರೆ ಜಾಗ ಕೊಡಿಸುವಂತೆ ಮನವಿ ಮಾಡಿದರು.

ಪುರಸಭೆ ಮಾಜಿ ಅಧ್ಯಕ್ಷರಾದ ಎಂ.ಕೆ. ನಂಜುಂಡಯ್ಯ, ಲಾಲಪೇಟೆ ಮಂಜುನಾಥ್, ಮಾಜಿ ಸದಸ್ಯ ಕೆ. ನಾರಾಯಣ, ಬ್ರಾಹ್ಮಣ ಸಭಾ ಪದಾಧಿಕಾರಿಗಳಾದ ಕೆ.ನಾಗರಾಜ ಶಾಸ್ತ್ರಿ, ಎಸ್.ಎ.ಶ್ಯಾಮನಾಥ್, ಶ್ರೀ ಶಂಕರ ಸೇವಾ ಸಮಿತಿ ಅಧ್ಯಕ್ಷ ಬಿ. ಆರ್. ಸತ್ಯನಾರಾಯಣ, ಎಸ್.ವಿ.ಸೂರ್ಯನಾರಾಯಣ್ ರಾವ್ ಹಾಗೂ ನೂರಾರು ವಿಪ್ರ ಬಾಂಧವರು ಉಪಸ್ಥಿತರಿದ್ದರು.



ಚಿಕ್ಕಬಿದರೆಯಲ್ಲಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಆತ್ಮವಿಶ್ವಾಸ ತುಂಬಿದ ಉಪನ್ಯಾಸಕ

ಸ್ಪಷ್ಟ ಗುರಿ ರೂಪಿಸಿಕೊಂಡರೆ ಉತ್ತಮ ಭವಿಷ್ಯ ನಿರ್ಮಾಣ

ಹುಳಿಯಾರು: ಹೋಬಳಿಯ ಚಿಕ್ಕಬಿದರೆಯ ಶ್ರೀ ಮಾರುತಿ ಗ್ರಾಮಾಂತರ ಪ್ರೌಢಶಾಲೆಯಲ್ಲಿ 10ನೇ ತರಗತಿಯ ವಿದ್ಯಾರ್ಥಿಗಳಿಗೆ ಮುಂಬರುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ಗಮನದಲ್ಲಿಟ್ಟುಕೊಂಡು ಆತ್ಮವಿಶ್ವಾಸ ಹಾಗೂ ಭವಿಷ್ಯದ ಗುರಿಗಳ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮ ನಡೆಯಿತು.

ಸರ್ಕಾರಿಪ್ರಥಮದರ್ಜೆಕಾಲೇಜು,ಬುಕ್ಕಾಪಟ್ಟಣದ ಉಪನ್ಯಾಸಕರಾದ ನರೇಂದ್ರಬಾಬು ಎಚ್.ಎಸ್. ಅವರು ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಜೀವನದ ಗುರಿಗಳನ್ನು ಸ್ಪಷ್ಟವಾಗಿ ರೂಪಿಸಿಕೊಂಡು ಶ್ರಮಿಸಿದರೆ ಉತ್ತಮ ಭವಿಷ್ಯ ನಿರ್ಮಾಣ ಸಾಧ್ಯ ವೆಂದು ತಿಳಿಸಿದರು. ವಿದ್ಯಾರ್ಥಿಗಳ ಮುಂದಿನ ಶಿಕ್ಷಣದ ಮಾರ್ಗಗಳು, ಜೀವನದ ಉದ್ದೇಶಗಳು ಮತ್ತು ಸಮಾಜಕ್ಕೆ ಉಪಯುಕ್ತ ವ್ಯಕ್ತಿಗಳಾಗಿ ಬೆಳೆದು ದೇಶದ ಆಸ್ತಿಯಾಗಬೇಕೆಂಬ ಮಹತ್ವವನ್ನು ಅವರು ವಿವರಿಸಿದರು.



ಇದೇ ವೇಳೆ ದೇಶದ ಸ್ವಾತಂತ್ರ್ಯ ಹೋರಾಟಗಾರರಾದ ಭಗತ್ ಸಿಂಗ್, ರಾಜಗುರು, ಸುಖದೇವ್, ಚಂದ್ರಶೇಖರ ಆಜಾದ್, ಸುಭಾಷ್ ಚಂದ್ರ ಬೋಸ್, ಕರ್ತಾರ್ ಸಿಂಗ್ ಸರಭ ಮುಂತಾದ ಮಹನೀಯರ ಜೀವನ ಹೋರಾಟದ ಉದಾಹರಣೆಗಳನ್ನು ನೀಡಿ ವಿದ್ಯಾರ್ಥಿಗಳಲ್ಲಿ ದೇಶಭಕ್ತಿ ಮತ್ತು ಆತ್ಮವಿಶ್ವಾಸ ಮೂಡಿಸಿದರು. ಮಕ್ಕಳ ಬೆಳವಣಿಗೆಗಾಗಿ ಪೋಷಕರು ತಮ್ಮ ಜೀವನವನ್ನು ಹೇಗೆ ಮುಡಿಪಾಗಿಡುತ್ತಾರೆ ಎಂಬುದನ್ನು ತಿಳಿಸಿ ಎಂದು ಸಲಹೆ ನೀಡಿದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಗಳಿಸಿ ಸಮಾಜಕ್ಕೆ ಮೌಲ್ಯಯುತ ವ್ಯಕ್ತಿಗಳಾಗಬೇಕೆಂದು ವಿದ್ಯಾರ್ಥಿಗಳಿಗೆ ಪ್ರೇರಣೆ ನೀಡಿದರು. ಅಂತ್ಯದಲ್ಲಿ ಸಂಸ್ಥೆಯ ಕಾರ್ಯದರ್ಶಿಗಳಾದ ಪ್ರದೀಪ್ ಅವರು ಉಪನ್ಯಾಸ ನೀಡಿದ ನರೇಂದ್ರಬಾಬು ಅವರನ್ನು ಸನ್ಮಾನಿಸಿ ಕೃತಜ್ಞತೆ ಸಲ್ಲಿಸಿದರು. ಶಾಲೆಯ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಅಬಾಕಸ್ ಸ್ಪರ್ಧೆಯಲ್ಲಿ ಸಾಧನೆ

ಮಧುಗಿರಿ: ಅಬಾಕಸ್ ನಿಂದ ವಿದ್ಯಾರ್ಥಿಗಳ ಜೀವನವೇ ಬದಲಾಗುತ್ತದೆ ಎಂದು ಪುರಸಭಾ ಮಾಜಿ ಅಧ್ಯಕ್ಷ ಲಾಲಾಪೇಟೆ ಮಂಜುನಾಥ್ ತಿಳಿಸಿದ್ದಾರೆ ಕನ್ನಡ ಭವನದಲ್ಲಿ ಅಬಾಕಸ್ ಸಂಸ್ಥೆಯಿಂದ ಏರ್ಪಡಿಸಿದ್ದ ಹತ್ತನೇ ಅಂತಾರಾಷ್ಟ್ರೀಯ ಅಬಾಕಸ್ ಸ್ಪರ್ಧೆಯಲ್ಲಿ ಸಾಧನೆ ಮಾಡಿದ ಸಾಧಕ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ಸಾಧಕರ ಸಂಭ್ರಮ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಅಬಾಕಸ್ ಕಲಿಕೆಯಿಂದ ಮಕ್ಕಳು ಕಂಪ್ಯೂಟರ್ ಯುಗದಲ್ಲಿ ಕಂಪ್ಯೂಟರ್ ಗಿಂತ ವೇಗ ವಾಗಿ ಬೆಳೆಯಲು ಸಹಾಯಕಾರಿಯಾಗುತ್ತದೆ ಎಂದು ತಿಳಿಸಿದರು. ಸಾಧಕರ ಮಕ್ಕಳಿಗೆ ಬಹುಮಾನ ವಿತರಿಸಿ ಮಾತನಾಡಿದ ಪುರಸಭಾ ಮಾಜಿ ಸದಸ್ಯ ಎಂ ಆರ್ ಜಗನ್ನಾಥ್ ಮಾತನಾಡಿ ಮಕ್ಕಳು ಜ್ಞಾನವಂತರಾಗಲು ಮತ್ತು ಕಲಿಕಾ ಪ್ರವೃತ್ತಿ ಹೆಚ್ಚಿಸಿಕೊಳ್ಳಲು ಸಹಾಯಕಾರಿ ಎಂದು ತಿಳಿಸಿದರು ಶಿಕ್ಷಕ ಅಮರಾವತಿ ದ್ರೆಹಾಚಾರ್ ಮಾತನಾಡಿ ಶರೀರ ಮನಸ್ಸು ಚೈತನ್ಯ ಈ ಮೂರರ ಸಮನ್ವಯ ತೆಯೇ ಅಬಾಕಸ್ ಎಂದವರು ಇದು ವಜ್ರಕ್ಕೆ ಸಮಾನ ಪ್ರಪಂಚದ ಮಟ್ಟದಲ್ಲಿ ಮಕ್ಕಳನ್ನು ಗುರುತಿಸುವ ಮಟ್ಟಕ್ಕೆ ಬೆಳೆಯಲು ಸಹಾಯಕಾರಿ ಎಂದು ತಿಳಿಸಿದರು. ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಸಲಾಯಿತು



ಯುವಪೀಳಿಗೆ ಉತ್ತಮ ಶಿಕ್ಷಣ ಪಡೆಯಲಿ: ಪಿಎಸ್‌ಐ

ಮಧುಗಿರಿ: ಇಂದಿನ ಯುವಪೀಳಿಗೆ ಮಾದಕ ವಸ್ತುಗಳಿದ ದೂರ ಇರುವಂತೆ, ಅದರಲ್ಲಿಯೂ ವಿದ್ಯಾರ್ಥಿಗಳು ಮಾದಕ ವ್ಯಸನಕ್ಕೆ ತುತ್ತಾಗಿ ಜೀವನವನ್ನು ಹಾಳು ಮಾಡಿಕೊಳ್ಳಬಾರದು ಶಾಲಾ-ಕಾಲೇಜುಗಳಿಗೆ ಹೋಗುವ ವಿದ್ಯಾರ್ಥಿಗಳ ಮೇಲೆ ಪೋಷಕರು ನಿಗಾವಹಿಸಬೇಕೆಂದು ನಗರ ಠಾಣೆಯ ಪಿಎಸ್‌ಐ ಚಂದ್ರಶೇಖರ್ ತಿಳಿಸಿದರು. ನಗರದ ಟೌನ್ ಪೋಲಿಸ್ ಠಾಣೆಯಲ್ಲಿ ಆರಕ್ಷಕ ಇಲಾಖೆಯಿಂದ ಹಮ್ಮಿಕೊಳ್ಳಲಾಗಿದ್ದ ಎಸ್‌ಸಿ/ಎಸ್‌ಟಿ ಜನಾಂಗದ ಕುಂದುಕೊರತೆ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಇಂದಿನ ದಿನಗಳಲ್ಲಿ ದಲಿತರು ಸೇರಿದಂತೆ ಎಲ್ಲ ವರ್ಗದ ಕೆಲ ಯುವಕರು ದುಶ್ಚಟಗಳಿಗೆ ಬಲಿಯಾಗುತ್ತಿದ್ದಾರೆ ಎಂದರು. ಇತ್ತೀಚೆಗೆ ದಲಿತರು ವಾಸಿಸುವ ಕಡೆಗಳಲ್ಲಿ ಅಕ್ರಮ ಹಾಗೂ ನಕಲಿ ಮದ್ಯದ ಹಾವಳಿ ಕಂಡು ಬರುತ್ತಿದೆ ಎಂದು ದಲಿತ ಮುಖಂಡರು ಸಭೆಯಲ್ಲಿ ಪ್ರಸ್ತಾಪಿಸಿದಾಗ ಅಕ್ರಮ ಮದ್ಯಕ್ಕೆ ಕಡಿವಾಣ ಹಾಕಲಾಗಿದ್ದು, ನಕಲಿ ಮದ್ಯದ ಬಗ್ಗೆ ಅಬಕಾರಿ ಇಲಾಖೆಯೊಂದಿಗೆ ಮಾತನಾಡಿ ಕ್ರಮ ಕೈಗೊಳ್ಳುವುದಾಗಿ ಪಿಎಸ್‌ಐ ತಿಳಿಸಿದರು.

ಆರ್ಥಿಕ ಚಟುವಟಿಕೆ ಅಸ್ತವ್ಯಸ್ತ: ಸಮಸ್ಯೆ ನಿವಾರಣೆಗೆ ಚಿದಾನಂದ್ ಆಗ್ರಹ

ಇ-ಖಾತಾ ಸ್ಥಗಿತದಿಂದ ಆಸ್ತಿ ಮಾಲೀಕರಿಗೆ ತೊಂದರೆ

ತುಮಕೂರು: ನಗರ ಹಾಗೂ ಗ್ರಾಮಾಂತರ ಪ್ರದಶದಲ್ಲಿ ಕಳೆದ ಮೂರು ತಿಂಗಳಿನಿಂದ ಆಸ್ತಿ ಮಾಲೀಕರಿಗೆ ಇಖಾತೆ ದೊರೆಯುತ್ತಿಲ್ಲ, ಇದರಿಂದ ಆಸ್ತಿ ಖರೀದಿಮಾರಾಟಕ್ಕೆ ಸಮಸ್ಯೆಯಾಗಿದೆ. ಇ-ಖಾತಿ ಇಲ್ಲದೆ ಲ್ಯಾಂಡ್ ಡೆವಲರ್‌ಗಳ ವ್ಯವಹಾರಕ್ಕೂ ತೊಂದರೆಯಾಗಿದೆ.



ಸರ್ಕಾರಕೂಡಲೇ ಎಚ್ಚೆತ್ತುಕೊಂಡು ಸಮಸ್ಯೆ ಬಗೆಹರಿಸಬೇಕು, ತಪ್ಪಿದಲ್ಲಿ ಸರ್ಕಾರದ ವಿರುದ್ಧ ಹೋರಾಟ ಮಾಡಬೇಕಾಗುತ್ತದೆ ಎಂದು ಜಿಲ್ಲಾ ಲ್ಯಾಂಡ್ ಡೆವಲಪರ್ಸ್ ಅಸೋಸಿಯೇಷನ್ ಅಧ್ಯಕ್ಷರೂ ಆದ ಸ್ಪೂರ್ತಿ ಡೆವಲಪರ್ಸ್‌ನ ವ್ಯವಸ್ಥಾಪಕ ನಿರ್ದೇಶಕರೂ ಆದ ಎಸ್.ಪಿ. ಚಿದಾನಂದ್ ಹೇಳಿದರು.

ಗ್ರಾಮ ಪಂಚಾಯಿತಿ, ಪುರಸಭೆ, ನಗರಸಭೆ, ಕಾರ್ಪೊರೇಷನ್ ವ್ಯಾಪ್ತಿಯ ಎಲ್ಲಾ ಇ-ಖಾತಾಗಳನ್ನು ಎರಡೂವರೆ ತಿಂಗಳಿನಿಂದ ಸ್ಥಗಿತಗೊಳಿಸಿರುವುದು ಸಮಸ್ಯೆಯಾಗಿದೆ. ಇ-ಖಾತೆ ಇಲ್ಲದೆ ಆಸ್ತಿ ಮೇಲೆ ಬ್ಯಾಂಕ್ ಸಾಲ ಪಡೆಯಲು ಸಾಧ್ಯವಾಗುತ್ತಿಲ್ಲ, ಇದರಿಂದ ಮದುವೆ ಮತ್ತಿತರ ಕಾರ್ಯಕ್ಕೆ ಆಸ್ತಿ ಮೇಲೆ ಸಾಲ ಪಡೆಯಲಾಗುತ್ತಿಲ್ಲ, ಇ-ಖಾತೆ ಇಲ್ಲದೆ ಲ್ಯಾಂಡ್ ಡೆವಲಪರ್ಸ್‌ಗಳು ವ್ಯವಹಾರ ನಡೆಸಲು ಸಾಧ್ಯ ವಾಗುತ್ತಿಲ್ಲ, ವ್ಯವಹಾರವಿಲ್ಲದೆ ಮಾಡಿದ ಸಾಲಕ್ಕೆ ಬಡ್ಡಿ ಕಟ್ಟಲೂ ಆಗದಂತಹ ಪರಿಸ್ಥಿತಿ ಎಂದುರಾಗಿದೆ ಎಂದು ಹೇಳಿದ್ದಾರೆ.

> ಇ-ಖಾತೆ ಇಲ್ಲದೆ ಆಸ್ತಿ ಮೇಲೆ ಬ್ಯಾಂಕ್ ಸಾಲ ಪಡೆಯಲು ಸಾಧ್ಯವಿಲ್ಲ

ಹೊಸ ಇ-ಪೌತಿ ಸಾಫ್ಟ್‌ವೇರ್ ಅಳವಡಿಕೆಯ ಕಾರಣದಿಂದ ಈ ಸ್ಥಗಿತ ಉಂಟಾಗಿದೆ. ಸರ್ಕಾರ ಯಾವುದೇ ಹೊಸ ವ್ಯವಸ್ಥೆಯನ್ನು ಜಾರಿಗೆ ತರುವ ಮೊದಲು ಪರ್ಯಾಯ ವ್ಯವಸ್ಥೆ ಮಾಡಬೇಕು. ಇಲ್ಲವೇ ಸಾಫ್ಟ್‌ವೇರ್ ಅಪ್‌ಡೇಟ್ ಆಗುವತನಕ ಹಳೆ ವ್ಯವಸ್ಥೆಯನ್ನೇ ಮುಂದುವರೆಸಬೇಕು. ಇದಾವುದನ್ನೂ ಮಾಡದ ಸರ್ಕಾರ ಜನರಿಗೆ ಸಮಸ್ಯೆ ಉಂಟುಮಾಡಿದೆ. ಇ-ಖಾತಾ ಸ್ಥಗಿತದಿಂದ ಬ್ಯಾಂಕುಗಳಿಂದ ಸಾಲಸೌಲಭ್ಯಗಳು ದೊರೆಯದೆ ಅಭಿವೃದ್ಧಿ ಚಟುವಟಿಕೆಗಳು ಸ್ಥಗಿತಗೊಂಡಿವೆ ಎಂದು ಎಸ್.ಪಿ.ಚಿದಾನಂದ್ ತಿಳಿಸಿದ್ದಾರೆ.

ಕಟ್ಟಡ ಪರವಾನಗಿಗಳು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಆಗದೆ ಇರುವುದರಿಂದ ಅಭಿ ವೃದ್ಧಿ ಕಾರ್ಯಗಳಿಗೆ ತಡೆ ಉಂಟಾಗಿದೆ. ಪೂರ್ಣಗೊಂಡಿರುವ ರೆಸಿಡೆನ್ಸಿಯಲ್ ಲೇಔಟ್, ಪ್ಲಾಟ್‌ಗಳಿಗೆ ಲೈಸೆನ್ಸ್ ನೀಡುವಲ್ಲಿ ಅಧಿಕಾರಿಗಳ ವಿಳಂಬ ವರ್ತನೆ ದೂರಿದರು.

ಎಂಇಆರ್-19 ಅಡಿಯಲ್ಲಿ ಲೈಸೆನ್ಸ್ ನೀಡುವ ವಿಷಯದಲ್ಲಿ ಸ್ಪಷ್ಟ ಮಾರ್ಗಸೂಚಿಗಳ ಕೊರತೆ ಇದೆ. ಪಾರ್ಕ್, ಸಿಎ ಹಾಗೂ ರಸ್ತೆಗಳಿಗೆ ಸಂಬಂಧಿಸಿದ ಡೀಡ್ ನೀಡುವ ಪ್ರಕ್ರಿಯೆಯಲ್ಲಿನ ವಿಳಂಬವೂ ಅಭಿವೃದ್ಧಿಗೆ ಅಡ್ಡಿಯಾಗಿದೆ. ಸರ್ಕಾರ ಮತ್ತು ಸಂಬಂಧಿತ ಇಲಾಖೆಗಳು ಕೂಡಲೇ ಮಧ್ಯಪ್ರವೇಶಿಸಿ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ನೀಡಬೇಕು. ಇ-ಖಾತಾ ಸಾಫ್ಟ್‌ವೇರ್ ಅನ್ನು ತುರ್ತು ಪರಿಷ್ಕರಣೆ ಮಾಡಿ ಸರಿಹೋಗುವವರೆಗೂ ಹಿಂದಿನ ವ್ಯವಸ್ಥೆಯನ್ನು ಮುಂದುವರೆಸಬೇಕು ಎಂದು ಒತ್ತಾಯಿಸಿದ್ದಾರೆ.

ಯುಗಾದಿ ಹಾಸ್ಯಗೋಷ್ಠಿ ಉದ್ಘಾಟಿಸಿದ ವಿಶ್ವಾನಾಥ್ ಸ್ವದೇಶಿ ಶ್ಲಾಘನೆ

ಹಾಸ್ಯ ಸಾಹಿತ್ಯ, ಕಲೆ ಕಂಪು ಹರಡಿದ ನಗೆಮಲ್ಲಿಗೆ

ತುಮಕೂರು: ಹಾಸ್ಯವು ಅಪಹಾಸ್ಯವಾಗಬಾರದು, ಕೇಳುಗರಿಗೆ ಮುಜುಗರ ಉಂಟು ಮಾಡುವಂತಿರಬಾರದು. ಎಲ್ಲಾ ವಯೋಮಾನದವರೂ ನಕ್ಕು ಆನಂದಿಸುವ ಹಾಸ್ಯ ಹೊರಬರಲಿ, ಶುದ್ಧ ಹಾಸ್ಯಕ್ಕೆ ಯಾವತ್ತೂ ಬೆಲೆ ಇರುತ್ತದೆ ಎಂದು ಸ್ವದೇಶಿ ಚಿಂತಕ ಎಸ್.ವಿಶ್ವನಾಥ್ ಸ್ವದೇಶಿ ಹೇಳಿದರು.

ನಗೆಮಲ್ಲಿಗೆ ಬಳಗ ನಗರದಲ್ಲಿ ಹಮ್ಮಿಕೊಂಡಿದ್ದ ಯುಗಾದಿ ಹಾಸ್ಯಗೋಷ್ಠಿ ಉದ್ಘಾಟಿಸಿ ಮಾತನಾಡಿದ ಅವರು, ಹಿರಿಯ ಹಾಸ್ಯ ಸಾಹಿತಿ ದಿ. ಗೌಡನಕಟ್ಟೆ ತಿಮ್ಮಯ್ಯನವರು ಸ್ಥಾಪಿಸಿದ ನಗೆಮಲ್ಲಿಗೆ ಸಂಸ್ಥೆ ಹಲವಾರು ವರ್ಷಗಳ ಕಾಲ ನಗರದಲ್ಲಿ ಏಪ್ರಿಲ್ 1ರಂದು ಮೂರ್ಖರ ದಿನಾಚರಣೆ ಮೂಲಕ ಹಾಸ್ಯ ಕಾರ್ಯಕ್ರಮ ಆಯೋಜಿಸಿ ನಗೆ ರಸದೌತಣ ನೀಡಿ ಹೆಸರಾಗಿದೆ. ಮೂರ್ಖರ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗ ವಹಿಸುವುದು ಯಾವುದೇ ಸಾಹಿತಿ, ಕಲಾವಿದರಿಗೆ ಹೆಮ್ಮೆಯ ವಿಚಾರವಾಗಿತ್ತು ಎಂದು ಹೇಳಿದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಹಿರಿಯ ಸಾಹಿತಿ ಡಾ.ಶೈಲಾ ನಾಗರಾಜ್, ಗೌಡನಕಟ್ಟೆ ತಿಮ್ಮಯ್ಯನವರು ಸ್ವತಃ ಹಾಸ್ಯ ಸಾಹಿತಿಯಾಗಿ, ಸಜ್ಜನಿಕೆಯಿಂದ ಎಲ್ಲರೊಂದಿಗೆ ಹಾಸ್ಯಮಯವಾಗಿ ಬೆರೆಯುತ್ತಿದ್ದರು. ಆಶಯ ನುಡಿಗಳನ್ನಾಡಿದ ಸಂಶೋಧನಾ ಮಾರ್ಗದರ್ಶಕಿ ಡಾ.ಪ್ರಿಯಾಂಕ ಎಂ.ಜಿ, ಇಂದಿನ ಒತ್ತಡದ ಬದುಕಿನಲ್ಲಿ ನಗು, ನೆಮ್ಮದಿ ಮಾಯವಾಗಿದೆ ಎಂದು ಹೇಳಿದರು. ನಗೆಮಲ್ಲಿಗೆ ಬಳಗದ ಎಂ.ಕೆ. ನಾಗರಾಜ ರಾವ್, ಅಬ್ಬಿನಹೊಳೆ ಸುರೇಶ್, ಜಿ.ಎನ್. ರಾಧಾಕೃಷ್ಣ, ಗೌ.ತಿ. ರಂಗನಾಥ್, ಡಿ.ವಿ. ಶೇಷಾಚಲ, ದೊಂಬರನಹಳ್ಳಿ ನಾಗರಾಜ್, ಗೌ.ತಿ. ಸೋಮನಾಥ್, ವೆನ್ನೆಲ ಕೃಷ್ಣ ಮೊದಲಾದವರು ಭಾಗವಹಿಸಿದ್ದರು.

ವಿವಿಧೆಡೆಗಳಿಂದ ಆಗಮಿಸಿದ್ದ 25ಕ್ಕೂ ಹೆಚ್ಚು ಹಾಸ್ಯಪಟುಗಳು ಪ್ರದರ್ಶನ ನೀಡಿ ವೀಕ್ಷಕರನ್ನು ರಂಜಿಸಿದರು.



ಸಾಹಿತಿಗಳು ಭಾಗಿ

ಗೌಡನಕಟ್ಟೆ ತಿಮ್ಮಯ್ಯನವರ ನಂತರ ಅವರ ಆಶಯವನ್ನು ನಗೆ ಮಲ್ಲಿಗೆ ಬಳಗ ಮುಂದುವರೆಸಿಕೊಂಡು ಹೋಗುತ್ತಿದೆ ಎಂದರು. ನಗೆಮಲ್ಲಿಗೆ ಮೂರ್ಖರ ದಿನಾಚರಣೆಯಲ್ಲಿ ನಾಡಿನ ಹೆಸರಾಂತ ಸಾಹಿತಿಗಳು, ಪ್ರಸಿದ್ಧ ಹಾಸ್ಯ ಕಲಾವಿದರೂ ಭಾಗವಹಿಸಿ ಜನರನ್ನು ರಂಜಿಸಿದ್ದರು.

ಕಿರುಸುದ್ದಿ

ಜಿಲ್ಲಾಮಟ್ಟದ ವೃತ್ತಿ ಶಿಕ್ಷಣ ಪ್ರದರ್ಶನ, ಕೆರಿಯರ್ ಮೇಳ

ರಾಮನಗರ: ಡಯಟ್‌ಯಿಂದ ವೃತ್ತಿ ಶಿಕ್ಷಣ ಪ್ರದರ್ಶನ ಮತ್ತು ಕೆರಿಯರ್ ಮೇಳವನ್ನು ಮಾ.17ರಂದು ಬೆಳಿಗ್ಗೆ 9 ರಿಂದ ಸಂಜೆ 5.30ರವರೆಗೆ ನಗರದ ಎಂ.ಜಿ ರಸ್ತೆಯ ವಾಟರ್ ಟ್ಯಾಂಕ್ ಸರ್ಕಲ್ ಬಳಿಯಿರುವ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್)ಯಲ್ಲಿ ಆಯೋಜಿಸಲಾಗಿದೆ. 2025-26ನೇ ಸಾಲಿನಲ್ಲಿ ಡಯಟ್ ನಲ್ಲಿ ಜಿಲ್ಲಾ ವೃತ್ತಿಪರ ಮತ್ತು ವೃತಿ ಮಾರ್ಗದರ್ಶನ ಘಟವನ್ನು ಸ್ಥಾಪಿಸಲಾಗಿದೆ. ಈ ಘಟಕದ ಪ್ರಮುಖ ಉದ್ದೇಶವು ಪ್ರೌಢಶಾಲೆ ಹಾಗೂ ಪದವಿ ಪೂರ್ವ ಹಂತದ ವಿದ್ಯಾರ್ಥಿಗಳಿಗೆ ಅವರ ಸಾಮರ್ಥ್ಯ ಮತ್ತು ಆಸಕ್ತಿಗಳಿಗೆ ಅನುಗುಣವಾಗಿ ವೃತ್ತಿ ಪ್ರಪಂಚದ ಅರಿವು ಮತ್ತು ಆಯ್ಕೆಗಳ ಮಾರ್ಗದರ್ಶನ ನೀಡುವುದಾಗಿದೆ. ಇದರ ಭಾಗವಾಗಿ ಆಯೋಜಿಸಲಾಗಿರುವ ವೃತ್ತಿ ಶಿಕ್ಷಣ ಪ್ರದರ್ಶನ ಮತ್ತು ಕೆರೆಯರ್ ಮೇಳದಲ್ಲಿ ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ವೃತ್ತಿ ಮಾರ್ಗದರ್ಶನ, ಪ್ರವೇಶ ಪರೀಕ್ಷೆಗಳು, ಸಂಪನ್ಮೂಲ ಕೇಂದ್ರ, ಸೌಲಭ್ಯಗಳ ಮಾಹಿತಿ ಹಾಗೂ ತಜ್ಞರ ಮಾರ್ಗದರ್ಶನದಂತಹ ಉಪಯುಕ್ತ ಮಾಹಿತಿ ನೀಡಲಾಗುವುದು ಎಂದು ಜಿಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಉಪನಿರ್ದೇಶಕರು (ಅಭಿವೃದ್ಧಿ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಏ.5ರಂದು ವಿಎಸ್‌ಎಸ್‌ಎನ್ ಚುನಾವಣೆ

ಮಾಗಡಿ: ತಾಲೂಕಿನ ಮತ್ತೀಕೆರೆ ವಿವಿದೋದ್ದೇಶ ಪ್ರಾಥಮಿಕ ಕೃಷಿ ಗ್ರಾಮೀಣ ಸಹಕಾರ ಸಂಘ ಆಡಳಿತ ಮಂಡಲಿ ನಿರ್ದೇಶಕರ ಚುನಾವಣೆ ಏ.5ರಂದು ನಡೆಯಲಿದೆ ಎಂದು ಮುಖ್ಯಾಕಾರ್ಯನಿರ್ವಹಧಿಕಾರಿ ಸುರೇಶ್ ತಿಳಿಸಿದ್ದಾರೆ. ಸಹಕಾರ ಸಂಘದ ಆಡಳಿತ ಮಂಡಲಿ ನಿರ್ದೇಶಕರ ಸ್ಥಾನಗಳಿಗೆ ಚುನಾವಣಾ ದಿನಾಂಕದಿಂದ ಮುಂದಿನ 5(ಐದು) ವರ್ಷಗಳ ಅವಧಿಗೆ ಚುನಾವಣೆ ನಡೆಸಲು ಏ.5 ಭಾನುವಾರದಂದು ನಿಗದಿಪಡಿಸಿ, ಮಾ.28ರಂದು ನಾಮಪತ್ರ ಸಲ್ಲಿಸಲು ಕಡೆಯ ದಿನವಾಗಿದ್ದು ನಾಮಪತ್ರಗಳ ಪರಿಶೀಲನೆ ಮಾ.29 ರಂದು ಬೆಳಿಗ್ಗೆ 11ಗಂಟೆಗೆ ನಡೆಯಲಿದೆ. ನಾಮಪತ್ರ ವಾಪಸ್ಸು ಪಡೆಯಲು ಮಾ.30ರಂದು ಮದ್ಯಾಹ್ನ 3 ಗಂಟೆಯವರೆಗೆ ಸಮಯ ನಿಗಧಿಪಡಿಸಲಾಗಿದೆ. ಚುನಾವಣಾ ವೇಳಾ ಪಟ್ಟಿಯನ್ನು ಈಗಾಗಲೇ ಸಂಘದ ಎಲ್ಲಾ ಅರ್ಹ ಸದಸ್ಯ ಮತದಾರರಿಗೆ ಅಂಚೆ ಮುಖಾಂತರ ಕಳುಹಿಸಲಾಗಿದ್ದು, ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಲು ಕೋರಿದೆ ಹಾಗೂ ಸಂಘದ ಕೆಲಸದ ವೇಳೆಯಲ್ಲಿ ಮುಖ್ಯ ಕಾರ್ಯನಿರ್ವಾಹಕರನ್ನು ಸಂಪರ್ಕಿಸಿ ಗುರುತಿನ ಚೀಟಿ ಪಡೆಯಬಹುದು ತಿಳಿಸಲಾಗಿದೆ.

ಅರ್ಜಿ ಆಹ್ವಾನ

ರಾಮನಗರ: ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಟ್ರಸ್ಟ್ ಮತ್ತು ಕೆನರಾ ಬ್ಯಾಂಕ್‌ನ ಸಹಯೋಗದಲ್ಲಿ ನಡೆಸುತ್ತಿರುವ ರುಡ್‌ಸೆಟ್ ಸಂಸ್ಥೆಯ ವತಿಯಿಂದ ಕಂಪ್ಯೂಟರ್ ಡಿಟಿಪಿ ಕುರಿತು 45 ದಿನಗಳ ಉಚಿತ ತರಬೇತಿಯನ್ನು ಏಪ್ರಿಲ್ 2ರಿಂದ ಹಮ್ಮಿಕೊಳ್ಳಲಾಗಿದ್ದು, ಗ್ರಾಮೀಣ ಆಸಕ್ತ ನಿರುದ್ಯೋಗಿ ಯುವಕ-ಯುವತಿಯರು ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಆಸಕ್ತರು 18 ರಿಂದ 50ವರ್ಷ ವಯೋಮಾನದವರಾಗಿದ್ದು, ಕನ್ನಡ ಭಾಷೆ ಓದಲು ಮತ್ತು ಬರೆಯಲು ಬಲ್ಲವರಾಗಿರಬೇಕು. ಗ್ರಾಮೀಣ ಭಾಗದ ಬಿಪಿಎಲ್ ಕಾರ್ಡ್ ಹಾಗೂ ಆಧಾರ್ ಕಾರ್ಡ್ ಅನ್ನು ಕಡ್ಡಾಯವಾಗಿ ಹೊಂದಿರಬೇಕು. ಆಸಕ್ತರು ಅರ್ಜಿ ಸಲ್ಲಿಸಲು ಹಾಗೂ ಹೆಚ್ಚಿನ ಮಾಹಿತಿಗಾಗಿ ರುಡ್ ಸೆಟ್ ಸಂಸ್ಥೆ, ಅರಿಶಿನಕುಂಟೆ, ನೆಲಮಂಗಲ ತಾಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಅಥವಾ ಮೊಬೈಲ್ ಸಂಖ್ಯೆ 9380162042, 9481506564, 9481778047 ಅನ್ನು ಸಂಪರ್ಕಿಸಬಹುದಾಗಿದೆ ಎಂದು ರುಡ್‌ಸೆಟ್ ಸಂಸ್ಥೆಯ ಬೆಂಗಳೂರು ಶಾಖೆಯ ನಿರ್ದೇಶಕರಾದ ರವಿಕುಮಾರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಂಗ್ರೆಸ್ ನೂತನ ಯುವ ಸಮಿತಿ ರಚನೆ

ಚಿಕ್ಕನಾಯಕನಹಳ್ಳಿ: ತಾಲೂಕು ಯುವಕಾಂಗ್ರೆಸ್‌ನ ಅಧ್ಯಕ್ಷ ಎನ್.ಎಸ್.ಮಣಿಕಂಠರಿಂದ ನೂತನ ಯುವ ಸಮಿತಿ ರಚಿಸಲಾಯಿತು. ಮಾಜಿ ಶಾಸಕ ಕೆ.ಎಸ್. ಕಿರಣ್‌ಕುಮಾರ್ ಹಾಗೂ ತುಮಕೂರು ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ನಿಖಿಲ್ ರಾಜಣ್ಣ ಆದೇಶದ ಮೇರೆಗೆ ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರದ ನೂತನ ಯುವ ಕಾಂಗ್ರೆಸ್ ಸಮಿತಿ ರಚಿಸಲಾಯಿತು. ಈ ಸಮಿತಿಯಲ್ಲಿ ಪದಾಧಿಕಾರಿಗಳಾಗಿ ಎನ್.ಎಸ್.ಮಣಿಕಂಠ (ನಂದಿಹಳ್ಳಿ) ಅಧ್ಯಕ್ಷರು, ಉಪಾಧ್ಯಕ್ಷರಾಗಿ ಬೀರೇಶ್ (ಚಿನಾಹಳ್ಳಿ) ಸೈಯದ್ ಅಲಿ(ಹುಳಿಯಾರು) ದರ್ಶನ್ ಕೆ.ಎಲ್. (ಕಂಚಿಗಾನಹಳ್ಳಿ)ಸುರೇಶ್‌ನಾಯ್ಕ್ ಆರ್.(ಸಾಲ್ಕಟ್ಟೆತಾಂಡ್ಯ), ಪ್ರಧಾನ ಕಾರ್ಯದರ್ಶಿಗಳಾಗಿ ವೇದಶಂಕರ್ ಎ.ಎಸ್., ಮಹಮದ್ ಜಬೀಉಲ್ಲಾ, ನಾಗೇಂದ್ರಸ್ವಾಮಿ ಬಿ.ಆರ್. ಸಮಿತಿಯ ಕಾರ್ಯದರ್ಶಿಗಳಾಗಿ ಎಂ.ಬಿ.ಹನುಮೇಗೌಡ,ಲೋಕೇಶ್ ಎಸ್.ಎಸ್. ಜಬೀವುಲ್ಲಾ ಬಿ.ಎನ್.ಅಭಿಜಿತ್ ಕೆ. ಮಂಜುನಾಥ್ ಜೆ.ಡಿ. ಪುನೀತ್, ಚೇತನ್, ಕುಮಾರ್ ಕೆ.ಆರ್.ಸೊರೆಸ್ವಾಮಿ



ರಾಮನಗರ ಜಾನಪದ ಲೋಕದ ದೊಡ್ಡಮನೆಯಲ್ಲಿ 'ಸಂವಿಧಾನವೇ ಬೆಳಕು-ಅಂಬೇಡ್ಕರರೇ ದಿಕ್ಕು' ಕುರಿತ ಡಾ.ಬಿ.ಆರ್.ಅಂಬೇಡ್ಕರ್ ಚಿಂತನೆಗಳ ಕುರಿತ ರಾಜ್ಯಮಟ್ಟದ ಅಧ್ಯಯನ ಕಮ್ಮಟದ ಸಮಾರೋಪ ನಡೆಯಿತು.

ಅಂತಾರಾಷ್ಟ್ರೀಯ ಪೈ ದಿನ ಆಚರಣೆ

ಕನಕಪುರ: ರೂರಲ್ ಕಾಲೇಜು ಶಿಕ್ಷಣ ಸಂಸ್ಥೆಯಲ್ಲಿ ಗಣಿತ ವಿಭಾಗವು ಅಂತಾರಾಷ್ಟ್ರೀಯ ಪೈ ದಿನವನ್ನು ಉತ್ಸಾಹದಿಂದ ಆಚರಿಸಿತು. ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿ ಬೆಂಗಳೂರಿನ ಸೇಂಟ್ ಜೋಸೆಫ್ ವಿಶ್ವವಿದ್ಯಾಲಯದ ಡಾ. ಡೇವಿಡ್ ಎ. ಕಲಕೋರ್ಪ್ ಕಾರ್ಯಕ್ರಮವನ್ನು ಉದ್ಘಾಟಿಸಿದ ನಂತರ ಮಾತನಾಡಿ, ಉನ್ನತ ಶಿಕ್ಷಣ ಮತ್ತು ಗಣಿತಶಾಸ್ತ್ರದಲ್ಲಿ ಸಂಶೋಧನೆಯಲ್ಲಿ ಗಣಿತದ ಸ್ಥಿರಾಂಕ ಪೈನ ಮಹತ್ವ ಮತ್ತು ಅನ್ವಯಿಕೆಗಳನ್ನು ಎತ್ತಿ ತೋರಿಸಿದರು. ಐಐಟಿ, ಐಐಎಸ್.ಸಿ, ಐಎಸ್‌ಐ, ಐಐಎಸ್‌ಇಆರ್ ಮತ್ತು ಸಿಎಂಐನಂತಹ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಉನ್ನತ ಅಧ್ಯಯನವನ್ನು ಮುಂದುವರಿಸಲು ಐಐಟಿ-ಜೆ.ಎ.ಎಂ ಪರೀಕ್ಷೆಗೆ ಹೇಗೆ ತಯಾರಿ ನಡೆಸಬೇಕು ಎಂಬುದರ ಕುರಿತು ಅವರು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು. ಗಣಿತ ವಿಭಾಗದಲ್ಲಿ ಅತಿ ಹೆಚ್ಚು ಅಂಕ ಗಳಿಸಿದ 2ನೇ ಬಿಎಸ್ಸಿ, ಎನ್ ಎಸ್‌ಎಸ್‌ನ ಸೌಂದರ್ಯ ಆರ್ 100/100), 3ನೇ ಬಿಎಸ್‌ಸಿ, ಎನ್‌ಎಸ್‌ಎಸ್ ಪ್ರಿಯಾಂಕಾ ಎಂ.(98/100,), ಮತ್ತು ನೇ ಬಿಎಸ್‌ಸಿ, ಎನ್‌ಸಿಸಿಹರ್ಷಿತ್‌ಗೌಡ (98/100, 2) ರವರುಗಳಿಗೆ ಬಹುಮಾನ ವಿತರಿಸಲಾಯಿತು.

ಸಂಸ್ಥೆಯ ಅಧ್ಯಕ್ಷ ಎಚ್.ಕೆ.ಶ್ರೀಕಂಠ, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ.ಎಂ.ಎಸ್.ಕೆಂಪೇಗೌಡ ವಹಿಸಿದ್ದರು. ಶ್ರೀ ಎ.ಪಿ.ಪ್ರಕಾಶ್, ವಿಜ್ಞಾನ ವಿಭಾಗದ ಡಾ.ವಿಮಲಾ ಟಿ, ಜ್ಯೋತಿ, ಡಾ.ರಘು ವಿ.ಡಿ ಉಪಸ್ಥಿತರಿದ್ದರು.



ಕನಕಪುರ ರೂರಲ್ ಕಾಲೇಜು ಶಿಕ್ಷಣ ಸಂಸ್ಥೆಯಲ್ಲಿ ಗಣಿತ ವಿಭಾಗವು ಅಂತಾರಾಷ್ಟ್ರೀಯ ಪೈ ದಿನವನ್ನು ಉತ್ಸಾಹದಿಂದ ಆಚರಿಸಿತು.

ಬಡ ಮಹಿಳೆಯರಿಗೆ ಗೃಹಲಕ್ಷ್ಮಿ ಮೂಲಕ ಆರ್ಥಿಕ ನೆರವು: ಕೆ.ರಾಜು

ಯೋಜನೆ ಸದ್ಬಳಕೆಯಾಗಲಿ

ರಾಮನಗರ: ಗೃಹಲಕ್ಷ್ಮೀ ಯೋಜನೆ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆ. ಇದಕ್ಕಾಗಿ ಸಾವಿರಾರು ಕೋಟಿ ಅನುದಾನವನ್ನು ಸರ್ಕಾರ ಪ್ರತಿ ವರ್ಷ ಖರ್ಚು ಮಾಡುತ್ತಿದೆ. ಬಡ ಮತ್ತು ಮಧ್ಯಮ ವರ್ಗದ ಮಹಿಳೆಯರಿಗೆ ಆರ್ಥಿಕವಾಗಿ ನೆರವಾಗಲು ಸರ್ಕಾರ ಪ್ರತಿ ತಿಂಗಳು ನೇರವಾಗಿ ಅವರ ಖಾತೆಗೆ 2 ಸಾವಿರ ಮೊತ್ತ ಜಮೆ ಮಾಡುವ ಕಾರ್ಯಕ್ರಮ. ಇದನ್ನು ಯಶಸ್ವಿಯಾಗಿ ಅನುಷ್ಠಾನ ಮಾಡುವುದು, ಅನುದಾನ ಸದ್ಬಳಕೆಯಾಗುವಂತೆ ಮಾಡುವ ಕರ್ತವ್ಯ ನಮ್ಮೆಲ್ಲರ ಮೇಲಿದೆ ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಜಿಲ್ಲಾಧ್ಯಕ್ಷರಾದ ಕೆ.ರಾಜು ತಿಳಿಸಿದರು.

ಇಲ್ಲಿನ ಜಿಲ್ಲಾ ಪಂಚಾಯತ್ ಸಂಭಾಗಣದಲ್ಲಿ ಗೃಹಲಕ್ಷ್ಮೀ ಯೋಜನೆ ಅನುಷ್ಠಾನದ ಕುರಿತು ಅಂಗನವಾಡಿ ಕಾರ್ಯಕರ್ತೆಯರಿಗೆ ಜಿಲ್ಲಾ ಗ್ಯಾರೆಂಟಿ ಯೋಜನೆಗಳ ಅನುಷ್ಠಾನ ಸಮಿತಿ ಹಾಗೂ ಮಹಿಳಾ ಮಕ್ಕಳ ಕಲ್ಯಾಣ ಇಲಾಖೆ ಸಹಯೋಗದೊಂದಿಗೆ ನಡೆದ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ಗೃಹಲಕ್ಷ್ಮೀ ಯೋಜನೆ ಅನುಷ್ಠಾನಗೊಂಡ 27 ತಿಂಗಳಾಗಿದೆ. ಆದರೆ ಈವರೆಗೆ ರಾಜ್ಯದಲ್ಲಿ 1.44 ಲಕ್ಷ ಗೃಹಲಕ್ಷ್ಮೀ ಯೋಜನೆ ಫಲಾನುಭವಿಗಳು ಮೃತಪಟ್ಟಿದ್ದಾರೆ. ಆದರೂ ಮಾಹಿತಿಯ ಕೊರತೆಯ ಕಾರಣ ಇವರ ಖಾತೆ ಕೋಟ್ಯಾಂತರ ಹಣ ಜಮೆಯಾಗಿದೆ. ಈ ಪೈಕಿ ಮೃತರ ವಾರಸುದಾರರು ಎಟಿಎಂ ಮೂಲಕ ಮೃತ ಗೃಹಲಕ್ಷ್ಮೀಯರ ಖಾತೆಯಿಂದ ಬರೋಬ್ಬರಿ ಒಟ್ಟು 69 ಕೋಟಿ ಹಣವನ್ನು ಡ್ರಾ ಮಾಡಿದ್ದಾರೆ ಎಂದರು. ದುರ್ವಿನಿಯೋಗದ ನಂತರ ಎಚ್ಚೆತ್ತ ಸರ್ಕಾರ ಇದನ್ನು ತಪ್ಪಿಸಲು ಹಲವು ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಇಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಪ್ರಮುಖ ಪಾತ್ರ ವಹಿಸಬೇಕಿದೆ. ಫಲಾನುಭವಿಗಳು ಮೃತರಾದರ ಸಂದರ್ಭದಲ್ಲಿ ಮರಣ ಪ್ರಮಾಣ ಪತ್ರ ನೀಡಿ, 2,000 ಸಾವಿರ ಖಾತೆಗೆ ಬರುವುದನ್ನು ನಿಲ್ಲಿಸುವಂತೆ ಹೇಳಲು ಯಾರೂ ಆಸಕ್ತಿ ತೋರುವುದಿಲ್ಲ. ನಂತರ ಹಣ ಜಮೆ ಮಾಡುವುದನ್ನು ನಿಲ್ಲಿಸುವಂತೆ ಸೂಚಿದರೂ ಅಷ್ಟರಲ್ಲಿ ಅವರ ಖಾತೆಗೆ 2,000 ಜಮೆ ಆಗಿರುತ್ತದೆ ಎಂದು ಹೇಳಿದರು. ಈ ಹಿನ್ನೆಲೆಯಲ್ಲಿ ಅಂಗನವಾಡಿ ಕಾರ್ಯಕರ್ತೆಯರು ತಮ್ಮ ಕಾರ್ಯಕ್ಷೇತ್ರ ವ್ಯಾಪ್ತಿಯಲ್ಲಿ ಗೃಹಲಕ್ಷ್ಮೀ ಫಲಾನುಭವಿಗಳು ಯಾರಾದರೂ ಮೃತರಾದರೆ. ತಕ್ಷಣ ಇಲಾಖೆಗೆ ಮಾಹಿತಿ ನೀಡಬೇಕು. ನಂತರ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರು ಸೇವಾ ಸಿಂಧು ಲಾಗಿನ್‌ನಲ್ಲಿ ಮುಂದಿನ ಕ್ರಮ ಕೈಗೊಳ್ಳಲಿದ್ದಾರೆ. ಜಿಲ್ಲೆಗೆ ಈವರೆಗೆ 1,427 ಕೋಟಿ ಅಧಿಕ ಮೊತ್ತವನ್ನು 2.81 ಲಕ್ಷ ಗೃಹಲಕ್ಷ್ಮೀ ಫಲಾನುಭವಿಗಳ ಖಾತೆಗೆ ಜಮೆ ಮಾಡಲಾಗಿದೆ ಎಂದು ವಿವರಿಸಿದರು.

ಮುಂದಿನ ದಿನಗಳಲ್ಲಿ ಇದಾಗದಂತೆ ಕ್ರಮ ಕೈಗೊಳ್ಳಬೇಕು ಎಂಬುದು ಸಮಿತಿ ಉದ್ದೇಶ ಎಂದು ತಿಳಿಸಿದರು. ಸಭೆಯಲ್ಲಿ ಗ್ಯಾರಂಟಿ ಯೋಜನೆಗಳ ತಾಲೂಕುಸಮಿತಿ ಅಧ್ಯಕ್ಷ ವಿ.ಎಚ್.ರಾಜು, ಸದಸ್ಯರಾದ ಮಹದೇವಯ್ಯ, ಕುಮಾರ್, ಶಂಕರೇಗೌಡ, ಅರ್ಪಿತಾ, ಶೋಭಾ ಸೇರಿದಂತೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಗಳು ಹಾಗೂ ಇತರರು ಇದ್ದರು.



> ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಲ್ಲೊಂದಾದ ಗೃಹಲಕ್ಷ್ಮೀ ದುರುಪಯೋಗವಾಗಿದ್ದು, ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ 6,500ಕ್ಕೂ ಅಧಿಕ ಗೃಹಲಕ್ಷ್ಮೀ ಫಲಾನುಭವಿಗಳ ಖಾತೆಗೆ ಪ್ರತಿ ತಿಂಗಳು ರೂ.2000 ಜಮೆಯಾಗಿದ್ದು, ಕೋಟ್ಯಾಂತರ ರೂ. ಹಣ ದುರ್ವಿನಿಯೋಗವಾಗಿದೆ.
> ■ ಕೆ.ರಾಜು, ಜಿಲ್ಲಾಧ್ಯಕ್ಷ

ಸಿಲಿಂಡರ್ ದರ ಹೆಚ್ಚಳ, ವ್ಯತ್ಯಯ ಖಂಡಿಸಿ ಪ್ರತಿಭಟನೆ

ರಾಮನಗರ: ಸಿಲಿಂಡರ್ ದರ ಹೆಚ್ಚಳ ಹಾಗೂ ಪೂರೈಕೆಯಲ್ಲಿ ವ್ಯತ್ಯಯ ಖಂಡಿಸಿ ಜಿಲ್ಲಾ ಕಾಂಗ್ರೆಸ್ ಮಹಿಳಾ ಘಟಕದ ಕಾರ್ಯಕರ್ತರು ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ ಪ್ರತಿಭಟನೆ ನಡೆಸಿದರು. ಐಜೂರು ವೃತ್ತದಲ್ಲಿ ಜಮಾವಣೆಗೊಂಡ ಮಹಿಳಾ ಮತ್ತು ಕಾಂಗ್ರೆಸ್ ಕಾರ್ಯಕರ್ತರು ಖಾಲಿ ಸಿಲಿಂಡರ್ ಹಿಡಿದು ಕೇಂದ್ರ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು.

ಗ್ಯಾಸ್ ಸಿಲಿಂಡರ್ ಬೆಲೆ ಏರಿಕೆ ಹಾಗೂ ಅಭಾವವಾದರೂ ಕೇಂದ್ರ ಸರ್ಕಾರ ಸಾರ್ವಜನಿಕರ ಸಮಸ್ಯೆಗೆ ಸ್ಪಂದಿಸುತ್ತಿಲ್ಲ. ಈ ಬಗ್ಗೆ ಕಿಂಚಿತ್ತು ಕಾಳಜಿ ಇಲ್ಲದೆ ಕೇಂದ್ರ ಸರ್ಕಾರ ಅಗತ್ಯ ವಸ್ತುಗಳ ಬೆಲೆ ಏರಿಸುತ್ತಲೇ ಬಂದಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಜಿಲ್ಲಾ ಕಾಂಗ್ರೆಸ್ ಮಹಿಳಾ ಘಟಕದ ಕೋಕಿಲರಾಣಿ ಮಾತನಾಡಿ, ಗ್ಯಾಸ್ ಸಿಲಿಂಡರ್ ಬೆಲೆ ಏರಿಸುವ ಅವಶ್ಯಕತೆ ಏನಿತ್ತು. ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿಯಂತಹ ಭ್ರಷ್ಟ ಸರ್ಕಾರ ಮತ್ತೊಂದಿಲ್ಲ. ನಿರಂತರವಾಗಿ ಬಡ ಜನರ ಬದುಕಿನ ಮೇಲೆ ಬರೆ ಎಳೆಯುತ್ತಲಿದೆ. ಪ್ರಧಾನಿ ಮೋದಿಅಮೇರಿಕಾದಕೈಗೊಂಬೆಯಂತೆ ವರ್ತಿಸುತ್ತಿದ್ದಾರೆ. ಗ್ಯಾಸ್ ಸಿಲಿಂಡರ್ ಬೆಲೆ ಏರಿಕೆ ಕಡಿಮೆ ಮಾಡದಿದ್ದಲ್ಲಿ ಹೋರಾಟ ತೀವ್ರಗೊಳಿಸುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಸ್. ಗಂಗಾಧರ್, ಮಾಜಿ ಶಾಸಕ ಹಾಗೂ ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಕೆ.ರಾಜು. ತಾಲ್ಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ವಿ.ಎಚ್.ರಾಜು, ಕಾರ್ಮಿಕ ಘಟಕದ ಜಿಲ್ಲಾಧ್ಯಕ್ಷ ಪುಟ್ಟರಾಜು, ನಗರಸಭೆ ಸದಸ್ಯೆ ನಾಗಮ್ಮ, ಮುಖಂಡರಾದ ರೈಡ್ ನಾಗರಾಜು ಇತರರು ಇದ್ದರು.



ಕೇಂದ್ರಸರ್ಕಾರದ ಬೆಲೆ ಏರಿಕೆ, ಜನ ವಿರೋಧಿ ನೀತಿಯಿಂದ ಅನ್ಯಾಯ

ರಾಮನಗರ: ಅಡುಗೆ ಅನಿಲ ಸಿಲಿಂಡರ್‌ಗಳ ಬೆಲೆ ಏರಿಕೆ ಹಾಗೂ ಪೂರೈಕೆಯಲ್ಲಿ ಆದ ವ್ಯತ್ಯಯದ ಕುರಿತು ಕೇಂದ್ರ ಸರ್ಕಾರದ ವಿರುದ್ಧ ಜಿಲ್ಲಾ ಕಾಂಗ್ರೆಸ್ ಕಾರ್ಮಿಕ ಘಟಕದ ಪದಾಧಿಕಾರಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಕುರಿತು ನಗರದಲ್ಲಿ ಸುದ್ದಿಗಾರರೊಂಗೆ ಮಾತನಾಡಿದ ಜಿಲ್ಲಾ ಕಾಂಗ್ರೆಸ್ ಕಾರ್ಮಿಕ ಘಟಕದಅಧ್ಯಕ್ಷಪುಟ್ಟರಾಜು ಅವರು, ಕೇಂದ್ರದ ನಿರ್ಲಕ್ಷ್ಯ ಧೋರಣೆಯಿಂದ ಅಡುಗೆ ಅನಿಲ ಬೆಲೆ ಏರಿಕೆ, ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ಹೋಟೆಲ್ ಉದ್ಯಮಿಗಳು, ಬೀದಿಬದಿ ವ್ಯಾಪಾರಿಗಳು ಸೇರಿದಂತೆ ಇಡೀ ಕರ್ನಾಟಕ ರಾಜ್ಯದ ಏಳು ಕೋಟಿ ಜನರಿಗೆ ಕೇಂದ್ರ ಸರ್ಕಾರದ ಜನ ವಿರೋಧಿ ನೀತಿಯಿಂದಾಗಿ ಅನ್ಯಾಯವಾಗುತ್ತಿದೆ ಎಂದರು. ಸಿಲಿಂಡರ್ ಬೆಲೆ ಏರಿಕೆಯಿಂದ ಕೋಟ್ಯಾಂತರ ಕುಟುಂಬಗಳಿಗೆ ಸಮಸ್ಯೆಯಾಗಿದೆ. ಹೆಚ್ಚಿನ ಹಣ ನೀಡಿದರೂ ಸಿಲಿಂಡರ್ ದೊರೆಯುತ್ತಿಲ್ಲ. ಪೂರೈಕೆ ವ್ಯತ್ಯಯದಿಂದ ಹೋಟೆಲ್ ಉದ್ಯಮಿಗಳು ಬಾಗಿಲು ಹಾಕುವ ಸ್ಥಿತಿಗೆ ಬಂದಿದ್ದಾರೆ ಎಂದು ಕಿಡಿಕಾರಿದರು.

ಮುಂದಿನ ದಿನಗಳಲ್ಲಿ ರಾಜ್ಯದ ಉಪಮುಖ್ಯಮಂತ್ರಿ ಹಾಗೂ ರಾಜ್ಯ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಡಿ.ಕೆ.ಶಿವಕುಮಾರ್ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯನವರು ನೇತೃತ್ವದಲ್ಲಿ ಹಾಗೂ ರಾಜ್ಯದ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಕೇಂದ್ರ ಸರ್ಕಾರದ ಬೆಲೆ ಏರಿಕೆ ನೀತಿಯನ್ನು ಖಂಡಿಸಿ ರಾಜ್ಯದಾದ್ಯಂತ ಉಗ್ರವಾದ ಪ್ರತಿಭಟನೆಯನ್ನು ನಡೆಸುತ್ತೇವೆ ಎಂದು ಎಚ್ಚರಿಕೆ ನೀಡಿದರು

ಚನ್ನಪಟ್ಟಣ ಕಾಂಗ್ರೆಸ್ ಕಾರ್ಮಿಕ ಘಟಕದ ತಾಲ್ಲೂಕು ಅಧ್ಯಕ್ಷ ರಾಜ್‌ಮಹೇಂದರ್, ರಾಜ್ಯ ಜಂಟಿ ಕಾರ್ಯದರ್ಶಿ ಶಕೀಲ್, ಜಿಲ್ಲಾ ಉಪಾಧ್ಯಕ್ಷ ಸೈಯದ್ ಆರೀಫ್ ಉಲ್ಲಾ, ಜಿಲ್ಲಾ ಕಾರ್ಯದರ್ಶಿ ವಿನಯ್, ರಾಮನಗರ ಟೌನ್ ಅಧ್ಯಕ್ಷೆ ಜಯಲಕ್ಷ್ಮಮ್ಮ, ಹಾರೋಹಳ್ಳಿ ಹೋಬಳಿ ಅಧ್ಯಕ್ಷ ಅಶ್ವಥ್, ಬಿಡದಿ-ಕೂಟಗಲ್ ಹೋಬಳಿ ಅಧ್ಯಕ್ಷ ಸಿದ್ದರಾಜು, ರಾಮನಗರ ತಾಲ್ಲೂಕು ಅಧ್ಯಕ್ಷ ದೇವರಾಜು, ಚನ್ನಪಟ್ಟಣ ನಗರ ಕಾರ್ಯದರ್ಶಿ ಎಂ.ಸಿ.ಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.



ಪ್ರಾಮಾಣಿಕ ನಾಯಕ ಕೆಂಗಲ್ ಹನುಮಂತಯ್ಯ

ರಾಮನಗರ: ಕರ್ನಾಟಕದ ನಿಜವಾದ ಶಿಲ್ಪಿಯಾಗಿದ್ದ ಮಾಜಿ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಅವರು, ಕಡು ಪ್ರಾಮಾಣಿಕರಾಗಿದ್ದರು. ಮಾದರಿ ರಾಜಕಾರಣಕ್ಕೆ ಮೇಲ್ಪಂಕ್ತಿ ಹಾಕಿದ ಮುತ್ಸದ್ದಿ ರಾಜಕಾರಣಿಯಾಗಿದ್ದರು ಎಂದು ಮಾಜಿ ಶಾಸಕ ಸಿ.ಎಂ. ಲಿಂಗಪ್ಪ ತಿಳಿಸಿದರು. ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಜನ ಜಾಗೃತಿ ವೇದಿಕೆ ಮತ್ತು ನಮ್ಮವರು ಬಳಗವು ಹಮ್ಮಿಕೊಂಡಿದ್ದ 'ಕೆಂಗಲ್ ಹನುಮಂಗಯ್ಯ ನೆನಪು' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. 1972ರಲ್ಲಿ ನನಗೆ ರಾಮನಗರದಿಂದ ಕಾಂಗ್ರೆಸ್ ಟಿಕೆಟ್ ಕೊಡಿಸಲು ಕೆಂಗಲ್ ಮುಂದಾಗಿದ್ದರು. ಆದರೆ, 1978ರ ಹೊತ್ತಿಗೆ ಕಾಂಗ್ರೆಸ್ ತೊರೆದು ಸ್ವರಾಜ್ಯ ಪಕ್ಷ ಸ್ಥಾಪಿಸಿದ್ದ ಅವರ ಮತ್ತು ನನ್ನ ನಡುವೆ, ರಾಮನಗರದಲ್ಲಿ ಸ್ಪರ್ಧೆ ವಿಷಯಕ್ಕೆ ಬಿರುಕುಂಟಾಯಿತು. ಕಾಂಗ್ರೆಸ್ ಕಟ್ಟಾಳಾಗಿದ್ದ ನಾನು ಅವರನ್ನು ಬೆಂಬಲಿಸಲಿಲ್ಲವೆಂಬ ಕೋಪ ಅವರಿಗಿತ್ತು ಎಂದರು. ಖ್ಯಾತ ವಕೀಲರಾಗಿದ್ದ ಕೆಂಗಲ್ ಅವರಿಗೆ ಕಕ್ಷಿದಾರರು ಕ್ಯೂ ನಿಲ್ಲುತ್ತಿದ್ದರು. ಕ್ಯೂ ತಗ್ಗಿಸಲು 1000 ಸಾವಿರಕ್ಕಿಂತ ಕಡಿಮೆ ಶುಲ್ಕಕ್ಕೆ ಕೇಸ್ ತೆಗೆದುಕೊಳ್ಳುವುದಿಲ್ಲ ಎಂದರೂ ಜನ ಬರುತ್ತಿದ್ದರು. ಆಗ ಅವರು ವಕೀಲಿಕೆ ಬಿಟ್ಟು ದೇಶಸೇವೆಗೆ ತೊಡಗಿಸಿಕೊಂಡರು. ಕಿರಿಯ ವಯಸ್ಸಿನಲ್ಲೇ ಮುಖ್ಯಮಂತ್ರಿ ಹುದ್ದೇಗೇರಿದರು ಎಂದು ತಿಳಿಸಿದರು. ಸಂವಿಧಾನ ರಚನೆ ಸಲಹಾ ಸಮಿತಿಯ ಚುನಾಯಿತ ಸದಸ್ಯರಾಗಿದ್ದ ಕೆಂಗಲ್ ಅವರನ್ನು ಅಂಬೇಡ್ಕರ್ ಮೆಚ್ಚಿಕೊಂಡಿದ್ದರು. ಒಮ್ಮೆ ಅಂಬೇಡ್ಕರ್ ಅವರು, 'ನೀವು ನನ್ನ ಸಂಗ ಮಾಡುವುದು ನಿಮ್ಮ ಕಾಂಗ್ರೆಸ್‌ನವರಿಗೆ ಇಷ್ಟವಿಲ್ಲ' ಎಂದಿದ್ದರು. ಅದಕ್ಕೆ ಕೆಂಗಲ್, 'ನಾನು ನನ್ನ ಪಕ್ಷ ಬಿಡುವೆ. ನಿಮ್ಮ ಸಂಗವನ್ನಲ್ಲ' ಎಂದಿದ್ದರು ಎಂದರು. ಇತಿಹಾಸಕಾರ ಡಾ. ತಲಕಾಡು ಚಿಕ್ಕರಂಗೇಗೌಡ ಮಾತನಾಡಿ, ಏಕೀಕರಣಕ್ಕೆ ಕೈ ಹಾಕಿದರೆ ಅಧಿಕಾರ ಹೋಗುತ್ತದೆ ಎಂದು ಗೊತ್ತಿದ್ದರೂ, ಕೆಂಗಲ್ ಅವರು ಅಖಂಡ ಕರ್ನಾಟಕದ ದೃಷ್ಟಿಯಿಂದ ಏಕೀಕರಣಕ್ಕೆ ಮುಂದಾಗಿ ಅಧಿಕಾರ ಕಳೆದುಕೊಂಡರು. ತಮಗೋಸ್ಕರ ದುಡಿದವರಿಗೆ ಈ ಮಣ್ಣು ಏನನ್ನೂ ಕೊಟ್ಟಿಲ್ಲ ಎಂಬುದು ಕೆಂಗಲ್ ಅವರ ವಿಷಯದಲ್ಲಿ ನಿಜವಾಯಿತು. ವಿಧಾನಸೌಧ ನಿರ್ಮಾತೃವಾದ ಕೆಂಗಲ್ ಪ್ರತಿಮೆಯನ್ನು ವಿಧಾನಸೌಧದ ಮುಂಭಾಗ ಇಡಬೇಕು ಎಂದು ನಾವು ಹೋರಾಟ ಮಾಡಿದೆವು ಎಂದರು.



ನಗರಸಭೆ ಅಧ್ಯಕ್ಷ ಕೆ. ಶೇಷಾದ್ರಿ, ರೈತ ಹೋರಾಟಗಾರ್ತಿ ಅನಸೂಯಮ್ಮ, ಸಾಹಿತಿ ಡಾ. ರವಿಕುಮಾರ್ ಬಾಗಿ, ಬಮೂಲ್ ನಿರ್ದೇಶಕ ಪಿ. ನಾಗರಾಜ್, ಲೇಖಕರಾದ ಡಾ. ದೊಡ್ಡಬೋರಯ್ಯ, ಡಾ. ಬಂಜಗೆರೆ ಜಯಪ್ರಕಾಶ್, ಜಿ. ಶಿವಣ್ಣ ಕೊತ್ತೀಪುರ, ಹೋರಾಟಗಾರ ಕುಮಾರಸ್ವಾಮಿ ಇದ್ದರು.

ನೇಣು ಬಿಗಿದ ಸ್ಥಿತಿಯಲ್ಲಿ ಮಹಿಳೆ ಸಾವು: ಕೊಲೆ ಶಂಕೆ

ಕನಕಪುರ: ತಾಲೂಕಿನ ಸಾತನೂರು ಹೋಬಳಿ ಗೇರಹಳ್ಳಿ ಗ್ರಾಮದಲ್ಲಿ ಮಹಿಳೆಯೊಬ್ಬರು ನೇಣು ಬಿಗಿದ ಸ್ಥಿತಿಯಲ್ಲಿ ಸಂಶಯಾಸ್ಪದವಾಗಿ ಸಾವನ್ನಪ್ಪಿದ್ದು, ಈ ಬಗ್ಗೆ ಗ್ರಾಮದಲ್ಲಿ ಕೊಲೆ ಶಂಕೆ ವ್ಯಕ್ತವಾಗಿದೆ. ಗೇರಹಳ್ಳಿ ಗ್ರಾಮದ ಶಿವಕುಮಾರ್ ಪತ್ನಿ ನವ್ಯ (28)ದಾರುಣವಾಗಿ ಸಾವನ್ನಪ್ಪಿರುವ ಮಹಿಳೆಯಾಗಿದ್ದಾರೆ. ಕುಟುಂಬದ ಕೌಟುಂಬಿಕ ವಿಚಾರವಾಗಿ ಆಗಾಗ ಮನೆಯಲ್ಲಿ ಜಗಳವಾಗುತ್ತಿತ್ತು, ಕಳೆದ 2 ದಿನಗಳಿಂದ ಮನೆಯಲ್ಲಿ ಗದ್ದಲ ಗಲಾಟೆ ನಡೆದಿತ್ತು, ಸೋಮವಾರ ಬೆಳಗಾಗುವಷ್ಟರಲ್ಲಿ ಮನೆಯ ಮೇಲ್ಭಾಗದ ಕಿಟಕಿಗೆ ನೇಣು ಬಿಗಿದ ಸ್ಥಿತಿಯಲ್ಲಿ ಮೃತಪಟ್ಟಿರುವುದು ಕಂಡು ಬಂದಿದೆ. ಮನೆಯ ಬಾಗಿಲು ತೆಗೆದು ನೋಡಿದಾಗ ಪ್ರಕರಣ ಬೆಳಕಿಗೆ ಬಂದಿದೆ.

ಗ್ರಾಮಸ್ಥರು ಸಾತನೂರು ಪೋಲಿಸರಿಗೆ ವಿಷಯ ತಿಳಿಸಿದ್ದಾರೆ, ಸರ್ಕಲ್ ಇನ್ಸ್‌ಪೆಕ್ಟರ್ ವಿಕಾಸ್‌ಗೌಡ, ಸಬ್‌ಇನ್ಸ್‌ಪೆಕ್ಟರ್ ಸಮಂತ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಮೃತ ದೇಹವನ್ನು ಕೆಳಗಿಳಿಸಿ ಹಾರೋಹಳ್ಳಿ ಸಮೀಪದ ಖಾಸಗಿ ಆಸ್ಪತ್ರೆಗೆ ಮರಣೋತ್ತರ ಪರೀಕ್ಷೆಗೆ ರವಾನಿಸಿದ್ದಾರೆ. ಈ ಮಧ್ಯೆ ಮೃತಳ ಅತ್ತೆ-ಮಾವನವರಾದ ಕರಿಯಪ್ಪ, ಕಮಲಮ್ಮ, ಪತಿ ಶಿವಕುಮಾರ್ ನಾಪತ್ತೆಯಾಗಿದ್ದಾರೆ. ನವ್ಯ ಹಾಗೂ ಶಿವಕುಮಾರ್‌ರವರ 4 ವರ್ಷದ ಪುತ್ರ ಲಕ್ಕಿ ನನ್ನ ತಾಯಿಯ ಸಾವಿಗೆ ತಾತ ಅಜ್ಜಿ ಕಾರಣ ಎಂದು ಪೋಲಿಸರ ಹಾಗೂ ಗ್ರಾಮಸ್ಥರ ಮುಂದೆ ಹೇಳಿಕೆ ನೀಡಿದ್ದಾನೆ.

ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡಿರುವ ಪೋಲಿಸರು ಇದು ಆತ್ಮಹತ್ಯೆಯೋ ಅಥವಾ ಹಲ್ಲೆ ಮಾಡಿ ಸಾಯಿಸಿ ನಂತರ ನೇಣು ಬಿಗಿದಿದ್ದಾರೆಯೇ ಎಂಬ ಬಗ್ಗೆ ಪೋಲಿಸ್ ತನಿಖೆಯಿಂದ ಸತ್ಯ ಹೊರಬರಬೇಕಾಗಿದೆ.

ಹೈಕಮಾಂಡ್ ವಿರುದ್ಧ ಧಮ್ಮದೀವಿಗೆ ಟ್ರಸ್ಟ್ ಅಧ್ಯಕ್ಷ ಮಲ್ಲಿಕಾರ್ಜುನ್ ಕಿಡಿ

ಬಹುಜನರನ್ನು ನಿರ್ಲಕ್ಷಿಸಿದರೆ ಕಾಂಗ್ರೆಸ್ ನಿರ್ನಾಮ

ಕನಕಪುರ: ಬಹುಜನರನ್ನು ನಿರ್ಲಕ್ಷಿಸಿದರೆ ಅಥವಾ ಉದಾಸೀನ ಮಾಡಿದರೆ ದೇಶದಲ್ಲಿ ಕಾಂಗ್ರೆಸ್ ಪಕ್ಷ ನಿರ್ನಾಮವಾಗಲಿದೆ ಎಂದು ಧಮ್ಮದೀವಿಗೆ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷ ಮಲ್ಲಿಕಾರ್ಜುನ್ ಕಾಂಗ್ರೆಸ್ ಹೈಕಮಾಂಡ್ ವಿರುದ್ಧ ಕಿಡಿಕಾರಿದರು.

ಭಾನುವಾರ ಖಾಸಗಿ ಹೋಟೆಲ್‌ನಲ್ಲಿ ಜರುಗಿದ ಕಾನ್ಷಿ ರಾಂ ಜಯಂತಿ ಕಾರ್ಯಕ್ರಮದ ಉದ್ಘಾಟಿಸಿ ಮಾತನಾಡಿದ ಅವರು, ಮೋತಿಲಾಲ್, ನೆಹರು, ಇಂದಿರಾಗಾಂಧಿಯಂತಹ ಪ್ರಮುಖ ನಾಯಕರುಗಳು ದೇಶದ ದಲಿತರನ್ನು ಮತಗಳಿಕೆಯ ಯಂತ್ರಗಳನ್ನಾಗಿ ಮಾಡಿಕೊಂಡಿದ್ದರು. ಇಂದಿರಾಗಾಂಧಿ ದಲಿತರ ಬಗ್ಗೆ ಕಾಳಜಿ ಇದ್ದರೆ ಅಂದು ಕಾನ್ಷಿ ರಾಂ ರವರನ್ನು ಎಂದೋ ಮುಖ್ಯಮಂತ್ರಿ ಮಾಡಬಹುದಿತ್ತು, ಹಾಗೆ ಮಾಡದೆ ಕಾಂಗ್ರೆಸ್ ಪಕ್ಷ ಕಾನ್ಷಿ ರಾಂ ರವರನ್ನು ತುಳಿದು ಹಾಕಿತ್ತು. ಇದೀಗ ಕಾಂಗ್ರೆಸ್‌ನ ಪರಮೋಚ್ಚ ನಾಯಕ ರಾಹುಲ್ ಗಾಂಧಿ ಕಾನ್ಷಿ ರಾಂರವರು ನಮ್ಮ ಪಕ್ಷದಲ್ಲಿ ಇದ್ದಿದ್ದರೇ ನಾವು ಮುಖಯಮಂತ್ರಿ ಮಾಡುತ್ತಿದ್ದೆವು ಎಂದು ಬೊಬ್ಬೆ ಹೊಡೆಯುತ್ತಿದ್ದಾರೆ. ಇವರ ಎಲ್ಲಾ ಮಾತು ನಾಟಕೀಯವಾಗಿದೆ. ಕಾಂಗ್ರೆಸ್ ಪಕ್ಷ ಎಂದೂ ದಲಿತರನ್ನು ಉದ್ದಾರ ಮಾಡಿಲ್ಲ, ದಲಿತರಿಗೆ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಹಾಗೂ ಧಾರ್ಮಿಕ ರಂಗಗಳಲ್ಲಿ ದಲಿತರನ್ನು ಹೊಸಕಿ ಹಾಕಿದೆ. ಇದು ಕಾಂಗ್ರೆಸ್ಸಿನ ದೊಡ್ಡ ಸಾಧನೆಯಾಗಿದೆ, ಹಾಗೆಯೇ ದೇಶದ ಎಲ್ಲಾ ರಾಜ್ಯಗಳಲ್ಲೂ ದಲಿತರನ್ನು ನಾಶ ಮಾಡಿದ್ದು ಕಾಂಗ್ರೆಸ್ ಪಕ್ಷ ಎಂದು ಕಿಡಿಕಾರಿದರು.



ರಾಜ್ಯ ರಾಜಕಾರಣದ ಬಗ್ಗೆ ಮಾತನಾಡಿದ ಅವರು, ಡಿ.ಕೆ.ಶಿವಕುಮಾರ್ ಕಾಂಗ್ರೆಸ್ ಪಕ್ಷವನ್ನು ನಾನು ಬೆಳೆಸಿದ್ದು ಎನ್ನುತ್ತಾರೆ, ಹಾಗೆ ಬೆಳೆಸಿದ್ದರೆ ಹೊರಗಿನವರಾದ ಸಿದ್ದರಾಮಯ್ಯನವರನ್ನು ಓಲೈಕೆ ಮಾಡಿ ಕರೆ ತಂದು 2 ಬಾರಿ ಮುಖ್ಯಮಂತ್ರಿ ಮಾಡುವ ಅವಶ್ಯಕತೆ ಏನು ಇತ್ತು ಎಂದು ಕಾಂಗ್ರೆಸ್ ನೀತಿ ನಿಯಮಗಳ ವಿರುದ್ಧ ವ್ಯಂಗವಾಡಿದರು.

ಶೋಷಿತಸಮುದಾಯದಏಳಿಗೆಗಾಗಿತಮ್ಮಜೀವನವನ್ನೇ ಮುಡುಪಾಗಿಟ್ಟಿದ್ದ ಕಾನ್ಷಿ ರಾಂ ಒಬ್ಬ ಸನ್ಯಾಸಿ, ತ್ಯಾಗಿಯಾಗಿ ತಮ್ಮ ಬದುಕನ್ನು ಶೋಷಿತ ಸಮುದಾಯದ ಸಂಪೂರ್ಣ ಮೀಸಲಾಗಿ ಇಟ್ಟಿದ್ದರು. ನಮಗೊಂದು ಶಕ್ತಿಯಿದೆ ಅದು ರಾಜಕೀಯ ಶಕ್ತಿ ಆ ಶಕ್ತಿಯನ್ನು ನಾವು ಗೆಲ್ಲಲೇಬೇಕು, ಆ ಶಕ್ತಿಯನ್ನು ನಾವು ಹೆಗಲೇರಿಸಿಕೊಂಡರೆ ನಮ್ಮ ಜನರ ಹಿತವನ್ನು ನಾವು ಹೇಗೆ ಸುಲಭವಾಗಿ ಕಾಪಾಡಬಹುದು ಎಂಬ ನಿಟ್ಟಿನಲ್ಲಿ ರಾಜಕೀಯ ಶಕ್ತಿಯನ್ನು ಪ್ರದರ್ಶಿಸಿ ರಾಜಕೀಯದಲ್ಲಿ ಮೈಲುಗಲ್ಲಾಗಿ ನಿಂತಿದ್ದಾರೆ. ಸಂವಿಧಾನ ಶಿಲ್ಪಿ ಡಾ.ಬಿ.ಆರಂಬೇಡ್ಕರ್ ಶೋಷಿತರಿಗೆ ರಾಜಕೀಯ ಭದ್ರ ಬುನಾದಿ ಹಾಕಿದ್ದರು, ಅವರ ಹಾದಿಯಲ್ಲಿಯೇ ಕಾನ್ಷಿ ರಾಂ ಪಂಜಾಬ್‌ನ ರೋಪರ್ ಜಿಲ್ಲೆಯ ಖಾವಾಸ್ಪುರ ಎಂಬ ಹಳ್ಳಿಯಲ್ಲಿ ಜನಿಸಿ ಅಂಬೇಡ್ಕರ್‌ರವರ ವಿಚಾರಧಾರೆಯಲ್ಲಿ ದೀನ, ದಲಿತ, ದುರ್ಬಲರ ಬದುಕಿಗೆ ದಾರಿದೀಪವಾಗಿದ್ದಾರೆ. ಒಟ್ಟಾರೆ ಇವರು ರಾಜಕೀಯವ ವೈಚಾರಿಕತೆಯನ್ನು ತೋರಿಸಿಕೊಟ್ಟವರಾಗಿದ್ದಾರೆ ಎಂದರು.

ಡಾ. ತೇಜೋವತಿ, ಭರತ್‌ಕುಮಾರ್, ಹರಿಹರ ಬಸವರಾಜು, ಸೋಮಶೇಖರ್ ಹಲವರು ಮಾತನಾಡಿ, ಬಹುಜನರು ಕಾನ್ಷಿ ರಾಂ ರವರನ್ನು ಮರೆಯಲಾರದ ದಲಿತರ ಸ್ಪೂರ್ತಿಯಾಗಿದ್ದಾರೆ ಎಂದು ಬಣ್ಣಿಸಿದರು. ಶಿವಮಾದು, ದಲಿತ ಮುಖಂಡರು, ಕಾರ್ಯಕರ್ತರು, ಟ್ರಸ್ಟ್‌ನ ಪದಾಧಿಕಾರಿಗಳು ಭಾಗವಹಿಸಿದ್ದರು.

ಸಂತೆಮಾವತೂರು ಸಹಕಾರ ಸಂಘದ ಚುನಾವಣೆ ರದ್ದು

ಮತಪತ್ರ ದುರುಪಯೋಗ: ಪ್ರತಿಭಟನೆ

ಕುಣಿಗಲ್: ಸಂತೆ ಮಾವತ್ತೂರು ಪ್ರಾರ್ಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆಯಲ್ಲಿ ಚುನಾವಣಾ ಅಧಿಕಾರಿ ಮತ ಪತ್ರವನ್ನು ದುರುಪಯೋಗ ಪಡಿಸಿ ಕೊಂಡು ಕಾಂಗ್ರೆಸ್ ಮುಖಂಡರಿಗೆ ಅನುಕೂಲ ಮಾಡುತ್ತಿದ್ದಾರೆ ಎಂದು ಆರೋಪಿಸಿ ಜೆಡಿಎಸ್ ಮತ್ತು ಬಿಜೆಪಿ ಮುಖಂಡರು ಪ್ರತಿಭಟನೆ ನಡೆಸಿದ ಪರಿಣಾಮ ಚುನಾವಣೆಯನ್ನು ರದ್ದು ಮಾಡಲಾಯಿತು.

ತಾಲೂಕಿನ ಕಸಬಾ ಹೋಬಳಿ ಸಂತೆಮಾವತೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸಾಲಗಾರರ ಕ್ಷೇತ್ರದಲ್ಲಿ 20 ಮಂದಿ ಕಣದಲ್ಲಿ ಉಳಿದಿದ್ದರು. ಕಾಂಗ್ರೆಸ್ ಮತ್ತು ಜೆಡಿಎಸ್ ಬಿಜೆಪಿ ಬೆಂಬಲಿತರು ನಿರ್ದೇಶಕ ಸ್ಥಾನಕ್ಕೆ ಸ್ಪರ್ಧಿಸಿದ್ದು ಮತದಾನ ಪ್ರಾರಂಭವಾದ ನಂತರ ಮಧ್ಯಾಹ್ನದ ಸಮಯದಲ್ಲಿ ಕಾಂಗ್ರೆಸ್ ಬೆಂಬಲಿತ ಮತದಾರರೊಬ್ಬರಿಗೆ ಚುನಾವಣಾ ಅಧಿಕಾರಿ ಮೊದಲೇ ನೀಡಿದ್ದ 60 ಕ್ಕೂ ಹೆಚ್ಚು ಮತ ಪತ್ರಗಳಲ್ಲಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳಿಗೆ ಮತ ಹಾಕಿ ಚುನಾವಣಾ ಅಧಿಕಾರಿಗಳ ಸಹಾಯದಿಂದ ಮತ ಪೆಟ್ಟಿಗೆಗೆ ಹಾಕುವಾಗ ಜೆಡಿಎಸ್ ಮತ್ತು ಬಿಜೆಪಿ ಕಾರ್ಯಕರ್ತರು ತಡೆದು ತೀವ್ರ ಆಕ್ರೋಶ ವ್ಯಕ್ತಪಡಿಸಿ ಚುನಾವಣಾ ಅಧಿಕಾರಿಯನ್ನು ತರಾಟೆಗೆ ತೆಗೆದುಕೊಂಡರು.

ಸುದ್ದಿ ಹರಡುತ್ತಿದ್ದಂತೆ ಮಾಜಿ ಸಚಿವ ಡಿ ನಾಗರಾಜಯ್ಯ, ತುಮಲ್ ನಿರ್ದೇಶಕ ಡಿ ಕೃಷ್ಣಕುಮಾರ್, ಬಿ ಶಿವಣ್ಣ, ಜಗದೀಶ್ ಸೇರಿದಂತೆ ನೂರಾರು ಕಾರ್ಯಕರ್ತರು ಜಮಾವಣೆ ಗೊಂಡು ಚುನಾವಣಾ ಕೇಂದ್ರಕ್ಕೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿ ಚುನಾವಣಾ ರದ್ದು ಮಾಡಲು ಒತ್ತಾಯಿಸಿ ಚುನಾವಣೆ ಅಧಿಕಾರಿಗಳ ಅಮಾನತ್ತಿಗೆ ಆಗ್ರಹಿಸಿದರು. ಪರಿಸ್ಥಿತಿ ವಿಕೋಪಕ್ಕೆ ತಿರುಗುವ ಹಂತದಲ್ಲಿ ಚುನಾವಣಾ ಅಧಿಕಾರಿಗಳು ಎಚ್ಚೆತ್ತು ಚುನಾವಣೆ ರದ್ದು ಮಾಡಿರುವುದಾಗಿ ಘೋಷಿಸಿದರು. ತಾಲೂಕಿನ ಸಹಕಾರ ಕ್ಷೇತ್ರದಲ್ಲಿ ಬಿಜೆಪಿ ಜೆಡಿಎಸ್ ಪ್ರಾಬಲ್ಯ ಕಸಿಯಲು ಶಾಸಕರ ಕುಮ್ಮಕ್ಕಿನಿಂದಲೇ ಚುನಾವಣಾಧಿಕಾರಿ ಸುನಿಲ್ ಮತ್ತು ಶಿವಾನಂದ ರೆಡ್ಡಿ ಮತ ಪತ್ರಗಳನ್ನು ದುರ್ಬಳಕೆ ಮಾಡಿಕೊಂಡು ಅಕ್ರಮ ಎಸಗಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿ ಕಾಂಗ್ರೆಸ್ ಅಧಿಕಾರ ಹಿಡಿಯಲು ವಾಮಮಾರ್ಗ ಅನಿಸರಿಸುತ್ತಿದೆ. ಅಧಿಕಾರಿಗಳು ಶಾಸಕರ ಕೈಗೊಂಬೆಯಂತೆ ಕಾರ್ಯನಿರ್ವಹಿಸುತ್ತಿರುವುದು ಚುನಾವಣಾ ವ್ಯವಸ್ಥೆಯನ್ನು ಬುಡಮೇಲು ಮಾಡುತ್ತಿದೆ, ಅಧಿಕಾರಿಗಳ ವಿರುದ್ಧ ಪ್ರಕರಣ ದಾಖಲಾಗಿದ್ದರು ಆರೋಪಿಯನ್ನ ಬಂಧಿಸಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಾಲನಾಯಕ್ ನೀಡಿದ ದೂರಿನ ಮೇರೆಗೆ ಹುಲಿಯೂರುದುರ್ಗ ಪೊಲೀಸರು ಪ್ರಕರಣ ದಾಖಲಿಸಿ ಕೊಂಡು ಚುನಾವಣಾ ಅಧಿಕಾರಿ ಸುನಿಲ್ ರವರನ್ನು ವಶಕ್ಕೆ ಪಡೆಯಲಾಗಿದೆ ಎಂದು ಸಿಪಿಐ ನವೀನ್‌ಗೌಡ ತಿಳಿಸಿದ್ದಾರೆ. ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಪುರುಷೋತ್ತಮ್ ಭೇಟಿ ನೀಡಿ ಪರಿಶೀಲಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲು ಸೂಚಿಸಿದ್ದಾರೆ. ಅಮೃತೂರು ಪೊಲೀಸ್ ಠಾಣೆಯ ಸಿಪಿಐ ನವೀನ್ ಗೌಡ, ಕುಣಿಗಲ್ ಇನ್ಸ್‌ಪೆಕ್ಟರ್ ಮಾಧ್ಯಾನಾಯಕ್ ಸಿಬ್ಬಂದಿಗಳು ಸ್ಥಳದಲ್ಲಿಯೇ ಇದ್ದು ಗಲಾಟೆ ನಿಯಂತ್ರಿಸಿದ್ದಾರೆ.

ಕಿರುಸುದ್ದಿ

ವದಂತಿಗಳಿಗೆ ಕಿವಿಗೊಡದಂತೆ ಜಿಲ್ಲಾಧಿಕಾರಿ ಮನವಿ

• ಕೋಲಾರ: ಸಾಮಾಜಿಕ ಜಾಲ ತಾಣಗಳಲ್ಲಿ ಗೃಹ ಬಳಕೆ ಅಡುಗೆ ಅನಿಲ ಸಿಲಿಂಡರ್‌ಗಳ ಪೂರೈಕೆಯಲ್ಲಿ ವ್ಯತ್ಯಯವಾಗುತ್ತಿರುವ ಬಗ್ಗೆ ವದಂತಿಗಳು ಹರಿದಾಡುತ್ತಿರುತ್ತದೆ. ಈ ಹಿಂದಿನಂತೆಯೇ ಜಿಲ್ಲೆಗೆ ಅಗತ್ಯವಿರುವ ಪ್ರಮಾಣದ ಅಡುಗೆ ಅನಿಲ ಸಿಲಿಂಡರ್‌ಗಳು ಸರಬರಾಜಾಗುತ್ತಿದ್ದು, ಮಾ.15 ರಂತೆ 10279 ಗೃಹ ಬಳಕೆ ಅಡುಗೆ ಅನಿಲ ಸಿಲಿಂಡರ್‌ಗಳ ದಾಸ್ತಾನು ಲಭ್ಯವಿರುತ್ತದೆ. ಗ್ರಾಹಕರು/ಸಾರ್ವಜನಿಕರು ಇಂತಹ ವದಂತಿಗಳಿಗೆ ಯಾರು ಸಹ ಕಿವಿಗೊಡಬಾರದೆಂದು ಹಾಗೂ ಆತಂಕಕ್ಕೊಳಗಾಗಬಾರದು. ಗೃಹ ಬಳಕೆ ಸಿಲಿಂಡರ್‌ಗಳನ್ನು ಅಕ್ರಮವಾಗಿ ಹೆಚ್ಚುವರಿಯಾಗಿ ದಾಸ್ತಾನು ಮಾಡಿಕೊಳ್ಳುವುದು, ವಾಣಿಜ್ಯ ಉದ್ದೇಶಗಳಿಗೆ ಬಳಕೆ ಮಾಡುವುದು ಮತ್ತು ಗೃಹಬಳಕೆ ಸಿಲಿಂಡರ್‌ಗಳನ್ನು ದುರ್ಬಳಕೆ ಮಾಡುವ ಪ್ರಕರಣಗಳನ್ನು ಪತ್ತೆಹಚ್ಚಲು ಜಿಲ್ಲಾ ಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ತಂಡಗಳನ್ನು ರಚನೆ ಮಾಡಿ ನೋಡಲ್ ಅಧಿಕಾರಿಗಳನ್ನು ಸಹ ನೇಮಕಮಾಡಲಾಗಿದೆ. ತಹಶೀಲ್ದಾರ್ ಮತ್ತು ಆಹಾರ ಇಲಾಖೆಯ ಸಿಬ್ಬಂದಿ ವರ್ಗದವರೂ ಸಹ ತಪಾಸಣೆ ಮಾಡುತ್ತಿದ್ದು, ಮಾ.15 ರಂದು ಬಂಗಾರಪೇಟೆ ತಾಲ್ಲೂಕಿನವರು ಅನಧಿಕೃತ ದಾಸ್ತಾನು ಮಾಡಿದ್ದು, 9 ಅನಿಲ ಸಿಲಿಂಡರ್‌ಗಳನ್ನು ಜಪ್ತಿ ಮಾಡಿ ಕ್ರಮ ಜರುಗಿಸಲಾಗಿದೆ. ಅಕ್ರಮವಾಗಿ ಅನಿಲ ಸಿಲಿಂಡರ್‌ಗಳನ್ನು ದಾಸ್ತಾನು ಮಾಡುವ ಕೃತ್ಯಗಳು ಕಂಡುಬಂದಲ್ಲಿ ಅಂತಹವರ ವಿರುದ್ಧ ಅಗತ್ಯ ವಸ್ತುಗಳ ಕಾಯ್ದೆ-1955 ರನ್ವಯ ಪ್ರಕರಣ ದಾಖಲಿಸಿ ಕಠಿಣ ಕ್ರಮ ಜರುಗಿಸಲಾಗುವುದು. ಗ್ರಾಹಕರಗಳ ಯಾವುದೇ ದೂರುಗಳು ಇದ್ದಲ್ಲಿ ಉಪನಿರ್ದೇಶಕರು ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ರವರ ಕಛೇರಿಯಲ್ಲಿನ ಸಹಾಯವಾಣಿ ದೂರವಾಣಿ ಸಂಖ್ಯೆ:08152243521ಗೆ ಕರೆ ಮಾಡಬಹುದೆಂದು ಜಿಲ್ಲಾಧಿಕಾರಿಗಳ ಕಛೇರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯುತ್ ವ್ಯತ್ಯಯ

• ಕೋಲಾರ: 220ಕೆವಿ ವಿದ್ಯುತ್ ಸ್ವೀಕರಣಾ ಕೇಂದ್ರ ಕೋಲಾರ ನಗರದಿಂದ ಹೊರ ಹೋಗುವ ಎಫ್-3 ದೊಡ್ಡಹಸಾಳ, ಎಫ್-9 ಅರಹಳ್ಳಿ ಮತ್ತು ಎಫ್-13 ಮಹಾಲಕ್ಷ್ಮಿ ಲೇಔಟ್ ಕೋಲಾರ ನಗರ ಫೀಡರ್‌ನ ಮಾರ್ಗಗಳಲ್ಲಿ ಫೀಡರ್ ನಿರ್ವಹಣಾ ಕಾರ್ಯವನ್ನು ಕೈಗೆತ್ತಿಕೊಂಡಿರುವುದರಿಂದ ಈ ಕೋಲಾರ ನಗರ ಫೀಡರ್‌ನ ಮಾರ್ಗಗಳಿಂದ ವಿದ್ಯುತ್ ಸರಬರಾಜಾಗಲಿದೆ.

ಆನ್‌ಲೈನ್‌ನಲ್ಲಿ 1ರೂ.ಗೆ ಹಾಲು ಮಾರಾಟ ಮಾಡಲಿ

• ಕೋಲಾರ: ಅಮೇಜಾನ್ ಸಹಭಾಗಿತ್ವದ ಫ್ಲಿಪ್ ಕಾರ್ಟ್‌ನಲ್ಲಿ ಲೀಟರ್ ಹಾಲನ್ನು ಒಂದು ರೂಗೆ ಮಾರಾಟದ ಅವಕಾಶ ಕಲ್ಪಿಸಿರುವುದು ಅತ್ಯಂತ ಖಂಡನೀಯವಾಗಿದ್ದು, ಕೂಡಲೇ ಈ ಮಾರಾಟವನ್ನು ನಿಲ್ಲಿಸುವಂತೆ ಆನ್‌ಲೈನ್ ವೇದಿಕೆಗಳನ್ನು ನಿರ್ಬಂಧಿಸಬೇಕು ಎಂದು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಉಪಾಧ್ಯಕ್ಷ ನುಕ್ಕನಹಳ್ಳಿ ಶ್ರೀರಾಮ್ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳನ್ನು ಆಗ್ರಹಿಸಿದರು. ಈ ಕುರಿತು ಪತ್ರಿಕಾ ಹೇಳಿಕೆ ಮೂಲಕ ಖಂಡಿಸಿದ ಅವರು ಕೋಟ್ಯಾಂತರ ಸಂಖ್ಯೆಯಲ್ಲಿ ರೈತರು ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದು ತಮ್ಮ ಜೀವನೋಪಾಯಕ್ಕಾಗಿ ಅವಲಂಬಿಸಿದ್ದಾರೆ. ಸಹಕಾರಿ ಹಾಲು ಒಕ್ಕೂಟವನ್ನು ತೀವ್ರ ಬಿಕ್ಕಟ್ಟಿಗೆ ದೂಡುವ ಇಂತಹ ಅಮೆಜಾನ್ ಮತ್ತು ಫ್ಲಿಪ್ ಕಾರ್ಟ್ ಮಾರಾಟದ ಕುತಂತ್ರವನ್ನು ತಕ್ಷಣ ನಿಲ್ಲಿಸಿದಿದ್ದರೆ ಅಮೇಜಾನ್ ಕಚೇರಿಗಳ ಎದುರು ಹೈನುಗಾರಿಕೆ ರೈತರ ತೀವ್ರ ಪ್ರತಿಭಟನೆ ಯನ್ನು ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಮಾರುಕಟ್ಟೆ ಕುತಂತ್ರದ ವಿರುದ್ಧ ಸಹಕಾರಿ ಒಕ್ಕೂಟಗಳನ್ನು ರಕ್ಷಿಸಲು ವಿಫಲರಾಗಿರುವ ಹಾಗೂ ಒಕ್ಕೂಟ ವ್ಯವಸ್ಥೆಗೆ ವಿರುದ್ದವಾಗಿ ಸಹಕಾರಿ ಸಂಸ್ಥೆಗಳ ಮೇಲೆ ಸವಾರಿ ಮಾಡುವ ಮೂಲಕ ಕಾರ್ಪೊರೇಟ್ ದಾಳಿಗೆ ಸಿಲುಕಿಸುತ್ತಿರುವ ಕೇಂದ್ರ ಸಹಕಾರಿ ಸಚಿವ ಅಮಿತ್ ಷಾ ಈ ಮಾರಾಟ ಕುತಂತ್ರದ ಹೊಣೆ ಹೊತ್ತು ರಾಜೀನಾಮೆ ನೀಡಬೇಕು ಎಂದು ನುಕ್ಕನಹಳ್ಳಿ ಶ್ರೀರಾಮ್ ಒತ್ತಾಯಿಸಿದರು.

ಒಂಟಿ ಸಲಗ ಹಾವಳಿ: ಅನ್ನದಾತರಿಗೆ ಆತಂಕ

• ಬಂಗಾರಪೇಟೆ: ತಾಲೂಕಿನ ಬೂದಿಕೋಟೆ ಹೋಬಳಿಯಲ್ಲಿ ಒಂಟಿ ಸಲಗ ಕಾಣಿಸಿಕೊಂಡು ರೈತರನ್ನು ಆತಂಕಪಡುವಂತೆ ಮಾಡಿದೆ. ಕಳೆದ ಹಲವು ತಿಂಗಳುಗಳಿಂದ ಎಲ್ಲಿಯೂ ಕಾಣಿಸಕೊಳ್ಳದೆ ಆನೆಗಳು ರೈತರನ್ನು ನೆಮ್ಮದಿಯಾಗಿರುವಂತೆ ಮಾಡಿತ್ತು, ಆದರೆ ಈಗ ಮತ್ತೆ ಒಂಟಿ ಆನೆಯೊಂದು ಕಾಣಿಸಿಕೊಂಡು ರೈತರನ್ನು ಭೀತಿಯಲ್ಲಿರುವಂತೆ ಮಾಡಿದೆ, ಬೂದಿಕೋಟೆ ಹೋಬಳಿಯ ಗುಲ್ಲಹಳ್ಳಿ ಪಂಚಾಯಿತಿ ಸುತ್ತಮುತ್ತಲಿನ ಗ್ರಾಮಗಳಲ್ಲಿ ಒಂಟಿ ಸಲಗ ಅಟ್ಟಹಾಸ ಮುಂದುವರೆದಿದ್ದು ರಾತ್ರಿ ಕೊತ್ತೂರು ಗ್ರಾಮದ ರೈತ ಪ್ರಭಾಕರ್ ಎಂಬುವರ ಬೆಳೆದಿದ್ದ ಗಡ್ಡೆಕೋಸ್ ನಾಶ ಮಾಡಿದೆ, ಕೊಂಡಪ್ಪ ನಾಯಕ, ವೆಂಕಟರಾಮ್ ಅವರ ರಾಗಿ ಬೆಳೆಯನ್ನು ತುಳಿದು ನಾಶಪಡಿಸಿವೆ, ಶಂಕರಪ್ಪ ಅವರ ಪರಂಗಿ ಮರಗಳನ್ನು ನಾಶಮಾಡಿದ್ದು ಅನ್ನದಾತರನ್ನು ಆತಂಕಕ್ಕೆ ದೂಡಿದೆ.



ಬಂಗಾರಪೇಟೆ ನಗರದ ಹೊರವಲಯದ ತೋಟದ ಮನೆಯಲ್ಲಿರುವ ಪಕ್ಷದ ಕಚೇರಿಯಲ್ಲಿ ಕಾನ್ಶಿರಾಮ್ ಜನ್ಮದಿನಾಚರಣೆ ಕಾರ್ಯಕ್ರಮ ನಡೆಯಿತು.

ಕಾನ್ಶಿರಾಮ್ ಶೋಷಿತರ ಆಶಾಕಿರಣ

• ಬಂಗಾರಪೇಟೆ: ಕಾನ್ಶಿರಾಮ್ ಅವರು ಕೇವಲ ಒಬ್ಬ ರಾಜಕಾರಣಿಯಲ್ಲ, ಅವರು ಶೋಷಿತ ಸಮುದಾಯಗಳ ಪಾಲಿನ ಆಶಾಕಿರಣ, ಅವರ ತತ್ವಗಳನ್ನು ಜೀವನದಲ್ಲಿ ಮತ್ತು ರಾಜಕೀಯದಲ್ಲಿ ಅಳವಡಿಸಿಕೊಂಡಾಗ ಮಾತ್ರ ಸಮಾಜದಲ್ಲಿ ನಿಜವಾದ ಸಮಾನತೆ, ಸಾಮಾಜಿಕ ನ್ಯಾಯ ದೊರೆಯಲು ಸಾಧ್ಯ ಎಂದು ಸುಹೇಲ್‌ದೇವ್ ಭಾರತೀಯ ಸಮಾಜ ಪಕ್ಷದ ರಾಜ್ಯಾಧ್ಯಕ್ಷಪಿ.ಅಭಿಮನ್ಯು ಮಣಿ ಹೇಳಿದರು.

ನಗರದ ಹೊರವಲಯದ ತೋಟದ ಮನೆಯಲ್ಲಿರುವ ಪಕ್ಷದ ಕಚೇರಿಯಲ್ಲಿ ಆಯೋಜಿಸಿದ್ದ ಕಾನ್ಶಿರಾಮ್ ಅವರ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿ, ಕಾನ್ಸಿರಾಮ್ ಅವರು ಕಟ್ಟಿದ ಬಹುಜನ ಚಳುವಳಿ ಕೇವಲ ಅಧಿಕಾರ ಹಿಡಿಯುವುದಕ್ಕೆ ಸೀಮಿತವಾಗಿರಲಿಲ್ಲ, ಪ್ರತಿಯೊಬ್ಬ ಶೋಷಿತ ವ್ಯಕ್ತಿಗೂ ಘನತೆಯ ಬದುಕು ನೀಡುವುದು ಮತ್ತು ಅವರನ್ನು ಅಧಿಕಾರದ ಪಾಲುದಾರರನ್ನಾಗಿ ಮಾಡುವುದು ಅದರ ಮೂಲ ಉದ್ದೇಶವಾಗಿತ್ತು ಎಂದರು. ಮಾಗೊಂದಿ ನಾರಾಯಣಪ್ಪ, ಪಿವಿಸಿ ಮಣಿ, ಬಿ.ಕೆ. ಬಾಬು, ದಯಾ, ಕಿಶನ್ ನಾಥ್, ಸಾಗರ್, ಕೋಲಾರಪ್ಪ, ಉದಯ್ ಹಾಗೂ ಗಂಗಾಧರ್ ಸೇರಿದಂತೆ ಪ್ರಮುಖರು ಉಪಸ್ಥಿತರಿದ್ದರು.



ಕೋಲಾರದ ಶ್ರೀ ಮಹರ್ಷಿ ಯೋಗ ಮಂದಿರದಿಂದ ವರ್ಷಕ್ಕೆ 1 ಬಾರಿ ಬೇಸಿಗೆಯಲ್ಲಿ ನಡೆಸುವ ಸಹಲ್ ಹಾಗೂ ವೃತ್ತಿಕ ಸ್ನಾನ ಕಾರ್ಯಕ್ರಮ ಭಾನುವಾರ ಬೆಗ್ಲಿ ಹೊಸಹಳ್ಳಿ ಶ್ರೀ ಚೌಡೇಶ್ವರಿ ಅಮ್ಮನವರ ದೇವಸ್ಥಾನದಲ್ಲಿ ಯೋಗ ಶಿಕ್ಷಕರಾದ ಜಯಣ್ಣ ನೇತೃತ್ವದಲ್ಲಿ ನಡೆಯಿತು. 70 ಜನದವರೆಗೂ ಮೃತಿಕ ಮಣ್ಣನ್ನು ಹಚ್ಚಿಕೊಂಡು ಸಂತಸದಿಂದ ನಲಿದರು. ಟ್ರಸ್ಟಿಗಳು, ಕಾರ್ಯದರ್ಶಿಗಳು, ಪ್ರಬಂಧಕರು, ಎಲ್ಲಾ ಯೋಗ ಬಂಧುಗಳು ಭಾಗವಹಿಸಿದ್ದರು.

ನಾಳೆಯಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆ | ಪೋಷಕರೇ ಮಕ್ಕಳನ್ನು ಪ್ರೋತ್ಸಾಹಿಸಿ
ಸಕಾರಾತ್ಮಕ ಭಾವನೆ ಇರಲಿ

• ಕೋಲಾರ: ಜೀವನದಲ್ಲೇ ಮೊದಲ ಬಾರಿಗೆ ಪಬ್ಲಿಕ್ ಪರೀಕ್ಷೆ ಎದುರಿಸುತ್ತಿರುವ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳನ್ನು ನಿಂದಿಸದಿರಿ, ಆತ್ಮಸ್ಥೈರ್ಯ ತುಂಬಿ ಎಂದು ಪೋಷಕರಲ್ಲಿ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕಿ ಅಲ್ಮಾಸ್ ಫರ್ವಿನ್ ತಾಜ್ ಮನವಿ ಮಾಡಿದ್ದಾರೆ. ರಾಜ್ಯಾದ್ಯಂತ ಮಾ.18 ರಿಂದ ಆರಂಭಗೊಳ್ಳುವ ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ವಿದ್ಯಾರ್ಥಿಗಳು ಸಿದ್ದರಾಗಿದ್ದಾರೆ, ಅವರಲ್ಲಿ ಸಕಾರಾತ್ಮಕ ಭಾವನೆ ಬೆಳೆಸಿ, ಮನಸ್ಸಿಗೆ ನೋವಾಗುವ ರೀತಿ ನಿಂದಿಸದಿರಿ ಎಂದು ಸಲಹೆ ನೀಡಿದ್ದಾರೆ.

ಪರೀಕ್ಷೆಗೆ ಸಿದ್ದರಾಗಿರುವ ಮಕ್ಕಳಿಗೆ ಶಾಲಾ ಶಿಕ್ಷಣ ಇಲಾಖೆ ಪರವಾಗಿ ಶುಭ ಕೋರಿರುವ ಅವರು, ಗುಣಾತ್ಮಕ ಫಲಿತಾಂಶದ ದೃಷ್ಟಿಯಿಂದ ಮತ್ತು ಮಕ್ಕಳಲ್ಲಿನ ಪರೀಕ್ಷಾ ಭಯ ಹೋಗಲಾಡಿಸಲು ಮಕ್ಕಳಲ್ಲಿ ಧೈರ್ಯ ಮತ್ತು ಆತ್ಮವಿಶ್ವಾಸ ತುಂಬಲು ಹಲವಾರು ಸೂಚನೆ,ಸಲಹೆಗಳನ್ನು ನೀಡಿದ್ದಾರೆ.

ಆತ್ಮವಿಶ್ವಾಸ ಇರಲಿ, ಭಯ ಬೇಡ

ಉತ್ತೀರ್ಣನಾಗುತ್ತೇನೆಂಬ ಆತ್ಮವಿಶ್ವಾಶದಿಂದ ಹಾಗೂ ಶಿಕ್ಷಕರ ಮಾರ್ಗದರ್ಶನದಂತೆ ಅಭ್ಯಾಸ ಮಾಡಿ ಪಠ್ಯಪುಸ್ತಕ ಅಧ್ಯಯನಕ್ಕೆ ಒತ್ತು ನೀಡಿ ಎಂದು ಕರೆ ನೀಡಿದ್ದಾರೆ. ಬರವಣಿಗೆ ಸುಂದರವಾಗಿರಲಿ, ಕಾಗುಣಿತ ತಪ್ಪಾಗದಂತೆ ಎಚ್ಚರವಹಿಸಿ, ಓದುವ ಸಂದರ್ಭದಲ್ಲಿ ಏಕಾಗ್ರತೆ ಇರಲಿ, ಓದುವಾಗ ಮುಖ್ಯ ಅಂಶಗಳನ್ನು ಗುರುತು ಮಾಡಿಕೊಳ್ಳಿ, ಸ್ನೇಹಿತರೊಂದಿಗೆ ಪಠ್ಯಕ್ಕೆ ಸಂಬಂಧಿಸಿದಂತೆ ಪರಸ್ಪರ ಚರ್ಚೆ ಮಾಡಿ ಎಂದು ತಿಳಿಸಿದ್ದಾರೆ.

ಪೋಷಕರಿಗೆ ಸಲಹೆ ಆಘಾತ ಮಾಡದಿರಿ: ಪರೀಕ್ಷೆಗೆ ತೆರಳುವ ಮಕ್ಕಳನ್ನು ಕ್ಷುಲ್ಲಕ ಕಾರಣಗಳಿಗೆ ನಿಂದಿಸುವುದು, ಬೈಯುವುದರಿಂದ ಅವರ ಮನಸ್ಸಿಗೆ ಘಾಸಿಯಾಗುತ್ತದೆ. ಆದ್ದರಿಂದ ಮನೆಯಿಂದ ಹೊರಡುವಾಗ ಸಂತೋಷದಿಂದ ಹಾರೈಸಿ ಕಳುಹಿಸಿಕೊಡಿ ಎಂದು ಪೋಷಕರಲ್ಲಿ ಮನವಿ ಮಾಡಿದ್ದಾರೆ. ಪೋಷಕರು ಪರೀಕ್ಷೆಯ ಮೊದಲ ದಿನ ನಿಮ್ಮ ಮಕ್ಕಳನ್ನು ಒಂದು ಗಂಟೆ ಮುಂಚಿತವಾಗಿ ಪರೀಕ್ಷಾ ಕೇಂದ್ರಕ್ಕೆ ಕರೆ ತಂದು ಆಸನ ವ್ಯವಸ್ಥೆ ಬಗ್ಗೆ ಮಾರ್ಗದರ್ಶನ ನೀಡಿ ಅವರಲ್ಲಿ ಗೊಂದಲ, ಗಾಬರಿಗೆ ಅವಕಾಶವಿಲ್ಲದಂತೆ ಎಚ್ಚರವಹಿಸಿ ಎಂದು ಸಲಹೆ ನೀಡಿದ್ದಾರೆ. ಪರೀಕ್ಷಾ ಕೊಠಡಿಯ ಸಂಖ್ಯೆ ಹಾಗೂ ಆಸನ ವ್ಯವಸ್ಥೆಯ ಬಗ್ಗೆ ಗೊಂದಲವುಂಟಾದರೆ ಗಾಬರಿಗೊಳ್ಳಬೇಡಿ, ಕೇಂದ್ರದ ಮುಖ್ಯ ಅಧೀಕ್ಷಕರನ್ನು ಸಂಪರ್ಕಿಸಿ ನಿಮ್ಮ ಗೊಂದಲವನ್ನು ಬಗೆಹರಿಸಿಕೊಳ್ಳಲು ಸಲಹೆ ನೀಡುತ್ತಾರೆ. ಪರೀಕ್ಷಾ ಕೇಂದ್ರಕ್ಕೆ ಗೈಡ್, ಪುಸ್ತಕ, ಚೀಟಿ, ಮೊಬೈಲ್‌ನಂತಹ ಎಲೆಕ್ಟ್ರಾನಿಕ್ ಉಪಕರಣಗಳನ್ನು, ಎಲೆಕ್ಟ್ರಾನಿಕ್, ಸ್ಮಾರ್ಟ್ ವಾಚ್ ತರುವಂತಿಲ್ಲ, ಯಾಂತ್ರಿಕ ಗಡಿಯಾರ ಬಳಸಲು ಅವಕಾಶವಿದೆ ಎಂದು ತಿಳಿಸಿದ್ದಾರೆ.

ಕೇಂದ್ರಕ್ಕೆ ಅರ್ಧಗಂಟೆ ಮುನ್ನಬನ್ನಿ-ಶಂಕರೇಗೌಡ: ದ್ವಿತೀಯ ಹಾಗೂ ತೃತೀಯ ಭಾಷೆಗೆ ಬೆಳಗ್ಗೆ 10 ಗಂಟೆಯಿಂದ 1 ಗಂಟೆವರೆಗೂ ಹಾಗೂ ಪ್ರಥಮ ಭಾಷೆ ಮತ್ತು ಐಚ್ಛಿಕ ವಿಷಯಗಳಿಗೆ 10 ಗಂಟೆಯಿಂದ 1-15ರವರೆಗೂ ಪರೀಕ್ಷೆ ನಡೆಯಲಿದೆ. ಪರೀಕ್ಷೆಯ ದಿನ ಮೊದಲ ಬೆಲ್ ಬೆಳಿಗ್ಗೆ 9-45 ಕ್ಕೆ ಆಗುತ್ತದೆ. ಆಗ ಪರೀಕ್ಷಾ ಕೇಂದ್ರವನ್ನು ಪ್ರವೇಶಿಸಿ ನಿಗದಿಪಡಿಸಿದ ಆಸನದಲ್ಲಿ ಕುಳಿತುಕೊಳ್ಳಬೇಕು. 2ನೇ ಬೆಲ್ 9-55 ಮೂರನೇ ಬೆಲ್ 10 ಗಂಟೆಗೆ ಇದ್ದು ಪ್ರಶ್ನೆಪತ್ರಿಕೆ ನೀಡಲಾಗುವುದು. ನಂತರ 10-10 ಉತ್ತರ ಪತ್ರಿಕೆಗಳನ್ನು ಮಕ್ಕಳಿಗೆ ವಿತರಿಸಲಾಗುವುದು ಎಂದು ತಿಳಿಸಿದ್ದಾರೆ. ಪ್ರವೇಶ ಪತ್ರ ಕಳೆದು ಹೋದರೆ ಗಾಬರಿ ಪಡಬೇಡಿ, ಮುಖ್ಯ ಅಧೀಕ್ಷಕರನ್ನು ಭೇಟಿಯಾಗಿ ತಿಳಿಸಿದರೆ, ಅವರಲ್ಲಿ ಕೇಂದ್ರ ನಾಮಿನಲ್ ರೋಲ್ ನಡಿ ಪರೀಕ್ಷೆ ಬರೆಯಲು ಒಂದು ದಿನ ಅವಕಾಶ ನೀಡುತ್ತಾರೆ ಎಂದು ತಿಳಿಸಿದ್ದಾರೆ. ವಿದ್ಯಾರ್ಥಿಗಳಿಗೆ ಡಿಡಿಪಿಐ ಅಲ್ಮಾಸ್ ಫರ್ವಿನ್‌ತಾಜ್, ಶಿಕ್ಷಣಾಧಿಕಾರಿ ಡಾ.ಎಸ್.ಆರ್.ವೀಣಾ, ಡಿವೈಪಿಸಿ ರಾಜೇಶ್ವರಿ, ನಹೀದ್ ಫಾತಿಮಾ, ಪರೀಕ್ಷಾ ನೋಡಲ್ ಅಧಿಕಾರಿ ಶಂಕರೇಗೌಡ,ಬಿಇಒಗಳಾದ ಮಧುಮಾಲತಿ ಪಡುವಣೆ, ಶಶಿಕಲಾ, ನಾರಾಯಣಸ್ವಾಮಿ, ಕೆಂಪಯ್ಯ, ರಾಮಚಂದ್ರ, ಮುನಿಲಕ್ಷ್ಮಯ್ಯ ವಿಷಯ ಪರಿವೀಕ್ಷಕರಾದ ಸಮೀವುಲ್ಲಾ, ಕ್ರಿಸ್ಟಿನಾಬಬಿತಾ, ಮತ್ತಿತರರು ಗುಣಾತ್ಮಕ ಫಲಿತಾಂಶ ತನ್ನಿ ಎಂದು ಮಕ್ಕಳಿಗೆ ಶುಭ ಹಾರೈಸಿದ್ದಾರೆ.



ಎಸ್ಸೆಸ್ಸೆಲ್ಸಿ ಮುಂದಿನ ಶಿಕ್ಷಣಕ್ಕೆ ಬುನಾದಿ

ಎಸ್ಸೆಸ್ಸೆಲ್ಸಿ ಪರೀಕ್ಷೆ ನಿಮ್ಮ ಮುಂದಿನ ಶಿಕ್ಷಣಕ್ಕೆ ಬುನಾದಿಯಾಗಿದೆ, ಪರೀಕ್ಷಾ ಭಯ ಬಿಡಿ, ನಾನು ಫೇಲಾಗುತ್ತೇನೆ,ಪಾಸಾಗಲು ಸಾಧ್ಯವಿಲ್ಲ ಎಂಬ ಋಣಾತ್ಮಕ ಮನೋಭಾವ ಬಿಡಿ,ನೀವು ಯಾರೂ ದಡ್ಡರಲ್ಲ, ಎಲ್ಲರಲ್ಲೂ ಒಂದೇ ಮಾದರಿ ಗ್ರಹಿಕೆ ಇರುವುದಿಲ್ಲ, ಗ್ರಹಿಕೆ ಕಡಿಮೆ ಇರುವವರು ನಿರಂತರ ಓದು, ಗುಂಪು ಚಟುವಟಿಕೆ ಮೂಲಕ ಗ್ರಹಿಕೆ ಶಕ್ತಿ ಹೆಚ್ಚಿಸಿಕೊಳ್ಳಬೇಕು ಎಂದರು.

ಬೆಲೆ ನಿಯಂತ್ರಣಕ್ಕೆ ವಿಶೇಷ ತಂಡ ರಚಿಸಿ



• ಕೋಲಾರ: ಮಧ್ಯಪ್ರಾಚ್ಯ ಯುದ್ದದಿಂದ ಸೃಷ್ಠಿಯಾಗಿರುವ ಸಿಲಿಂಡರ್ ಸಮಸ್ಯೆ ಹಾಗೂ ಏರಿಕೆಯಾಗಿರುವ ಕೃಷಿ ಪರಿಕರಣಗಳ ಬೆಲೆ ನಿಯಂತ್ರಣಕ್ಕೆ ವಿಶೇಷ ತಂಡ ರಚನೆ ಮಾಡಬೇಕೆಂದು ರೈತರ ಸಂಘದಿಂದ ಪಲ್ಲವಿ ವೃತ್ತದಲ್ಲಿ ಕಟ್ಟಿಗೆ ಖಾಲಿ ಸಿಲಿಂಡರ್ ತರಕಾರಿ ಸಮೇತ ಹೋರಾಟ ಮಾಡಿ ಕಂದಾಯ ಅಧಿಕಾರಿಗಳ ಮುಖಾಂತರ ಪ್ರಧಾನ ಮಂತ್ರಿಗಳಿಗೆ ಮನವಿ ನೀಡಿ ಒತ್ತಾಯಿಸಲಾಯಿತು.

ಯುದ್ದದ ಆಟ-ಚಟ ಮನುಕುಲಕ್ಕೆ ನರಳಾಟ ದಂಧೆಕೋರರಿಗೆ ಹಣ ಮಾಡುವ ಕಳ್ಳಾಟ ಬೆಳೆದ ಬೆಳೆಗೆ ಬೆಲೆ ಇಲ್ಲದೇ ಬೀದಿಗೆ ಬಿಳುತ್ತಿರುವ ರೈತರಿಗೆ ಸ್ವಾಭಿಮಾನದ ಹೋರಾಟವಾಗಿದೆ ಶ್ರೀಮಂತ ಜಗತ್ತಿಗೆಲ್ಲಾ ನೀತಿ ಪಾಠಹೇಳುವ ಮಾನವಿಯತೆ ಇಲ್ಲದ ರಾಷ್ಟ್ರಗಳ ಯುದ್ದದಿಂದ ಇಡೀ ದೇಶವೇ ಅಲ್ಲೋಲ್ಲ-ಕಲೋಲ್ಲವಾಗುತ್ತಿದೆ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಬಗೆಹರಿಸಬೇಕಾದ ವಿಶ್ವ ಸಂಸ್ಥೆ ನಾಪತ್ತೆಯಾಗಿರುವುದು ದುರಷ್ಟಕರ ವಿಚಾರವಾಗಿದೆ ಎಂದು ರೈತ ಸಂಘದ ರಾಜ್ಯ ಉಪಾಧ್ಯಕ್ಷ ಕೆ.ನಾರಾಯಣಗೌಡ ಅವ್ಯವಸ್ಥೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ತಪ್ಪು ಮಾಡದ ಅಮಾಯಕರು ಇಂದು ಬಲಿತ ರಾಷ್ಟ್ರಗಳು ಪ್ರತಿಷ್ಠೆಗಾಗಿ ಯುದ್ದಗಳನ್ನು ಸೃಷ್ಟಿಸಿಕೊಂಡು ಅಶಾಂತಿ ಸೃಷ್ಠಿಮಾಡಿ ಜೀವಗಳನ್ನು ಬಲಿಕೊಡುತ್ತಿರುವ ಜೊತೆಗೆ ಯುದ್ದದ ನೆಪದಲ್ಲಿ ಕೃಷಿಕ್ಷೇತ್ರವನ್ನು ನಾಶ ಮಾಡಿ ಆಹಾರ ಅಭದ್ರತೆ ಸೃಷ್ಟಿಸುತ್ತಿರುವುದು ಪ್ರಜಾಪ್ರಭುತ್ವದ ಕಗ್ಗೊಲೆ ಅಸಾಮಾಧಾನ ವ್ಯಕ್ತಪಡಿಸಿದರು. ಜಿಲ್ಲಾ ಕಾರ್ಯಧ್ಯಕ್ಷ ವಕ್ಕಲೇರಿ ಹನುಮಯ್ಯ, ಮನವಿ ಸ್ವೀಕರಿಸಿ ಮಾತನಾಡಿದ ಕಂದಾಯ ಅಧಿಕಾರಿಗಳು ಪ್ರಧಾನ ಮಂತ್ರಿಗಳು ಜಿಲ್ಲೆಯ ರೈತರ ಸಮಸ್ಯೆ ಮನವಿಯನ್ನು ಕಳಹಿಸುವ ಭರವಸೆ ನೀಡಿದರು. ಹೋರಾಟದಲ್ಲಿ ಜಿಲ್ಲಾಧ್ಯಕ್ಷ ಈಕಂಬಳ್ಳಿ ಮಂಜುನಾಥ ಕಮ್ಮದಟ್ಟಿ ಚಲಪತಿ ಮಂಜುನಾಥ. ಮಂಗಸಂದ್ರ ತೆರ್ನಹಳ್ಳಿ ಅಂಜಿನಪ್ಪ ತಿಮ್ಮಣ್ಣ, ಕುವಣ್ಣ, ಗೋವಿಂದಪ್ಪ, ಸುಪ್ರಿಂಚಲ, ಪುತ್ತೇರಿ ರಾಜು, ಗಿರೀಶ್, ಚಂದ್ರಪ್ಪ ಯಲ್ಲಣ್ಣ ವೆಂಕಟೇಶ, ಶೈಲಜಾ, ಪವಿತ್ರ ರತ್ನಮ್ಮ, ನಯನ ಇದ್ದರು.

ಖಾಸಗಿ ಶಾಲಾ, ಕಾಲೇಜು ವೇತನ ಅನುದಾನ ನೀಡಲು ಒತ್ತಾಯ

• ಮುಳಬಾಗಿಲು: ಗ್ರಾಮೀಣ ಕನ್ನಡ ಖಾಸಗಿ ಶಾಲಾ ಕಾಲೇಜುಗಳನ್ನು ವೇತನ ಅನುದಾನಕ್ಕೆ ಒಳಪಡಿಸಬೇಕೆಂದು ಒತ್ತಾಯಿಸಿ ಕರ್ನಾಟಕ ರಾಜ್ಯ ಅನುದಾನ ರಹಿತ ಶಾಲಾ ಕಾಲೇಜುಗಳು ಆಡಳಿತ ಮಂಡಳಿಗಳ ಮತ್ತು ನೌಕರರು ಒಕ್ಕೂಟದಿಂದ ಭಾರತೀಯ ಕಿಸಾನ್ ಸಂಘ ಮತ್ತು ಕನ್ನಡಪರ ಸಂಘಟನೆಗಳು ಸಹಕಾರದೊಂದಿಗೆ ತಾಲೂಕು ಕಚೇರಿ ಮುಂದೆ ಪ್ರತಿಭಟನೆ ನಡೆಸಿ ಉಪತಹಸೀಲ್ದಾರ್ ಮೂಲಕ ರಾಜ್ಯಪಾಲರು,ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿತು.

ತಾಲೂಕಿನ ಕುರುಡುಮಲೆ ಕ್ರಾಸ್‌ನ ಕುವೆಂಪು ವಿದ್ಯಾ ಸಂಸ್ಥೆಯ ಕಾರ್ಯದರ್ಶಿ ಬಿ.ಎನ್. ಗಣೇಶನ್ ಮಾತನಾಡಿ, ಕಳೆದ ವಿಧಾನ ಸಭೆ ಸಾರ್ವತ್ರಿಕ ಚುನಾವಣೆ ಪೂರ್ವದಲ್ಲಿ ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯಲ್ಲಿ ಘೋಷಣೆ ಮಾಡಿದಂತೆ 1995 ರಿಂದ 2012ರ ತನಕ ಆರಂಭವಾಗಿರುವ ಖಾಸಗಿ ಶಾಲೆಗಳನ್ನು ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣ ವೇತನಾನುದಾನಕ್ಕೆ ಒಳಪಡಿಸಿ ಕನ್ನಡ ಶಾಲೆಗಳ ಅಭಿವೃದ್ಧಿಗೆ ಆದ್ಯತೆ ನೀಡಲಾಗುವುದು ಎಂದು ಹೇಳಿದ್ದ ಆಗಿನ ಕಾಂಗ್ರೆಸ್ ಶಾಸಕಾಂಗ ಪಕ್ಷ ನಾಯಕರು ಜೊತೆಗೆ ಈಗಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನುಡಿದಂತೆ ನಡೆದಿಲ್ಲ ಆದುದರಿಂದ ಏಪ್ರಿಲ್ 27ಕ್ಕೆ ಅನುಮೋದನೆ ನೀಡುವ ಪೂರಕ ಬಜೆಟ್ ನಲ್ಲಿ ಈ ಬಗ್ಗೆ ಗಮನ ಹರಿಸಬೇಕು ಎಂದು ಒತ್ತಾಯಿಸಿದರು.

ಭಾರತೀಯ ಕಿಸಾನ್ ಸಂಘದ ಜಿಲ್ಲಾ ಖಜಾಂಚಿ ವಕೀಲ ವಿ. ಜಯಪ್ಪ, ಕರವೇ ನಾರಾಯಣಗೌಡ ಬಣದ ತಾಲೂಕು ಅಧ್ಯಕ್ಷ ಹುಸೇನ್, ಡಿವಿಜಿ ಕನ್ನಡ ಸಂಘದ ಅಧ್ಯಕ್ಷ ಕೆ. ಮಧುಸೂದನ್, ಭಾರತೀಯ ಕಿಸಾನ್ ಸಂಘದ ತಾಲೂಕು ಅಧ್ಯಕ್ಷ ಉಗನಿ ಆರ್. ನಾರಾಯಣಗೌಡ, ಮಾಜಿ ಅಧ್ಯಕ್ಷ ಹೊನ್ನಿಕೆರೆ ಟಿ. ರಾಮಚಂದ್ರಪ್ಪ, ಪ್ರಧಾನ ಕಾರ್ಯದರ್ಶಿ ಪಿ. ಗಂಗಾಪುರ ಮುನಿರಾಮಯ್ಯ, ಮಹಿಳಾ ಪ್ರಮುಖ್ ಮುಡಿಯೂರು ಜಯಲಕ್ಷ್ಮಮ್ಮ, ರಂಗಭೂಮಿ ಕಲಾವಿದ ಚೇತನ್ ಪ್ರಸಾದ್, ಕುರುಡುಮಲೆ ಕ್ರಾಸ್ ನ ಕುವೆಂಪು ವಿದ್ಯಾ ಸಂಸ್ಥೆಯ ಸಿಬ್ಬಂದಿ ಇದ್ದರು.



ಬೂದಿಕೋಟೆ ಎಸ್‌ಐ ನಾರಾಯಣಸ್ವಾಮಿ ವರ್ಗಾವಣೆ ಬೇಡ

• ಬಂಗಾರಪೇಟೆ: ತಾಲೂಕಿನ ಬೂದಿಕೋಟೆ ಠಾಣೆಯ ಎಸ್‌ಐ ನಾರಾಯಣಸ್ವಾಮಿ ರವರನ್ನು ವರ್ಗಾವಣೆ ಮಾಡಬಾರದೆಂದು ಅವರನ್ನು ಇಲ್ಲಿಯೇ ಮೂರು ವರ್ಷಗಳ ಕಾಲ ಮುಂದುವರಿಸಬೇಕೆಂದು ಪ್ರಾಮಾಣಿಕ ದಕ್ಷ ಅಧಿಕಾರಿಗಳು ಬಂದು ಒಂದು ತಿಂಗಳಾಗಿದ್ದು, ಯಾವುದೇ ಕಾರಣಕ್ಕೂ ಇವರನ್ನು ವರ್ಗಾವಣೆ ಮಾಡಬಾರದೆಂದು ಕರ್ನಾಟಕ ರಿಪಬ್ಲಿಕನ್ ಸಂಘಟನೆಯ ರಾಜ್ಯಾಧ್ಯಕ್ಷ ಚಿಕ್ಕನಾರಾಯಣ ಹೇಳಿದರು.

ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಬಂಗಾರಪೇಟೆ, ಕೆಜಿಎಫ್, ಮುಳಬಾಗಲು ಕ್ಷೇತ್ರಗಳು ಮೀಸಲು ಕ್ಷೇತ್ರಗಳಾಗಿದ್ದು ಕೋಲಾರ ಲೋಕಸಭಾ ಕ್ಷೇತ್ರ ಮೀಸಲು ಕ್ಷೇತ್ರವಾಗಿದ್ದು, ಇಲ್ಲಿ ದಲಿತರು ಹೆಚ್ಚು ವಾಸ ಮಾಡುತ್ತಿರುವುದರಿಂದ ಈ ಕ್ಷೇತ್ರದಲ್ಲಿ ಹೆಚ್ಚು ದಲಿತ ಅಧಿಕಾರಿಗಳು ಕರ್ತವ್ಯ ನಿರ್ವಹಿಸಿದಲ್ಲಿ ನ್ಯಾಯ ಸಿಗುತ್ತದೆ ಎಂದು ಯಾವುದೇ ಕಾರಣಕ್ಕೂ ಎಸ್ ಐ ನಾರಾಯಣಸ್ವಾಮಿ ರವರನ್ನು ವರ್ಗಾವಣೆ ಮಾಡಬಾರದೆಂದು ಅಧಿಕಾರಿಗಳನ್ನು ಒತ್ತಾಯಿಸಿದರು.



ಮುಂದಿನ ಸೋಮವಾರ ಹೊಸಕೋಟೆ ತಾಲೂಕು ಕಚೇರಿ ಮುಂದೆ ಬಹುಜನ ಸಮಾಜವಾದಿ ಪಾರ್ಟಿ ಹಾಗೂ ರಿಪಬ್ಲಿಕನ್ ಸಂಘಟನೆಯವರು ಒಟ್ಟಾಗಿ ಪ್ರತಿಭಟನೆ ನಡೆಸುತ್ತಿದ್ದು ಈ ಪ್ರತಿಭಟನೆಯಲ್ಲಿ ಈ ವಿಷಯವನ್ನು ಸಹ ಬೇಡಿಕೆ ಇಡಲಾಗುವುದೆಂದು ತಿಳಿಸಿದರು, ನಮ್ಮ ಕ್ಷೇತ್ರದವರಿಗೆ ಪ್ರಾಧಾನ್ಯತೆ ನೀಡಬೇಕು, ಬೇರೆಯವರನ್ನು ಈ ಸ್ಥಳಕ್ಕೆ ವರ್ಗಾವಣೆ ಮಾಡಿದರೆ ತೊಂದರೆಯಾಗುತ್ತದೆ, ಸಾಮಾಜಿಕ ನ್ಯಾಯ ಸಿಗುವ ಕಾರಣದಿಂದ ನಾರಾಯಣಸ್ವಾಮಿಯವರನ್ನು ಇಲ್ಲಿ ಮುಂದುವರಿಸಬೇಕೆಂದು ಪೊಲೀಸ್ ಮಹಾ ನಿರ್ದೇಶಕರಲ್ಲಿ ಮನವಿ ಮಾಡಿದ್ದಾರೆ. ಮುಖಂಡರುಗಳಾದ ಚಿಂಟು ರಾಮಚಂದ್ರ, ಮುನಿರಾಜು ಹಾಜರಿದ್ದರು.

ಕೋಲಾರದಲ್ಲಿ ಸೋಮೇಶ್ವರಸ್ವಾಮಿ ರಥೋತ್ಸವ

• ಕೋಲಾರ: ರಾಮನಿಂದ ಹತನಾದ ರಕ್ಕಸ ರಾವಣನಿಗೂ ಪೂಜೆ ಸಲ್ಲಿಸುವ ವಿಶಿಷ್ಟವಾದ ರಾವಣೋತ್ಸವ ನಗರದ ಸೋಮೇಶ್ವರಸ್ವಾಮಿ ಬ್ರಹ್ಮ ರಥೋತ್ಸವ ಕಾರ್ಯಕ್ರಮಗಳಲ್ಲಿ ಪ್ರಮುಖವಾಗಿದ್ದು, ನಗರಾದ್ಯಂತ ಪುಷ್ಪಪಲ್ಲಕ್ಕಿ ಉತ್ಸವ ಸಾಗಿ ಬಂತು. ಸೋಮೇಶ್ವರ ಸ್ವಾಮಿ ಬ್ರಹ್ಮ ರಥೋತ್ಸವದ ನಂತರ ಭಾನುವಾರ ರಾತ್ರಿ ನಡೆದ ರಾವಣೋತ್ಸವ ಅತ್ಯಂತ ಅದ್ದೂರಿಯಿಂದ ನಡೆದಿದ್ದು, ಹತ್ತು ತಲೆಗಳನ್ನು ಹೊತ್ತ ರಾವಣನ ತಲೆಯ ಮೇಲೆ ಕಾಮಾಕ್ಷಮಾಂಭ-ಸೋಮೇಶ್ವರ ಸ್ವಾಮಿಯ ಉತ್ಸವ ಮೂರ್ತಿಗಳನ್ನು ಕೂರಿಸಿ ಪುಷ್ಪಪಲ್ಲಕ್ಕಿಯೊಂದಿಗೆ ವಿದ್ಯುತ್ ದೀಪಗಳಿಂದ ಅಲಂಕರಿಸಿ ನಗರದಲ್ಲಿ ಮೆರವಣಿಗೆ ನಡೆಸಲಾಯಿತು.

ಕಳೆದ ಮಾ.5 ರಂದು ಸೋಮೇಶ್ವರಸ್ವಾಮಿಯ ಬ್ರಹ್ಮ ರಥೋತ್ಸವ ಮುಗಿದಿದ್ದು, ಸೋಮವಾರ ರಾತ್ರಿ 10 ತಲೆಗಳನ್ನೊತ್ತ ರಾವಣನ ಮೂರ್ತಿ ಮತ್ತು ಮೇಲೆ ಗಂಗಾಧರೇಶ್ವರ ಸ್ವಾಮಿಯ ಮೂರ್ತಿಗಳನ್ನಿಟ್ಟು ವೈಭವದಿಂದ ರಾವಣೋತ್ಸವ ನಡೆಸಲಾಯಿತು.

ಶ್ರೀರಾಮ, ಹನುಮ ಈ ನಾಡಿನ ಪ್ರಮುಖ ದೈವವಾಗಿದ್ದು, ಹನುಮನಿಲ್ಲದ ಊರೇ ಇಲ್ಲ ಎಂಬ ಪ್ರತೀತಿಯೂ ಇದೆ. ಆದರೆ ರಾಮನಿಗೆ ವೈರಿಯಾಗಿ ಸೀತಾಮಾತೆಯನ್ನು ಹೊತ್ತೊಯ್ದು ಕಿರುಕುಳ ನೀಡಿ ಕೊನೆಗೆ ರಾಮನಿಂದಲೇ ಹತನಾಗುವ ರಕ್ಕಸ ರಾವಣನಿಗೂ ಪೂಜೆ ನಡೆಯುತ್ತದೆ ಎಂದರೆ ವಿಶಿಷ್ಟವೇ ಅಲ್ಲವೇ?. ಇಂತಹದೊಂದು ಅಪರೂಪದ, ವೈಭವದ ಪೂಜೆ ಶಿವಭಕ್ತ ರಾವಣನಿಗೂ ಕೋಲಾರದ ಸೋಮೇಶ್ವರ ಸ್ವಾಮಿ ರಥೋತ್ಸವದಲ್ಲಿ, ಸುಗಟೂರು ಗ್ರಾಮದ ಕೋದಂಡರಾಮಸ್ವಾಮಿ ರಥೋತ್ಸವ, ವಕ್ಕಲೇರಿಯ ಮಾರ್ಕಂಡೇಶ್ವರಸ್ವಾಮಿ ರಥೋತ್ಸವಗಳಲ್ಲಿ ನಡೆದುಕೊಂಡು ಬಂದಿದೆ.



ಪರ್ಯಾಯ ಸ್ಥಳ ಕಲ್ಪಿಸಿ: ಓಂಶಕ್ತಿ ಚಲಪತಿ ನೇತೃತ್ವದಲ್ಲಿ ಡಿಸಿಗೆ ಮನವಿ
ಸಂತೆ ಮೈದಾನ ವ್ಯಾಪಾರಿಗಳಿಗೆ ಮಳಿಗೆ ಒದಗಿಸಿ

• ಕೋಲಾರ: ನಗರದ ಸಂತೆಮೈದಾನ(ಟಿ.ಚೆನ್ನಯ್ಯ ಮಾರುಕಟ್ಟೆ)ಅಭಿವೃದ್ಧಿಪಡಿಸುವ ಸಂದರ್ಭದಲ್ಲಿ ಹಲವಾರು ವರ್ಷಗಳಿಂದ ವ್ಯಾಪಾರ ನಡೆಸುತ್ತಿರುವ ವ್ಯಾಪಾರಿಗಳಿಗೆ ಮಳಿಗೆಗಳನ್ನು ಹಾಗೂ ಪರ್ಯಾಯ ಸ್ಥಳವನ್ನು ಒದಗಿಸುವಂತೆ ಬಿಜೆಪಿ ಜಿಲ್ಲಾಧ್ಯಕ್ಷ ಓಂ ಶಕ್ತಿ ಚಲಪತಿ ನೇತೃತ್ವದಲ್ಲಿ ಅಂಗಡಿ ವ್ಯಾಪಾರಸ್ಥರು ಸೋಮವಾರ ಜಿಲ್ಲಾಧಿಕಾರಿ ಡಾ.ಎಂ.ಆರ್.ರವಿಗೆ ಮನವಿ ಸಲ್ಲಿಸಿದ್ದಾರೆ.

ಮನವಿ ಸಲ್ಲಿಸಿ ಮಾತನಾಡಿದ ಬಿಜೆಪಿ ಜಿಲ್ಲಾಧ್ಯಕ್ಷ ಓಂ ಶಕ್ತಿಚಲಪತಿ, ಕೋಲಾರ ನಗರದ ಸಂತೆ ಮೈದಾನ (ಟಿ. ಚನ್ನಯ್ಯ ಮಾರುಕಟ್ಟೆ ಪ್ರದೇಶವು ಕೋಲಾರ ನಗರದ ನಾಗರಿಕರಿಗೆ ತರಕಾರಿ ಮತ್ತು ದಿನಸಿ ವಸ್ತುಗಳ ಸರಬರಾಜಿಗೆ ಹಲವು ವರ್ಷಗಳಿಂದ ಪ್ರಮುಖ ಕೇಂದ್ರವಾಗಿ ಕಾರ್ಯನಿರ್ವಹಿಸುತ್ತಿದ್ದು, ಈ ಸ್ಥಳದಲ್ಲಿ ಸುಮಾರು ಮೂವತ್ತು ವರ್ಷಗಳಿಂದ ವ್ಯಾಪಾರಿಗಳು ತಮ್ಮ ವಂಶಪಾರಂಪರ್ಯವಾಗಿ ವ್ಯಾಪಾರ ವಹಿವಾಟು ನಡೆಸುತ್ತಿದ್ದು ನಂತರದ ಅವಧಿಯಲ್ಲಿ ಸುಮಾರು 5 ಅಂಗಡಿಗಳ ವ್ಯಾಪಾರಿಗಳು ಕಳೆದ 15 ರಿಂದ 20 ವರ್ಷಗಳಿಂದ ನಿರಂತರವಾಗಿ ವ್ಯಾಪಾರ ಮಾಡುತ್ತಾ ಕುಟುಂಬಗಳ ಜೀವನೋಪಾಯವನ್ನು ನಡೆಸಿಕೊಂಡು ಬರುತ್ತಿದ್ದಾರೆ. ಸಂತೆ ಮೈದಾನ ತರಕಾರಿ ಮಾರಾಟ ಮಾಡುವವರ ಕ್ಷೇಮಭಿವೃದ್ಧಿ ಸಂಘದ ಅಧ್ಯಕ್ಷ ಜಬೀ, ಉಪಾಧ್ಯಕ್ಷ ಬಿ. ಎಂ. ಹರೀಶ್, ಕಾರ್ಯದರ್ಶಿ, ಮುನಿಸ್ವಾಮಿ, ಸೈಯದ್ ಪರ್ವೀಜ್, ಗುಜ್ಜಾರ್ ಉಲ್ಲಾ ಷರೀಫ್, ಜಫಿಉಲ್, ಆರಿಫ್, ದೇವರಾಜ್, ಸೈಯದ್ ರಫೀಕ್, ಸುನಿಲ್, ನಾಗವೇಣಿ, ಮುನಿರತ್ನಮ್ಮ, ಸುಶೀಲಮ್ಮ, ನಾರಾಯಣಮ್ಮ, ನಾಮಲ್ ಮಂಜುನಾಥ್, ಸಾಮ ಅನಿಲ್ ಬಾಬು ಮಹೇಶ್ ಮತ್ತಿತ್ತರರು ಹಾಜರಿದ್ದರು.



> ಪ್ರಸ್ತುತ ಸರ್ಕಾರದಿಂದ ಈ ಸ್ಥಳವನ್ನು ಅಭಿವೃದ್ಧಿಪಡಿಸುವ ಕಾರ್ಯ ಕೈಗೊಳ್ಳುತ್ತಿರುವ ಸಂದರ್ಭದಲ್ಲಿ, ಮೊದಲಿನಿಂದಲೂ ಇಲ್ಲಿ ವ್ಯಾಪಾರ ನಡೆಸುತ್ತಿರುವ ವ್ಯಾಪಾರಿಗಳಿಗೆ ಮೊದಲ ಆದ್ಯತೆಯ ಆಧಾರದ ಮೇಲೆ ಮಳಿಗೆಗಳನ್ನು ಹಂಚಿಕೆ ಮಾಡುವುದು ಅತ್ಯಂತ ನ್ಯಾಯಸಮ್ಮತವಾಗಿರುತ್ತದೆ.
> ■ ಡಾ.ಎಂ.ಆರ್.ರವಿ, ಜಿಲ್ಲಾಧಿಕಾರಿ

ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿದ ಶಾಸಕ ಹೇಳಿಕೆ
ತಾರತಮ್ಯ ಮುಕ್ತ ಸಮಾಜ ನಿರ್ಮಾಣವಾಗಲಿ

• ಬಂಗಾರಪೇಟೆ: ಲಿಂಗ ತಾರತಮ್ಯದಿಂದ ಮುಕ್ತವಾದ ಉತ್ತಮ ಸಮಾಜವನ್ನು ನಿರ್ಮಿಸಲು ಮತ್ತು ಲಿಂಗ ಸಮಾನತೆಯ ಸಂದೇಶವನ್ನು ನೀಡಲು ಪ್ರತಿ ವರ್ಷ ಮಾರ್ಚ್ 8ರಂದು ಅಂತಾರಾಷ್ಟ್ರೀಯ ಮಹಿಳಾ ದಿನವನ್ನು ಆಚರಿಸಲಾಗುತ್ತದೆ ಎಂದು ಶಾಸಕ ಎಸ್.ಎನ್ ನಾರಾಯಣಸ್ವಾಮಿ ಹೇಳಿದರು.

ಪಟ್ಟಣದ ಬಾಲಕಿಯರ ಪದವಿಪೂರ್ವ ಕಾಲೇಜಿನ ಆವರಣದಲ್ಲಿ ಫೋಕಸ್ ಸಂಸ್ಥೆ, ಅಕ್ಷರ ದಾಸೋಹ ನೌಕರರ ಸಂಘ ಮತ್ತು ಅಂಗನವಾಡಿ ನೌಕರರ ಸಂಘ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಇತಿಹಾಸ ಮತ್ತು ಸಮಕಾಲೀನ ಸಮಾಜದಲ್ಲಿನ ಘಟನೆಗಳಿಗೆ ಮಹಿಳೆಯರ ಕೊಡುಗೆಗಳನ್ನು ಎತ್ತಿ ತೋರಿಸುವ ದಿನವೇ ಮಾರ್ಚ್ 8ರ ಅಂತಾರಾಷ್ಟ್ರೀಯ ಮಹಿಳಾ ದಿನವಾಗಿದೆ ಎಂದು ಹೇಳಿದರು.

ಈಗಿನ ಕಾಲದಲ್ಲಿ ಎಲ್ಲಾ ರಂಗದಲ್ಲೂ ಹೆಣ್ಣುಮಕ್ಕಳೇ ಮುಂದೆ ಇದ್ದಾರೆ, ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉನ್ನತ ಮಟ್ಟದ ದರ್ಜೆಯ ಐಪಿಎಸ್, ಐಎಎಸ್, ಕೆಎಎಸ್, ಐಎಫ್‌ಎಸ್, ಪೈಲೆಟ್ ಇನ್ನು ಮುಂತಾದ ಕ್ಷೇತ್ರಗಳಲ್ಲೂ ಸಹ ಹೆಣ್ಣು ಮಕ್ಕಳು ಮುಂದೆ ಬರುತ್ತಿದ್ದಾರೆ. ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಕೆ.ಶಶಿಕಲಾ, ಈನಗರಾಭಿವೃದ್ಧಿ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಮುನಿರಾಜು, ಫೋಕಸ್ ಸಂಸ್ಥೆಯ ಅಧ್ಯಕ್ಷರಾದ ಅ.ನಾ.ಹರೀಶ್, ಉಪನ್ಯಾಸಕಿ ಡಾ. ಪ್ರಸನ್ನ ಕುಮಾರಿ, ಮಾಜಿ ಪುರಸಭೆ ಸದಸ್ಯ ಸುಹೇಲ್, ಅಕ್ಷರ ದಾಸೋಹ ನಿರ್ದೇಶಕ ಯುವರಾಜ್, ಒಕ್ಕಲಿಗರ ಸಂಘದ ಅಧ್ಯಕ್ಷ ಮುನಿರಾಜು, ಬಿಸಿಯೂಟ ನೌಕರ ಸಂಘದ ಅಧ್ಯಕ್ಷ ರವಿಕುಮಾರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀನಿವಾಸ್, ಚಿತ್ರ, ಆಶಾ ಜ್ಯೋತಿ, ಉಪ ಪ್ರಾಂಶುಪಾಲರಾದ ವಗ್ಗರ್ ಹನುಮಂತ ಇದ್ದರು.



ಕಿರುಸುದ್ದಿ

ವದಂತಿಗೆ ಕಿವಿಗೊಡದಿರಿ ಗ್ರಾಹಕರಿಗೆ ಸೂಚನೆ

ಚಿಕ್ಕಬಳ್ಳಾಪುರ: ಜಿಲ್ಲೆಯ ಎಲ್ಲಾ ಗೃಹಬಳಕೆ ಅಡುಗೆ ಅನಿಲ ಗ್ರಾಹಕರಿಗೆ ತಿಳಿಸುವುದೇನೆಂದರೆ, ಸಾಮಾಜಿಕ ಜಾಲ ತಾಣಗಳಲ್ಲಿ ಹರಿದಾಡುತ್ತಿರುವ ವದಂತಿಗಳಿಗೆ ಸಾರ್ವಜನಿಕರು ಕಿವಿಗೊಡಬಾರದು.ದೇಶಾದ್ಯಂತ ಎಲ್‌ಪಿಜಿ ಉತ್ಪಾದನೆ ಮತ್ತು ಬಾಟಲಿಂಗ್ ಎರಡೂ ಹೆಚ್ಚಿರುವುದರಿಂದ ಸಾಕಷ್ಟು ಪ್ರಮಾಣದಲ್ಲಿ ಸದ್ಯ ದಾಸ್ತಾನು ಲಭ್ಯವಿರುವುದರಿಂದ ಗ್ರಾಹಕರು ಯಾರು ಗಾಬರಿಗೊಳ್ಳಬಾರದೆಂದು ಹಾಗೂ ಹೆಚ್ಚುವರಿಯಾಗಿ ದಾಸ್ತಾನು ಮಾಡಿಕೊಳ್ಳಬಾರದೆಂದು ತಿಳಿಯಪಡಿಸಿದೆ. ಗ್ರಾಹಕರು ಪ್ರತಿ ಗೃಹಬಳಕೆಯ ಸಿಲಿಂಡರ್‌ನ್ನು ಬುಕ್ ಮಾಡಿ ಪಡೆದುಕೊಂಡ ನಂತರ ಮತ್ತೊಂದು ಗೃಹಬಳಕೆಯ ಸಿಲಿಂಡರ್ ಬೇಡಿಕೆಗಾಗಿ ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಕ್ರಮವಾಗಿ 25 ಮತ್ತು 45 ದಿನಗಳ ನಂತರ ಬುಕ್ ಮಾಡಲು ಅವಕಾಶವಿರುತ್ತದೆ. ಈ ಎಲ್ಲಾ ವಿಷಯಗಳನ್ನು ಜಿಲ್ಲೆಯ ಎಲ್ಲಾ ಎಲ್‌ಪಿಜಿ ಗ್ರಾಹಕರ ಗಮನಕ್ಕೆ ತರಬಯಸುತ್ತಾ ಜಿಲ್ಲೆಯಲ್ಲಿ ಎಲ್‌ಪಿಜಿ ಸಿಲಿಂಡರ್‌ಗಳ ಕೊರತೆ ಇರುವುದಿಲ್ಲವಾದ್ದರಿಂದ ಸಾರ್ವಜನಿಕರು ಭಯಪಡುವ ಅಗತ್ಯವಿಲ್ಲ ಮತ್ತು ಸಾಮಾಜಿಕ ಜಾಲ ತಾಣಗಳಲ್ಲಿ ಹರಿದಾಡುತ್ತಿರುವ ಸುಳ್ಳು ವದಂತಿಗಳಿಗೆ ಸಾರ್ವಜನಿಕರು ಕಿವಿಗೊಡಬಾರದೆಂದು ತಿಳಿಯಪಡಿಸಿದೆ. ಒಂದು ವೇಳೆ ಯಾವುದೇ ಸಮಸ್ಯೆ ಕಂಡುಬಂದಲ್ಲಿ ಈ ಕೆಳಕಂಡ ದೂರುವಾಣಿಗೆ ಕರೆ ಮಾಡಬಹುದು. ಬಾಗೇಪಲ್ಲಿ, ಗುಡಿಬಂಡೆ ಮತ್ತು ಚೇಳೂರು ತಾಲ್ಲೂಕುಗಳ ಆಹಾರ ನಿರೀಕ್ಷಕರು-7975199954, ಚಿಕ್ಕಬಳ್ಳಾಪುರ ತಾಲ್ಲೂಕು ಆಹಾರ ಶಿರಸ್ತೇದಾರರು-9740556453, ಚಿಕ್ಕಬಳ್ಳಾಪುರ ತಾಲ್ಲೂಕು ಆಹಾರ ನಿರೀಕ್ಷಕರು-9008232089, ಚಿಂತಾಮಣಿ ಆಹಾರ ಶಿರಸ್ತೇದಾರರು-9902294444. ಚಿಂತಾಮಣಿ ಮತ್ತು ಮಂಚೇನಹಳ್ಳಿ ಆಹಾರ ನಿರೀಕ್ಷಕರು-8553308228, ಗೌರಿಬಿದನೂರು ಆಹಾರ ಶಿರಸ್ತೇದಾರರು-8277688661, ಶಿಡ್ಲಘಟ್ಟ ಆಹಾರ ಶಿರಸ್ತೇದಾರರು-8310938149, ಶಿಡ್ಲಘಟ್ಟ ಆಹಾರ ನಿರೀಕ್ಷಕರು-9945168381 ಮತ್ತು ಜಿಲ್ಲಾ ಮಟ್ಟದ ಜಂಟಿ ನಿರ್ದೇಶಕರ ಕಚೇರಿ ದೂ.ಸಂ:9448684299, 08156-277007 ಗೆ ಸಂಪರ್ಕಿಸಬಹುದು.

ವಿದ್ಯುತ್ ವ್ಯತ್ಯಯ

ಚಿಕ್ಕಬಳ್ಳಾಪುರ: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ತುಮಕೂರು ಜಿಲ್ಲೆ, ಮಧುಗಿರಿ ತಾಲ್ಲೂಕು, ಮಧುಗಿರಿ 220ಕೆವಿ ಸ್ವೀಕರಣಾ ಕೇಂದ್ರದಿಂದ ಗೌರಿಬಿದನೂರು 220ಕವಿ ಸ್ವೀಕರಣ ಕೇಂದ್ರದವರೆಗೆ ಹಾಲಿ ಇರುವ 220ಕೆ.ವಿ ಏಕಮುಖ ಪ್ರಸರಣ ಮಾರ್ಗವನ್ನು ದ್ವಿಮುಖ ಗೋಪುರಗಳ ಮೇಲೆ ಎ.ಎ.ಎ.ಸಿ. ಮಸ್ ವಾಹಕದೊಂದಿಗೆ 30.408 ಕಿ.ಮೀ ಉದ್ದದ ದ್ವಿಮುಖ ಪ್ರಸರಣ ಮಾರ್ಗವನ್ನಾಗಿ ಪರಿವರ್ತಿಸುವ/ ಉನ್ನತೀಕರಿಸುವ ಕಾಮಗಾರಿಯನ್ನು ಮಾರ್ಚ್ 17 ರಂದು ವಿದ್ಯುದ್ದೀಕರಣ ಗೊಳಿಸಲಾಗುವುದು. ಈ ಪ್ರಸರಣ ಮಾರ್ಗವು ತುಮಕೂರು ಜಿಲ್ಲೆ, ಮಧುಗಿರಿ ತಾಲ್ಲೂಕಿನಲ್ಲಿ ಪಾಳ್ಯದಹಳ್ಳಿ, ಸೋಗೇನಹಳ್ಳಿ, ಮಲ್ಲೇನಹಳ್ಳಿ, ಶಂಭೋನಹಳ್ಳಿ, ರಘುವನಹಳ್ಳಿ, ಗೊಂದಿಹಳ್ಳಿ, ತಿಮ್ಮಲಾಪುರ, ದೊಡ್ಡಹೊಸಹಳ್ಳಿ, ಬ್ಯಾಲ್ಯ, ಹಂದ್ರಾಳು, ಕೊಂಡವಾಡಿ, ಹುಣಸವಾಡಿ ಗ್ರಾಮಗಳು ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ಕಸಬ ಹೋಬಳಿ, ಗುಂಡಾಪುರ, ಉಡುಮಲೋಡು, ಕಾದಲವೇಣಿ, ವೈಚಕೂರಹಳ್ಳಿ, ಹೊಸೂರು ಹೋಬಳಿ, ರಮಾಪುರ, ಪಾಪಗಾನಹಳ್ಳಿ. ಕುದುರೆಬ್ಯಾಲ್ಯ, ಹೊಸ ಉಪ್ಪಾರಹಳ್ಳಿ, ಆನೂಡಿ ಮತ್ತು ಕುರೂಡಿ ಗ್ರಾಮಗಳಲ್ಲಿ ಗ್ರಾಮಗಳ ಸರಹದ್ದಿನಲ್ಲಿ ಹಾದು ಹೋಗಿರುತ್ತದೆ. ಸದರಿ ದಿನಾಂಕದಂದು ಅಥವಾ ತದನಂತರವೂ ಕೂಡ ಯಾರಾದರೂ ಇಂತಹ ಕೃತ್ಯಗಳನ್ನು ಎಸಗಿದಲ್ಲಿ ಉಂಟಾಗುವ ಅಪಘಾತಗಳಿಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಯಾವುದೇ ರೀತಿಯಲ್ಲೂ ಜವಾಬ್ದಾರಿಯಾಗುವುದಿಲ್ಲ ಎಂದು ಮಧುಗಿರಿ ಬೆಸ್ಕಂ ಕಾರ್ಯನಿರ್ವಾಹಕ ಇಂಜಿನಿಯರ್ ರವರು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಯುಪಿಎಸ್‌ಸಿ 462ನೇ ರ್‍ಯಾಂಕ್: ಸಚಿವರಿಂದ ಸನ್ಮಾನ

ಚಿಂತಾಮಣಿ: ಯುಪಿಎಸ್‌ಸಿಯಲ್ಲಿ 462ನೇ ರ್‍ಯಾಂಕ್ ಪಡೆದ ಡಾ.ವರುಣ್‌ಗೌಡ ಮತ್ತು ಪೋಷಕರಾದ ಪ್ರಕಾಶ್‌ಗೌಡ ಮತ್ತು ಪ್ರೇಮಾರನ್ನು ಸನ್ಮಾನಿಸಿದ ಸಚಿವ ಡಾ.ಎಂ.ಸಿ.ಸುಧಾಕರ್. ನಗರದ ಮಾಳ್ಳಪಲ್ಲಿಯ ಅಂಜನಿ ನಿವಾಸದಲ್ಲಿ ಇತ್ತೀಚಿಗೆ ಯುಪಿಎಸ್‌ಸಿ ಪರೀಕ್ಷೆಯಲ್ಲಿ 462ನೇ ರ್‍ಯಾಂಕ್ ಪಡೆದ ನಗರದ ರಾಜೀವ್‌ನಗರದ ದಂಪತಿಗಳ ಪುತ್ರನಾದ ಡಾ.ವರುಣ್ ಗೌಡಗೆ ಉನ್ನತ ಶಿಕ್ಷಣ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ.ಸುಧಾಕರ್ ಶಾಲು, ಹೂವಿನಹಾರ ಹಾಗೂ ಹಣ್ಣುಹಂಪಲುಗಳನ್ನು ನೀಡಿ ಸನ್ಮಾನಿಸಿದರು. ಸನ್ಮಾನದ ನಂತರ ಡಾ.ಎಂ.ಸಿ.ಸುಧಾಕರ್ ಮಾತನಾಡಿ ಡಾ.ವರುಣ್ ಗೌಡರವರು ಚಿಕ್ಕ ವಯಸ್ಸಿನಲ್ಲೆ ದೊಡ್ಡಮಟ್ಟದ ಸಾಧನೆ ಮೂಲಕ ಜಿಲ್ಲೆಗೆ ಹಾಗೂ ತಾಲೂಕಿಗೆ ಕೀರ್ತಿಯನ್ನು ತಂದಿದ್ದು ಹರ್ಷದಾಯಕವಾಗಿದ್ದು ಅವರ ಸಾಧನೆ ಮತ್ತಷ್ಟು ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಿದೆಯೆಂದರು. ಡಿವೈಎಸ್‌ಪಿ ಮುರಳೀಧರ್, ಗ್ರಾಮಾಂತರ ಠಾಣಾ ಇನ್ಸ್‌ಪೆಕ್ಟರ್ ಶಿವರಾಜ್, ಎಎಸ್‌ಐ ಪ್ರಕಾಶ್‌ಗೌಡ, ತಾಯಿ ಪ್ರೇಮಾ ಇದ್ದರು.



ಗೌರಿಬಿದನೂರು ತಾಲೂಕಿನ ಬಾಲರೆಡ್ಡಿಹಳ್ಳಿ ಶ್ರೀಲಕ್ಷ್ಮೀ ನರಸಿಂಹ ಸ್ವಾಮಿ ದೇವರ ಕಾಯಿ ಶಾಂತಿ ಮಹೋತ್ಸವವನ್ನು ಮಂಚೇನಹಳ್ಳಿ ತಾಲೂಕಿನ ಮಾವಿನಕಾಯಿನಹಳ್ಳಿ ಗ್ರಾಮದಲ್ಲಿ ಅತ್ಯಂತ ಶ್ರದ್ಧಾಭಕ್ತಿಯಿಂದ ನೆರವೇರಿಸಲಾಯಿತು.

ಯಶಸ್ವಿಯಾಗಿ ನಡೆದ ಕಾಯಿಶಾಂತಿ

ಗೌರಿಬಿದನೂರು: ತಾಲೂಕಿನ ಬಾಲರೆಡ್ಡಿಹಳ್ಳಿ ಶ್ರೀಲಕ್ಷ್ಮೀ ನರಸಿಂಹ ಸ್ವಾಮಿ ದೇವರ ಕಾಯಿ ಶಾಂತಿ ಮಹೋತ್ಸವವನ್ನು ಮಂಚೇನಹಳ್ಳಿ ತಾಲೂಕಿನ ಮಾವಿನಕಾಯಿನಹಳ್ಳಿ ಗ್ರಾಮದಲ್ಲಿ ಅತ್ಯಂತ ಶ್ರದ್ಧಾಭಕ್ತಿಯಿಂದ ನೆರವೇರಿಸಲಾಯಿತು. ಮಾವಿನಕಾಯಿಹಳ್ಳಿ ಗ್ರಾಮದ ಶ್ರೀಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಶನಿವಾರ ರಾತ್ರಿ ವಿವಿಧ ದೇವತಾ ಕಾರ್ಯಗಳ ನಂತರ ಬಾಲರೆಡ್ಡಿಹಳ್ಳಿ ನರಸಿಂಹಸ್ವಾಮಿ ಅರ್ಚಕರ ಮೈತುಂಬಿದ ನಂತರ ಪ್ರಾರಂಭವಾದ ಕಾಯಿ ಶಾಂತಿ ನಿರಂತರವಾಗಿ ಹನ್ನೆರಡು ಗಂಟೆಗಳ ಕಾಲ ಜರುಗಿತು, ಗ್ರಾಮದ ಪ್ರತಿಯೊಂದು ಮನೆ ಹಾಗೂ ಅರಸಾಲ ಬಂಡೆಯವರೆಗೂ ಕಾಯಿ ಶಾಂತಿ ಕಾರ್ಯವನ್ನು ಆಯೋಜನೆ ಮಾಡಲಾಗಿತ್ತು.ನರಸಿಂಹಸ್ವಾಮಿ ಮೈತುಂಬಿದ ಅರ್ಚಕರ ಪ್ರತಿ ಹೆಜ್ಜೆಗೂ ಒಂದು ತೆಂಗಿನಕಾಯಿಯನ್ನು ಒಡೆಯಲಾಯಿತು.

ಕಾಯಿ ಶಾಂತಿ ಕಾರ್ಯಕ್ಕಾಗಿ ಇಡೀ ಮಾವಿನಕಾಯಿಯಹಳ್ಳಿ ಮಾವಿನಕಾಯಿನಹಳ್ಳಿಯನ್ನು ತಳಿರು ತೋರಣಗಳಿಂದ ಸಿಂಗರಿಸಲಾಗಿತ್ತು. ಗ್ರಾಮದ ಪ್ರತಿಯೊಂದು ಮನೆಯ ಮುಂದೆ ಸಾರಿಸಿ ರಂಗೋಲಿಯನ್ನು ಬಿಡಿಸಲಾಗಿತ್ತು. ಗ್ರಾಮ ಆಂಜನೇಯ ಸ್ವಾಮಿ ದೇವಸ್ಥಾನವನ್ನು ವಿಶೇಷವಾಗಿ ಸಿಂಗರಿಸಿ ಅಲಂಕರಿಸಲಾಗಿತ್ತು. ಸುಮಾರು 48 ವರ್ಷಗಳ ನಂತರ ಮಾವಿನಕಾಯಿನಹಳ್ಳಿ ಗ್ರಾಮದಲ್ಲಿ ಬಾಲರೆಡ್ಡಿಹಳ್ಳಿ ನರಸಿಂಹಸ್ವಾಮಿ ದೇವರಿಗೆ ಕಾಯಿ ಶಾಂತಿ ಮಹೋತ್ಸವವನ್ನು ನೆರವೇರಿಸಲಾಯಿತು. ಕಾಯಿ ಶಾಂತಿಯನ್ನು ವೀಕ್ಷಿಸಲು ಸುತ್ತಮುತ್ತಲಿನ ಗ್ರಾಮಸ್ಥರು, ನೆಂಟರಿಷ್ಟರು ಬಾರಿ ಸಂಖ್ಯೆಯಲ್ಲಿ ಜಮಾಯಿಸಿದ್ದರು.



ಚಿಂತಾಮಣಿ ತಾಲೂಕಿನ ವೆಂಕಟಾಪುರದಲ್ಲಿ ಶ್ರೀ ಗಂಗಮ್ಮ ದೇವಿ ನೂತನ ವಿಗ್ರಹ ಪ್ರತಿಷ್ಠಾಪನಾ ಮಹೋತ್ಸವದಲ್ಲಿ ಸಂಸದ ಎಂ.ಮಲ್ಲೇಶ್‌ಬಾಬು ಮತ್ತು ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಜಿ.ಕೆ.ಕೃಷ್ಣಾರೆಡ್ಡಿ ಭಾಗವಹಿಸಿದ್ದರು.

ಮಹಿಳಾ ಕ್ರೀಡಾಕೂಟಕ್ಕೆ ಜಿಲ್ಲಾಧಿಕಾರಿ ಜಿ.ಪ್ರಭು ಚಾಲನೆ

ಮಹಿಳೆಯರ ಪ್ರತಿಭೆಗೆ ವೇದಿಕೆ

ಚಿಕ್ಕಬಳ್ಳಾಪುರ: ಮಹಿಳಾ ದಿನಾಚರಣೆಯ ಅಂಗವಾಗಿ ಜಿಲ್ಲೆಯಲ್ಲಿ ಚೊಚ್ಚಲವಾಗಿ ಹಮ್ಮಿಕೊಂಡಿರುವ ಕ್ರೀಡಾಕೂಟಕ್ಕೆ ಚಾಲನೆ ನೀಡಿರುವುದು ಹೆಚ್ಚಿನ ಸಂತಸ ಮೂಡಿಸಿದೆ. ಮುಂದಿನ ವರ್ಷದಲ್ಲಿ ಈ ಕ್ರೀಡಾಕೂಟವನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಹಾಗೂಅರ್ಥಪೂರ್ಣವಾಗಿಆಯೋಜಿಸಲಾಗುವುದು ಎಂದು ಜಿಲ್ಲಾಧಿಕಾರಿ ಜಿ.ಪ್ರಭು ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾಪಂಚಾಯತ್, ಮಹಿಳಾಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಮಹಿಳಾ ಕ್ರೀಡಾಕೂಟಕ್ಕೆ ನಗರದ ಸರ್.ಎಂ.ವಿಶ್ವೇಶ್ವರಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ಚಾಲನೆ ನೀಡಿ ಅವರು ಮಾತನಾಡಿದರು.

ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆಯರು ಆಡಳಿತ ವರ್ಗದಲ್ಲಿ, ದುಡಿಯುವ ಕ್ಷೇತ್ರದಲ್ಲಿ ಸೇರಿದಂತೆ ಎಲ್ಲಾ ರಂಗಗಳಲ್ಲಿ ಪುರುಷನಿಗೆ ಸರಿ ಸಮಾನವಾಗಿ ತನ್ನ ಪಾತ್ರವನ್ನು ಯಶಸ್ವಿಯಾಗಿ ಇಂದು ನಿರ್ವಹಿಸುತ್ತಿದ್ದಾರೆ ಎಂದರು.

ಮಹಿಳಾ ವರ್ಗದ ಬಗ್ಗೆ ಪ್ರತಿಯೊಬ್ಬರಿಗೂ ಗೌರವ ಹಾಗೂ ಅಭಿಮಾನ ಇರಬೇಕು. ಇಲ್ಲವಾದಲ್ಲಿ ಬದುಕಿಗೆ ಅರ್ಥವೇ ಇರುವುದಿಲ್ಲ. ಆದ್ದರಿಂದ ಜಿಲ್ಲೆಯ ಮಹಿಳೆಯರಲ್ಲಿರುವ ಪ್ರತಿಭೆಗಳ ಗುರ್ತಿಸುವಿಕೆಗೆ ಈ ಮಹಿಳಾ ಕ್ರೀಡಾಕೂಟ ಸಹಕಾರಿಯಾಗಿದೆ. ಪ್ರತಿಯೊಬ್ಬರು ನಿತ್ಯ ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸಿದರೆ ದೈಹಿಕ ಮತ್ತು ಮಾನಸಿಕ ಆರೋಗ್ಯ ವೃದ್ಧಿಯಾಗಲಿದೆ. ಆದ್ದರಿಂದ ಜಿಲ್ಲಾಡಳಿತ ಮಹಿಳೆಯರಲ್ಲಿ ಕ್ರೀಡಾ ಮನೋಭವ ಉತ್ತೇಜಿಸಲು ಈ ಕ್ರೀಡಾಕೂಟ ಆಯೋಜಿಸಿದೆ. ತಾವೆಲ್ಲರೂ ಈ ಕ್ರೀಡಾಕೂಟದಲ್ಲಿ ಭಾಗವಹಿಸಿ ಎಂದು ಜಿಲ್ಲಾಧಿಕಾರಿ ಶುಭ ಕೋರಿದರು. ಕಾರ್ಯಕ್ರಮದಲ್ಲಿ ಮಹಿಳಾ ದಿನಾಚರಣೆಯ ಪ್ರತಿಜ್ಞಾ ವಿಧಿಯನ್ನು ಬೋಧಿಸಲಾಯಿತು.



> **ಮಹಿಳೆಯು ತಾಯಿಯಾಗಿ, ಮಡದಿಯಾಗಿ, ಸಹೋದರಿಯಾಗಿ, ಮಗಳಾಗಿ ಹೀಗೆ ವಿವಿಧ ಪಾತ್ರಗಳನ್ನು ನಿರ್ವಹಿಸಿ ಮನುಕುಲದ ಸಂತತಿಯ ಮುಂದುವರಿಕೆಯ ಭಾಗವಾಗಿ ತನ್ನದೇ ಆದಂತಹ ಮಹತ್ತರವಾದ ಪಾತ್ರವನ್ನು ನಿರ್ವಹಿಸುವ ಮಹಿಳೆಗೆ ತನ್ನದೆ ದಿನಾಚರಣೆ ಇದೆ ಎಂಬುದೇ ಕೆಲವರಿಗೆ ಗೊತ್ತಿಲ್ಲ.**
> ■ **ಜಿ.ಪ್ರಭು, ಜಿಲ್ಲಾಧಿಕಾರಿ**

ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅವರು ಗುಂಡು ಎಸೆಯುವ ಸ್ಪರ್ಧೆಯಲ್ಲಿ ಭಾಗವಹಿಸುವ ಮೂಲಕ ಮಹಿಳಾ ಕ್ರೀಡಾಕೂಟಕ್ಕೆ ಪ್ರೇರಣೆ ನೀಡಿದರು. ವಿವಿಧ ಕ್ರೀಡಾ ಸ್ಪರ್ಧೆಗಳು ನಡೆದವು.

ಈ ವೇಳೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ವೈ.ನವೀನ್ ಭಟ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಆರ್.ವೆಂಕಟೇಶರೆಡ್ಡಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಕೆ.ಆರ್ .ಜಯಲಕ್ಷ್ಮೀ ಬಾಯಿ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ನೌತಾಜ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ, ಆಶಾ ಕಾರ್ಯಕರ್ತೆಯರು, ಸ್ವ-ಸಹಾಯ ಗುಂಪುಗಳ ಮಹಿಳಾ ಸದಸ್ಯರು ಹಾಜರಿದ್ದರು.

ಎರಡು ಹಂತಗಳಲ್ಲಿ ನೀರು ಶುದ್ಧೀಕರಿಸಲಿ

▸ **ಕೆ.ಸಿ.ವ್ಯಾಲಿ ಮತ್ತು ಎಚ್.ಎನ್.ವ್ಯಾಲಿ ನೀರು ನೇರ ಬಳಕೆಗೆ ಸಾಧ್ಯವಿಲ್ಲ: ಸಚಿವ**



ಚಿಂತಾಮಣಿ: ಕೆ.ಸಿ.ವ್ಯಾಲಿ ಮತ್ತು ಎಚ್.ಎನ್.ವ್ಯಾಲಿ ನೀರು ಎರಡು ಹಂತಗಳಲ್ಲಿ ಶುದ್ಧೀಕರಿಸಿ ಅವಳಿ ಜಿಲ್ಲೆಗಳಲ್ಲಿ ಕೆರೆಗಳಿಗೆ ಹರಿಸಲಾಗುತ್ತಿದ್ದು ಇದರ ಪ್ರಮುಖ ಉದ್ದೇಶ ಅಂತರ್ಜಲ ಮಟ್ಟವನ್ನು ಹೆಚ್ಚಿಸುವುದಾಗಿದೆ ಆದರೆ ಮೂರನೇ ಹಂತ ಶುದ್ಧಿಕರಣ ದುಬಾರಿಯಾಗಲಿದ್ದು ಇದು ಎಲ್ಲಾ ಸರ್ಕಾರಗಳಿಗೂ ತಿಳಿಸಿದೆಯೆಂದು ಡಾ.ಎಂ.ಸಿ.ಸುಧಾಕರ್ ಹೇಳಿದರು.

ತಾಲೂಕಿನ ವೀರಪಲ್ಲಿ, ನಲ್ಲರಾಳ್ಳಪಲ್ಲಿ, ಬೂಪನಹಳ್ಳಿ, ಮಿಂಡಗಲ್, ದಿಗುವಗೊಲ್ಲಹಳ್ಳಿ, ವೇಗಲಹಳ್ಳಿ, ಬ್ರಾಹ್ಮಣಹಳ್ಳಿ, ಏಟಿಗಡ್ಡಗೊಲ್ಲಹಳ್ಳಿ, ಯಸಗಲಹಳ್ಳಿ, ಕೋನಪಲ್ಲಿ, ಕರಿಯಪಲ್ಲಿ, ಕಾಚನಹಳ್ಳಿ ಸೇರಿ 12 ಸ್ಥಳಗಳಲ್ಲಿ ಚೆಕ್ ಡ್ಯಾಂಗಳ ನಿರ್ಮಾಣದ ಸ್ಥಳ ಪರಿಶೀಲನೆ ಮತ್ತು ಕಾಮಗಾರಿಗೆ ಪೂಜೆ ಭೂಮಿ ನೆರವೇರಿಸಿ ಮಾತನಾಡಿ ನಾನು ಮಾಡುತ್ತಿರುವ ಹಲವು ಅಭಿವೃದ್ಧಿ ಕೆಲಸಗಳಲ್ಲಿ ಅತಿಹೆಚ್ಚು ತೃಪ್ತಿಯನ್ನು ಮತ್ತು ಸಂತೋಷವನ್ನು ನೀಡುತ್ತಿರುವ ಕಾಮಗಾರಿ ಈ ಚೆಕ್ ಡ್ಯಾಂಗಳ ನಿರ್ಮಾಣವಾಗಿದ್ದು ಒಂದೊಮ್ಮೆ ಭರಪೂರ ಮಳೆ ಬಂದು ನೀರು ನಿಲುಗಡೆಗೊಂಡರೆ ಈ ಭಾಗದ ರೈತರ ಜೀವನ ಹಸನಾಗುತ್ತದೆಂಬ ಉದ್ದೇಶದಿಂದ 140ಕೋಟಿವೆಚ್ಚದಲ್ಲಿಈಕಾಮಗಾರಿಯನ್ನು ಕೈಗೊಂಡಿದ್ದು ಇದರಲ್ಲಿ ಈಗಾಗಲೇ 89 ಕೋಟಿ ಹಣಕಾಸು ಬಿಡುಗಡೆಯಾಗಿದ್ದು ಉಳಿದ 51 ಕೋಟಿ ಶೀಘ್ರವೇ ಬಿಡುಗಡೆಗೊಳಿಸಲಾಗುವುದೆಂದರು.

ಈ ಕಾಮಗಾರಿಗಳನ್ನು ನಿರ್ವಹಿಸುವ ಅಧಿಕಾರಿಗಳಿಗೆ ಮತ್ತು ಗುತ್ತಿಗೆದಾರರಿಗೆ ಗುಣಮಟ್ಟದೊಂದಿಗೆ ಮತ್ತು ನಿಗದಿತ ಸಮಯದಲ್ಲಿ ಕಾಮಗಾರಿಗಳನ್ನು ಮುಗಿಸುವಂತೆ ಸೂಚಿಸಿರುವುದಾಗಿ ತಿಳಿಸಿದರು. ಗ್ರೇಡ್-2 ತಹಸೀಲ್ದಾರ್ ರಾಜೇಂದರ್, ತಾ.ಪಂ. ಇಒಎಸ್.ಆನಂದ್, ಮುಖಂಡರಾದ ಸ್ಕೂಲ್ ಸುಬ್ಬಾರೆಡ್ಡಿ, ಮಾದಮಂಗಲ ಚಂದ್ರಪ್ಪ, ರಾಗುಟ್ಟಹಳ್ಳಿ, ರಘುನಾಥ್‌ರೆಡ್ಡಿ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

ಹಾಲು ಉತ್ಪಾದಕರ ಸಂಘದಲ್ಲಿ ಆರೋಗ್ಯ ತಪಾಸಣಾ ಶಿಬಿರ

ಶಿಡ್ಲಘಟ್ಟ: ಮೊಟ್ಟ ಮೊದಲ ಬಾರಿಗೆ ತಾಲೂಕಿನ ಮಳಮಾಚನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಾಲಿನ ಡೇರಿ ಅಂದ್ರೆ, ಉತ್ಪಾದಕರಿಂದ ಹಾಲು ಖರೀದಿ ಮಾಡಿ ಉತ್ಪಾದಕರಿಗೆ ಹಾಲಿನ ಬಿಲ್ ನೀಡಿದರೆ ಸಾಕು ಎನ್ನುವ ಸಾಕಷ್ಟು ಡೇರಿಗಳ ಮಧ್ಯ ಈ ಡೈರಿಯು ಉತ್ಪಾದಕರಿಗೆ ಅನೇಕ ಸವಲತ್ತು ನೀಡಿ ತನ್ನದೇ ಆದ ಛಾಪು ಮೂಡಿಸುತ್ತಿದೆ.

ಶಿಡ್ಲಘಟ್ಟ ತಾಲೂಕಿನ ಮಳಮಾಚನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘವು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲೇ ಅತೀ ಹೆಚ್ಚಿನ ಹಾಲು ಸರಬರಾಜು ಮಾಡುವ ಡೇರಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದು, ಉತ್ಪಾದಕರಿಗೆ ಅನುಕೂಲವಾಗಲಿ ಎಂದು ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಹಮ್ಮಿಕೊಂಡು ಉತ್ಪಾದಕರ ಆರೋಗ್ಯ ನಿವಾರಣೆಗೆ ಮುಂದಾಗಿದೆ. ದೇವನಹಳ್ಳಿಯ ಆಕಾಶ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಆಕಾಶ್ ವೈದ್ಯಕೀಯ ಮಹಾ ವಿದ್ಯಾಲಯ ಮತ್ತು ಸಂಶೋಧನ ಸಂಸ್ಥೆ ಹಾಗೂ ಮಳಮಾಚನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಸಂಯುಕ್ತ ಆಶ್ರಯದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಮಳಮಾಚನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಸಂಘದ ಅಧ್ಯಕ್ಷ ದ್ಯಾವಪ್ಪ, ತಾಲೂಕು ಪಂಚಾಯತಿ ಮಾಜಿ ಅಧ್ಯಕ್ಷ ಎಂ.ಕೆ. ರಾಜಶೇಖರ್, ಸಂಘದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಎಂ.ವಿನಯ್ ಕುಮಾರ್ ,ಮಳಮಾಚನಹಳ್ಳಿ ಗ್ರಾಮದ ಜೆಡಿಎಸ್ ಯುವ ಮುಖಂಡಎಂ.ಜಿ. ನವೀನ್‌ಕುಮಾರ್, ಸಂಘದ ಮಾಜಿ ಅಧ್ಯಕ್ಷ ಎಂ.ಎನ್.ರಾಮಚಂದ್ರಾಚಾರಿ, ಉಪಾಧ್ಯಕ್ಷೆ ವೆಂಕಟಲಕ್ಷ್ಮಮ್ಮ, ನಿರ್ದೇಶಕರಾದ ಡಿಶ್ ವೆಂಕಟೇಶ್, ಎಂ.ಎನ್. ವೆಂಕಟೇಗೌಡ ,ಎಂ ಎಸ್. ಕೃಷ್ಣಪ್ಪ, ಅಶೋಕ್, ಮುಖಂಡರಾದ ಕೇಶವಮೂರ್ತಿ ಭಾಗವಹಿಸಿದ್ದರು.



ಉತ್ಪನ್ನ ಪ್ರದರ್ಶನ, ಮಾಸಿಕ ಸಂತೆಗೆ ಚಾಲನೆ

ಚಿಂತಾಮಣಿ: ಸಂಜೀವಿನಿ ಡೇ ಎನ್‌ಆರ್‌ಎಲ್‌ಎಂ ಯೋಜನೆಯಲ್ಲಿ ಮಹಿಳಾ ಸ್ವಸಹಾಯ ಗುಂಪಿನ ಸದಸ್ಯರು ಉತ್ಪಾದಿಸಿದ ವಿವಿಧ ಉತ್ಪನ್ನಗಳ ಕಿಟ್‌ಗಳನ್ನು ವಿವಿಧ ಪ್ರದೇಶಗಳಲ್ಲಿ ಮಾರಾಟ ಮಾಡುತ್ತಿದ್ದು ಇದು ಉತ್ತಮ ಬೆಳವಣಿಗೆಯಾಗಿದ್ದು ಇಲ್ಲಿ ಲಭಿಸುವ ಉತ್ಪನ್ನಗಳು ಉತ್ಕೃಷ್ಟ ಮತ್ತು ಗುಣಮಟ್ಟದಿಂದ ಕೂಡಿರುತ್ತವೆ ಇದನ್ನು ಕೊಳ್ಳುವುದರಿಂದ ಮಹಿಳೆಯರನ್ನು ಸಬಲೀಕರಣ ಮಾಡುವ ಗುರಿ ಸಫಲವಾಗುತ್ತದೆಂದು ಸಚಿವ ಡಾ.ಎಂ.ಸಿ.ಸುಧಾಕರ್ ನುಡಿದರು.

ನಗರದ ತಾ.ಪಂ. ಕಚೇರಿ ಆವರಣದಲ್ಲಿ ಚಿಕ್ಕಬಳ್ಳಾಪುರ ಜಿಲ್ಲಾಪಂಚಾಯತ್, ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ತಾಲೂಕು ಪಂಚಾಯತ್, ಸಂಜೀವಿನಿ ಡೇ ಎನ್‌ಆರ್‌ಎಲ್‌ಎಂ ಯೋಜನೆಯಲ್ಲಿ ಹಮ್ಮಿಕೊಂಡಿದ್ದ ಮಹಿಳಾ ಸ್ವಸಹಾಯ ಗುಂಪಿನ ಸದಸ್ಯರು ಉತ್ಪಾದಿಸಿದ ಉತ್ಪನ್ನಗಳ ಪ್ರದರ್ಶನ ಮತ್ತು ಸಂಜೀವಿನಿ ಯುಗಾದಿ ಮಾಸಿಕ ಸಂತೆ ಉದ್ಘಾಟಿಸಿ ಮಾತನಾಡಿ ಮಹಿಳಾ ಸಬಲೀಕರಣಕ್ಕೆ ಪುಷ್ಟಿ ನೀಡುವಂತಹ ಇಂತಹ ಕೆಲಸಗಳಿಗೆ ನಾವು ಸದಾ ಪ್ರೋತ್ಸಾಹ ನೀಡಿದಾಗ ಮಹಿಳೆಯರು ಆರ್ಥಿಕವಾಗಿ ಸದೃಢರಾಗಿ, ಸದೃಢ ದೇಶ ನಿರ್ಮಾಣಕ್ಕೆ ನಾಂದಿಯಾಗುತ್ತದೆಯೆಂದರು. ತಾ.ಪಂ. ಇಒ ಎಸ್.ಆನಂದ್ ಹಾಗೂ ಕೃಷ್ಣಮೂರ್ತಿ, ಶಿವಮ್ಮ, ನಾಗರತ್ನಮ್ಮ, ಗಣೇಶ್, ಮೀನಾಕ್ಷಿ, ಕಲ್ಯಾಣಿ, ಲಕ್ಷ್ಮೀ, ಸುನಂದಮ್ಮ ಉಪಸ್ಥಿತರಿದ್ದರು.



ಆರೋಗ್ಯವೇ ದುಬಾರಿ: ರಾಮಚಂದ್ರಗೌಡ

ಚಿಕ್ಕಬಳ್ಳಾಪುರ: ಜನರ ಜೀವನ, ಆರೋಗ್ಯ, ಜನರ ಹಿತಾಸಕ್ತಿಗಿಂತ ಯಾವುದು ದುಬಾರಿ ಯಾವುದು ಇಲ್ಲ, 3ನೇ ಹಂತದ ಸಂಸ್ಕರಣೆ ಶುದ್ದೀಕರಣ ಕೊಡುವುದು ಸರ್ಕಾರ ಕರ್ತವ್ಯ ವಾಗಿದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಸೀಕಲ್ ರಾಮಚಂದ್ರಗೌಡ ತಿಳಿಸಿದ್ದರು. ನಗರ ನೂತನ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತಾನಾಡಿದ ಎಚ್.ಎನ್.ವ್ಯಾಲಿ ಮತ್ತು ಕೆ.ಸಿ.ವ್ಯಾಲಿ ನೀರನ್ನು ಎರಡನೇ ಹಂತ ಶುದ್ದೀಕರಿಸಿದರೆ ಸಾಕು ಎಂದು ಡಾಎಂ.ಸಿ.ಸುಧಾಕರ್ ಹೇಳಿರುವುದು ಖಂಡನೀಯ ಎಂದು ಹೇಳಿದರು. 3ನೇ ಹಂತದ ಸಂಸ್ಕರಣೆ ಶುದ್ದೀಕರಣ ಮಾಡುವಂತೆ ಚಿಕ್ಕಬಳ್ಳಾಪುರ, ಕೋಲಾರ ಹಾಗೂ ಬೆಂಗಳೂರು ಗ್ರಾಮಾಂತರ ಜನರು ಒತ್ತಾಯ ಮಾಡುತ್ತೀದ್ದಾರೆ. ಇನ್ನೂ ಕೆರೆ ಅಕ್ಕಪಕ್ಕದಲ್ಲಿ ಇರುವ ಬೋರ್ ವೆಲ್‌ಗಳನ್ನು ನೀರನ್ನು ಪರೀಕ್ಷೆ ಗೆ ಒಳಪಡಿಸ ಬೇಕು .ಯೋಗ್ಯವಾದ ನೀರನ್ನು ಜನರಿಗೆ ಒದಗಿಸ ಬೇಕು ಇಲ್ಲವಾದಲ್ಲಿ ನಾಗರಿಕರ ಆರೋಗ್ಯದ ಮೇಲೆ ದುಷ್ಪ ಪರಿಣಾಮ ಬಿರುತ್ತದೆ ಎಂದು ತಿಳಿಸಿದರು.

ಸಂಸದ ಸುಧಾಕರ್ ಅವರು ಕಾಂಗ್ರೆಸ್ ನಲ್ಲಿ ಇರುವಾಗ ಎಚ್‌ಎನ್ ವ್ಯಾಲಿ ಮತ್ತು ಕೆ.ಸಿ ವ್ಯಾಲಿ ತಂದಿದ್ದರು . ಆದರೆ 2019ರಲ್ಲಿ ಬಿಜೆಪಿ ಪಕ್ಷಕ್ಕೆ ಸೇರಿದ ನಂತರ ಸಂಸದರು 3 ನೇ ಹಂತದ ಸಂಸ್ಕರಣೆ ಶುದ್ದೀಕರಣ ಮಾಡುವಷ್ಟರಲ್ಲಿ ಸರ್ಕಾರ ಬದಲಾವಣೆ ಆಯಿತ್ತು. ಈಗಿನ ರಾಜ್ಯ ಸರ್ಕಾರ ಮೊನ್ನೆ ನಡೆದ ಬಜೆಟ್ ಅಧಿವೇಶನ ದಲ್ಲಿ ಮೂರನೇ ಹಂತದ ಸಂಸ್ಕರಣೆ ಶುದ್ದೀಕರಣ ಕೈ ಬಿಟ್ಟಿತ್ತು ಇದರಿಂದ ಜನರ ಕೈಗಣ್ಣೆ ಗುರಿಯಗಿತ್ತು ಎಂದು ತಿಳಿಸಿದರು. ಗ್ರಾಮ ಪಂಚಾಯತಿ. ತಾಲೂಕು ,ಜಿಲ್ಲಾ ಪಂಚಾಯತಿ ಹಾಗೂ ನಗರ ಸಭೆ ಗಳ ಮಟ್ಟ ದಲ್ಲಿ ಪಕ್ಷ ಸಂಘಟನೆಗೆ ಈಗಾಗಲೇ ನಮ್ಮ ಕಾರ್ಯಕರ್ತರು ಕೆಲಸ ಮಾಡುತ್ತೀದ್ದಾರೆ ತಳ ಮಟ್ಟದಲ್ಲಿ ಸ್ವಲ್ಪ ಗೊಂದಲ ಇದೆ ನಮ್ಮ ಪಕ್ಷದ ಹಿರಿಯರ ಜೊತೆ ಇದರ ಬಗ್ಗೆ ಚರ್ಚೆ ಮಾಡುತ್ತೇವೆ ಎಂದು ತಿಳಿಸಿದರು. ಮುಖಂಡ ವೇಣುಗೋಪಾಲ್ ಹಾಜರಿದ್ದರು.



ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕಾನೂನು ಸುಸ್ಥಿರ: ನ್ಯಾ.ಜಗದೀಶ್

ಮುಳಬಾಗಿಲು ಲೋಕ ಅದಾಲತ್ ಇತ್ಯರ್ಥ

ಮುಳಬಾಗಿಲು: ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕಾನೂನು ಸುಸ್ಥಿರವಾಗಿರಬೇಕು, ಕುಟುಂಬಗಳಲ್ಲಿ ವ್ಯಾಜ್ಯಗಳಿದ್ದರೆ ಅನೇಕ ತೊಡಕುಗಳಿಗೆ ಕಾರಣವಾಗುತ್ತದೆ. ಅದನ್ನು ಮಾತುಕತೆ ಮೂಲಕ ಬಗೆಹರಿಸಲು ಅದಾಲತ್ ನಡೆಸಲಾಗುತ್ತಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರಾದ ಜಗದೀಶ್ ರುದ್ರೇಗೌಡ ಹೇಳಿದರು. ಮುಳಬಾಗಿಲು ಜೆಎಂಎಫ್‌ಸಿ ನ್ಯಾಯಾಲಯ ಸಂಕೀರ್ಣದಲ್ಲಿ ನಡೆದ ಲೋಕ್ ಅದಾಲತ್ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

ಸಮಾಜದಲ್ಲಿ ಶಾಂತಿ ನೆಲೆಸಲು ವ್ಯಾಜ್ಯಗಳು ಕಡಿಮೆಯಾಗಬೇಕು, ಜನರು ನೆಮ್ಮದಿಯ ಜೀವನ ನಡೆಸಬೇಕು, ಮನೆ, ಗ್ರಾಮಗಳಲ್ಲಿ ವ್ಯಾಜ್ಯಗಳು ಕಡಿಮೆಯಾದರೆ ದೇಶದ ಅಭಿವೃದ್ಧಿಯಾಗುತ್ತದೆ ಎಂದರು. ಅಪರ ಸಿವಿಲ್ ನ್ಯಾಯಾಲಯದಲ್ಲಿ 158 ಪ್ರಕರಣಗಳಲ್ಲಿ 152 ಪ್ರಕರಣಗಳನ್ನು ಇತ್ಯರ್ಥಪಡಿಸಿದ್ದು ಇದರಲ್ಲಿ 5.97 ಲಕ್ಷ ರೂ.ಗಳು ಇತ್ಯರ್ಥವಾಯಿತು. ಒಟ್ಟಾರೆ ಮೂರು ನ್ಯಾಯಾಲಯಗಳಲ್ಲಿ ಇಂದು ನಡೆದ ಅದಾಲತ್‌ನಲ್ಲಿ ತೆಗೆದುಕೊಂಡ 608 ಪ್ರಕರಣಗಳ ಪೈಕಿ 553 ಪ್ರಕರಣ ಇತ್ಯರ್ಥಗೊಳಿಸಿದ್ದು ಒಟ್ಟಾರೆ 2 ಕೋಟಿ 16 ಲಕ್ಷ 29 ಸಾವಿರ ರೂ.ಗಳು ಇತ್ಯರ್ಥಗೊಂಡಿದೆ. ಪ್ರಧಾನ ಸಿವಿಲ್ ನ್ಯಾಯಾಧೀಶರಾದ ಜಿ.ಹರೀಶ್, ಅಪರ ಸಿವಿಲ್ ನ್ಯಾಯಾಧೀಶೆ ಡಿ.ರೋಹಿಣಿ, ಪ್ಯಾನಲ್ ವಕೀಲೆ ಎನ್.ದೀಕ್ಷಾ, ದುರ್ಗಾಪ್ರಸಾದ್, ಹಿರಿಯ ಮತ್ತು ಕಿರಿಯ ವಕೀಲರು, ನ್ಯಾಯಾಲಯ ಸಿಬ್ಬಂದಿಗಳು ಹಾಗೂ ಸಾರ್ವಜನಿಕರು ಅದಾಲತ್‌ನಲ್ಲಿ ಪಾಲ್ಗೊಂಡಿದ್ದರು।



ಲೋಕ ಅದಾಲತ್

ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ 197 ಬಾಕಿ ಪ್ರಕರಣಗಳಲ್ಲಿ 174 ಪ್ರಕರಣಗಳನ್ನು ಇತ್ಯರ್ಥಪಡಿಸಿದ್ದು, ಇದರಲ್ಲಿ 1ಕೋಟಿ 31 ಲಕ್ಷ ರು.ಗಳು ಇತ್ಯರ್ಥವಾಯಿತು. ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ 253 ಬಾಕಿ ಪ್ರಕರಣಗಳಲ್ಲಿ 227 ಪ್ರಕರಣಗಳು ಇತ್ಯರ್ಥಪಡಿಸಿದ್ದು 79 ಲಕ್ಷ 29ಸಾವಿರ ರು.ಗಳು ಇತ್ಯರ್ಥವಾಯಿತು.

14 ವರ್ಷದ ಫಲಾನುಭವಿ ವಿದ್ಯಾರ್ಥಿನಿಯರಿಂದಲೇ ಕಾರ್ಯಕ್ರಮ

ಎಚ್‌ಪಿವಿ ಲಸಿಕಾ ಅಭಿಯಾನಕ್ಕೆ ಚಾಲನೆ

ಶಿಡ್ಲಘಟ್ಟ: ಹೆಣ್ಣು ಮಕ್ಕಳಲ್ಲಿ ಕಾಣಿಸಿಕೊಳ್ಳುವ ಗರ್ಭಕಂಠದಕ್ಯಾನ್ಸರ್ ತಡೆಗಟ್ಟುವನಿಟ್ಟಿನಲ್ಲಿಸರ್ಕಾರ ಹಮ್ಮಿಕೊಂಡಿರುವ ಎಚ್‌ಪಿವಿ ಲಸಿಕಾ ಅಭಿಯಾನಕ್ಕೆ ಶುಕ್ರವಾರ ತಾಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ಚಾಲನೆ ನೀಡಲಾಯಿತು.ವಿಶೇಷವೆಂದರೆ, ಲಸಿಕೆ ಪಡೆಯಲು ಬಂದಿದ್ದ 14 ರಿಂದ 15 ವರ್ಷದ ಫಲಾನುಭವಿ ವಿದ್ಯಾರ್ಥಿನಿಯರಿಂದಲೇ ಕಾರ್ಯಕ್ರಮವನ್ನು ಉದ್ಘಾಟಿಸಿ, ಆ ಮೂಲಕ ಅರಿವು ಮೂಡಿಸಲಾಯಿತು. ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ತಾಲ್ಲೂಕು ಆರೋಗ್ಯ ಅಧಿಕಾರಿ ವೆಂಕಟೇಶ್ ಮೂರ್ತಿ ಅವರು, ಹೆಣ್ಣು ಮಕ್ಕಳ ಭವಿಷ್ಯದ ಆರೋಗ್ಯದ ದೃಷ್ಟಿಯಿಂದ ಈ ಅಭಿಯಾನ ಅತ್ಯಂತ ನಿರ್ಣಾಯಕವಾಗಿದೆ.

ಗರ್ಭಕಂಠದ ಕ್ಯಾನ್ಸರ್ ಇಂದು ಮಹಿಳೆಯರನ್ನು ಕಾಡುತ್ತಿರುವ ದೊಡ್ಡ ಪಿಡುಗು. ಇದನ್ನು ಆರಂಭಿಕ ಹಂತದಲ್ಲೇ ತಡೆಗಟ್ಟಲು 14 ವರ್ಷದ ಹೆಣ್ಣುಮಕ್ಕಳಿಗೆ (2011ರಲ್ಲಿ ಜನನವಾದ)ಈ ಲಸಿಕೆ ನೀಡುವುದು ಅತ್ಯಗತ್ಯ. ಈ ವಯಸ್ಸಿನಲ್ಲಿ ನೀಡುವ ಲಸಿಕೆಯು ದೇಹದಲ್ಲಿ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಿ, ಕ್ಯಾನ್ಸರ್ ಬರದಂತೆ ರಕ್ಷಣೆ ನೀಡುತ್ತದೆ ಎಂದು ತಿಳಿಸಿದರು. ಸರ್ಕಾರವು ಉಚಿತವಾಗಿ ನೀಡುತ್ತಿರುವ ಈ ಲಸಿಕೆಯ ಬಗ್ಗೆ ಪೋಷಕರಲ್ಲಿ ಅರಿವು ಮೂಡಿಸಬೇಕಿದೆ. ಯಾವುದೇ ರೀತಿಯ ಅಡ್ಡಪರಿಣಾಮಗಳ ಬಗ್ಗೆ ಆತಂಕ ಪಡುವ ಅಗತ್ಯವಿಲ್ಲ ಎಂದು ಮಾಹಿತಿ ನೀಡಿದರು ತಾಲೂಕಿನಲ್ಲಿ 1780 ಹೆಣ್ಣು ಮಕ್ಕಳಿಗೆ ಲಸಿಕೆ ಹಾಕುವ ಪಟ್ಟಿ ಸಿದ್ದಪಡಿಸಿಕೊಂಡಿದ್ದು, ಈಗಾಗಲೇ 980 ಡೋಸ್ ಬಂದಿದೆ. ಪ್ರತಿ ಬುಧವಾರ ಮತ್ತು ಶುಕ್ರವಾರ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ತಾಲ್ಲೂಕು ಸರ್ಕಾರಿ ಆಸ್ಪತ್ರೆ ಅಲ್ಲಿ ಲಸಿಕೆ ಹಾಕಲಾಗುವುದು. ಹೆಣ್ಣುಮಕ್ಕಳು ಜನ್ಮದಿನಾಂಕದ ಪುರಾವೆಯನ್ನು ತರಬೇಕು ಎಂದು ಹೇಳಿದರು.ಈ ಸಂದರ್ಭದಲ್ಲಿ ಡಾ. ಮನೋಹರ್, ಡಾ. ಮಾದವನ್, ಡಾ. ಶಶಿಕಲಾ, ಡಾ. ಫಾರಹೀನ್, ದೇವರಾಜ್, ಸುರೇಶ, ನರಸಿಂಹಪ್ಪ, ಅಶ್ವತಮ್ಮ, ಶುಭ ಹಾಜರಿದ್ದರು.

